# ಕೆಂ ಹೊಸ ಕವಿತೆ

2023






ಸಂಪಾದಕರು

**ಶಂಕರ್ ಸಿಹಿಮೊಗ್ಗೆ**

**ಸೂರ್ಯಕೀರ್ತಿ**

# ಕಿರಂ ಹೊಸ ಕವಿತೆ
## 2023

**ಸಂಪಾದಿತ ಕವಿತೆಗಳು**

ಸಂಪಾದಕರು

**ಶಂಕರ್ ಸಿಹಿಮೊಗ್ಗೆ**

**ಸೂರ್ಯಕೀರ್ತಿ**

ಮಿಂಚುಳ್ಳಿ
ಪ್ರಕಾಶನ

**#184, 6ನೇ ಕ್ರಾಸ್, ಇಂದಿರಾ ಬಡಾವಣೆ**

**ಗುರುಪುರ, ಶಿವಮೊಗ್ಗ–577201**

KIRAM HOSA KAVITE 2023
A Collection of Poems
Edited by
Shankar Sihimogge
Suryakeerthy
Mob: 9591367320, 9483165038
Email: shankarsihimogge@gmail.com
suryakeerthywriter@gmail.com

| | | |
|---|---|---|
| First Edition | : | 2023 |
| Pages | : | 292 |
| Size | : | 1/8 demy |
| Paper | : | 70 GSM, N.S. Maplitho |
| Price | : | **Rs. 250** |
| Copyright | : | Writers |
| Copies | : | 1000 |
| ISBN | : | 978-93-5813-161-1 |
| Cover page | : | Ramesh D.K. |
| Book Design | : | Harish K.R. |

*Published by*
MINCHULLI PUBLICATIONS
#184, 6th Cross
Indira Badavane, Gurupura
Shivamogga – 577201
Email: minchullipublications@gmail.com

*Printed by*
Sri Yantroddaraka Printers
Bengaluru – 560 026
Mobile: +91-9448795121/9886071144
Email: sypp2019@gmail.com

ಏಕಾಂತದ ಹಾದಿಗೆ
ಕಾವ್ಯದ ಸಂವಾದ ಕಂಡುಕೊಂಡ
ಕಾವ್ಯ ಪ್ರೇಮಿಗಳಿಗೆ

# ಸಂಪಾದಕರ ಪರಿಚಯ

## ಶಂಕರ್ ಸಿಹಿಮೊಗ್ಗೆ

ಮಿಂಚುಳ್ಳಿ ಸಾಹಿತ್ಯ ಪತ್ರಿಕೆಯ ಮುಖ್ಯ ಸಂಪಾದಕರಾದ ಶಂಕರ್ ಸಿಹಿಮೊಗ್ಗೆ ಯವರು ಹುಟ್ಟಿದ್ದು ಮಲೆನಾಡು ಶಿವಮೊಗ್ಗದಲ್ಲಿ. ತಂದೆ ಗೋವಿಂದರಾಜು, ತಾಯಿ ನಾಗಮ್ಮನವರು. ಬಾಳ ಗೆಳತಿ ಅನುಷಾ ಹೆಗ್ಡೆಯವರೊಂದಿಗೆ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಜವಹರಲಾಲ್ ನೆಹರು ಇಂಜಿನಿಯರಿಂಗ್ ಕಾಲೇಜಿನಲ್ಲಿ ಟೆಲಿಕಮ್ಯೂನಿಕೇಷನ್ ವಿಭಾಗದಲ್ಲಿ ಇಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿ, ಖಾಸಗಿ ಕಂಪೆನಿಯೊಂದರಲ್ಲಿ ಸೀನಿಯರ್ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಓದು, ಬರವಣಿಗೆ, ಚಾರಣ ಮತ್ತು ನಾಟಕ ಮುಂತಾದ ಸೃಜನಶೀಲ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇಂಜಿನಿಯರಿಂಗ್ ಓದುವಾಗಲೇ ಡಿ.ವಿ.ಎಸ್. ರಂಗಶಿಕ್ಷಣ ಕೇಂದ್ರದಲ್ಲಿ ಒಂದು ವರ್ಷದ ರಂಗಭೂಮಿ ತರಬೇತಿಯನ್ನು ಪಡೆದುಕೊಂಡು ಈವರೆಗೆ ಸುಮಾರು ಹತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅವುಗಳಲ್ಲಿ ಮ್ಯಾಕ್ ಬೆತ್, ಮಹಾಬಲಯ್ಯನ ಕೋಟು, ವಸುದೈವ ಕುಟುಂಬಕಂ ಮತ್ತು ದಕ್ಷಯಜ್ಞಮುಖ್ಯವಾದವುಗಳು.

ಕೆಲಸದ ನಡುವೆಯೂ ಸಾಹಿತ್ಯ ರಂಗಭೂಮಿಯತ್ತ ಒಲವಿಟ್ಟುಕೊಂಡಿರುವ ಕಾರಣ ಇವರು ಬೆಂಗಳೂರಿನಲ್ಲಿ ಸ್ನೇಹಿತರೊಡಗೂಡಿ 'ಚೈತ್ರಾಕ್ಷಿ ರಂಗಭೂಮಿ' ಎಂಬ ರಂಗತಂಡವನ್ನು ಕಟ್ಟಿಕೊಂಡಿದ್ದಾರೆ. ಈ ರಂಗತಂಡದ ಮೂಲಕ ಇದುವರೆಗೂ ಜಲಗಾರ, ಹೆಣದ ಬಟ್ಟೆ ಮತ್ತು ಅನಿಮಲ್ ಫಾರ್ಮ್ ಎಂಬ ಮೂರು ನಾಟಕಗಳನ್ನು ಪ್ರದರ್ಶಿಸಲಾಗಿದೆ. ಕಾಲೇಜು ಓದುವ ದಿನಗಳಲ್ಲಿ ಸಾಗರದ ಹೆಗ್ಗೋಡಿನ 'ನೀನಾಸಂ ಶಿಬಿರ'ಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದೆ, ಶಿಬಿರಗಳಲ್ಲಿ ನಡೆಯುತ್ತಿದ್ದ ವಿಮರ್ಶೆ ಸಾಹಿತ್ಯ ಸಂವಾದದಂತಹ ಕಾರ್ಯಕ್ರಮಗಳು ನನ್ನ ಕಲಿಕೆಯಲ್ಲಿ ಹೆಚ್ಚು ಪ್ರಭಾವ ಬೀರಿವೆ ಎನ್ನುತ್ತಾರೆ.

ಇವರ ಮೊದಲ ಕವನ ಸಂಕಲನ 'ಕುದುರೆಯ ವ್ಯಥೆ' ೨೦೧೫ರಲ್ಲಿ ಪ್ರಕಟಣೆ ಗೊಂಡಿದೆ. ರಾಜಕಾರಣದ ಬಗ್ಗೆ ಸ್ಪಷ್ಟ ನಿಲುವುಗಳಿಟ್ಟುಕೊಂಡಿರುವ ಇವರು

ಸಾಹಿತ್ಯ ನನ್ನ ನೆಚ್ಚಿನ ಹವ್ಯಾಸ ಎನ್ನುತ್ತಾರೆ, ಇದುವರೆಗೂ ಇವರ ಪದ್ಯ, ಕತೆ, ನಾಟಕ ವಿಮರ್ಶೆ ಮತ್ತು ಲೇಖನಗಳನ್ನು ವಿಜಯ ಕರ್ನಾಟಕ, ಪ್ರಜಾವಾಣಿ, ವಾರ್ತಾ ಭಾರತಿ, ಅವಧಿ, ಬುಕ್ ಬ್ರಹ್ಮ, ಶಿವಮೊಗ್ಗ ಟೈಮ್ಸ್, ಮಾಸ ಪತ್ರಿಕೆಗಳಾದ ಸುಧಾ, ನಿಮ್ಮೆಲ್ಲರ ಮಾನಸ ಮತ್ತು ಸಖಿ ಪ್ರಕಟಿಸಿವೆ. 'ಬಾನ ಬಯಲ ಚುಕ್ಕಿಗಳು', 'ಕಾವ್ಯಯಾನ', 'ಕಿರಂ ಹೊಸ ಕವಿತೆ ಸಂಪುಟ ೧, ೨, ೩', 'ವಿಶ್ವಶಕ್ತಿ, ೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ', ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿತ 'ಕವಿತೆ–೨೦೨೧' ಮತ್ತು 'ಕವಿತೆ–೨೦೨೨' ಸಂಪಾದಿತ ಕೃತಿಗಳಲ್ಲಿ ಇವರ ಕವಿತೆಗಳು ಪ್ರಕಟಣೆಗೊಂಡಿವೆ. 'ಗಾಂಧಿಯಾನ ಟ್ರಸ್ಟ್ ಮತ್ತು ಭಾರತೀಯ ವಿದ್ಯಾಭವನ' ಪ್ರಕಟಿಸಿದ 'ಕಿರಿಯರು ಕಂಡ ಗಾಂಧಿ' ಸಂಪಾದಿತ ಕೃತಿಯಲ್ಲಿ ಇವರ 'ನಮ್ಮೊಳಗೊಬ್ಬ ಗಾಂಧಿ' ಲೇಖನ ಪ್ರಕಟವಾಗಿದೆ. ಪ್ರಜಾವಾಣಿ ಯಲ್ಲಿ ಪ್ರಕಟಗೊಂಡಿದ್ದ ಇವರ 'ಹೊಳಲೂರಿನ ಹಾಸ್ಟೆಲ್ ಹುಡುಗರು' ಕತೆಯು ಬೆಂಗಳೂರು ವಿಶ್ವವಿದ್ಯಾಲಯದ ಬಿ.ವಿ.ಎ. ಮತ್ತು ಬಿ.ಎಫ್.ಎ. ಪದವಿಗೆ ಕನ್ನಡ ಭಾಷೆಯ ಪಠ್ಯವಾಗಿದೆ. ಇವರ 'ಇರುವೆ ಮತ್ತು ಗೋಡೆ' ಕವಿತೆಗಳ ಹಸ್ತಪ್ರತಿಯು ೨೦೨೩ನೇ ಸಾಲಿನ ಕಡೆಂಗೋಡ್ಲು ಕಾವ್ಯ ಪುರಸ್ಕಾರ ಪಡೆದುಕೊಂಡಿದೆ.

ಮಿಂಚುಳ್ಳಿ ಪ್ರಕಾಶನ ಮತ್ತು ಮಿಂಚುಳ್ಳಿ ಕಾವ್ಯ ಬಳಗದ ಮೂಲಕ ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಕವಿಗೋಷ್ಠಿ ಮತ್ತು ಕಾವ್ಯ ಸ್ಪರ್ಧೆಗಳನ್ನು ಏರ್ಪಡಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಮಿಂಚುಳ್ಳಿ ಬಳಗದ ಮೂಲಕ 'ಮಿಂಚುಳ್ಳಿ ಕವಿಗೋಷ್ಠಿ', 'ಪಳಗನ್ನಡ ಓದು' ಮತ್ತು ನಿರಂತರ ಏಳು ದಿನಗಳ 'ಬರಗೂರು ಕಾವ್ಯ ಸಪ್ತಾಹ' ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ಜೊತೆಗೆ ಬಳಗದ ಮೂಲಕ 'ಕಾಡುವ ಕಿರಂ ೨೦೨೦' ಆನ್‌ಲೈನ್ ಕಾರ್ಯಕ್ರಮಕ್ಕೆ ತಾಂತ್ರಿಕ ಸಹಾಯ ನೀಡಿದ್ದಾರೆ. ಹಿರಿಯ ಕವಿ 'ಗೋಪಾಲಕೃಷ್ಣ ಅಡಿಗ'ರಿಗೆ ನೂರು ವಸಂತಗಳು ತುಂಬಿದ ಸಂದರ್ಭದಲ್ಲಿ ಗೆಳೆಯರು ಸೇರಿ 'ನೂರು ಅಡಿ ನೂರು ಮಡಿ' ಎಂಬ ಫೇಸ್‌ಬುಕ್ ಲೈವ್ ಕಾರ್ಯಕ್ರಮ ಏರ್ಪಡಿಸಿ ಒಂದೇ ಸಮಯದಲ್ಲಿ ನೂರು ಜನ ಯುವಕವಿಗಳು ಅಡಿಗರ ಕವಿತೆಗಳನ್ನು ವಾಚನ ಮಾಡಿ ಕಾವ್ಯ ನಮನ ಸಲ್ಲಿಸಿದ್ದಾರೆ. ಆ ಮೂಲಕ ಕನ್ನಡ ಸಾಹಿತ್ಯ ವಲಯದೊಂದಿಗೆ ನಂಟು ಬೆಸೆಯುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿದ್ದಾರೆ.

## ಪ್ರಕಟಿತ ಪುಸ್ತಕಗಳು

೧. ಕುದುರೆಯ ವ್ಯಥೆ (ಕವಿತೆಗಳು)
೨. ಇರುವೆ ಮತ್ತು ಗೋಡೆ (ಕವಿತೆಗಳು), ISBN 9789359131153
೩. ಬೆನ್ನೇರಿದ ಬಯಲು (ಕಥೆಗಳು)
೪. ಕಿರಂ ಹೊಸ ಕವಿತೆ ೨೦೨೩ (ಸಂಪಾದಿತ ಕವಿತೆಗಳು)
ISBN 9789358131611
೫. LOVE IS A DIVINE FRAGRANCE, ISBN 9789357803502
(Edition of contemporary English Poems)
(An Anthology of World Poetry: 25 Countries and 67 English Poets)

## ಸೂರ್ಯಕೀರ್ತಿ

ಸೂರ್ಯಕೀರ್ತಿ ಅವರು ತುಮಕೂರಿನ ನೆಲಮೂಲದ ಕವಿ. ಇವರ ಕವಿತೆಗಳು ಚೈನೀಸ್, ಬೆಂಗಾಲಿ, ಹಿಂದಿ, ತುರ್ಕಿ, ಇಂಗ್ಲೀಷ್, ತೆಲುಗು ಮುಂತಾದ ಭಾಷೆಗಳಿಗೆ ಅನುವಾದಗೊಂಡಿವೆ. ಇವರು ಮೂಲತಃ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಬೆಟ್ಟಹಳ್ಳಿ ಗ್ರಾಮದಲ್ಲಿ ಜನಿಸಿದವರು, ಗ್ರಾಮೀಣ ಬದುಕಿನ ವಿಸ್ತಾರಗಳು ಇವರ ಬರಹದ ಮೂಲಕ ಕಾಣಬಹುದು. ಬೆಂಗಳೂರು ವಿಶ್ವವಿದ್ಯಾಲಯದಿಂದ ವಾಣಿಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು (ಎಂ.ಕಾಂ) ಉನ್ನತ ಶ್ರೇಣಿಯಲ್ಲಿ ಮುಗಿಸಿಕೊಂಡು, ಕನ್ನಡ ರತ್ನ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಮೊದಲ ರ್‍ಯಾಂಕ್ ಗಳಿಸಿದ ಸೂರ್ಯಕೀರ್ತಿ ಅವರು ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರಿನಲ್ಲಿ ಕನ್ನಡ ಎಂ.ಎ.ಯನ್ನು ಆಸಕ್ತಿಯಿಂದ ಅಧ್ಯಯನ ಮಾಡಿ, ಬೆಂಗಳೂರಿನ ಸುರಾನಾ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿ ಎರಡು ವರ್ಷಗಳ ಕಾಲ ಕಾರ್ಯನಿರ್ವಹಿಸಿ, ಈಗ ಸಂತ ಫ್ರಾನ್ಸಿಸ್ ಕಾಲೇಜು, ಕೋರಮಂಗಲ, ಬೆಂಗಳೂರು ಇಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕನ್ನಡ ಕೇಂದ್ರ ಸಾಹಿತ್ಯ ಪರಿಷತ್ತು ನಡೆಸುವ 'ಶಾಸನಶಾಸ್ತ್ರ'ದಲ್ಲಿ ಡಿಪ್ಲೋಮಾ ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನ ನಡೆಸುವ 'ಹಳಗನ್ನಡ ಮತ್ತು ಶಾಸನಶಾಸ್ತ್ರ'ದಲ್ಲಿ ಡಿಪ್ಲೋಮಾ ಅಧ್ಯಯನ ಮಾಡಿದ್ದಾರೆ.

ಇವರ ಕವಿತೆಗಳನ್ನು ಫೇಸ್‌ಬುಕ್‌ನಲ್ಲಿ ಓದಿದಂತ ಡಾ. ಟ್ವೆಮಿನ್ ಇಶನ್ ಅವರು ಚೈನೀಸ್ ಭಾಷೆಗೆ ಅನುವಾದಿಸಿದ್ದಾರೆ ಹಾಗೂ ತೈವಾನ್ ಮತ್ತು ಚೀನಾ ಸಾಹಿತ್ಯ ಆಸಕ್ತರು ಓದಿರುವುದು ಹೆಮ್ಮೆಯ ಸಂಗತಿಯಾಗಿದೆ. ಬೆಂಗಾಲಿ ಭಾಷೆಗೆ ಸೂರಜ್ ಅವರು ಅನುವಾದಿಸಿದ್ದಾರೆ. ಹಿಂದಿಗೆ ಡಾ. ರಾಜೇಂದ್ರ ಪರದೇಸಿ ಅವರು ಅನುವಾದಿಸಿ 'ಹಿಂದಿ ಕವಿತಾ ಕೆ ಸಾತ್ ಸ್ವರ್' ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಇವರು ೨೦೨೨ರಲ್ಲಿ ನಡೆದ ವಿಶ್ವ ವಿಖ್ಯಾತ ಮೈಸೂರು ದಸರಾ ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಿದ್ದಾರೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆದ ಚೀನಾದ ಗಾಲಾ ವಸಂತ ಕಾವ್ಯ ಹಬ್ಬ ೨೦೨೩ರಲ್ಲಿ ಸೂರ್ಯಕೀರ್ತಿಯವರು ಭಾಗಿಯಾಗಿದ್ದಾರೆ ಮತ್ತು ಚೈನೀಸ್ ಸ್ಪ್ರಿಂಗ್ ಫೆಸ್ಟಿವಲ್ ಗಾಲಾ ಆಫ್ ಪೊಯಟ್ರಿ ೨೦೨೩, ಈ ಕಾರ್ಯಕ್ರಮದಲ್ಲಿ ಕೊಡ ಮಾಡುವ 'ಅಂತರಾಷ್ಟ್ರೀಯ ಕವಿ' ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ರಾಷ್ಟ್ರಮಟ್ಟದ 'ಸಂಗಂ ಸಾಹಿತ್ಯ ಪುರಸ್ಕಾರ'ಕ್ಕೆ ಹಾಗೂ 'ಸು ರಂ ಎಕ್ಕುಂಡಿ ಕಾವ್ಯ ಪ್ರಶಸ್ತಿಗೆ' ಇವರ

‘ಮೀನು ಕುಡಿದ ಕಡಲು’ ಪುಸ್ತಕ ಕೊನೆಯ ಹಂತಕ್ಕೆ ಆಯ್ಕೆಯಾಗಿದೆ. ತುಮಕೂರಿನ ರಾಜ್ಯ ಮಟ್ಟದ ಕವಿತೆ ರಚನಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದಾರೆ. ೨೦೧೭ನೇ ಸಾಲಿನಲ್ಲಿ ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ‘ಚೈತ್ರಾಕ್ಷಿ’ ಎಂಬ ಕವಿತಾ ಸಂಕಲನ ಧನ ಸಹಾಯ ಪಡೆದು ಕೊಂಡು ಲೋಕಾರ್ಪಣೆಯಾಗಿದೆ. ಈ ಪುಸ್ತಕವು ೨೦೧೮ನೇ ಸಾಲಿನ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ‘ಸುಮನ್ ಸೋಮಶೇಖರ ಸೋಮವಾರ ಪೇಟೆ’ ದತ್ತಿ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಇವರ ‘ಮೀನು ಕುಡಿದ ಕಡಲು’ ಹಸ್ತಪ್ರತಿಯು ‘ಅಲ್ಲಮ ಕಾವ್ಯ ಪುರಸ್ಕಾರ’ ಪಡೆದುಕೊಂಡಿದೆ. ಹಾಗೆ ಉತ್ತರ ಪ್ರದೇಶದಲ್ಲಿ ನೀಡುವ ‘ತಥಾಗತ ಸೃಜನ್ ಸಮ್ಮಾನ’ ಪ್ರಶಸ್ತಿ ಮುಂತಾದ ಪುರಸ್ಕಾರಗಳನ್ನು ಇವರು ಪಡೆದುಕೊಂಡಿದ್ದಾರೆ.

ಇವರ ಕವಿತೆಯು ಕನ್ನಡ ಸಾಹಿತ್ಯ ಅಕಾಡೆಮಿ ಸಂಗ್ರಹಿಸುವ ಕವಿತಾ ಸಂಕಲನ–೨೨ ಸಂಪಾದಿತ ಕೃತಿಗೆ  ಆಯ್ಕೆಯಾಗಿದೆ. ಕಾಜಾಣ ಕಾವ್ಯ ಕಮ್ಮಟ, ಎಚ್.ಎ.ಎಲ್ ಕಾವ್ಯ ಸಂಭ್ರಮ, ವಿಜಯ ಕರ್ನಾಟಕ ಪತ್ರಿಕೆಯ ವಸಂತ ಕಾವ್ಯ ಸಂಭ್ರಮ, ಪ್ರಜಾವಾಣಿ ಪತ್ರಿಕೆಯ ಕವಿಗೋಷ್ಠಿ, ಅಹೋರಾತ್ರಿ ನಡೆಯುವ ಕಾಡುವ ಕಿರಂ, ಬಹುತ್ವ ಭಾರತ, ಕಾವ್ಯ ಸಂಜೆ ಇತ್ಯಾದಿ ಕಾವ್ಯ ಹಬ್ಬಗಳಲ್ಲಿ ಕವಿಯಾಗಿ ಭಾಗವಹಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಮೂರು ಮತ್ತು ನಾಲ್ಕನೆಯ ಸೆಮಿಸ್ಟರ್ BVA & BFA ಪಠ್ಯ ಪುಸ್ತಕದ ಸಂಪಾದಕರಾಗಿ,  ಕನ್ನಡ ಸ್ಪರ್ಧಾ ಕೌಶಲ, ಪದವಿ ನಾಲ್ಕನೆಯ ಸೆಮಿಸ್ಟರ್ ಕನ್ನಡ ಮುಕ್ತ ಆಯ್ಕೆ ಪತ್ರಿಕೆ ೯ ಪಠ್ಯ ಪುಸ್ತಕಕ್ಕೆ ಲೇಖಕರು ಹಾಗೂ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರ ನಿರ್ದೇಶನದ ಮೂರು ನಾಟಕಗಳು ಜಲಗಾರ, ಹೆಣದ ಬಟ್ಟೆ ಮತ್ತು ಅನಿಮಲ್ ಫಾರ್ಮ್ ರಂಗರೂಪ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ. ಇವರು ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಪಾಕಶಾಸ್ತ್ರ, ಸಂಸ್ಕೃತ ಕಾವ್ಯಗಳ ಓದು, ಬೌದ್ಧಸಾಹಿತ್ಯ, ಶಾಸನ ಮತ್ತು ಪುರಾತತ್ವ, ಹಳಗನ್ನಡ ಓದು ಮತ್ತು ವ್ಯಾಕರಣ, ರಂಗಭೂಮಿ ಮುಂತಾದ ಕ್ಷೇತ್ರಗಳಲ್ಲಿ ಇವರು ಆಸಕ್ತಿ ಹೊಂದಿದ್ದಾರೆ. ಇವರ ವಿಮರ್ಶೆ, ಕವಿತೆ, ಕಥೆ ಮತ್ತು ಪ್ರಬಂಧಗಳು ಪ್ರಜಾವಾಣಿ, ವಿಜಯಕರ್ನಾಟಕ, ವಾರ್ತಾಭಾರತಿ, ಅವಧಿ, ಕೆಂಡಸಂಪಿಗೆ, ಬುಕ್ ಬ್ರಹ್ಮ, ತುಷಾರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿವೆ. ಕನ್ನಡದ ಇ–ಪತ್ರಿಕೆಯಾದ ‘ಮಿಂಚುಳ್ಳಿ’ ಕನ್ನಡ ಸಾಹಿತ್ಯ ಪತ್ರಿಕೆಯಲ್ಲಿ ಪ್ರಕಾಶಕರು ಮತ್ತು  ಸಂಪಾದಕರಾಗಿದ್ದಾರೆ.

**ಇವರ ಪ್ರಮುಖ ಕೃತಿಗಳು**

೧. ಚೈತ್ರಾಕ್ಷಿ– ಕವನ ಸಂಕಲನ, ಮಿಂಚುಳ್ಳಿ ಪ್ರಕಾಶನ ಶಿವಮೊಗ್ಗ.

೨. ಮೀನು ಕುಡಿದ ಕಡಲು– ಕವನ ಸಂಕಲನ, ಅಲ್ಲಮ ಪ್ರಕಾಶನ ಬೆಂಗಳೂರು.

೩. ಪ್ರೇಮ ದೈವಿಕ ಪರಿಮಳ – ಕವಿತಾ ಸಂಕಲನ, ಮಿಂಚುಳ್ಳಿ ಪ್ರಕಾಶನ ಶಿವಮೊಗ್ಗ.

೪. ಕಿರಂ ಹೊಸ ಕವಿತೆ ೨೦೨೩ – ಸಂಪಾದಿತ ಕೃತಿ, ಮಿಂಚುಳ್ಳಿ ಪ್ರಕಾಶನ, ಶಿವಮೊಗ್ಗ

೫. ಕನ್ನಡ ಸ್ಪರ್ಧಾ ಕೌಶಲ, ಲೇಖಕರು ಮತ್ತು ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಪ್ರಸಾರಾಂಗ, ಬೆಂಗಳೂರು.

೬. Love is a divine fragrance- An Anthology of World Poetry on Gender issues, Editor, ISBN 9789357803502, Minchulli Publications, Shivamogga.

೭. Multilingualism In Language and Literature - Editor- ISBN –9789354934636, Surana College Press, 2021.

೮. 3rd Sem BVA & BFA TEXT BOOK – Editor, Published by Bengaluru University Prasaranga, Jnanabharati, Bengaluru.

೯. 4th Sem BVA & BFA TEXTBOOK - Editor, Published by Bengaluru University Prasaranga, Jnanabharati, Bengaluru

# ಅಹೋರಾತ್ರಿಯ ಕಾವ್ಯ ಮಂಥನಕೆ ದಶಮಾನೋತ್ಸವದ ಸಂಭ್ರಮ

ಇಂಗ್ಲಿಷ್ ಕವಿ ಟಿ.ಎಸ್. ಎಲಿಯಟ್ ಹೇಳುವಂತೆ 'ಅಪ್ಪಟ ಕಾವ್ಯ ಅರ್ಥವಾಗುವ ಮುನ್ನವೇ ಸಂವಹಿಸಬಲ್ಲದು'. ಕವಿತೆಗಳಿಗೆ ನೂರು ಭಾವ ನೂರು ದಾರಿ. ಓದುಗನ ಗ್ರಹಿಕೆಯ ಮೇಲೆ ಅದರ ಅರ್ಥದ ವಿಸ್ತಾರಗಳು ತೆರೆದು ಕೊಳ್ಳುತ್ತಾ ಹೋಗುತ್ತದೆ. ಅದರಲ್ಲಿಯೂ ನಮ್ಮದೇ ಸಮಕಾಲೀನ ಕವಿಗಳ ಕವಿತೆಗಳನ್ನು, ಪ್ರತಿಸಲವೂ ಓದುವಾಗ ಒಂದೊಂದು ಅರ್ಥಗಳನ್ನು ಕಂಡು ಕೊಳ್ಳುತ್ತಾ ಹೋಗುವುದು ಕವಿತೆಗಿರುವ ಮಾಂತ್ರಿಕ ಶಕ್ತಿಯನ್ನು ಅದು ತೋರುತ್ತದೆ. ಅದರಲ್ಲಿಯೂ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುವ ಕವಿಗಳ ಭಾಷೆ ಭಾವ ಎಲ್ಲವೂ ಬದಲಾಗುತ್ತ, ಅವರದೇ ಆಡುಭಾಷೆಯ ಸೊಗಡಿನಲ್ಲಿ ಕಾವ್ಯದ ಪರಿಮಳವನ್ನು ಆಸ್ವಾಧಿವುದೇ ಒಂದು ದಿವ್ಯಾನುಭೂತಿ.

ಕಾವ್ಯ ಹೊಸದರಲ್ಲಿ ಹುಟ್ಟುವುದೇ ಹೀಗೇ; ಅದರಲ್ಲಿ ಆಕ್ರೋಶ, ಆತಂಕ, ಭಯ, ದಿಗಿಲು, ಪ್ರೀತಿ, ಪ್ರತಿಭಟನೆ, ಅಸಮಾಧಾನಗಳನ್ನು ಹೊರ ಹಾಕುವುದರ ಮೂಲಕ ಕವಿತೆ ಅನಾವರಣಗೊಳ್ಳುತ್ತದೆ. ಇವತ್ತಿನ ವಿಶ್ವ ಸಾಹಿತ್ಯವೇ ಒಂದು ರೀತಿಯ ಪ್ರತಿಭಟನಾ ಮಾದರಿಯಲ್ಲಿ ವ್ಯಕ್ತವಾಗುತ್ತಿರುವುದನ್ನು ಗಮನಿಸಿದಾಗ, ಮೊದ ಮೊದಲು ತೊದಲಿಸುವ ಕಾವ್ಯದ ಮಾತುಗಳಲ್ಲಿ ಒಂದು ಪ್ರತಿಭಟನೆ ಇರುವುದನ್ನು ಕಾಣಬಹುದು. ತನಗೆ, ತನ್ನ ಸುತ್ತಮುತ್ತಲಿನವರಿಗೆ ಆದ ನೋವುಗಳೇ ತನ್ನ ನೋವುಗಳೆಂದು ಸ್ಪಂದಿಸುವ ಶ್ರೀಮಂತ ಹೃದಯದ ಕವಿಗಳು ಹೆಚ್ಚುತ್ತಿರುವುದು ನಿಜಕ್ಕೂ ಸಂತಸದ ವಿಷಯ. ಕಾವ್ಯದ ಕೆಲಸವೇ ಸ್ಪಂದಿಸುವ ಗುಣ. ಅಲ್ಲಿ ನಿರಾಶ್ರಿತರ, ಬಡವರ, ಶೋಷಿತ ವರ್ಗದವರ, ಗಲಭೆಗಳಲ್ಲಿ ನೋಂದವರ, ಲೈಂಗಿಕ ಅಲ್ಪ ಸಂಖ್ಯಾತರ ಬದುಕುಗಳ ಬಗ್ಗೆ ಗಮನ ಹರಿಸಿ ಕವಿತೆ ಕಟ್ಟುತ್ತಿರುವುದು ಒಂದು ಪ್ರಬುದ್ಧ ದೇಶ ಕಟ್ಟುವ ಕ್ರಿಯೆಯಾಗಿದೆ. ಆ ನಿಟ್ಟಿನಲ್ಲಿ ಕಾಡುವ ಕಿರಂ ಕಾರ್ಯಕ್ರಮವೂ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಈ ಕಾವ್ಯ ಜಾತ್ರೆಯಲ್ಲಿ ಕೇಳುಗನಾಗಿ, ಓದುಗನಾಗಿ, ಕವಿಯಾಗಿ, ಸಹೃದಯಿಯಾಗಿ ಹೊಸ ಕಾವ್ಯ ಪ್ರಪಂಚವನ್ನು ತಲುಪುವುದು ಅತಿ ಸುಲಭ. ಕನ್ನಡ ಕಾವ್ಯ ಪ್ರಪಂಚ

ಭಾಷಿಕವಾಗಿ, ಸಾಹಿತ್ಯಕವಾಗಿ ದೇಶ , ಕಾಲ ಮಾನಗಳ ದಾಟಿ ವಿಶ್ವ ಸಾಹಿತ್ಯದಲ್ಲಿ ತನ್ನದೇ ಆದ ಛಾಪನ್ನು ರೂಪಿಸಿಕೊಳ್ಳುತ್ತಿದೆ.

ಕಾಡುವ ಕಿರಂ ೨೦೨೩ ಕಾರ್ಯಕ್ರಮಕ್ಕಾಗಿ ಐದುನೂರಕ್ಕೂ ಅಧಿಕ ಕವಿತೆಗಳು ಇ-ಮೇಲ್ ಮತ್ತು ವಾಟ್ಸಾಪ್ ಮುಖಾಂತರ ಬಂದಿದ್ದವು. ಅವುಗಳನ್ನು ಓದಿ ಒಂದಷ್ಟು ಕವಿತೆಗಳನ್ನು ಆಯ್ಕೆಮಾಡಿಕೊಂಡೆವು. ರಾಜ್ಯದ ಬಹುತೇಕ ಜಿಲ್ಲೆಗಳ ಕವಿಗಳ ಕವಿತೆಗಳನ್ನು ಓದುವಾಗ ಮೇಲೆ ಹೇಳಿದಂತೆ ಆಯಾ ಕವಿತೆಗಳಲ್ಲಿ ಬಳಸಿರುವ ಭಾಷೆಯ ಬಳಕೆ ವಿಭಿನ್ನವಾದ ಅನುಭವವನ್ನು ನೀಡಿತು. ಈ ಕಾರ್ಯಕ್ರಮಕ್ಕಾಗಿ ಕೆಲಸ ಮಾಡುತ್ತಿರುವಾಗಲೇ ಅಂತರ ರಾಷ್ಟ್ರೀಯ ಮಟ್ಟದ ಸಮಕಾಲೀನ ಇಂಗ್ಲಿಷ್ ಕವಿಗಳ 'Love is a Divine fragrance' ಸಂಕಲನಕ್ಕಾಗಿ ಸಂವಹನ ನಡೆಸುವಾಗ, ಸಹಜವಾಗಿಯೇ ಗಡಿಗಳನ್ನು ಮೀರಿ ಕವಿಗಳು ಆಲೋಚಿಸುವ ಕ್ರಮ ಒಂದೆಯಾದರೂ ಭಾಷೆಯ ಸ್ವರೂಪ ಮಾತ್ರ ವಿಭಿನ್ನ ಎಂದು ತಿಳಿಯಲು ಸಹಕಾರಿಯಾಯಿತು.

ಈ ಬಾರಿ ಒಟ್ಟು ಐದು ಗೋಷ್ಠಿಗಳು, ಪ್ರತಿಗೋಷ್ಠಿಗೂ ಇಪ್ಪತ್ತು ಕವಿಗಳಂತೆ ನೂರು ಕವಿಗಳು ಎಂದಾಗ ಪ್ರತಿಯೊಬ್ಬ ಕವಿಗಳಿಗೆ ಫೋನ್ ಮಾಡಿ ಸಂವಹನ ನಡೆಸುವುದು ನಿಜಕ್ಕೂ ತಾಳ್ಮೆ ಬೇಡುವಂತಹ ಕೆಲಸ ಎನಿಸಿತು. ಇದರ ಜೊತೆ ಜೊತೆಗೆ 'ಕಿರಂ ಹೊಸ ಕವಿತೆ ೨೦೨೩' ಪುಸ್ತಕದ ಕೆಲಸವೂ ಸರಾಗವಾಗಿ ನಡೆಯಿತು. ಪುಸ್ತಕದ ಒಳಪುಟ ವಿನ್ಯಾಸ ಮಾಡಿದ ಹರೀಶ್ ಕೆ.ಆರ್. ಅವರೊಂದಿಗೆ ಸಂಪರ್ಕ ದಲ್ಲಿದ್ದು ಪ್ರತಿದಿನವೂ ಪುಟಗಳಲ್ಲಿ ಕರಡು ತಿದ್ದಿದ್ದು ಹೊಸ ರೀತಿಯ ಕಲಿಕೆ.

ಒಂದು ಸಾಹಿತ್ಯದ ಕಾರ್ಯಕ್ರಮವನ್ನು ನಿರಂತರವಾಗಿ ಅದರಲ್ಲಿಯೂ ಹತ್ತು ವರ್ಷಗಳ ಕಾಲ ನಡೆಸಿಕೊಂಡು ಬರುವುದು ಸವಾಲಿನ ಕೆಲಸವೇ ಸರಿ. ಇಂತಹ ಕೆಲಸವನ್ನು ನಿರಂತರವಾಗಿ ನಡೆಸಿಕೊಂಡು ಬಂದಂತಹ ಜನಸಂಸ್ಕೃತಿ ಪ್ರತಿಷ್ಠಾನದ ಪ್ರದೀಪ್ ಮಾಲ್ಗುಡಿ ಮತ್ತು ಸಂಸ ಸುರೇಶ್ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಕಾಡುವ ಕಿರಂ ೨೦೨೩ ಕಾರ್ಯಕ್ರಮಕ್ಕೆ ದಶಮಾನೋತ್ಸವದ ಸಂಭ್ರಮ. ಈ ಸಂಭ್ರಮದ ಜೊತೆಯಾಗುತ್ತಿರುವ ಗೋಷ್ಠಿಗಳ ಅನುಸಂಧಾನಕಾರರಾದ ಹಿರಿಯ ಸಾಹಿತಿ ಎಲ್.ಎನ್.ಮುಕುಂದರಾಜ್, ಡಾ. ಟಿ. ಯಲ್ಲಪ್ಪ, ಡಾ. ಗೀತಾ ವಸಂತ, ಡಾ.ಎಚ್.ಎಸ್. ಸತ್ಯನಾರಾಯಣ, ಶ್ರೀದೇವಿ ಕೆರೆಮನೆ, ನನ್ನ ಜೊತೆ ಸಂಪಾದಕರಾಗಿ ಕೆಲಸ ಮಾಡಿದ ಕವಿ ಸೂರ್ಯಕೀರ್ತಿ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ನೂರು ಕವಿಗಳಿಗೂ ಧನ್ಯವಾದಗಳನ್ನು ಹೇಳುತ್ತೇನೆ.

ಬೆಂಗಳೂರು
೦೫.೦೮.೨೦೨೩

ಸಂಪಾದಕರ ಪರವಾಗಿ
**ಶಂಕರ್ ಸಿಹಿಮೊಗ್ಗೆ**

# ಪ | ರಿ | ವಿ | ಡಿ |


**ಅನುಸಂಧಾನ 1 : ಎಲ್.ಎನ್. ಮುಕುಂದರಾಜು** ... 21

1) **ಕವಿಗಳು ಆಸನದಲ್ಲಿದ್ದಾರೆ** / *ಡಾ. ಬೇಲೂರು ರಘುನಂದನ್* ... 33
2) **ಬದುಕಿಗೆ ಹಲವು ಬಣ್ಣಗಳು** / *ಶ್ರೀದೇವಿ ಕೆರೆಮನೆ* ... 35
3) **ಬೋಧಿವೃಕ್ಷದ ದಾರಿಗುಂಟ**/ *ಪ್ರಕಾಶ ಕಡಮೆ* ... 37
4) **ಹೆಂಗೂಸು** / *ವಿಶಾಲಾ ಆರಾಧ್ಯ ಬೆಂಗಳೂರು* ... 39
5) **ನಿಂತೇ ಇರುವ ಮರ** / *ಸುಜಾತ ಹೆಚ್.ಆರ್.* ... 40
6) **ಕರ್ಣನ್** / *ಸಂಧ್ಯಾರಾಣಿ* ... 42
7) **ವರ್ತಮಾನದ ಕನಸು** / *ನಾ ದಿವಾಕರ* ... 46
8) **ಕಾವ್ಯ, ಅಡುಗೆ ಮತ್ತು ಹಿಂಸೆ** / *ಜಯಶಂಕರ ಹಲಗೂರು* ... 48
9) **ಅಲೆಮಾರಿ ಮತ್ತು ಬೆಕ್ಕು** / *ವಾಸುದೇವ ನಾಡಿಗ್* ... 52
10) **ದಾಸವಾಳ** / *ಡಾ. ಟಿ. ಯಲ್ಲಪ್ಪ* ... 55
11) **ಬಚ್ಚಲು ಮನೆ** / *ಡಾ. ಬೂದುಗುಪ್ಪ ಪ್ರಹ್ಲಾದ ರೆಡ್ಡಿ* ... 57
12) **ಮಾಯಾ ಸರೋವರ** / *ಡಾ. ಗೀತಾ ವಸಂತ* ... 59
13) **ಹೂ ತೋಟದಲ್ಲಿ ಸುರಿದ ರಕ್ತದ ಮಳೆ** / *ಸೂರ್ಯಕೀರ್ತಿ* ... 62
14) **ಗಾಂಧಿಯನ್ನು ಕಂಡಿರಾ?** / *ನಾಗರಾಜ್ ನವೀಮನೆ* ... 66
15) **ಮೃದುಪಾದ** / *ಹೇಮಲತಾ ಮೂರ್ತಿ* ... 69
16) **ಮೊಳಗುತ್ತಿದೆ ಸೈರನ್!** / *ಶಂಕರ್ ಸಿಹಿಮೊಗ್ಗೆ* ... 72
17) **ಮುಖದ ಮುಗುಳ್ನಗೆ ಇನ್ನೂ ಮಾಸಿಲ್ಲ** / *ಸುಮಾ ರಮೇಶ್* ... 75
18) **ವರ್ತಮಾನ ಪುರಾತನ** / *ಜಯಲಕ್ಷ್ಮೀ ಪಾಟೀಲ್* ... 77
19) **ಋಣಮುಕ್ತಳಾಗುವುದು?** / *ಮಂಜುಳಾ ಹುಲಿಕುಂಟೆ* ... 80
20) **ಜೋಗಿ** / *ಗಿರೀಶ್ ಹಂದಲಗೆರೆ* ... 82
21) **ಅಕ್ಕನ ಮೊಹೆಂಜೋದಾರೋ** / *ಶ್ರುತಿ ಬಿ.ಆರ್.* ... 85
22) **ಪ್ರೀತಿಯ ಮೀಸಲಾತಿ** / *ಪಿ. ಡಿ. ಸತೀಶ್ ಚಂದ್ರ* ... 87

**ಅನುಸಂಧಾನ 2 : ಪ್ರೊ. ಐ. ಯಲ್ಲಪ್ಪ** ... 91

1) **ಖಾದಿ ತೊಟ್ಟ ಕವಿತೆ** / *ಚಂಸು ಪಾಟೀಲ* ... 105
2) **ಫ್ರಾನ್ಸ್ ಮತ್ತು ಕಾವ್ಯ**/ *ದಯಾನಂದ* ... 108
3) **ಹುತ್ತಗಟ್ಟಬೇಕು**/ *ಸುಜಾತ ಲಕ್ಷ್ಮೀಪುರ* ... 109
4) **ಏಕಾಂಗಿ ಬಿಳಿಯ ಪಾರಿವಾಳ**/ *ರಾಜೇಶ್ ಮಳವಳ್ಳಿ* ... 111
5) **ಪದಬಂಧ**/ *ಡಾ. ಲಕ್ಷ್ಮಣ್ ವಿ.ಎ.* ... 113
6) **ಚಿಲ್ಲರೆ ಪದ್ಯ**/ *ನಾಗರಾಜ್ ಕೋರಿ* ... 115
7) **ಕಾಡುವ ಸಂತ** / *ಅನುಸೂಯ ಯತೀಶ್* ... 118
8) **ಚಿತ್ರಸಂತೆಯಲಿ ಚದುರಿಬಿದ್ದ ಕನಸುಗಳು**/ *ಶಿವಶಂಕರ ಸೀಗೆಹಟ್ಟಿ* ... 121
9) **ದಾರಿ ಇನ್ನೂ ದೂರ**/ *ಎಡೆಯೂರು ಪಲ್ಲವಿ* ... 123
10) **ಕಣ್ಣುಗಳು** / *ಪ್ರಕಾಶ್ ಕೋನಾಪುರ* ... 125
11) **ನಡೆಯುವುದು ಅನಿವಾರ್ಯ** / *ದೊಡಕಲ್ಲಹಳ್ಳಿ ನಾರಾಯಣಪ್ಪ* ... 127
12) **ಕಲ್ಕಿಯವತಾರಕೆ ಮುನ್ನ** / *ರಾಜ್ ಆಚಾರ್ಯ* ... 129
13) **ಕಾಶ್ಮೀರ...** / *ರವಿ ತೊಂಡಗೆರೆ* ... 131
14) **ನನ್ನ ಹುಟ್ಟು** / *ಮಂಜುಳಾ ಭಾರ್ಗವಿ* ... 133
15) **ಸ್ತ್ರೀ ಅಂದರೆ ಅಷ್ಟೇ ಸಾಕೆ?** / *ಮೃತ್ಯುಂಜಯ ಎಂ. ಸಾಲಿಮಠ* ... 135
16) **ಬಣ್ಣದ ಸಿಗ್ನಲ್** / *ಕೋಮಲ ಕಲ್ಲೂಡಿ* ... 139
17) **ವುಹಾನಿನ ಹುಡುಗಿ** / *ಡಾ. ಮಂಜುನಾಥ ಕೆ.ಆರ್. ಕಂಟನಕುಂಟೆ* ... 141
18) **ಅಂಗೈ ಹುಣ್ಣು** / *ಚಂದ್ರಕಲಾ ಎಂ. ಇಟಗಿಮಠ* ... 144
19) **ನವಿಲ ದೇವತೆ** / *ಅರುಣ್ ಪುಷ್ಪದಂತ* ... 145
20) **ಕಾಯುತ್ತಿರುವೆ ಜಂಗಮ** / *ದೊ. ಚಿ. ಗೌಡ ರೈತಕವಿ* ... 147

**ಅನುಸಂಧಾನ 3 : ಡಾ. ಗೀತಾ ವಸಂತ** ... 151

1) **ಈ ಮಣ್ಣ ಕಣ್ಣಾಗು** / *ನಾವೆಂಕಿ ಕೋಲಾರ* ... 160
2) **ಕೇದಿಗೆಯ ಹೂವು** / *ಸ್ವಭಾವ ಕೋಳಗುಂದ* ... 162
3) **ಬೇಯುವುದೆಂದರೆ...** / *ಶ್ವೇತಾ ಮಂಡ್ಯ* ... 164
4) **ಗುಜರಿ ಅಂಗಡಿಯ ಆಂಟಿಕ್ ಪೀಸ್ಗಳು** / *ಲಿಂಗರಾಜ ಸೊಟ್ಟಪ್ಪನವರ* 166
5) **ಭಾವ** /*ಯಶ್ವಂತ್ ಎಂ.* ... 168
6) **ಜೀತದಾಳುವಿನ ಒಡಲೊಳಗೆ** / *ನಾರಾಯಣಸ್ವಾಮಿ ವಿ. ಮಾಲೂರು* 170
7) **ಹಲಸು** / *ಯಂಶ ಬೇಂಗಿಲ* ... 172
8) **ಮಾರುಕಟ್ಟೆಯ ಗಡಿಯಾರ** / *ಶಾರದ ಎಸ್.* ... 174
9) **ಅಪ್ಪಾ!!** / *ಅಸಪ ಗೇರುಕಟ್ಟೆ* ... 176
10) **ದೇವದಾಸಿಯ ಸ್ವಗತ** / *ರಾಘವೇಂದ್ರ ಡಿ. ಆಲೂರು* ... 178
11) **ಕಂದೀಲು** / *ರೇಣುಕಾ ಕೊಡಗುಂಟಿ* ... 181
12) **ಏನೂ ಇಲ್ಲದವರು** / *ಎ.ರಘುಪತಿ* ... 183
13) **ಏಕಾಂಗಿ** / *ಪಾಪುಗುರು* ... 185
14) **ಸರಿ ಯಾವುದು ಎಂದಾರಿಸು ಮನವೇ...**/*ಡಾ.ಬದರೀನಾಥ ಜಹಗೀರದಾರ* 188
15) **ನಿರುತ** / *ಎಸ್.ಪಿ. ಮಹದೇವ ಹೇರಂಬ* ... 190
16) **ಕಡೇ ಮಾತು** / *ವಿಭಾ ಪುರೋಹಿತ್* ... 192
17) **ಕನ್ನಡಿ** / *ನರಸಿಂಹ ವರ್ಮ* ... 194
18) **ದಿನದ ಕವಿತೆ** / *ಧರಣಿಕಾಂತ್* ... 195
19) **ಬೆಳಕಿನ ದಾರಿಯಲ್ಲಿ** / *ವಿಶ್ವೇಶ್ವರ ಗಾಂವ್ಕರ* ... 196
20) **ಅಂತರಂಗದ ಅಳಲು** / *ಮಂಜುಳಾ ಬಿ.ವಿ.* ... 198

**ಅನುಸಂಧಾನ 4 : ಡಾ. ಎಚ್.ಎಸ್. ಸತ್ಯನಾರಾಯಣ** ... 201

1) **ಬಹಿಷ್ಕೃತ ದೇವರು!** / *ಪ್ರಮೋದ್ ಮೈಸೂರು* ... 207
2) **ಎನ್ನ ಕೊಂದವರೆ** / *ಮಹಾದೇವ ಮೂಡುಕೊಣಾಜೆ* ... 209
3) **ಹಳೆಯ ಖಾಲಿ ಮುಖಗಳು...** / *ಸತೀಶ್ ಗರಣಿ* ... 211
4) **ದೇಶಾಭಿಮಾನ** / *ದಾಸ್ ತಮ್ಮೇನಹಳ್ಳಿ* ... 213
5) **ಗಜಲ್** / *ನಂರುಶಿ ಕಡೂರು* ... 215
6) **ಓ ದಲಿತರ ದನಿಯೇ** / *ದೊಡ್ಡಿ ಪ್ರವೀಣ್ ವಿ* ... 216
7) **ಬೋಳುಮರ** / *ಎಂ.ಡಿ. ಚಂದ್ರೇಗೌಡ ನಾರಮ್ನಳ್ಳಿ* ... 218
8) **ಗಾಂಧಿಯ ನೋಟು** / *ನಾ. ಮುನಿರಾಜು* ... 220
9) **ವ್ಯಯಿಸಲಿ ಹೇಗಿನ್ನದನು?** / *ನರೇಶ್ ಕಾಮತ್* ... 222
10) **ಮರವಾಗಬಾರದಿತ್ತೇ** / *ಲಕ್ಷ್ಮಿ ಕಿಶೋರ್ ಅರಸ್* ... 224
11) **ವಿಧಿಯಾಟವಿತ್ತ ಹಣೆಪಟ್ಟಿ** / *ರಾಜೇಶ್ವರಿ ರಾಜೇಂದ್ರ ಹೊನ್ನಾವರ*... 226
12) **ಅಕ್ಕಯ್ಯಾ** / *ಜಯಲಕ್ಷ್ಮೀ ಕೋಳಗುಂದ* ... 228
13) **ಕುಲಗಳು** / *ಲಕ್ಷ್ಮೀಪುರ ಜಿ ಶ್ರೀನಿವಾಸ* ... 229
14) **ಮಾಯಾಮೃಗ** / *ವೇಣು ಜಾಲಿಬೆಂಚಿ* ... 231
15) **ನಿನ್ನ ಕೇರಿ ಯಾವುದು?** / *ಪ್ರತುಮ್ ಸಾಗರ್* ... 233
16) **ಅವಳು ಸಾಕ್ಷಿಯಾಗಿದ್ದಾಳೆ** / *ರವಿಕುಮಾರ ಜಾಧವ* ... 234
17) **ಗುರುವಲ್ಲವೇ...?** / *ಆರ್.ಪಿ.ಮಂಜುನಾಥ್. ಬಿ.ಜಿ.ದಿನ್ನೆ, ಬಳ್ಳಾರಿ*... 235
18) **ದಸರೆಗೆ ಮಳೆ** / *ನಾಗೇಂದ್ರ ಹೆಬ್ಬಾರ್* ... 237
19) **ಭಯ ಮುಕ್ತಿ** / *ಡಾ॥ ಎಂ.ಆರ್. ಕುಲಕರ್ಣಿ* ... 239
20) **ಅಮಲಿನ ಪ್ರಭುತ್ವ** / *ಸಿ.ಎಂ. ಕ್ರಾಂತಿಸಿಂಹ* ... 240

**ಅನುಸಂಧಾನ 5 : ಶ್ರೀದೇವಿ ಕೆರೆಮನೆ** ... 245

1) **ಸರ್ಪಸುತ್ತು** / *ಸಂಗನಗೌಡ ಹಿರೇಗೌಡ* ... 251
2) **ನಡೆಯಬೇಕು ಎಲ್ಲಾ ಮೈ ಚಳಿ ಬಿಟ್ಟು** / *ಕೊಟ್ರೇಶ್ ಅರಸೀಕೆರೆ* ... 253
3) **ಗಾಂಧಿಗಿಡ** / *ಮಹಾಂತೇಶ ಪಾಟೀಲ* ... 255
4) **ಸಾಬೀತುಪಡಿಸುವೆ** / *ಡಾ. ರತ್ನಾಕರ ಸಿ. ಕುನುಗೋಡು* ... 257
5) **ಕವಿತೆಯೊಳಗಿನವರು** / *ಡಾ. ಎಂ.ಈ. ಶಿವಕುಮಾರ ಹೊನ್ನಾಳಿ* ... 259
6) **ಎಲ್ಲೂ ಸುದ್ದಿಯಾಗಲೇ ಇಲ್ಲ!** / *ಜಬೀವುಲ್ಲಾ ಎಂ. ಅಸದ್* ... 261
7) **ಮೊರೆ** / *ನಾಝೀಮಾ ಹಾಸನ* ... 263
8) **ಈ ನೆಲದಲ್ಲಿ** / *ಮರುಳಸಿದ್ದಪ್ಪ ದೊಡ್ಡಮನಿ* ... 265
9) **ನಿನ್ನ ಬೆವರು ಘೋಷ ವಾಕ್ಯ** / *ಮಧು ಬಿರಾದಾರ* ... 266
10) **ಸಾವ ಕದವು ತಟ್ಟುವ ತನಕ** / *ಲಕ್ಷ್ಮೀನಾರಾಯಣ ಕೆ. ವಾಣಿಗರಹಳ್ಳಿ* 268
11) **ಸಮಯದ ಗೊಂಬೆ** / *ಎ. ಜಯಲಕ್ಷ್ಮೀ ಮಾಲೂರು* ... 270
12) **ದೇವರಿಲ್ಲದ ಗುಡಿ** / *ಸೌಮ್ಯ ಹೆಗ್ಗಡಹಳ್ಳಿ* ... 272
13) **ನೋವು ಮತ್ತು ಬೆಳಕು** / *ವಿಶಾಲ್ ಮ್ಯಾಸರ್* ... 274
14) **ಎದೆಯ ಮೇಲಿನ ಬಟ್ಟೆ** / *ಆನಂದ ಎಸ್ ಗೊಬ್ಬಿ* ... 276
15) **ಕವಚ** / *ಪಿ. ನಂದಕುಮಾರ್* ... 278
16) **ಬಯಕೆಗಳ ನಾಳೆಗಳೆಡೆಗಿನ ಹಾದಿ** / *ರಾಮಕೃಷ್ಣ ಸುಗತ್* ... 280
17) **ಈಗಲೇ ಹೇಳಿ** / *ಧನುಷ್ ಎಚ್. ಶೇಖರ್* ... 282
18) **ಅಂತಿಮಯಾತ್ರೆ** / *ಹರೀಶ ಕೋಳಗುಂದ* ... 284
19) **ಅವನಿಚ್ಛೆ** / *ಲತಾ ಕೆ.ಎಸ್. ಹೆಗಡೆ* ... 287
20) **ಗೆದ್ದಲು ಬರೆದ ಕವಿತೆ** / *ಅಭಿಷೇಕ್ ರಾಯಸಂದ್ರ* ... 289

ನೂರು ದೋಷಗಳಿದ್ದರೂ ಜೀವವಿದ್ದರೆ ಕಾವ್ಯ ಕಾವ್ಯವೇ. ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ.

**– ಬಿ.ಎಂ. ಶ್ರೀಕಂಠಯ್ಯ**

# ಅನುಸಂಧಾನ–೧

# ಕಲ್ಲೆದೆಗಳ ಮೇಲೆ ಭವಿಷ್ಯದ ಹೂಗಳ ಚಿತ್ತಾರ

**❖ ಎಲ್.ಎನ್. ಮುಕುಂದರಾಜ್**

ಸುತ್ತಲಿನ ವರ್ತಮಾನದಲ್ಲಿ ಸತ್ಯಕ್ಕೆ ಬೆಲೆಯಿಲ್ಲ ಕಾವ್ಯಕ್ಕೆ ನೆಲೆಯಿಲ್ಲವೇನೋ ಎನ್ನುವ ಸಂದಿಗ್ಧತೆ ನನ್ನನ್ನು ಕಾಡುತ್ತಿದೆ. ತಮ್ಮ ಕವಿತೆಯ ಮೂಲಕ ಸತ್ಯ ಹೇಳುವ ಕವಿಗಳನ್ನು ಹಾಗೂ ವಿದ್ವಾಂಸರನ್ನು ಹತ್ಯೆ ಮಾಡುವ, ಅವರ ಮೇಲೆ ಮಾನಸಿಕವಾಗಿ ದೈಹಿಕವಾಗಿ ಹಲ್ಲೆ ಮಾಡುವ ಕ್ರೂರ ಮನಸ್ಸುಗಳ ಸಂಖ್ಯೆ ಹೆಚ್ಚುತ್ತಿದೆ. ಕಾವ್ಯಕ್ಕೆ ತೊಂದರೆ ಎದುರಾಗಿದೆ ಎಂದರೆ ಸಂವಿಧಾನಕ್ಕೂ, ಪ್ರಜಾಪ್ರಭುತ್ವಕ್ಕೂ ಆತಂಕ ಬಂದಿದೆ ಎಂದೇ ಭಾವಿಸಬೇಕಾಗುತ್ತದೆ. ಹಾಗೆಂದು ನಮ್ಮ ಕಾಲದ ಕವಿಗಳು ಸುಮ್ಮನೆ ಕೈ ಕಟ್ಟಿ ಕುಳಿತಿಲ್ಲ. ಅಸಂವಿಧಾನಿಕವಾದ ಹಾಗೂ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳಿಗೆ ಪ್ರತಿರೋಧ ತೋರುತ್ತಲೇ ಇದ್ದಾರೆ. ಈ ಕ್ಷಣದ ಎಷ್ಟೋ ಜನ ತರುಣ ಕವಿಗಳ ಕವಿತೆಗಳನ್ನು ಓದುತ್ತಿದ್ದರೆ ಇಂತಹ ನಿಲುವುಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುತ್ತದೆ.

ಬದುಕಿದ್ದಾಗ ಕಿ.ರಂ ಎಷ್ಟು ಕ್ರಿಯಾಶೀಲವಾಗಿದ್ದರೋ, ಮರಣದ ನಂತರವೂ ಅವರು ಅದಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದ್ದಾರೆ ಎಂಬುದನ್ನು ಕಳೆದ ಹತ್ತು ವರ್ಷಗಳಿಂದಲೂ ನಿರಂತರವಾಗಿ ನಡೆಯುತ್ತಿರುವ ಕಿ.ರಂ ನೆನಪಿನ ಕಾರ್ಯಕ್ರಮಗಳೇ ಸಾರಿ ಸಾರಿ ಹೇಳುತ್ತಿವೆ. ಪ್ರಾರಂಭದಲ್ಲಿ ಡಾ. ಟಿ.ವೆಂಕಟೇಶ ಮೂರ್ತಿ, ಡಾ. ಕುರುವ ಬಸವರಾಜ್, ಡಾ. ನಟರಾಜ ಹುಳಿಯಾರ್, ಡಾ. ಕೆ.ಸಿ.ಶಿವಾರೆಡ್ಡಿ ಮುಂತಾದ ನನ್ನ ತಲೆಮಾರಿನ ಲೇಖಕರು ಕಿ.ರಂ ನೆನಪಿನ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ನಂತರ ಸಂಸ ಸುರೇಶ್, ಪ್ರದೀಪ್ ಮಾಲ್ಗುಡಿ, ಅವಿರತ ಹರೀಶ್, ವೆಂಕಟೇಶ್, ಜಯಶಂಕರ ಹಲಗೂರು, ರುದ್ರೇಶ ಅದರಂಗಿ ಮುಂತಾದವರು ಆ ಜವಾಬ್ದಾರಿಯನ್ನು ಮುನ್ನೆಡೆಸಿದರು. ಈಗ ಮೂರನೆ ತಲೆಮಾರಿನ ತರುಣರಾದ ಶಂಕರ ಸಿಹಿಮೊಗ್ಗೆ, ಸೂರ್ಯಕೀರ್ತಿ ಈ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿರುವುದು ನನಗೆ ಸಂತೋಷ ತಂದಿದೆ. ಕಿ.ರಂ ಎಂಬ ಅವಧೂತನ ಚಹರೆಗಳು ಕಾಲ ಕಾಲಕ್ಕೂ ತಮ್ಮ ಪ್ರಯಾಣ ಮುಂದುವರಿಸಿವೆ.

ಲೇಖಕರ ನಿರಂತರ ಚಲನೆಯನ್ನು ಲೋಕದ ನಿತ್ಯ ಕಾಯಕದ ಹಿನ್ನೆಲೆಯಲ್ಲಿ ಕಟ್ಟಿಕೊಡುವ ಕವಿತೆ ಎಚ್.ಆರ್. ಸುಜಾತ ಅವರ 'ನಿಂತೇ ಇರುವ ಮರ. ಮೂರು ದಶಕಗಳ ಹಿಂದೆಯೇ ಸುಜಾತ ಕವಿತೆಗಳನ್ನು ಬರೆಯುತ್ತಿದ್ದರು. ಆ ಕಾಲದಲ್ಲಿ ಅವರ ಕವಿತೆಯನ್ನು ನಾನು 'ತಾರುಣ್ಯ' ಎನ್ನುವ ಸಂಕಲನಕ್ಕಾಗಿ ಸಂಪಾದಿಸಿ ಪ್ರಕಟಿಸಿದ್ದೆ. ಅಪಾರ ಸೃಜನಶೀಲ ಸಾಮರ್ಥ್ಯ ಹೊಂದಿರುವ ಈ ಕವಿಯತ್ರಿ ಪ್ರಾಯದ ಬಹಳ ವರ್ಷಗಳ ಕಾಲ ಬರವಣಿಗೆಯನ್ನು ನಿಲ್ಲಿಸಿದ್ದರು. ಕಳೆದ ಇಳಿ ವರ್ಷಗಳಲ್ಲಿ ಒಂದೆರಡು ಕೃತಿಗಳ ಮೂಲಕ ಮರುಪ್ರವೇಶ ಮಾಡಿದ್ದಾರೆ. ಇವರ ಕವಿತೆಗಳು, ಪ್ರಬಂಧಗಳು ವಿಶಿಷ್ಟ ಪ್ರಭೆಯೊಂದಿಗೆ ಕಂಗೊಳಿಸುವ ಶಕ್ತಿ ಪಡೆದಿದೆ. ನಿಸರ್ಗದ ಚೈತನ್ಯಕ್ಕಿರುವ ನಿರಂತರ ಸಂಬಂಧವನ್ನು ಸುಜಾತ ಇಲ್ಲಿನ ಕವಿತೆಯಲ್ಲಿ ಹೆಣೆದಿದ್ದಾರೆ. ನಿಸರ್ಗದ ಜೀವಪರ ಕಾಳಜಿಯನ್ನು ಗುರುತಿಸುತ್ತಾರೆ. ಹರಿವ ನೀರಿಗೆ ಬೀಳುವ ಕನಸು ಕನವರಿಕೆಗಳನ್ನು ಸೂಕ್ಷ್ಮವಾಗಿ ದಾಖಲಿಸುತ್ತಾರೆ.

ನಿವೃತ್ತನಾದ ಮನುಷ್ಯನೊಬ್ಬನ ಆಲೋಚನಾ ಲಹರಿ ಹೇಗೆ ಬದಲಾಗುತ್ತ ವಾಸ್ತವದ ಕಾಲಚಕ್ರಕ್ಕೆ ಹೊಂದಿಕೊಂಡು ಬದುಕು ದೂಡುತ್ತದೆ ಎಂಬುದನ್ನು ಪ್ರಕಾಶ ಕಡಮೆಯವರ 'ಬೋಧಿವೃಕ್ಷದ ದಾರಿಗುಂಟ' ಕವಿತೆಯಲ್ಲಿ ಕಾಣಬಹುದು. ಕಟ್ಟಿದ ಮನೆಯ ಸಾಲ ತಿರುವ ಮೊದಲೇ ಕೆಲಸದಿಂದ ನಿವೃತ್ತನಾದೆ ಎಂಬ ಅರ್ಥ ಕೊಡುವ ಸಾಲುಗಳು ಮಧ್ಯಮ ಕುಟುಂಬವೊಂದರ ಸಹಜ ಪರಿಸ್ಥಿತಿಯನ್ನು ಓದುಗನಿಗೆ ಮನಮುಟ್ಟಿಸುತ್ತದೆ. ದೇಹಕ್ಕೆ ವಯಸ್ಸಾಗುತ್ತ ಆಗುತ್ತಾ ಒಂದೊಂದೇ ಭ್ರಮೆಗಳು ಕಳಚಿಕೊಳ್ಳಲು ಆರಂಭಿಸಿ ಸತ್ಯದ ಬೆಳಕಿನ ದರ್ಶನವಾಗುತ್ತಾ ಹೋಗುತ್ತದೆ. ಒಂದು ಕ್ಷಣ ಎಲ್ಲವು ನಿಮಿತ್ತ ಮಾತ್ರ ಎಂದೆನಿಸುತ್ತದೆ. ಕೊನೆಗೆ ಉಳಿಯುವ ದಾರಿಯೊಂದೇ ಅದುವೇ ಬುದ್ಧನ ಮಮತೆಯ ಬೆಳಕಿನ ಜ್ಞಾನದ ದಾರಿ ಎಂಬುದನ್ನು ಕವಿತೆ ಎದೆಗೆ ದಾಟಿಸುತ್ತದೆ.

ಸೃಜನಶೀಲ ಮನಸ್ಸಿಗೆ ದಕ್ಕಬಹುದಾದ ಪ್ರೇರಣೆ ಪ್ರಭಾವಗಳು ಯಾವ ಮೂಲದಿಂದಲಾದರೂ ದಕ್ಕಬಹುದು. ಪುಟ್ಟ ಕವಿತೆಯೊಂದು ಬೃಹತ್ ಸಿನಿಮಾಕ್ಕೆ ಪ್ರೇರಣೆ ಕೊಡಬಹುದು. ದೊಡ್ಡ ಸಿನಿಮಾದಿಂದ ಪುಟ್ಟ ಪುಟ್ಟ ಕವಿತೆಗಳು ಹುಟ್ಟಿ ಕೊಳ್ಳಬಹುದು ಎಂಬುದಕ್ಕೆ ಉದಾಹರಣೆಯಾಗಿ ಸಂಧ್ಯಾರಾಣಿ ಅವರ 'ಕರ್ಣನ್' ಕವಿತೆ ಸಾಕ್ಷಿಯಾಗಿದೆ. ಇತ್ತೀಚಿಗೆ ತೆರೆಕಂಡ ಅಸುರನ್, ಕರ್ಣನ್, ಜೈ ಭೀಮ್ ಮುಂತಾದ ಸಿನಿಮಾಗಳು ನಮ್ಮ ಬಹುತೇಕ ತರುಣ ಲೇಖಕರನ್ನು ಪ್ರಭಾವಿಸಿದೆ. ಬಹಳ ಜನ ಸಾಮಾಜಿಕ ಜಾಲತಾಣಗಳಲ್ಲಿ ಅವುಗಳಿಂದ ದಕ್ಕಿದ ಒಳನೋಟ ಗಳನ್ನು ಬರೆಯುತ್ತಿದ್ದಾರೆ. ದಮನಿತ ಸಮುದಾಯದ ಸಾವಿರಾರು ಪ್ರಶ್ನೆಗಳೇ ಇಲ್ಲಿ ರೂಪಕಗಳಾಗಿರುವುದು ಶ್ಲಾಘನೀಯ.

ವಿಸ್ಮೃತಿ, ಭಾರತೀಯರಾದ ನಮಗೆ ಅಂಟಿದ ಶಾಪ. ಹಿಂದಿನದೆಲ್ಲವನ್ನು ಮರೆಯುವ ಮೂಲಕ ಭವಿಷ್ಯವನ್ನು ಸರಿಯಾಗಿ ಕಟ್ಟಿಕೊಳ್ಳಲಾಗದ ಅಸಹಾಯಕ ಸ್ಥಿತಿಯಲ್ಲಿ ನಾವು ಹೆಣಗುತ್ತಾ ನಿಂತಿದ್ದೇವೆ. ಭವಿಷ್ಯ ಮಾತ್ರವಲ್ಲ; ನಮ್ಮ ವರ್ತಮಾನವನ್ನು ನಾವು ಸಹ್ಯಗೊಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನಾ. ದಿವಾಕರ ಅವರ 'ವರ್ತಮಾನದ ಕನಸು' ಕವಿತೆಯನ್ನು ಓದಿದಾಗ ನನಗನಿಸಿದ ವಿಚಾರಗಳಿವು. ಹೆತ್ತೊಡಲ ಸೀಳುವ, ಬಸಿರ ತುಂಡರಿಸುವ, ಹೆಜ್ಜೆಗಳ ಮರೆತು ಬಿಡುವ, ದುರ್ಬಲ ಬದುಕು ನಮ್ಮದು ಇದು ಕೇವಲ ಕವಿತೆಯಲ್ಲ ವರ್ತಮಾನದ ಸಂಕಟಗಳ ಅನಾವರಣ.

ಕಾವ್ಯ ಎಂದರೇನು? ಕಾವ್ಯಕ್ಕೂ ನಿತ್ಯದ ಬದುಕಿಗೂ ಇರಬಹುದಾದ ಸಹಜ ಸಂಬಂಧಗಳೇನು ಎಂಬ ಪ್ರಶ್ನೆಗಳಿಗೆ ಜಯಶಂಕರ ಹಲಗೂರು ತಮ್ಮ 'ಕಾವ್ಯ, ಅಡುಗೆ ಮತ್ತು ಹಿಂಸೆ' ಕವಿತೆಯಲ್ಲಿ ಉತ್ತರ ಕಂಡುಕೊಳ್ಳಲು ಪ್ರಯತ್ನಪಟ್ಟಿದ್ದಾರೆ. ಮಾಂಸಾಹಾರ ಅದರಲ್ಲೂ ಕಾಲ್ ಸೂಪ್ ಎಂದರೆ ನಮ್ಮಲ್ಲಿರುವ ಶೇಕಡ ತೊಂಬತ್ತಕ್ಕೂ ಹೆಚ್ಚು ಜನರ ಬಾಯಲ್ಲಿ ನೀರೂರುತ್ತದೆ. ವಿಷಾದವೆಂದರೆ ಅವರು ತಮ್ಮ ಅನ್ನದ ಇಚ್ಛೆಯನ್ನು ಬಹಿರಂಗವಾಗಿ ಹೇಳಿಕೊಳ್ಳಲಾಗದ ಅಸಾಯಕ ಹಮ್ಮಿನ ಸ್ಥಿತಿಯಲ್ಲಿರುತ್ತಾರೆ. ಬಹುಸಂಖ್ಯಾತರಾದ ಮಾಂಸಹಾರಿಗಳು ಅಲ್ಪ ಸಂಖ್ಯಾತರಾದ ಸಸ್ಯಹಾರಿಗಳ ಮನಸ್ಸು ನೋಯದಂತೆ ಎಚ್ಚರಿಕೆಯಿಂದ ವರ್ತಿಸುತ್ತಾರೆ. ಇದು ಮಾಂಸಾಹಾರಿಗಳ ಸಜ್ಜನಿಕೆಯ ನಡವಳಿಕೆ. ಇದನ್ನು ನಮ್ಮ ಗ್ರಾಮೀಣ ಕನ್ನಡ ಸಂಸ್ಕೃತಿ ಪರಂಪರಾಗತವಾಗಿ ನಮಗೆ ಕಲಿಸಿಕೊಟ್ಟಿದೆ. ಒಲೆಯ ಕಾವಿನ ಹದಕ್ಕೆ ತಕ್ಕಂತೆ ಕಾಲದ ಹಾಗೂ ಕವಿತೆಯ ಹದವಾದ ನಾಡಿಯನ್ನು ಜಯಶಂಕರ್ ಹಿಡಿಯಲು ಯತ್ನಿಸಿದ್ದಾರೆ, ಆದಿ ಅನಂತಗಳ ಲೋಕ ಸೂತ್ರಗಳನ್ನು ಅರ್ಥಮಾಡಿಕೊಳ್ಳಲು ಈ ಕವಿತೆ ನೆರವಾಗುತ್ತದೆ.

ಹನ್ನೊಂದನೆಯ ಶತಮಾನದಿಂದಲೂ ಕನ್ನಡ ಕಾವ್ಯದಲ್ಲಿ ಬೆಕ್ಕು ಒಂದು ಮಹತ್ವದ ರೂಪಕವಾಗಿ ಕಾಡುತ್ತ ನಿಂತಿದೆ. ದಾಸಿಮಯ್ಯ ಮಠದೊಳಗಿನ ಬೆಕ್ಕಿನ ಬಗ್ಗೆ ಮಾತನಾಡಿದರೆ, ಅಕ್ಕಮಹಾದೇವಿಯ ವಚನಗಳಲ್ಲಿ ಪಂಜರದೊಳಗಣ ಜೀವಪಕ್ಷಿಯನ್ನು ಹಾರಿಸಿಕೊಂಡು ಹೋಗುವ ಮೃತ್ಯುವಿನ ಸಂಕೇತವಾಗಿ ಕಾಣಿಸಿಕೊಳ್ಳುತ್ತದೆ. "ಗೌಡರ ಮನೆಯಲ್ಲಿ ಬಾಡು ತಿನ್ನುವುದು ಬೆಕ್ಕು, ಹಾರುವರ ಮನೆಯಲ್ಲಿ ಹಾಲು ಕುಡಿಯುವುದು ಬೆಕ್ಕು" ಎಂದು ನಮ್ಮ ಜನಪದ ಕವಿಗಳು ಬೆಕ್ಕಿನ ಚಾಂಚಲ್ಯ ಸ್ವಭಾವವನ್ನು ಚಿತ್ರಿಸುತ್ತಾರೆ. ವಾಸುದೇವ ನಾಡಿಗ್ ಅವರ 'ಅಲೆಮಾರಿ ಮತ್ತು ಬೆಕ್ಕು' ಕವಿತೆಯನ್ನು ಓದುತ್ತಿದ್ದರೆ ನಮ್ಮ ಪರಂಪರೆಯ ನೆನಪು ಮೂಡುತ್ತದೆ. ಅನ್ಯ ಮನಸ್ಕ ವ್ಯಕ್ತಿಯ ಬಳಿಗೆ ಬಂದು ಹತ್ತಿರವಾದಂತೆ ಬೆಕ್ಕು

ನಟಿಸಬಹುದು. ಹತ್ತಿರವಾಗುವುದೆಂದರೆ ದೂರವಾಗುವ ಮಹಾಸತ್ಯದ ಸೂಚನೆಯು ಆಗಿರಬಹುದು, ಬದುಕು ಮೋಹಕ ಕವಡೆಯಾಟವಾದರೆ; ಬೆಕ್ಕು ಬದುಕನ್ನೇ ಅಪಹರಿಸಿಬಿಡುವ ಸಾವಿನ ಸಂಕೇತವಾಗುತ್ತದೆ.

ಕಾಲ ಧರ್ಮವನ್ನು ಸಮರ್ಥವಾಗಿ ಗ್ರಹಿಸುವ ಕವಿ ಟಿ. ಯಲ್ಲಪ್ಪ ಅವರ 'ದಾಸವಾಳ' ಕವಿತೆ ಹಲವು ನೆಲೆಗಳನ್ನು ಶೋಧಿಸುವ ಹತಾರವಾಗಿ ಕಾಣುತ್ತದೆ. ಈ ಕವಿತೆಯ ಬಗ್ಗೆ ನನಗೆ ವಿಶೇಷ ಮೆಚ್ಚುಗೆಯಿದೆ. ೧೯೯೨ರ ಡಿಸೆಂಬರ್ ೫ರಂದು ನನ್ನ ಮೊದಲ ಸಂಕಲನ 'ದೇಶಕೋಶ ದಾಸವಾಳ' ಬಿಡುಗಡೆ ಯಾಯಿತು. ಆ ಸಂಕಲನದ ಪ್ರೇರಣೆಯನ್ನು ಯಲ್ಲಪ್ಪ ಪಡೆದುಕೊಂಡಿರುವುದು ಸಂತೋಷದ ವಿಚಾರ. ಅದೇ ಕಾಲಕ್ಕೆ ಕವಿಮಿತ್ರ ಬಂಜಗೆರೆ ಜಯಪ್ರಕಾಶರ 'ಮಹೂವ' ಸಂಕಲನವು ಹೊರಬಂದಿತ್ತು. ದೇಶಕೋಶ ದಾಸವಾಳ ಮತ್ತು ಮಹೂವ ಈ ಎರಡು ಸಂಕಲನಗಳು ಹೂವಿನ ಹೆಸರನ್ನು ಹೊತ್ತಿವೆ, 'ಮಹೂವ' ಜನರ ಅನ್ನದ ಸಮಸ್ಯೆಯನ್ನು ಸಂಕೇತಿಸುವ ಕವಿತೆಯಾದರೆ 'ದೇಶಕೋಶ ದಾಸವಾಳ' ಆರಾಧನಾ ಮನಸ್ಥಿತಿಯನ್ನು ಹೊಂದಿದೆ ಎಂದು ವಿಮರ್ಶಕ ರೊಬ್ಬರು ಟೀಕಿಸಿದ್ದರು. ಅದಕ್ಕೆ ಉತ್ತರವಾಗಿ ಬಸವರಾಜ ಕಲ್ಗುಡಿಯವರು ದೇಶಕೋಶ ದಾಸವಾಳ ಎಂದರೆ ಕೇವಲ ಹೂವಲ್ಲ, ದೇಶ ಎಂದರೆ Nation ಕೋಶ ಎಂದರೆ Knowledge. ದೇಶವನ್ನಾಗಲಿ ಕೋಶವನ್ನಾಗಲಿ ದಾಸವ ಆಳ ಎಂದು ಅರ್ಥಪೂರ್ಣವಾಗಿ ಬಿಡಿಸಿ ಹೇಳಿದ್ದರು.

ಕಾಣ್ಕೆ ಬಲ್ಲ ಕವಿ ಎನ್ನುವ ಮಾತನ್ನು ಯಲ್ಲಪ್ಪ ಇಲ್ಲಿ ಬಳಸುತ್ತಾರೆ. ಇದು ಕವಿಗಿರಬೇಕಾದ ದರ್ಶನ ಪ್ರಜ್ಞೆಯನ್ನು ಸೂಚಿಸುತ್ತದೆ. ಕವಿ ಸದಾ ತ್ರಿಕಾಲ ಜ್ಞಾನಿ ಯಾಗಿರಬೇಕು. ಮುಂದಾಗುವುದನ್ನು ಕಲ್ಪಿಸಿ ಹೇಳಬೇಕೆಂಬ ಸೂಚನೆ ಇಲ್ಲಿದೆ. ಹೂವಿನ ಹಾಗೆ, ಮುಗ್ಧ ಹಸುಳೆಯಂತೆ ಅರಳಿ ಗೆಲ್ಲಬೇಕಾದ ಸಮಕಾಲೀನ ಜೀವ ಜಗತ್ತು ಹಾಗೂ ಮನುಕುಲ ಸಂಕಟಕ್ಕೆ ಮುಖಾಮುಖಿಯಾಗುವ, ನೋಯುತ್ತಾ ಬೇಯುತ್ತಾ ನಾಶದ ಕಡೆ ಚಲಿಸುವ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಸಮಾನತೆಗಳು ಪಾತಾಳ ಸೇರುವ ಅಪಾಯದಲ್ಲಿವೆ. ಇದರ ಮುನ್ಸೂಚನೆಯನ್ನು ಕವಿ ಕಟ್ಟಿ ಕೊಡುತ್ತಿದ್ದಾನೆ. ನಾನು ಮೊದಲಿಗೆ ಹೇಳಿದಂತೆ, ಸತ್ಯದ ಪರವಾಗಿ ಮಾತನಾಡು ವವರ ಹತ್ಯೆ ನಡೆಯುತ್ತಿದೆ, ಜಾತಿ ಮತ ದೇವರು ಧರ್ಮ ಸಂಪ್ರದಾಯಗಳು ನಮ್ಮ ಮೆದುಳನ್ನು ಆವರಿಸಿಕೊಂಡು ಇಡೀ ದೇಹಕ್ಕೆ ರೋಗವಾಗಿ ಪರಿಣಮಿಸಿವೆ. ಗುಲಾಮ ಗುಲಾಮನಾಗಿಯೇ ಇರಬೇಕಾಗುತ್ತದೆ. ಇಡೀ ವ್ಯವಸ್ಥೆಯೇ ಕುಸಿಯು ತ್ತಿರುವ ಕಾರಣದಿಂದಾಗಿ ದೇಶವನ್ನಾಗಲಿ ಜ್ಞಾನ ವನ್ನಾಗಲಿ ದಾಸನಾದವನು ಆಳಲಾರ, ಅವನ ಬದುಕೇ ಪರಿಸಮಾಪ್ತಿಯಾಗುವ ಹಂತ ತಲುಪಿದೆ ಎನ್ನುವ ವಿಷಾದವನ್ನು ಕವಿ ಈ ಕವಿತೆಯಲ್ಲಿ ವ್ಯಕ್ತಪಡಿಸುತ್ತಾರೆ.

ತಿಳಿದವರು, ದೊಡ್ಡವರು ಹಲವು ಬಾರಿ ಎಚ್ಚರಿಸಿದರು ನಾವು ಮಾಡಬಾರದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡುತ್ತಾ, ಕಾಲು ಜಾರುತ್ತಾ ಹಾಳಾಗುವುದನ್ನು ಬೂದುಗುಪ್ಪ ಪ್ರಹ್ಲಾದರೆಡ್ಡಿಯವರ 'ಬಚ್ಚಲು ಮನೆ' ಕವಿತೆ ನಿರೂಪಿಸುತ್ತದೆ. ಬಚ್ಚಲಿಗೆ ಬೀಳುವುದನ್ನು ಹಲವು ಅರ್ಥಗಳ ವಿಸ್ತರಣೆಯಾಗಿ ನೋಡಬಹುದು. ಬೀಸಿನೀರಿನ ಹಿತಾನುಭವ ಹಾಗೂ ಸಾಬೂನಿನ ಘಮಲಿಗೆ ಮೈ ಮತ್ತು ಮನಸ್ಸುಗಳನ್ನು ಒಡ್ಡುವ ಕ್ರಿಯೆ ಇಲ್ಲಿ ಮುಖ್ಯವಾಗುತ್ತದೆ. ಸೋಪಿನ ಪರಿಮಳದ ನಿರೀಕ್ಷೆಯಲ್ಲಿ ಬಚ್ಚಲಿಗೆ ಹೋದವರು, ಅದರ ಮೇಲೆ ಕಾಲಿಟ್ಟು ಜಾರಿಬಿದ್ದರೆ ಆಗುವ ಆಘಾತ, ಅದನ್ನು ಸಹಿಸಿಕೊಳ್ಳುವ ಮನಸ್ಥಿತಿಯ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಮನುಷ್ಯ ತನ್ನ ಸುಖ, ಸಂತೋಷಗಳಿಗಾಗಿ ಏರ್ಪಾಟು ಮಾಡಿಕೊಂಡ ವಸ್ತುಗಳೇ ಅವನನ್ನು ಜಾರಿಬೀಳಿಸುವ ಅಪಾಯಕ್ಕು ಕಾರಣವಾಗುತ್ತದೆ ಎಂಬುದನ್ನು ಕವಿ ನಿರೂಪಿಸುತ್ತಾನೆ. ಈ ಕವಿತೆ ಓದಿದಾಗ ನನಗೆ ಪಂಪನ ಆದಿಪುರಾಣದ ವಜ್ರಜಂಘ ಶ್ರೀಮತಿಯರೆಂಬ ದಂಪತಿಗಳು ಮಲಗುವ ಮನೆಯಲ್ಲಿ ಕಾಳೋರಗ ಧೂಪದಲ್ಲಿ ಉಸಿರುಗಟ್ಟಿ ಪ್ರಾಣಬಿಟ್ಟ ಪ್ರಸಂಗ ನೆನಪಾಗುತ್ತದೆ.

**"ಭೋಗಾಂಗಮಾಗಿಯುಂ ಕೃಷ್ಣಾಗರುಧೂಪಂ ಮುಸುಂಕಿ ಕೊಂದಿಕ್ಕಿದುದಾ**
**ಬೋಗಿಗಳನಿಂತು ಸಂಸ್ಕೃತಿ**
**ಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್"**

ಮನುಷ್ಯ ತನ್ನ ಸುಖಕ್ಕಾಗಿ ಮಾಡಿಕೊಂಡ ಎಲ್ಲ ಭೋಗ ವಸ್ತುಗಳು ಅವನಿಗೆ ವಿಷದ ನಂಜಾಗಿ ಪರಿಣಮಿಸುತ್ತವೆ ಎಂಬುದನ್ನು ಪಂಪ ಈ ಕವಿತೆಯ ಮೂಲಕ ಹೇಳುತ್ತಿದ್ದಾನೆ.

ಸಾಮಾನ್ಯವಾಗಿ ನಾನು ಒಂದು ಕವಿತೆಯನ್ನು ಎರಡು ಮೂರು ವರ್ಷಗಳ ಕಾಲ ಸಮಯ ತೆಗೆದುಕೊಂಡು ಬರೆಯುತ್ತೇನೆ. ಒಂದೇ ದಿನ ಎರಡು ಕವಿತೆಗಳನ್ನು ಬರೆದ ಒಂದು ಸಂದರ್ಭವಿದೆ. ಹತ್ತು ಹನ್ನೆರಡು ವರ್ಷಗಳ ಹಿಂದೆ ಕೋಮುವಾದಿ ಸರ್ಕಾರವೊಂದು ಅಧಿಕಾರದ ಪಟ್ಟಕ್ಕೇರಿದ ದಿನ ನನಗೆ ರಾತ್ರಿಯೆಲ್ಲ ನಿದ್ದೆ ಬರದೆ ಎದ್ದು ಕೂತಿದ್ದೆ. ಕವಿಯಾದವನು ಏನು ತಾನೇ ಮಾಡಲು ಸಾಧ್ಯ. ಒಂದು ಕವಿತೆ ಬರೆದು ತನ್ನ ಪ್ರತಿಭಟನೆಯನ್ನೋ ಅಭಿಪ್ರಾಯವನ್ನೋ ದಾಖಲಿಸಬಹುದು. ನನ್ನ ಆ ರಾತ್ರಿಯ ಚಡಪಡಿಕೆಯಲ್ಲಿ ಶೂದ್ರ ಹಾಗೂ ದಮನಿತ ಭಾರತದ ಒಟ್ಟು ಇತಿಹಾಸವೇ ಕಣ್ಣೆದುರು ನಿಂತಿತ್ತು. ಸ್ವಾತಂತ್ರ ಹೋರಾಟಗಾರರ ಪ್ರಾಣತ್ಯಾಗದಿಂದ ನಮಗೆ ದೊರಕಿದ ಸ್ವಾತಂತ್ರ್ಯವನ್ನು ನಮ್ಮ ಜನ ತಮ್ಮ ಕೈಯ್ಯಾರೆ ಕಳೆದುಕೊಂಡದ್ದು ನನಗೆ ದಟ್ಟವಾಗಿ

ಕಾಣತೊಡಗಿತು. ಪ್ರಜಾಪ್ರಭುತ್ವ ಸಂವಿಧಾನ ಎಲ್ಲವೂ ಕೈಸೋತು ಕುಸಿಯುತ್ತಿವೆ ಎಂದು ಅನ್ನಿಸಿತು. ಆಗ ಹುಟ್ಟಿದ ಕವಿತೆಯೇ ಈ 'ಚಾಣಕ್ಯರ ಗೆದ್ದ ಬೆಳಗು.'

ಕವಿಯಾಗಲಿ, ಕವಿತೆಯಾಗಲಿ ಲೋಕದ ಹಂಗಿನಲ್ಲಿ ಬದುಕಿದರೆ ಅದು ಕೇವಲ ಅಕ್ಷರವಾಗಿ ನಾಶವಾಗಬಹುದು. ಸದ್ಯದ ಕೋಮುವಾದಿ ರಾಜಕಾರಣದ ಪರಿಸ್ಥಿತಿ ಕವಿಗಳಿಗೆ ಸರಿಯಾದ ಪಾಠವನ್ನು ಕಲಿಸುತ್ತಿದೆ. ಕವಿಗಳಿಗೆ ಗಂಜಿ ಗಿರಾಕಿ ಎಂಬ ಹೊಸ ಅಭಿದಾನ ನೀಡಲಾಗಿದೆ. ಸಾರ್ವಜನಿಕರಿಂದ ಕವಿಯನ್ನು ಅವನ ಕವಿತೆಯನ್ನು ದೂರ ಇಡುವ ಪ್ರಯತ್ನ ನಿತ್ಯ ನಡೆಯುತ್ತಿದೆ. ಕವಿ ಹೆಚ್ಚು ದಿಟ್ಟವಾಗಿ, ಪ್ರಾಮಾಣಿಕವಾಗಿ ಮಾತನಾಡಿದಷ್ಟು ಆತ ಸಂಕಟಗಳಿಗೆ ಸಿಲುಕಬೇಕಾಗುತ್ತದೆ. ಕವಿ ಯಾದವನು ಆಗಾಗ ಆತ್ಮಶೋಧನೆಗೆ ಒಳಗಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಡಾ. ಬೇಲೂರು ರಘುನಂದನ ಅವರ ಕವಿಗಳು ಆಸನದಲ್ಲಿದ್ದಾರೆ ಎನ್ನುವ ಕವಿತೆಯನ್ನು ಪರಿಶೀಲಿಸಬೇಕಾಗಿದೆ. ಕವಿ ತನ್ನ ಕವಿತೆಯ ರಚನೆಗೆ ಯಾವ ಅಕ್ಷರವನ್ನು ನಂಬಿರುತ್ತಾನೋ, ಆ ಅಕ್ಷರಗಳು ಶೋಧವಿಲ್ಲದ, ನಾದವಿಲ್ಲದ ಹಾಡುಕಟ್ಟಿ ಆರ್ಭಟಿಸುತ್ತಿವೆ. ಅವು ಹುಟ್ಟಿ ಸಾಯುವ ಅಕ್ಷರಗಳು. ಅಲ್ಲಿ ಕಲೆ ಇಲ್ಲ. ಕೇವಲ ಅರಚುವಿಕೆ ಇದೆ ಎಂಬುದನ್ನು ರಘುನಂದನ್ ಇಲ್ಲಿ ಒತ್ತಿ ಹೇಳುತ್ತಾರೆ.

ಹೆಣ್ಣು ಗಂಡುಗಳ ಸಂಬಂಧ ಕೇವಲ ದೈಹಿಕ ವಾಂಛೆಯಿಂದ ಕೂಡಿರುವುದಲ್ಲ. ಅದಕ್ಕೊಂದು ಆಧ್ಯಾತ್ಮಿಕ ಅನುಭೂತಿ ಇರುತ್ತದೆ ಎಂಬುದನ್ನು ಗೀತಾ ವಸಂತ ಅವರ ಮಾಯಾ ಸರೋವರ ಎನ್ನುವ ಈ ಕವಿತೆಯಲ್ಲಿ ನಾವು ಕಾಣಬಹುದು. ಮೈಥುನ ಜಗತ್ತಿನಲ್ಲಿ ಗಂಡಿನಷ್ಟೇ ಹೆಣ್ಣು, ಹೆಣ್ಣಿನಷ್ಟೇ ಗಂಡು ಪರಸ್ಪರ ಸಮಾನ ಗೌರವ ಹಾಗೂ ಸಮ ಭೋಗವನ್ನು ಪಡೆಯುತ್ತಾರೆ. ಇಲ್ಲಿ ಯಾರು ಮೇಲು ಅಲ್ಲ, ಯಾರು ಕೀಳು ಅಲ್ಲ ಎಲ್ಲರೂ ಸಮಾನರು. ಮಿಥುನ ಕ್ರಿಯೆಯ ನಂತರ ಗಂಡು ಕಳಚಿದ ಅಂಗಿಯನ್ನು ಮತ್ತೆ ತೊಟ್ಟು ಹೊರಟುಬಿಡಬಹುದು. ಆದರೆ ಹೀಗೆ ಬೇಜವಾಬ್ದಾರಿಯಿಂದ ವರ್ತಿಸುವಂತಿಲ್ಲ. ಅವಳ ಒಡಲೊಳಗೆ ಹೊಸ ಜೀವದ ಅಂಕುರವಾಗಿರುತ್ತದೆ. ಗಂಡಿನ ಜೊತೆಗೆ ಪ್ರಣಯದ ಉನ್ಮತ್ತತೆಯಲ್ಲಿ ಇದ್ದ ಅವಳಿಗೆ ಈಗ ತಾಯಿಯ ಎತ್ತರದ ಸ್ಥಾನ ತಾನಾಗಿಯೇ ಒದಗಿ ಬರುತ್ತದೆ.

ಭಾರತದ ಪ್ರಜೆಗಳಾದ ನಾವು ಚರಿತ್ರೆಯನ್ನು ಮರೆತುಬಿಟ್ಟಿದ್ದೇವೆ. ಪ್ರಾಣ ಪ್ರಪಂಚದಲ್ಲಿ ಮುಳುಗಿದ್ದೇವೆ. ಇತಿಹಾಸವನ್ನು ಪುರಾಣವೆಂಬಂತೆ ಭ್ರಮಿಸಿ ಬದುಕುತಿದ್ದೇವೆ. ಈ ದೇಶದ ದೀನ, ದಲಿತ, ದಮನಿತ ಜನರೆಲ್ಲರೂ ತಮ್ಮ ಸಂಕಟ ಗಳಿಗೆ ಹಣೆಬರಹವೇ ಕಾರಣವೆಂಬ ನಂಬಿಕೆಯಲ್ಲಿ ನರಳುತ್ತಿದ್ದಾರೆ. ಕೊಚ್ಚಿ ತಿನ್ನುವ ಕುತಂತ್ರಿಗಳಿಗೆ ತಮ್ಮ ರಕ್ತ ಮಾಂಸದ ಎಡೆ ಇಡುತ್ತಿದ್ದಾರೆ. ಅವರಿಗೆ ಗಾಂಧಿಯ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಯೂ ಇಲ್ಲ, ಬಾಬಾ ಸಾಹೇಬರ ಸಂವಿಧಾನದ

ಮೇಲೆ ನಂಬಿಕೆಯು ಇಲ್ಲ. ಇದೇ ಕಾರಣಕ್ಕಾಗಿ ಈ ಅನಕ್ಷರಸ್ಥ ಜನರ ಶೋಷಣೆ ನಡೆಯುತ್ತಿದೆ ಎಂಬ ಅರಿವು ಇಲ್ಲ. ಹೂತೋಟದಲ್ಲಿ ಸುರಿದ ರಕ್ತದ ಮಳೆ ಎನ್ನುವ ಕವಿತೆಯಲ್ಲಿ ಸೂರ್ಯಕೀರ್ತಿ ಸಚಿತ್ರವಾಗಿ ಅನಾವರಣ ಮಾಡಿದ್ದಾರೆ.

ನಾಗರಾಜ್ ನವೀಮನೆಯವರ ಗಾಂಧಿಯನ್ನು ಕಂಡಿರಾ ಕವಿತೆಯು ಇದೇ ಮಾದರಿಯಲ್ಲಿದೆ. ಸ್ವಾತಂತ್ರ್ಯ ಹೋರಾಟಕ್ಕಾಗಿ ಗಾಂಧೀಜಿ ಹಿಡಿದ ದಾರಿಯನ್ನು ಇಡೀ ಜಗತ್ತೇ ಕೊಂಡಾಡಿದೆ. ತಮ್ಮ ದೇಶದ ಜನರನ್ನು ಗುಲಾಮಗಿರಿ ಯಿಂದ ಮುಕ್ತ ಮಾಡಲು ಮಾರ್ಟಿನ್ ಲೂಥರ್ ಕಿಂಗ್ ಅವರಂತಹ ಹೋರಾಟಗಾರರು ಸೇರಿದಂತೆ ಎಲ್ಲರೂ ಗಾಂಧಿ ಮಾರ್ಗವನ್ನು ಒಪ್ಪಿಕೊಂಡರು. ಆದರೆ ನಮ್ಮ ದೇಶದಲ್ಲಿ ಸದ್ಯದ ಸಂದರ್ಭದಲ್ಲಿ ಗಾಂಧಿಗೆ ಯಾವುದೇ ಮರ್ಯಾದೆಯ ಸ್ಥಾನಮಾನ ಇಲ್ಲದಂತಾಗುತ್ತಿದೆ. ಗುಂಡು ಹಾರಿಸಿ ಗಾಂಧಿಯನ್ನು ಕೊಂದವನಿಗೆ ದೇವಸ್ಥಾನ ಕಟ್ಟಲು ಹೊರಟಿರುವುದು ಅತ್ಯಂತ ವಿಷಾದನೀಯ. ಸುಖ, ಸಮೃದ್ಧಿ, ಶಾಂತಿ, ಸಹನೆಗಳನ್ನು ಅಂತರ್ಗತಗೊಳಿಸಿಕೊಳ್ಳಬೇಕಾದ ಸಂದರ್ಭದಲ್ಲಿ ನಾವು ಅವೆಲ್ಲದರಿಂದಲೂ ಬಹಿರ್ಮುಖರಾಗುತ್ತಿದ್ದೇವೆ. ಭಾರತ ದೇಶಕ್ಕೆ ಒಂದು ವಿಳಾಸವನ್ನು ದಾಖಲಿಸಿದ ಗಾಂಧೀಜಿಯ ವಿಳಾಸವನ್ನು ನಾವೆಲ್ಲರೂ ಹುಡುಕಬೇಕಾದ ವಿಷಾದ ಭಾವವನ್ನು ಈ ಕವಿತೆ ಕಟ್ಟಿಕೊಡುತ್ತದೆ.

ಹೇಮಲತಾ ಮೂರ್ತಿ ಅವರ ಮೃದುಪಾದ ಕವಿತೆ ಒಂದು ವಿಶಿಷ್ಟ ಅನುಭವ ಲೋಕವನ್ನು ನಮ್ಮ ಎದುರು ತೆರೆದು ಇಡುತ್ತದೆ. ಮಗು ಹಡೆಯುವ ಮುನ್ನ ತಾಯಿ ಪಡೆಯುವ ಆನಂದ ಬೃಹದಾಕಾರವಾದದ್ದು. ಮಹತ್ತಿನಿಂದ ಕೂಡಿದ್ದು. ಗರ್ಭಧಾರಣೆಯೇ ಒಂದು ವಿಶಿಷ್ಟ ಅನುಭವವನ್ನು ಹೆಣ್ಣಿಗೆ ಒದಗಿಸುತ್ತದೆ. ಅದರ ರುಚಿ ಸ್ಪರ್ಶ ನವಿರು ಒಗರಾಗಿರುತ್ತದೆ. ಮಗುವನ್ನು ಹಡೆದ ಉನ್ಮತ್ತತೆಯಿಂದ ಅವಳು ಒಂದಲ್ಲ ಒಂದು ದಿನ ಹೊರ ಬರಬೇಕಾಗುತ್ತದೆ. ಆನಂತರದ ಕಾಲವೆಲ್ಲ ಮಗುವಿನ ಅಧೀನದಲ್ಲಿರುತ್ತದೆ. ಆ ವಾಮನ ಶಿಶು ಬೆಳೆದಂತೆ ಲೋಕವನ್ನು ವ್ಯಾಪಿಸಿಕೊಳ್ಳುತ್ತದೆ. ಮೂರು ಹೆಜ್ಜೆ ದಾನ ಕೇಳಿದ ವಾಮನ ಬಲಿಯನ್ನು ಪಾತಾಳಕ್ಕೆ ತುಳಿದಂತೆ, ತಾನು ಕಷ್ಟಪಟ್ಟು ಹೆತ್ತು ಸಾಕಿ ಬೆಳೆಸಿದ ಈ ಮಗು ತನ್ನ ತಾಯಿಯ ತಲೆಯ ಮೇಲೆ ಕಾಲಿಟ್ಟು ಪಾತಾಳಕ್ಕೆ ತುಳಿಯುವ ದುಸ್ಸಾಹಸಕ್ಕೆ ಇಳಿಯುವ ಚಿತ್ರಣವನ್ನು ಈ ಕವಿತೆ ಕಟ್ಟಿಕೊಡುತ್ತದೆ. ಇದು ಕೇವಲ ಅಸಹಾಯಕ ತಾಯಿಯ ಕಥೆಯಲ್ಲ. ನಮ್ಮೆಲ್ಲರನ್ನು ಹೆತ್ತ ಈ ಭೂಮಿ ತಾಯಿಯ ಕಥೆಯಾಗಿಯೂ ಇದು ನಿರೂಪಿಸಲ್ಪಡುತ್ತದೆ. ಜೊತೆಗೆ ಪರುಶುರಾಮನ ಮಾತೃಹತ್ಯೆಯ ದುರಂತವನ್ನು ಬೆಟ್ಟುಮಾಡಿ ತೋರಿಸುತ್ತದೆ. ತಾಯಿ ಬಲಿಯ ಮಗಳಾಗಿ ಬಯಲಲ್ಲಿ ಬಯಲಾಗಿ ಹೋಗುತ್ತಾಳೆ.

ಕವಿ ಸದಾಕಾಲವು ತ್ರಿಕಾಲ ಪ್ರಜ್ಞೆಯುಳ್ಳವನಾಗಿರಬೇಕು. ವರ್ತಮಾನದಲ್ಲಿ ನಿಂತು, ಭೂತವನ್ನು ಗ್ರಹಿಸಿ, ಮುಂದಾಗುವ ಭವಿಷ್ಯವನ್ನು ಕಟ್ಟಿಕೊಡಬಲ್ಲವನೇ ನಿಜವಾದ ಕಾಲಜ್ಞಾನಿ. ಮಂಟೇಸ್ವಾಮಿ ಮಹಾಕಾವ್ಯವನ್ನು ರಚಿಸಿದ ಜನಪದ ಕವಿಗಳು ಸೇರಿದಂತೆ, ಕನ್ನಡದ ಅನೇಕ ಕವಿಗಳ ಕವಿತೆಗಳು ಕಾಲಜ್ಞಾನವನ್ನು ನಿರೂಪಿಸಿರುವುದನ್ನು ನಾವು ಕಾಣಬಹುದು. ಶಂಕರ್ ಸಿಹಿಮೊಗ್ಗೆಯವರ ಮೊಳಗುತ್ತಿದೆ ಸೈರನ್ ಕವಿತೆಯಲ್ಲಿಯೂ ಇಂತಹ ಅದ್ಭುತ ಸೂಕ್ಷ್ಮವೊಂದು ಕಂಡು ಬರುತ್ತದೆ. ಅಧಿಕಾರದ ಗದ್ದುಗೆಯ ಮೇಲೆ ಕುಳಿತು ಪ್ರಪಂಚವನ್ನು ಆಳುತ್ತಿರುವವರ ಅನಾಹುತದಿಂದಾಗಿ ಇಡೀ ಜಗತ್ತಿನ ಸಕಲ ಚರಾಚರ ಜೀವ ರಾಶಿಗಳು ಹೇಗೆ ನಾಶವಾಗಲಿವೆ ಎನ್ನುವ ದುಃಸ್ವಪ್ನವನ್ನು ಈ ಕವಿತೆ ಕಟ್ಟಿಕೊಡುತ್ತದೆ. ಮನುಷ್ಯ ಈಗಲೂ ಎಚ್ಚರಗೊಳ್ಳದಿದ್ದರೆ ಜಗತ್ತಿನ ವಿನಾಶ ಖಂಡಿತ ಆಗುತ್ತದೆ.

ಜಗತ್ತು ಬೆಳೆದಂತೆ ಹೆಣ್ಣು ಮಕ್ಕಳು ಸಹ ತಮ್ಮ ಸಾಧನೆಯ ಹಾದಿಯನ್ನು ಎಲ್ಲಾ ರಂಗಗಳಲ್ಲಿಯೂ ಮುಂದುವರೆಸಿದ್ದಾರೆ. ಹಾಗಂತ ಸವಾಲುಗಳು ಕೂಡ ಕಡಿಮೆ ಏನಿಲ್ಲ, ಮಹಿಳೆಯರು ಇಂದು ಅವುಗಳೆಲ್ಲವನ್ನೂ ಮೀರಿ ಸಮಾಜದ ಮುಂದೆ ತನ್ನ ಪ್ರತಿಭೆಯನ್ನು ನಿರೂಪಿಸುತ್ತಿದ್ದಾರೆ. ವಿಶಾಲ ಆರಾಧ್ಯ ಅವರ 'ಹೆಂಗೂಸು' ಕವಿತೆ ಮನೆಯಲ್ಲಿ ಹೆಣ್ಣು ಮಗುವೊಂದು ಜನ್ಮಿಸಿದ ನಂತರ ಮನೆ ಮಂದಿಯೆಲ್ಲ ಅನುಭವಿಸಬಹುದಾದ ಆನಂದದ ಪ್ರತೀಕದಂತಿದೆ. 'ಕಿವಿಯೋಲೆ ಮುಟ್ಟಿ ಬೇಕೆಂದು ಕಿತ್ತವಳು / ಆ ನೋವೇ ಹೂವಾದ ಅನುಭವ ತಂದವಳು' ಇಲ್ಲಿ ಮಗುವಿನ ಮುಗ್ಧತೆಯ ನಗುವಿನ ಮುಂದೆ ಆದ ನೋವುಗಳು ಕೂಡ ಹಿತವಾಗಿ ಬಿಡುತ್ತದೆ ಎಂದು ಕವಿತೆ ಆನಂದದಿಂದಲೇ ಹೇಳುತ್ತದೆ. ಈ ಕವಿತೆ ಓದುವಾಗ ಪ್ರಖ್ಯಾತ ಜನಪದ ಕವಿತೆಯ 'ಅಳುವ ಕಂದನ ತುಟಿಯು ಹವಳದ ಕುಡಿಹಂಗೆ ಕುಡಿಹುಬ್ಬು ಬೇವಿನೆಸಳಂಗೆ' ಸಾಲು ನೆನಪಿಗೆ ಬಾರದೆ ಇರದು.

'ಪ್ರೀತಿಗೆ ಜಾತಿ ಸಂಕೋಲೆಯ ಹಂಗೇಕೆ?' ಎಂಬುದನ್ನು ಕೇಳುತ್ತಿದೆ ಪಿ.ಡಿ. ಸತೀಶ್ ಚಂದ್ರ ಅವರ 'ಪ್ರೀತಿಯ ಮೀಸಲಾತಿ' ಕವಿತೆ. ಜಗತ್ತು ಆಧುನಿಕವಾಗಿ ಎಷ್ಟೇ ಮುಂದುವರೆದರು ಮನುಷ್ಯರು ಮಾತ್ರ ತಮ್ಮೊಳೊಗೆ ವ್ಯತ್ಯಾಸಗಳನ್ನು ಸೃಷ್ಟಿಸಿಕೊಂಡು ಬಡಿದಾಡುತ್ತಿದ್ದಾರೆ. ಹೊರಗೆ ಸಮಾಜದಲ್ಲಿ ಪ್ರತಿದಿನವೂ ಯಾವುದೊ ಜಾತಿಯ ಹುಡುಗ ಇನ್ನಾವುದೋ ಜಾತಿಯ ಹುಡುಗಿಯನ್ನು ಪ್ರೀತಿಸಿದರೆ, ಪ್ರೀತಿಯ ಕಾರಣಕ್ಕಾಗಿ ವರ್ಗ ವರ್ಗಗಳ ನಡುವೆ ಏರ್ಪಡುತ್ತಿರುವ ದ್ವೇಷದ ವಾತಾವರಣವನ್ನು ನಾವು ಗಮನಿಸುತ್ತಲೇ ಇದ್ದೇವೆ. ಇಂತಹ ವಿಷಾದದ ದಿನಗಳು ಮುಂದಾದರು ದೂರವಾಗಲಿ ಎಂದು ಕವಿತೆ ಪರೋಕ್ಷವಾಗಿ ಆಶಿಸುತ್ತಿದೆ.

ಸುಮಾ ರಮೇಶ್ ಅವರ 'ಮುಖದ ಮುಗುಳ್ನಗೆ ಇನ್ನೂ ಮಾಸಿಲ್ಲ' ಎನ್ನುವ ಕವಿತೆ ಸ್ತ್ರೀ ಸಂಕುಲದ ಸಂಕಟದ ಮೀಮಾಂಸೆಯಂತಿದೆ. ಈ ಮೀಮಾಂಸೆ ಶಾಶ್ವತವಾದದ್ದು, ನಿರಂತರವಾದದ್ದು. ಎಲ್ಲಾ ಕಾಲದಲ್ಲೂ ನಡೆಯುತ್ತಲೇ ಇರುವ ವಾಸ್ತವ. ಪ್ರಜಾಪ್ರಭುತ್ವ, ಸಂವಿಧಾನ, ವಿಜ್ಞಾನ ಇವೆಲ್ಲವೂ ಎಷ್ಟೇ ಬಲಗೊಂಡಾಗ್ಯೂ ಹೆಂಗಸರ ಮೇಲಿನ ಹಲ್ಲೆ ಹತ್ಯೆಗಳು ನಿಂತಿಲ್ಲ. ದುರದೃಷ್ಟವೆಂದರೆ ಹೆಂಗಸರಿಗೆ ತಮ್ಮ ಮೇಲೆ ನಡೆಯುತ್ತಿರುವ ಇಂತಹ ದಬ್ಬಾಳಿಕೆಯ ಅರಿವು ಇದೆಯೋ ಇಲ್ಲವೋ ಗೊತ್ತಿಲ್ಲ. ಅಕಸ್ಮಾತ್ ಅವರಿಗೆ ಅಂತಹ ಅರಿವು ಇದ್ದಿದ್ದರೆ ಅವರು ಮತ ಮೌಢ್ಯಗಳಿಗೆ ಬಲಿಯಾಗುತ್ತಿರಲಿಲ್ಲ. ದೇವಾಲಯಗಳಿಗೆ ಹೋಗಿ ನವಗ್ರಹಗಳ ಪೂಜೆ ಮಾಡುತ್ತಿರಲಿಲ್ಲ. ಮದುವೆ ಗೃಹಪ್ರವೇಶ ಮುಂತಾದ ಸಂದರ್ಭಗಳಲ್ಲಿ ಸಂಪ್ರದಾಯಗಳನ್ನು ಪಾಲಿಸುವಂತೆ ತಮ್ಮ ಮನೆಯ ಗಂಡಸರ ಮೇಲೆ ಒತ್ತಡ ಹೇರುತ್ತಿರಲಿಲ್ಲ. ಖಾಸಗಿ ಟಿವಿ ವಾಹಿನಿಗಳ ಎದುರು ಕೂತು ಬ್ರಹ್ಮಾಂಡ ಭವಿಷ್ಯ ನೋಡುತ್ತಿರಲಿಲ್ಲ. ಪುರೋಹಿತರ ಬಳಿ ಶಾಸ್ತ್ರಗಳನ್ನು ಕೇಳುತ್ತಿರಲಿಲ್ಲ. ಯಾವ ಅನಿಷ್ಟಗಳಿಂದ ಪರಂಪರಾಗತವಾಗಿ ಸ್ತ್ರೀ ಸಂಕುಲ ಯಮಯಾತನೆ ಅನುಭವಿಸಿತ್ತೋ ಆ ಅನಿಷ್ಟಗಳತ್ತಲೇ ನಮ್ಮ ತಾಯಂದಿರು ಆಕರ್ಷಿತರಾಗುತ್ತಿರುವುದು ನಿಜಕ್ಕೂ ದುರದೃಷ್ಟ. ಇಷ್ಟೆಲ್ಲಾ ನೋವುಗಳಿಗೆ ಈಡಾದರೂ ಅವರ ಮುಖದ ಮುಗುಳ್ನಗೆ ಇನ್ನೂ ಮಾಸಿಲ್ಲದಿರುವುದನ್ನು ಈ ಕವಿತೆ ಅರ್ಥಪೂರ್ಣವಾಗಿ ಚಿತ್ರಿಸಿದೆ.

"ದಾರದ ಸಾಲು ಎಳೆಗಳು ಅವು ನಮ್ಮೆದುರಿನ ಲಕ್ಷ್ಮಣ ರೇಖೆಗಳು ಜೋಕೆ, ದಾಟುವ ಭರದಲ್ಲಿ ಉಗುರ ಸೀಳಿಗೆ ಸಿಲುಕಿ ದಾರ ನರನಾಡಿಗಳಿಗೆ ವ್ಯಾಪಿಸೀತು – .... ಗೆರೆ ದಾಟುವ ಆಟಕ್ಕೆ ಕುಂಟಾಬಿಲ್ಲೆ ಎಂದು ಹೆಸರು ಕನಸ ಬಿಲ್ಲೆಯ ಕಣ್ಣಿಗೊತ್ತಿ ಮುತ್ತಿಕ್ಕಿ ಗೆರೆಗೆ ತಾಗದಂತೆ ಹುಸಿ ಹೋಗದಂತೆ ಚಿಮ್ಮಿ ಎಸೆದರೆ ಬೇಕಾದ ಚೌಕದಲ್ಲಿ ಅದು ಸೆರೆ... "ಇಂತಹ ಅರ್ಥಪೂರ್ಣ ಸಾಲುಗಳ ಮೂಲಕ ವರ್ತಮಾನದ ಸಮಸ್ಯೆಗಳಿಗೆ ಜಯಲಕ್ಷ್ಮಿ ಪಾಟೀಲ್ ಅವರ ವರ್ತಮಾನ ಪುರಾತನ ಕವಿತೆ ಮುಖಾಮುಖಿಯಾಗುತ್ತದೆ. ಕೌದಿಯ ರೂಪಕವನ್ನು ಕೇಂದ್ರವಾಗಿ ಇಟ್ಟುಕೊಂಡು ಕವಿ ಪರಂಪರಾಗತವಾಗಿ ಸ್ತ್ರೀಯರು ಅನುಭವಿಸಿದ ಗಾಢ ಸಂಕಟ ಹಾಗೂ ತೆಳು ಸಂತಸಗಳ ಮೇಲೆ ಬೆಳಕು ಚೆಲ್ಲುತ್ತಾರೆ.

೧೨ನೇ ಶತಮಾನದ ವಚನಕಾರ್ತಿಯರು, ಕನ್ನಡದ ಅಸಂಖ್ಯ ಜನಪದ ಕವಿಗಳು, ಸಂಚಿ ಹೊನ್ನಮ್ಮನಂತಹ ಕವಿಗಳು ಮೊದಲ್ಗೊಂಡು ಇಲ್ಲಿಯವರೆಗೂ ಬರೆಯುತ್ತಿರುವ ಕನ್ನಡದ ಎಲ್ಲಾ ಹೆಣ್ಣು ಮಕ್ಕಳು ತಮ್ಮ ಸ್ತ್ರೀ ಸಂಕುಲದ ನೋವುಗಳನ್ನೇ ಕವಿತೆಗಳಲ್ಲಿ ಚಿತ್ರಣ ಮಾಡುತ್ತಿದ್ದಾರೆ. ನಮ್ಮ ಕಾಲದ ತರುಣ ಕವಿಗಳ ಪೈಕಿ,

ತಮ್ಮ ಕವಿತೆಗಳ ಮೂಲಕ ಎದ್ದು ಕಾಣುವ ಮಂಜುಳಾ ಹುಲಿಕುಂಟೆ ಅವರ ಋಣ ಮುಕ್ತಳಾಗುವುದು ಎನ್ನುವ ಕವಿತೆಯು ಇದಕ್ಕಿಂತ ಭಿನ್ನವಾಗಿಲ್ಲ. ಹೆಣ್ಣು ಎಂದರೆ ಪ್ರೇಮದ ಕರುಳು. ಅದಕ್ಕೆ ತಾಯಿತನದ ತುಡಿತ ಇರುತ್ತದೆ. ತನ್ನ ಸುತ್ತಲ ಜಗತ್ತಿನ ನೆಮ್ಮದಿಗಾಗಿ ಸದಾ ದುಡಿಯುವ ಈ ಹೆಣ್ಣು, ಅನುಭವಿಸುವ ಯಾತನೆಯನ್ನು ಶಬ್ದಗಳಲ್ಲಿ ಕಟ್ಟಿಕೊಡಲು ಸಾಧ್ಯವಾಗುವುದಿಲ್ಲ. ಹೆಣ್ಣಿನ ಅಸಹಾಯಕ ಪರಿಸ್ಥಿತಿ, ದುರಂತ ಬದುಕು ಹಾಗೂ ಅನಾಥ ಪ್ರಜ್ಞೆಯನ್ನು ಈ ಕವಿತೆ ಸಶಕ್ತವಾಗಿ ಚಿತ್ರಿಸಿದೆ.

ಈಗ ಇಡೀ ಸಮಾಜವೇ ಸಂದೇಹವೆಂಬ ಸಮುದ್ರದಲ್ಲಿ ಮುಳುಗಿಹೋಗಿದೆ. ಸುತ್ತ ಅನುಮಾನದ ಹುತ್ತಗಳು ಕಟ್ಟಿಕೊಂಡಿವೆ. ತನ್ನನ್ನು ತಾನು ಏನೆಂದು ಸಾಬೀತು ಮಾಡಿಕೊಳ್ಳುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದೇವೆ. ನಮ್ಮ ಕಾಲದ ಸೂಕ್ಷ್ಮ ಹೃದಯಿಗಳಾದ ಕವಿಗಳಿಗಂತೂ ಇದು ಬಹುದೊಡ್ಡ ಸವಾಲಿನ ಕೆಲಸ ವಾಗಿದೆ. ಗಿರೀಶ್ ಹಂದಲಗೆರೆ ಅವರ ಜೋಗಿ ಪದ್ಯವನ್ನು ಓದಿದಾಗ ಇಂತಹ ಭಾವನೆಗಳು ಮನಸ್ಸಿನಲ್ಲಿ ಹುಟ್ಟಿಕೊಳ್ಳುತ್ತವೆ. ಮಣ್ಣು, ಮುಗಿಲು, ರೈತರ ಬದುಕು ಬವಣೆಗಳ ಬಗ್ಗೆ ಬರೆದರೆ ಯಾವುದೋ ಒಂದು ಜಾತಿಗೆ ಸೀಮಿತ ಗೊಳಿಸ ಲಾಗುತ್ತದೆ. ಬುದ್ಧ, ಬಾಬಾ ಸಾಹೇಬ್, ಕೈರ್ಲಾಂಜಿ, ಕಂಬಾಲಪಲ್ಲಿ ಕುರಿತು ಬರೆದರೆ ಆತ ದಲಿತನಾಗಿಬಿಡುತ್ತಾನೆ. ಗಾಂಧಿ ಬಗ್ಗೆ ಬರೆದರೆ ಯಾವುದೋ ಸಿದ್ಧಾಂತಕ್ಕೆ ಸೇರಿಸುತ್ತಾರೆ. ಮೆಕ್ಕಾ ಮದೀನ ಅಂತ ಬರೆದರೆ ಅವರು ಮುಸ್ಲಿಮರಾಗುತ್ತಾರೆ. ಕವಿಯ ಪ್ರಕಾರ ಇಲ್ಲಿ ಧರ್ಮ ಸೂತಕವಾಗುತ್ತದೆ. ದೇವರು ಸರಕಾಗುತ್ತದೆ. ಜಾತಿಗಳು ಜಗಳ ಕಾಯುವ ಕೈ ಬಾಯಿಗಳಿಗೆ ಹತಾರಗಳಾಗುತ್ತವೆ. ಗಾಂಧಿ ವಿವಸ್ತ್ರವಾಗಿ ನಗೆಪಾಟಲಿಗೆ ಈಡಾಗುತ್ತಾನೆ. ಬುದ್ಧ ಕೇವಲ ಸಂಕೇತ ವಾಗುತ್ತಾನೆ. ಇಂತಹ ದುರಿತಕಾಲದಲ್ಲಿ ಎಲ್ಲರೂ ಬಾಯಿ ಮುಚ್ಚಿಕೊಂಡು ಸುಮ್ಮನಿರಬೇಕು ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಎದೆಯ ಕಣ್ಣಿಲ್ಲದವರನ್ನು ಮೆಚ್ಚಿಸುವ ಬದಲು ಅಸಹಾಯಕ ಜೋಗಿಯಾಗಿ, ಬಯಲನ್ನು ಅರಸುವುದೇ ಒಳ್ಳೆಯದೆಂಬ ತೀರ್ಮಾನಕ್ಕೆ ಬರುತ್ತಾರೆ.

ನಮಗೆ ಅಕ್ಕ ಎಂದ ತಕ್ಷಣ ನೆನಪಾಗುವುದೇ ಹನ್ನೆರಡನೇ ಶತಮಾನದ ಮಹಾದೇವಿಯಕ್ಕ. ಶ್ರುತಿ ಬಿ.ಆರ್. ಬರೆದಿರುವ ಅಕ್ಕನ ಮೊಹೆಂಜೋದಾರೋ ಕವಿತೆಯಲ್ಲಿ ನಮ್ಮ ಕಾಲದ ಇಬ್ಬರು ಅಕ್ಕತಂಗಿಯರ ನಡುವಿನ ಸ್ವಾರಸ್ಯಕರ ಸಂವಾದದ ಚಿತ್ರಣವಿದೆ. ತಂಗಿ ಸಮಾಜಶಾಸ್ತ್ರದ ಪುಸ್ತಕ ಓದುವಾಗ ಸಿಂಧು ನದಿಯ ತಟಾಕದಲ್ಲಿ ಮೈದಳೆದಿದ್ದ ಪ್ರಾಚೀನ ನಗರದ ಉಲ್ಲೇಖ ಸಿಗುತ್ತದೆ. ಭಾರತದ ನಾಗರಿಕತೆ ಬಹಳ ಎತ್ತರದಲ್ಲಿತ್ತು. ಅಲ್ಲಿದ್ದ ಜನ ತುಂಬಾ ಮುಂದುವರೆದಿದ್ದರು. ದೊಡ್ಡ ದೊಡ್ಡ ನಗರಗಳಿದ್ದವು. ಒಳ್ಳೊಳ್ಳೆ ಮನೆ ಕಟ್ಟಿದ್ದರು.

ವಿದೇಶಗಳಿಗೆ ಹೋಗಿ ವ್ಯಾಪಾರ ಮಾಡುವಷ್ಟು ಬುದ್ಧಿವಂತರಾಗಿದ್ದರು. ಇಷ್ಟೆಲ್ಲಾ ವಿವರಣೆಯನ್ನು ತಂಗಿ ಕೊಡುವಾಗ ಹೆಂಗಸರ ಒಡವೆಗಳು ಸಿಕ್ಕಿದವು ಎನ್ನುತ್ತಾಳೆ. ಒಡವೆಗಳು ಎಂದಾಕ್ಷಣ ಅಕ್ಕನ ಕಿವಿ ನಿಮಿರುತ್ತದೆ. ಅಕ್ಕ ಸಹಜವಾಗಿ ಆ ಕಾಲದ ಹೆಂಗಸರು ಹೇಗಿದ್ದರಂತೆ ಏನು ಮಾಡುತ್ತಿದ್ದರಂತೆ" ಎಂದು ಪ್ರಶ್ನಿಸುತ್ತಾಳೆ. ತಂಗಿ ಓದುತ್ತಿದ್ದ ಆ ಪುಸ್ತಕದಲ್ಲಿ ಆ ಬಗೆಯ ಯಾವ ಮಾಹಿತಿಯು ಇರುವುದಿಲ್ಲ. ಅಕ್ಕನಿಗೆ ತಕ್ಷಣ ಆ ಕಾಲದ ಹೆಂಗಸರ ಯಥಾಸ್ಥಿತಿ ಹೊಳೆಯುತ್ತದೆ. ಎಲ್ಲಾ ಕಾಲದ ಹೆಂಗಸರ ಪರಿಸ್ಥಿತಿಯು ಒಂದೇ ರೀತಿಯಲ್ಲಿ ಇರುತ್ತದೆ ಎನ್ನುವ ಭಾವನೆ ಅವಳಲ್ಲಿ ಹುಟ್ಟುತ್ತದೆ. ಆಕೆ ಅಂದುಕೊಳ್ಳುತ್ತಾಳೆ "ಅವರು ಕೂಡ ಎಲ್ಲರ ಹಾಗೆ ಅಡಿಗೆ ಮನೆ ಕೆಲಸ, ಮುಟ್ಟು, ಬಸಿರು, ಚುಚ್ಚುಮಾತು, ಅಪ್ಪ ಗಂಡ ಹೇಳಿದಂತೆ ಕೇಳಿಕೊಂಡು ವಡವೆಗಳನ್ನು ಹೇರಿಕೊಂಡು ಬದುಕಿದ್ದಿರಬಹುದು ಎಂದು. ನಾಗರಿಕತೆ, ಶಿಕ್ಷಣ, ಸಂಸ್ಕೃತಿ, ಸಂವಿಧಾನ, ಪ್ರಜಾಪ್ರಭುತ್ವ, ವಿಜ್ಞಾನ, ವೈಚಾರಿಕತೆ ಇವೆಲ್ಲ ಎಷ್ಟೇ ಎತ್ತರಕ್ಕೆ ಬೆಳೆದಾಗಲೂ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯವನ್ನು ದಕ್ಕಿಸಿಕೊಂಡು ಬದುಕಲು ಸಾಧ್ಯವಾಗದ ಬಗ್ಗೆ ಕವಿಗೆ ವಿಷಾದವಿದೆ. ಯಾರೋ ಬೀಸಿದ ಮತ ಮೌಢ್ಯಗಳ ಬಲೆಗೆ ಹೆಣ್ಣು ಮತ್ತೆ ಮತ್ತೆ ಬೀಳುತ್ತಲೇ ಇರುತ್ತಾಳೆ. ಅಥವಾ ತಾನೇ ಸ್ವಯಂ ನೇಣಿನ ಕುಣಿಕೆಗೆ ಕೊರಳೊಡ್ಡುತ್ತಾಳೆ.

ವಿಷಾದ, ನೋವು, ಅಸಹನೆ, ಪ್ರತಿಭಟನೆ ಇತ್ಯಾದಿಗಳು ಈ ಕಾಲದ ತರುಣ ಕವಿಗಳ ಕಾವ್ಯದ ಭಿತ್ತಿಯಾಗಿವೆ. ಮೂವತ್ತು ವರ್ಷದ ಹಿಂದೆ ನಮ್ಮಂತವರು ಕವಿತೆ ಬರೆಯುವ ಸಂದರ್ಭದಲ್ಲಿ ನಮಗಿದ್ದ ಸ್ವಾತಂತ್ರ್ಯ, ಸಮಾನತೆ, ಸೌಹಾರ್ದತೆ, ನೆಮ್ಮದಿಯ ವಾತಾವರಣ ಈ ಕಾಲದ ಕವಿಗಳಿಗೆ ಇಲ್ಲದಂತಾಗಿದೆ. ಇದು ಪರಸ್ಪರ ಅಪನಂಬಿಕೆಗಳ ಕಾಲ. ಪ್ರೀತಿ ವಿಶ್ವಾಸಗಳು ಶೂನ್ಯವಾಗುತ್ತಿರುವ ಕಾಲ. ದ್ವೇಷ, ಸೇಡು, ಜಾತಿಗರ್ವಾಂಧತೆ ನಮ್ಮ ಯುವಕರ ಮನಸ್ಸನ್ನು ತುಂಬಿಕೊಳ್ಳುತ್ತಿವೆ. ಸುತ್ತಲೂ ನಡೆಯುತ್ತಿರುವ ಇಂತಹ ಆತಂಕದ ಸನ್ನಿವೇಶಗಳಿಂದ ರೋಸಿ ಹೋಗಿರುವ ಕವಿ ತನ್ನ ವಯಸ್ಸಿಗೆ ತಕ್ಕಹಾಗೆ ಪ್ರೇಮ, ಪ್ರೀತಿ ಪ್ರಣಯ ಇತ್ಯಾದಿಗಳನ್ನು ಸಹಜವಾಗಿ ಕವಿತೆಯ ಕೇಂದ್ರ ವಸ್ತುವನ್ನಾಗಿ ಮಾಡಿಕೊಳ್ಳಲಾಗದ ಅಸಹಾಯಕ ಪರಿಸ್ಥಿತಿಯಲ್ಲಿದ್ದಾನೆ. ಈಗಿನ ಕವಿಗಳಲ್ಲಿ ಕಾವ್ಯಕ್ಕೆ ಬೇಕಾದ ಲಯ ಅಲಂಕಾರ ರೂಪಕ ಇತ್ಯಾದಿಗಳನ್ನು ಹುಡುಕುವ ಅಗತ್ಯವಿಲ್ಲ ಎಂಬುದೇ ನನ್ನ ಭಾವನೆ. ವಸ್ತು ಪ್ರಧಾನವಾಗಿ ಗೋಚರಿಸುವುದನ್ನು ನಾವು ಸ್ವಾಗತಿಸಬೇಕು. ದೇಶದ ಸಮಸ್ಯೆ ಹಾಗೂ ಜನ ಸಮುದಾಯಗಳ ಸಂಕಟಗಳಿಗೆ ನಮ್ಮ ಕವಿಗಳು ಧ್ವನಿಯಾಗುತ್ತಿದ್ದಾರೆ. ಹೀಗೆ ಸಾಮಾಜಿಕ ಹೊಣೆಗಾರಿಕೆಯಿಂದ ಬರೆಯುವುದನ್ನು ತಮ್ಮ ಜವಾಬ್ದಾರಿ ಎಂದು ಭಾವಿಸಿ ಮೈಮೇಲೆ ಎಳೆದುಕೊಂಡಿದ್ದಾರೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಗಾಗಿ ನಮ್ಮ ಕಾಲದ ಬಹುತೇಕ ಎಲ್ಲಾ

ಹೆಣ್ಣು ಗಂಡು ಕವಿಗಳು ತಮ್ಮ ಪ್ರತಿಭೆಯನ್ನು ಮುಡಿಪಾಗಿಟ್ಟಿದ್ದಾರೆ. ಅದನ್ನು ನಾನಂತೂ ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ.

ಬಹಳ ಶ್ರಮ ಪಟ್ಟು ಕಿರಂ ಹೆಸರಿನಲ್ಲಿ ಈ ಕಾರ್ಯಕ್ರಮ ರೂಪಿಸುತ್ತಿರುವ ಹಾಗೂ ಇಷ್ಟೆಲ್ಲಾ ಕವಿಗಳನ್ನು ಒಟ್ಟಿಗೆ ಸೇರಿಸಿ ರಸಮಯ ವಾತಾವರಣ ಸೃಷ್ಟಿಸಿರುವ ಶಂಕರ್ ಸಿಹಿಮೊಗ್ಗೆ ಮತ್ತು ಸೂರ್ಯಕೀರ್ತಿಯವರಿಗೂ ಭಾಗವಹಿಸಿದ ಎಲ್ಲಾ ಕವಿಮಿತ್ರರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

# ಕವಿಗಳು ಆಸನದಲ್ಲಿದ್ದಾರೆ

**❖ ಡಾ. ಬೇಲೂರು ರಘುನಂದನ್**

ಶೋಧವಿಲ್ಲದ ಹಾಡು
ಆರ್ಭಟಿಸುತ್ತಿದೆ
ಹುಟ್ಟಿ ಸಾಯುವ ಅಕ್ಷರ
ನಾದವಾಗದೇ ಅರಚುತ್ತಿದೆ
ಕಲೆಯೊಳಗೆ ಅಕ್ಷರವೇ
ಅಕ್ಷರ ಕಲೆಯನ್ನೇ ನುಂಗುವ ಬಗೆಯೇ
ಮೂರ್ಖನ ಪ್ರಶ್ನೆ

ನೆಲದ ಕವಿಯ ಹಾಡಿನ ಬೇರು ಕಿತ್ತು
ಚಪ್ಪಡಿ ಎಳೆದು
ಮೇಲೊಂದು ಕಿರೀಟವಿಡಬಹುದು
ಕಲ್ಲಿನಡಿ ಹುಲ್ಲನ್ನು
ಅದುಮಿಟ್ಟರೆ
ಚಿಗುರಿಗೆ ನಗುವುದು ಗೊತ್ತಿಲ್ಲವೇ
ಕವಿ ಮರಣ
ಕಾವ್ಯ ಜನನ ಆಗುತ್ತಿದೆಯೇ ಗೊತ್ತಿಲ್ಲ
ಮೂರ್ಖನ ಚಿಂತನೆ

ಎರಚಿಡೆದೆ ಬೆಳೆಯಲು
ಅಕ್ಷರ ವಿಷ ಬೀಜವಲ್ಲ
ನೋವುಂಡು ನಗುವ ಭಾವ ಬೀಜ
ಚಿಪ್ಪಿನಿಂದ ಕಿತ್ತು ತಂದ
ಮುತ್ತಿನ ಮಾಲೆಗೆ ಬೇಡಿಕೆ ಹೆಚ್ಚು

ಜಗವ ಪೋಣಿಸುವ ಸೂಜಿ
ಭುವಿಯ ಹೊಲೆಯುವ ದಾರವಿಲ್ಲದೇ
ಯಾವುದಕ್ಕೂ ಬಾಳುವೆಯಿಲ್ಲ
ಮೂರ್ಖನಿಗೆ ಗೊತ್ತಿಲ್ಲ

ಸತ್ಯಾಕ್ಷರ ಶುದ್ಧ
ಸುಳ್ಳೆಲ್ಲಾ ಅಶುದ್ಧ
ಕಾವ್ಯ ಭಾಷೆಯ ಮೌನ
ಮೂರ್ಖರಿಗೆ ಗೊತ್ತಿಲ್ಲ
ನೆಲಜಗದ ಕಾವ್ಯ
ಅನಾದಿ ಕಾಲದಿಂದ ಬಿತ್ತಲಾಗುತ್ತಿದೆ
ಮುನಿಸು ಕನಸಿನ ನಡುವೆ
ಮಣ್ಣು ಮಾತಾಡಿಯೇ ತೀರುತ್ತದೆ
ಮೂರ್ಖನ ಅನಿಸಿಕೆ

ಚಿನ್ನದ ಪೆನ್ನು
ಕಬ್ಬಿಣದ ಪೆನ್ನು
ಅನ್ನಾಕ್ಷರವನ್ನು ಹುಟ್ಟಿಸುವುದಿಲ್ಲ
ನಾಚಿಕೆಗೇಡಿ ಕವಿಗಳು
ಆಸನದಲ್ಲಿದ್ದಾರೆ
ನಿಂತ ನೆಲ ಮರೆತು ಆಳುವವನಿಗೆ
ಬಿತ್ತಿ ಬೆಳೆವುದು ತಿಳಿದಿಲ್ಲ
ನವಕವಿಗಳೇ
ನೆಲದ ಕವಿಗಳೇ ಎಚ್ಚರಿಕೆ
ಬೆಲೆ ಬಾಳುವ ಪೆನ್ನಿನ
ಕನಸು ಕಾಣಬೇಡಿ
ಅಂತರಂಗದ ಭಾವಕ್ಕೆ
ಅಕ್ಷರ ಪೆನ್ನು ಹಾಳೆಯ ಹಂಗಿಲ್ಲ
ಮೂರ್ಖನ ಮಾತು

# ಬದುಕಿಗೆ ಹಲವು ಬಣ್ಣಗಳು

❖ **ಶ್ರೀದೇವಿ ಕೆರೆಮನೆ**

ಬದುಕು ಆಗಾಗ ಬಣ್ಣ ಬದಲಿಸುತ್ತದೆ
ಕೆಲವೊಮ್ಮೆ ಕಾಲಕ್ಕೆ ತಕ್ಕಂತೆ
ಋತುಮಾನಕ್ಕೆ ಅನುಗುಣವಾಗಿ
ಹಸಿರು ಹಳದಿ ಕೆಂಪು ನೀಲಿ
ಕೆಲವೊಮ್ಮೆ ಏನೂ ಕಾಣದ ಕಪ್ಪು
ನಿರಾಳತೆ ಸೂಸುವ ಬಿಳಿ
ಒಮ್ಮೊಮ್ಮೆ ಯಾವ ಬಣ್ಣವೆಂದೇ
ನಿರ್ದಿಷ್ಟವಾಗಿ ಹೇಳಲಾಗದ
ಎಲ್ಲ ಬಣ್ಣಗಳ ಕಲಸುಮೇಲೊಗರ

ಬಣ್ಣ ಬದಲಿಸುತ್ತದೆ ಜೀವನದ ಹಾದಿ
ಖುಷಿ ನೀಡುವ ಕಾನನದ ನಡುವೆಯೂ
ತಿಳಿ ಹಸಿರು, ಎಳೆ ಹಸಿರು
ಹಳದಿ ಮಿಶ್ರಿತ ಗಿಣಿ ಹಸಿರು
ದಾರಿ ಮುಂದುವರೆದಂತೆ
ಕಪ್ಪು ಛಾಯೆ ನೀಡುವ ಗಾಢ ಹಸಿರು
ಕೊನೆಕೊನೆಗೆ ಕಪ್ಪು ಬಣ್ಣವನ್ನಷ್ಟೇ ತೋರಿ
ಆಪೋಷಣಗೈಯ್ಯುತ್ತದೆ ಉಳಿದೆಲ್ಲ ಬಣ್ಣವನ್ನು
ಬಣ್ಣಬದಲಿಸುತ್ತದೆ ಬಾಳ ಪಥ
ಕಂದನ ತುಟಿಯಂತಹ ತಿಳಿಗೆಂಪು
ದಟ್ಟವಾಗುತ್ತ ನೆತ್ತರುಗೆಂಪಾಗಿ
ತಲೆಯೊಳಗೆ ಗಿರಗಿರನೆ ಸುತ್ತಿ
ಹೆಜ್ಜೆ ತಪ್ಪುತ್ತದೆ ಕಣ್ಣು ಕತ್ತಲಿಟ್ಟಂತಾಗಿ

ಭಯವಾಗುತ್ತದೆ ಸುತ್ತಲ ಲೋಕ
ಒಮ್ಮೆಲೆ ಅಪರಿಚಿತವೆನಿಸಿ
ಮುಂದಿನ ದಾರಿ ಅಯೋಮಯವೆನಿಸಿ
ಬೆಳಕಿಗಾಗಿ ತಡಕಾಡುತ್ತ ಹುಟ್ಟಿಸುತ್ತದೆ ಏದುಬ್ಬರ

ನಾಗಾಲೋಟದ ಪಯಣದಲಿ
ಹಳದಿ ನೀಲಿಗಳೆಲ್ಲ ಒಂದಾಗಿ
ಕಂದು ಜಾಂಬಳಿಯ ವೇಷ ತೊಟ್ಟು
ಅಂಗೈ ಅಂಗಾಲುಗಳಷ್ಟೇ ಅಲ್ಲದೆ
ನೊಸಲ ನಡುವೆ ಹಚ್ಚಿಕೊಂಡ ಭಸ್ಮವೂ
ಬೂದ ನೇರಳವಾಗಿ ಬಿಡುವ ಚೋದ್ಯವಿದೆ
ಗುಲಾಬಿಗೆ ಮೈ ತುಂಬ ಗಾಯವಾಗಿ
ಕಿತ್ತಳೆ ಬಣ್ಣದ ದ್ರವ ಒಸರಿ
ಅಂಟಿಯೂ ಅಂಟಿಕೊಳ್ಳದ ಕಣಕ

ಎಲ್ಲ ಮುಗಿದು ಒಂದು ಹಂತಕ್ಕೆ ಬರುವಾಗ
ಗಟ್ಟಿಯಾಗಿರುತ್ತದೆ ಮನದ ಮೂಲೆಯೊಳಗೆ
ಎದ್ದು ಕಾಣುವಂತಹ ವಿಷಾದದ ಬಣ್ಣ
ಕಣ್ಣೊಳಗಿನ ನಿರ್ಭಾವುಕತೆ
ಶುಭ್ರವಾದ ಬೆಳಗಿನ ಸೂರ್ಯ ಕಿರಣದಂತಹ
ಸ್ನಿಗ್ಧ ಶಾಂತತೆ ಸೂಸಿದರೂ
ಉಳಿದುಬಿಡುತ್ತದೆ ಕಾಮನಬಿಲ್ಲಿನ ಏಳು ಬಣ್ಣಗಳು
ಮಾಯವಾದಂತಹ ಪೇಲವ ಬಿಳಿ

# ಬೋಧಿವೃಕ್ಷದ ದಾರಿಗುಂಟ

❖ **ಪ್ರಕಾಶ ಕಡಮೆ**

ಉಳಿದು ಕೊಳ್ಳಲು ಮನೆಯೊಂದನ್ನು ಕಟ್ಟಿ
ನಿವೃತ್ತನಾದೆ, ಸಾಲ ತೀರುವ
ಮೊದಲೇ,
ತಂಪಿದ್ದ ಕಣ್ಣುಗಳೆಲ್ಲಾ ಕೆಂಪಾಗಿ
ಉಗುಳಿದವು ಬೆಂಕಿಯ ಉಂಡೆಗಳ

ನೀರಿಗಾಗಿ
ಬಾವಿ ತೋಡಿಸಿದ್ದೆ
ಅಲ್ಲಿಯ ಕೆಸರುಗಳ ಅರಿಯದೇ
ಕಾಲುಜಾರಿ ಬಿದ್ದು ಒದ್ದಾಡಿದೆ
ನನ್ನ ತಪ್ಪುಗಳ ಹುಡುಕಾಡಿದೆ

ಬೆಳಗಲು
ದೀಪ ಹಚ್ಚಿಟ್ಟಿದ್ದೆ
ಗೊತ್ತಾಗಲೇ ಇಲ್ಲಾ
ಅದು ಬೆಂಕಿಯಾದದ್ದು

ಕೈತೋಟದಲಿ ಗುಲಾಬಿಯ ನೆಟ್ಟೆ
ನೋಡು ನೋಡುತ್ತಿದ್ದಂತೆ
ಮೊಗ್ಗರಳಿ ಹೂ ತುಂಬಿದವು.
ನಾನೇ ನೆಟ್ಟಿದ್ದೆಂದು
ಖುಷಿಯಲಿ ತಬ್ಬಿದೆ.

ಚುಚ್ಚಿದ ಮುಳ್ಳು ಮನಕೂ ನಾಟಿ
ತಬ್ಬಿಬ್ಬಾದೆ

ಬಾಲ ಮುದುಡಿಕೊಂಡಿದ್ದ ಸಾಕು ನಾಯಿ
ಕೊಬ್ಬಿತ್ತು
ಕಡಿಯಲಿಲ್ಲ ; ಗಾಯಗೊಳಿಸಿತು
ಮೈ ಕೈ ಪರಚಿ

ಆಗಾಗ ಅಲ್ಲಲ್ಲಿ ಮನೆ ಮಂದಿಯಲೇ
ವೃದ್ಧಾಶ್ರಮದ
ಪಿಸು ಮಾತಿನ  ಗುಸು ಗುಸು
ಬೆಂದ ನೊಂದ ಮನಕೆ
ಹಳೇ ಟ್ರಂಕು ತಟ್ಟಾದ ತಟ್ಟೆಗಳೇ
ಆಸರೆ

ನೆನಪಾಗುವನು ಹುಣ್ಣಿಮೆಯ ಚಂದಿರನ
ಮಂದಸ್ಮಿತ ಬುದ್ಧ
ಜಗದ ಕಣ್ಣೀರು
ಒರೆಸಿ – ಹರಸಿ
ಮನವನು ಗೆದ್ದ; ಕರುಣೆಯ ಬುದ್ಧ.

# ಹೆಂಗೂಸು

**❖ ವಿಶಾಲಾ ಆರಾಧ್ಯ ಬೆಂಗಳೂರು**

ಕನಸಿನಲಿ ಬಂದು ತೋಳು ತುಂಬಿದವಳು
ಮೆದುವಾದ ಮೈಯ ತಾಗಿಸಿ ಮೈಗಪ್ಪಿದವಳು
ಕನವರಿಸಿ ಕಾದ ಮನಸಿಗೆ ಧನ್ಯತೆಯನಿತ್ತವಳು
ಮೆತ್ತನೆಯ ತುಟಿಗಳಲಿ ಮೂಕವಾಗಿ ಕರೆದವಳು

ಕಿವಿಯೋಲೆ ಮುಟ್ಟಿ ಬೇಕೆಂದು ಕಿತ್ತವಳು
ಆ ನೋವೇ ಹೂವಾದ ಅನುಭವ ತಂದವಳು
ಹಣೆಬೊಟ್ಟು ಬೆರಳೊಳಗೆ ಹಿಡಿಯಲನುವಾದಳು
ಸಿಗದ ಸಿಟ್ಟಿಗೆ ಹಣೆಗೆ ತಟ್ಟಿ ಕುಟ್ಟಿ ನಕ್ಕವಳು

ಜಿನುಗುವ ತುಟಿಜೇನನು ಗಲ್ಲಕ್ಕೆ ಒತ್ತಿದವಳು
ಪಿಳಿಪಿಳಿ ಕಂಗಳ ನನ್ನ ಕಂಗಳಲಿ ನೆಟ್ಟವಳು
ಕೊರಳ ಸುತ್ತಲೂ ಪುಟ್ಟ ಬೆರಳ ಕಚಗುಳಿಸಿದವಳು
ಬೆರಳ ಕಣ್ಣಿಗಿಟ್ಟು 'ಹಾ' ಎಂದರೆ ನೋಡಿ ನಕ್ಕವಳು

ಕರಗಳ ಖಾಲಿಬಿಟ್ಟು ಗೋಲಿ ಕಂಗಳನರಳಿಸಿ
ಬಾರದೆ ಕಾಣದೆ ತೋರದೆ ಮಾಣದೇ ಹೋದವಳು
ಎದೆಗೆ ಕಾದಕಾವಾಗಿ ನೆನಪಿಗೆ ಸವಿಯಾದಳು
ಹೊರನಾಡ ದೇವಿಯಂತೇ ಮನಗರ್ಭದೇ ನಿಂತವಳು!

# ನಿಂತೇ ಇರುವ ಮರ

**❖ ಸುಜಾತಾ ಹೆಚ್.ಆರ್.**

ನೀರ ಕುಡಿವ ಹಕ್ಕಿಯ ಗುಕ್ಕಿಗೆ
ಹಣ್ಣಾಗಬೇಕು,
ಮೀನಬಾಯಿಗೆ ಹೂವಾಗಿ
ಉದುರಬೇಕು
ನಿಂತ ಮರಕೆ ಮುಗಿಲಾಸೆ

ನೀರ ಮೇಗಳ ತೇವದ ಗಾಳಿ
ಹಾವಸೆಯ ಹಾಸಿ
ಝರಿ ಗಿಡದ ಹೂಬೀಜಗಳ
ಹೊದ್ದು ಮಲಗುವುದು
ಹಕ್ಕಿಹಿಕ್ಕೆಯಲಿ ಚಿಗುರೆದ್ದು
ಗಾಳಿ ಬೇರಾಗುವುದು

ಝರಿ ಗಿಡಗಳು ಹಸಿರು ಎಲೆ ದಾಟಿ
ಹೂದಂಡೆ ಚಾಚಿ
ತುಡುಬೆ ಜೇನ ಊಟಿ ಕರೆಯುತ್ತವೆ
ಗೆಣ್ಣುಗೆಣ್ಣಿಗೂ ಮರವೆಬ್ಬಿಸಿದ ಚಕ್ಕೆಗೂ
ನೇಯುತ್ತವೆ ಮನಸ

ಮೈಮೇಲೆ ಮತ್ಯಾವುದೋ ಬಂದಳಿಕೆ
ಹೂದೂಗುವಾಗಲೂ ಮೈಮರೆತು
ನಿಲ್ಲುವ ಮರ

ತಲೆ ತುಂಬಾ ತನ್ನ ನಿಜದ ಹೂವ ಹೂತರೂ
ಇಬ್ಬಗೆಯನ್ನರಿಯದೆ ಜೀವಪರ

ಗೇಣಿಕ್ಕುವ ಕಂಬಳಿ ಹುಳದ ತಪಸ್ಸಿಗೂ
ಕೋಶಕ್ಕೆಡೆಯಿಟ್ಟು
ಮಿಂಚು ಹುಳದ ದಂಡಿಗೂ ಕರೆಯಿಟ್ಟು
ಅಣಬೆ ಬೆಳಕಿಗೂ ತಾವಿಟ್ಟು
ಗಿಳಿಗೊರವಂಕಕು ಪೊಟರೆ ಕೊಟ್ಟು
ಹೂವಿಗೆ ರೆಕ್ಕೆಕಟ್ಟಿ ಹಾರಿಬಿಟ್ಟಂತೆ
ಮರದ ತುಂಬ ತಾರಾಡುವ ಚಿಟ್ಟೆಗಳ
ಹಸಿರ ಬಯಲ ಕಡೆಗೆ ತೂರಿ ಬಿಡುವುದು

ಹರಿವ ನೀರಿನ ಕನಸ
ಇಂತು ತಡುವುತ್ತ
ನೀರ ತಡಿಯಲ್ಲೇ
ನಿಲ್ಲುವಾಸೆ ಮರಕೆ ನಿಂತಲ್ಲೇ

ನೀರು ಕುಡಿಯಲು ಬರುವ ಮಿಖದ ಕಣ್ಣು
ಸುತ್ತಿ ಸುಳಿವ ಹದ್ದ ಚುಂಚು
ಸದ್ದಿಲ್ಲದೇ ಹಾಯುವ
ಹಾವನುಲಿಯ ಮರೆಮಾಚಿ ಹಕ್ಕಿ ಬಳಗದ ಕಣ್ಣಲ್ಲಿ
ಮಿಲುಗುತ್ತ ಹಣ್ಣ ಕೊರೆವ ಹುಳುವಿಗೂ
ತಾವು ಕೊಟ್ಟು ಸಲಹುತ್ತಾ....
ನಿಲ್ಲಿಸದೆ ಬೀಸುವುದು ಚಾಮರ

# ಕರ್ಣನ್

**❖ ಸಂಧ್ಯಾರಾಣಿ**

ಬೆಂಕಿ ಕೊಳ್ಳಿಯೊಂದು ಬರೆದ
ಉರಿಉರಿ ಚಿತ್ರ
ಕರ್ಣನ್
ಕಾಲದಿಂದ ಕತ್ತಲಲ್ಲಿದ್ದ
ಹಳ್ಳಿ ಕಂಡ ಬೆಳಕ ಕನಸು
ಹೆಸರು ಯಾವುದಾದರೇನು
ಕಥೆಯಲ್ಲಿ ಹೆಚ್ಚೇನೂ ಫರಕಿಲ್ಲ
ಶಾಲೆ ತೊರೆಯುತ್ತಾರೆ ಹುಡುಗಿಯರು
ರಸ್ತೆಯಲಿ ಒದ್ದಾಡಿ
ಒದ್ದಾಡಿ ಸಾಯುತ್ತಾಳೆ ಪುಟ್ಟಗೌರಿ
ಬಸ್ಸು ಕಾರುಗಳು ಓಡೇಓಡುತ್ತವೆ
ಕಡೆಗಣ್ಣಿನಲ್ಲೂ ನೋಡದೆ
ನಾಗರೀಕತೆ ಕೊಂದ ಹುಡುಗಿ
ಪುಟ್ಟಗೌರಿ, ಕೇರಿಯ ಪುಟ್ಟದೇವತೆ
ಹಾಡುತ್ತಾಳೆ ದಿನ ರಾತ್ರಿ
'ವಿಟ್ಟಿಡಾದಿಂಗೋ, ವಿಟ್ಟಿಡಾದಿಂಗೋ'
ಯಾರೂ ಕಿವಿಗೊಡದವರ ದನಿಯಲ್ಲಿ
ಜಗವ ತೂಗುವ ಹಾಡು
ಹೆಜ್ಜೆಮಟ್ಟುಗಳಲ್ಲಿ
ಉಕ್ಕುತ್ತದೆ ಪ್ರೇಮ, ಕಾಮ, ದುಗುಡ, ರೊಚ್ಚು
ಕಾಲು ಕಟ್ಟಿದ ಕತ್ತೆ ಸುತ್ತೇಸುತ್ತುತ್ತದೆ
ಊರತುಂಬ
ಕಾಯುತ್ತಾಳೆ ಪುಟ್ಟಗೌರಿ

‘ಬರುವನೊಬ್ಬ ಶೂರನು, ಬರುವನೊಬ್ಬ ಶೂರನು’
ಕರ್ಣ ಕತ್ತಿ ಬೀಸಿ, ಆನೆ ಏರಿದ ದಿನ
ಸೂರ್ಯ ನಗುತ್ತಾನೆ
ಹತ್ತು ರೂಪಾಯಿಗೊಂದು ಮುತ್ತು
ಗೆಲ್ಲುತ್ತಾಳೆ ಮಹಾರಾಣಿ
ಒಬ್ಬನೇ ನಡೆಯುತ್ತಾನೆ ಕರ್ಣ
ಕರ್ಣನ ಜೊತೆಗೆ ಯಮ
ಅವರಿಗಾಗಿ ಯಾವುದೇ ಬಸ್ಸು ನಿಲ್ಲುವುದಿಲ್ಲ
ಓಡುವ ಬಸ್ಸಿನಿಂದ ಧುಮುಕುತ್ತಾನೆ ಹುಡುಗ
ಉಪೇಕ್ಷೆಗೆ ಗುರಿ ಇಟ್ಟು ಬಿಟ್ಟ ಬಾಣದಂತೆ
ಬಸ್ಸೂ ನಿಲ್ಲದ ಊರಿನಿಂದ
ಬಂದ ಬೆಂಕಿಯಂತಹ ಹುಡುಗರು
ಉಳ್ಳವರ ದೇಶ ಕಾಯಲು
ಸಾಲು ನಿಲ್ಲುತ್ತಾರೆ
ಬರಿಗಾಲಲ್ಲಿ ಬಿರುಬಿಸಿಲಿನಲ್ಲಿ
ಓಡೇ ಓಡುತ್ತಾರೆ
ಬೆಂಕಿಗೂಡುಗಳನ್ನು ಸಿಡಿಯದಂತೆ ಕಾಯುತ್ತಾರೆ
ಎದೆಯಲ್ಲಿ ಹೊತ್ತು ಹೆಜ್ಜೆ ಹಾಕುತ್ತಾರೆ
ಕತ್ತೆ ಕಾಲುಗಳ ತಾಕತ್ತು ತಿಳಿದ ಜಾಣರು
ಕಾಲು ಕಟ್ಟುತ್ತಾರೆ, ಕುಂಟುತ್ತಲೇ
ತಲೆಬಗ್ಗಿಸಿ ನಡೆಯುತ್ತದೆ ಕತ್ತೆ
ಹಗ್ಗ ಬಿಚ್ಚಿದ ಮರುನಿಮಿಷ
ಕುದುರೆಯಾಗಿ ಜಿಗಿಯುತ್ತದೆ
ಹಗ್ಗ ಬಿಚ್ಚುವ ಗುಟ್ಟು ತಿಳಿದ
ಕರ್ಣನ್ ನಾಯಕನಾಗುತ್ತಾನೆ
ಕುಣಿಯುತ್ತಾಳೆ ಪುಟ್ಟಗೌರಿ
ತಾಳತಟ್ಟುತ್ತಾ, ಹಾಡು ಹಾಡುತ್ತಾ
ಲಾಠಿ, ಜೀಪು, ಬೂಟು, ಖಾಕಿ, ಖುರ್ಚಿ
ಹೆದರಿಕೆ, ಅನುಮಾನ
ಊರ ಕಣಜ ತುಂಬಿ ತುಳುಕುವ
ಅವಮಾನದ ನೆನಪು

ಹೊಡೆಯುತ್ತವೆ, ಒದೆಯುತ್ತವೆ ಲಾಠಿ ಬೂಟುಗಳು
ತಲೆಗೆ ಮುಂಡಾಸು ಕಟ್ಟಿದ್ದಕ್ಕೆ
ಒಳ್ಳೆ ಹೆಸರಿಟ್ಟಿದ್ದಕ್ಕೆ
ತಲೆ ಎತ್ತಿ ನಿಂತದ್ದಕ್ಕೆ
ಪೆಂಟಯ್ಯ ಬಿಳಿಯ ಅಂಗಿ ಧರಿಸಬಾರದು
ಕರ್ಣ ಜೊತೆ ಬಿಟ್ಟು ನಡೆದ ದಿನ
ಯಮ ಸಾಯುತ್ತಾನೆ
ಧಾವಿಸುತ್ತಾನೆ ಕರ್ಣ
ಕತ್ತಿಹಿಡಿದ ಮೇಲೆಯೇ ಕಳಚುವುದು
ಕರ್ಣನ ಕೈಯ ಕೋಳ
ಯುದ್ಧಗೆದ್ದು ಬಂದವನ ಕಣ್ಣಲ್ಲಿ
ಕಂಬನಿಯೊಂದಿಗೆ ತುಳುಕುವ ಪ್ರಶ್ನೆ
'ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ?'
ಅತ್ತಿಂದಿತ್ತ ತೂಗಾಡಿ ಸ್ತಬ್ಧವಾಗುತ್ತದೆ
ಪೋಲೀಸ್ ಠಾಣೆಯಲ್ಲಿ ಬಂಧಿಸಲ್ಪಟ್ಟ
ಅಂಬೇಡ್ಕರ್ ಚಿತ್ರ
ಪಟಪಟಿಸಿ ಒದ್ದಾಡುವ ಚಿಟ್ಟೆಗೆ ಬಾಯಿಲ್ಲ
ಅವರು ಬರೆದ ಕತೆಯಲ್ಲಿ
ಏಕಲವ್ಯನ ಬೆರಳು ಕತ್ತರಿಸುತ್ತಾರೆ
ಕರ್ಣನ ಕವಚ ಮುರಿಯುತ್ತಾರೆ
ದುರ್ಯೋಧನ ಖಾಲಿ ಮಾಡಿದ ಅರಮನೆಯಲ್ಲಿ
ಧರ್ಮಜ ನೆಲೆಸುತ್ತಾನೆ
ಹೊಸ ಕಥೆ ಬರೆಯುತ್ತಾರೆ ಇವರು
ಎಲ್ಲಿಂದಲೋ ಬಂದ ರಾಜಕುವರನಲ್ಲ ಕರ್ಣ
ರಕ್ತ, ಮಾಂಸ, ಮಜ್ಜೆಗಳ ಜೊತೆ
ಪುರಾಣವನ್ನೂ ಹಂಚಿಕೊಂಡವನು
ಮತ್ಸ್ಯಯಂತ್ರ ಬೇಧಿಸುತ್ತಾನೆ
ದ್ರೌಪದಿಯನ್ನು ವರಿಸುತ್ತಾನೆ
ಇತಿಹಾಸ ತಿದ್ದುತ್ತಾನೆ
ಶಾಲೆ ಕಲಿಯುವ ಹುಡುಗಿಗೆ

ಹೊಸ ಕನ್ನಡಕ, ಊರ ಜನಕ್ಕೆ
ಊರ ಹೆಸರಿನ ಟಿಕೀಟು
ಕೋಟಿ ಮಿಂಚುಹುಳಗಳಾಗಿ ಅರಳುತ್ತಾಳೆ ಪುಟ್ಟಗೌರಿ
ಊರ ತುಂಬಾ ಬೆಳಕಿನ ಮಳೆ

('ಕರ್ಣನ್' ತಮಿಳು ಚಿತ್ರ ಉಂಟುಮಾಡಿದ ತಲ್ಲಣದ ನೆನಪಿನಲ್ಲಿ)

# ವರ್ತಮಾನದ ಕನಸು

❖ **ನಾ ದಿವಾಕರ**

ಹೆತ್ತೊಡಲ ಸೀಳದಿರು ಮಗುವೇ
ಅದು ಏಕಶಿಲೆಯಲ್ಲ ಹೆರುವುದೊಂದೇ
ಗರ್ಭ ಇರುವುದೊಂದೇ ಭ್ರೂಣ
ಉಸಿರೆರಡಲ್ಲವೇ ಮಗೂ ;
ಬಸಿರನೇಕೆ ತುಂಡರಿಸುವೆ ನರನಾಡಿಗಳ
ಪಿಸುದನಿಗೆ ಕಿವಿಗೊಡು
ಒಸರುವ ಬಿಸಿನೆತ್ತರಿಗೊಮ್ಮೆ ಕಣ್ತೆರೆ
ಜೀವಕೋಶಗಳಾಂತರ್ಯದಲಿಹುದು
ಭಾವ ಮಿಲನದ ಛಾಯೆ ;

ತಲೆಗೂದಲಲಿ ಸಿಲುಕಿದ
ಅಕ್ಷತೆಗಳಲೊಮ್ಮೆ ಇಣುಕಿ ನೋಡು
ಅದು ರಂಗೇರಿದ ಕಾಳಲ್ಲ
ಭತ್ತಗರ್ಭದ ಕೂಳಿನ ತುಣುಕಲ್ಲ
ಆಂತರ್ಯದೊಳೊಂದು ಹನಿ
ಬೆವರಡಗಿದೆ ಕಂದ ; ಸವೆದ ಪಾದಗಳ
ಕುಸಿದ ಹೆಗಲ ಬಸಿದ ನೆತ್ತರ
ಕಡಲಿನಲೆಗಳನದರಲಿ ಕಂಡೆಯಾದರೆ

ಮಡಿಲ ಭೇದಿಸಲೊಪ್ಪದು ಮನ ;
ಹೆಜ್ಜೆಗಳ ಮರೆತುಬಿಡು ವಿಸ್ಮೃತಿಯಲೂ
ಹಿತವುಂಟು
ನಾಳೆಗಳ ಸವಿಗನಸು ಕಿವಿಗಿಂಪು ಕಣ್ತಂಪು

ರೆಪ್ಪೆ ಸಂಧಿಸುವಾಗ ಮೂಡುವ
ಬೆಳ್ಳಿಗೆರೆಗಳಲುಂಟು
ಕಿರುಬೆರಳಿನಂಚಿನ ಬೆವರಸಾಲೆಯ ಕುರುಹು
ನೆನಪಾಗದಲ್ಲವೇ ಹಾದಿಯಂಚಿನ ಬೇಲಿ
ಇದು ಬದುಕು ಮಗುವೇ
ಗುರಿ ಮುಟ್ಟುವ ತವಕ ;

ಹಸಿಹುಸಿಯ ಮೇಳದಲಿ
ಜೀವದನಿಯ ಉಸಿರಡಗಿದೆ ಮಗೂ
ಒಡಲು ಮಡಿಲಿನ ನಡುವೆ ನೀ
ಕಟ್ಟಿದ ಗೋಡೆಯಲಿ ಅಕ್ಕರೆಯಕ್ಷರಗಳ
ಮೇಳ ಮಿನುಮಿನುಗುತಿದೆ ಕಾಣೆಯಾ
ಅಕ್ಕರಗಳಲ್ಲ ಅವು ಹೆಜ್ಜೆಗಳ ಸಿಕ್ಕುಗಳು
ಉಸಿರುಸಿರಿನ ಬಿಕ್ಕುಗಳು
ರೆಪ್ಪೆಯಂಚಿನ ಇಬ್ಬನಿಯೊಳು ಕಾಣು
ನಡೆದ ಹಾದಿಯ ಸವಿಯ
ಅಲ್ಲಿ ಒಡಲಿನೊಡೆಯನಿರಲಾರ
ನಿರ್ವಾತವದು ಶಾಶ್ವತ !

# ಕಾವ್ಯ, ಅಡುಗೆ ಮತ್ತು ಹಿಂಸೆ

**❖ ಜಯಶಂಕರ ಹಲಗೂರು**

ಬಯಬಯಸಿ ಇವತ್ತು ಮಧ್ಯಾಹ್ನ
ಕಾಲ್ ಸೂಪ್ ಮಾಡಿದೆ
ಅರೇ.. ಇದು ನನಗೆ ಕಾವ್ಯವೇ ಅನ್ನಿಸಿತು!

ಎರಡು ಆಡಿನ ಕಾಲು
ಎರಡ್ ನಾಕ್ಲ ಎಂಟು
ಎಂಟು ಕಾಲು, ಹದಿನಾರು ಚೂರು
ಅರರೆ.... ಎಲ್ಲೆಡೆಯೂ ಲೆಕ್ಕ, ಆದರಿಲ್ಲಿ
ಅಡುಗೆಗೂ ಕಾವ್ಯಕೂ ಅಂಕಿ ಶಂಕೆಗಳ ಸೋಂಕಿಲ್ಲ

ಎರಡು ಈರುಳ್ಳಿ, ಒಂದು ಟಮ್ಯಾಟೋ
ಒಂದೆರಡು ಕಡ್ಡಿ ಕೊತ್ತಂಬರಿ ಸೊಪ್ಪು ಪುದೀನ ಸೊಪ್ಪು
ಚಕ್ಕೆ ಲವಂಗ ಮೆಣಸು ಶುಂಠಿ ಇತ್ಯಾದಿ....
ಮಸಾಲೆಯೋ ಅಲಂಕಾರವೋ
ಓ... ಅಡುಗೆಯೆಂಬ ಹುಡುಗಿಗೆ ಎಷ್ಟೆಲ್ಲ ಶೃಂಗಾರ
ಹುಡುಗಿಯೇ ಏಕೆ ಹುಡುಗನೂ ಆಗಬಹುದು

ಒಲೆ ಹಚ್ಚು... ಎಣ್ಣೇ ಹಾಕು...
ಕೊಯ್ದಿಟ್ಟ ಪದಾರ್ಥಗಳ ಸುರಿ ಮೆಲ್ಲಗೆ ಸುರಿ..
ಒಲೆಯ ಮೇಲೆ ಕಾದ ಎಣ್ಣೆ ಚಿಟಪಟಗೊಂಡು
ಕಣ್ಣ ಗೊಂಬೆಗೆ ಹೂ ಕೂರಬಹುದು
ಎಚ್ಚರ ಹುಷಾರು.. ನೋಟ ಸರಿಯಾಗಿರಬೇಕು

ಕಾವ್ಯವೆಂದರೆ ಹದವಲ್ಲವೇ....
ಅಡುಗೆ ಎಂದರೆ? ಹದವೇ ತಾನೇ...!
ಒಲೆಯ ಕಾವಿನಲಿ ಕಾಲದ ನಾಡಿಯನು
ಹದವರಿತು ಹಿಡಿಯಬೇಕು
ಅಯ್ಯೋ.. ಇದಕೆಲ್ಲ ನಿಯಮ ಉಂಟೇ
ಉಂಟು ಒಂದಲ್ಲ... ನೂರು. ಬರೀ ನೂರೇ?
ಪ್ರತಿಸಲ ಹುಟ್ಟಿದಾಗಲೂ ನೆರಳಿನಂತೆ ಅದರದೇ
ನಿಯಮ, ಕಾವ್ಯಕೂ ಅಡುಗೆಗೂ
ಅಂದದೇ ಹುಟ್ಟುತ್ತದೆ, ಥಟ್ಟನೆ ಸಾಯುತ್ತದೆ

ಅಳುವುದೆಂದರೇ ದುಃಖಕ್ಕೆ ಮಾತ್ರವೇ?
ಈರುಳ್ಳಿ ಕುಯ್ಯುವಾಗಲೂ ಅಳಬೇಕು
ನಮ್ಮ ಕಂಬನಿ ಯಾವುದೋ
ಸಾವಿನ ಸಂಕಟದ ಸೂತಕವ ಕಳೆದೀತು
ಅತ್ತರೇನು ನಷ್ಟ? ಶೋಕವಿಲ್ಲದೆ ಕಾವ್ಯವೆಲ್ಲಿದೆ?
ಹಸಿವಿಲ್ಲದೆ ಅಡುಗೆಯೇ?

ಅತ್ತರೂ, ತಿಳಿನೀರು ಮೂಗಿನಲಿ ಸುರಿದರೂ
ಈ ಈರುಳ್ಳಿ ಮೆಣಸಿನಕಾಯಿಯ ಮಿಲನ
ಎಂಥಾ ದಿವ್ಯ ಪರಿಮಳ!
ಆಹಾ... ಪದ ಅರ್ಥದ ಸತ್ಸಂಗವೇ!
ಮತ್ತದೇ ಕ್ರಿಯೆ ಪ್ರಕ್ರಿಯೆ
ಮಂತ್ರಗಳ ಮೀರುತ್ತಲೇ ಮಂತ್ರಗಳ ಅನುಸರಣೆ
ರುಬ್ಬುವ ಪದಾರ್ಥಗಳ ರುಬ್ಬು
ಉರಿಯಬೇಕಾದವ ಉರಿ
ರುಚಿಗೆ ತಕ್ಕಷ್ಟು ಉಪ್ಪು ಕಾರ ಸಾಂಬಾರ
ಈ ರುಚಿಯ ತರುವುದು ಎಷ್ಟು ಕಷ್ಟವಲ್ಲವೇ?
ನನ್ನ ರುಚಿ ನಿಮ್ಮ ರುಚಿ ಅವರ ರುಚಿ
ಓ... ಎಷ್ಟೊಂದು ಭಿನ್ನ ವಿಭಿನ್ನ ಅಭಿರುಚಿ
ಕುಕ್ಕರ್ ಎಷ್ಟು ಸಿಳ್ಳೆ ಹೊಡೆಯಿತು
ಇದೇನಿದು ಮತ್ತೆ ಲೆಕ್ಕ....

ಹೌದು ಲೆಕ್ಕ ಬುದ್ದಿಯ ಆಟ
ಲೆಕ್ಕ ಮೀರುವುದು ಕಾವ್ಯದ ಅಥವಾ ಅಡುಗೆಯ ಪಾತ

ಬೆದೆಯ ಮೀರಿದರೂ ಹದವ ದಾಟಿದರೂ
ನಾಲಿಗೆಗೆ ತಟ್ಟಬೇಕಲ್ಲವೇ?
ಬೆಂದಿದೆಯಾ? ಹೇಗೆ ಹೇಳುವುದು?
ಎಲ್ಲವನ್ನು ಅಂಗೈಯಲ್ಲಿ ಹಿಡಿದು
ಪರೀಕ್ಷಿಸಲಾದೀತೆ... ಒಳಗಣ್ಣು ಇರುವುದೇತಕೆ?
ಸಾಕು.... ಸಾಕು... ಬೆಂದಿದ್ದು
ಸ್ಟೌವ್ ಆಫ್ ಮಾಡಿ ಪಾತ್ರೆ ಇಳಿಸಬೇಕು

ಕಾಯಬೇಕಲ್ಲವೇ ಬಿಸಿ ಉಸಿರು ಹೋಗುವತನಕ
ನಂತರ ಮುಚ್ಚುಳ ತೆಗೆಯಬಹುದು
ಎಲ್ಲರಿಗೂ ಉಸಿರಿನದೇ ಚಿಂತೇ
ಒಳಗೇ ಸದ್ದೇ ಇಲ್ಲದೆ ಕುದಿವ ನಿಟ್ಟುಸಿರ ಬಿಸಿ
ಯಾರಿಗೆ ತಾನೇ ತಟ್ಟೀತು?
ಇರಲಿ ಎಲ್ಲದಕ್ಕೂ ಇದೆ ಒಂದು ಮುಸುಕು
ಎಂದಾದರೊಂದು ದಿನ ಯಾರಾದರೂ ತೆಗೆಯಬಲ್ಲರು

ಊಟಕೆ ಬನ್ನಿ ಬೇಗನೆ ಬನ್ನಿ
ಚಳಿಗಾಲ ಬಿಸಿಬಿಸಿ ಉಂಡರೆ ಹಿತ
ಓಹೋ.. ಏನು ರುಚಿ ಏನು ಸ್ವಾದ
ನನಗೆ ನಂಬಿಕೆ ಇಲ್ಲ ಇದು ಸೌಜನ್ಯದ ಮಾತು
ಊಟ ತಟ್ಟೆಗೆ ಬಂದಾಗ
ಭಟ್ಟನ ರುಚಿಯ ಚಿಟ್ಟೆ ಮಾಯವಾಗುತ್ತದೆ
ಅದೇನಿದ್ದರೂ ತಿನ್ನುವವರ ಬಾಯ್ ಕೂಸು

ಕಾವ್ಯವೆಂದರೆ ಕರುಣೆಯಲ್ಲವೇ
ಹಿಂಸೆಯಲಿ ಮಿಂದು ಮೂಕ ಆಡನು ಕೊಂದು
ಕಾಲು ಕಡಿದು

ಕಾಲ್ ಸೂಪ್ ಮಾಡುವುದೇ!
ಅದೆಂಥಾ ಕರುಣೆ....? ಅದೆಂಥಾ ಕಾವ್ಯ?
.....................................
.....................................
ಲೋಕಸೂತ್ರದಲಿ ಹಿಂಸೆಯೂ ಆದಿಸೂತ್ರ
ಕೊಲ್ಲುವುದು ತಿನ್ನುವುದು ಸಾಕುವುದು ಸಲಹುದು
ಸಾಕಿದ್ದನ್ನೇ ಚಪ್ಪರಿಸಿ ಕೊಲ್ಲುವುದು ನಿರಂತರ

ಮತ್ತೆ ಕರುಣೆಯ ಕಾವ್ಯ
ಕಾವ್ಯದಂಥ ಅಡುಗೆ... ಬರೀ ಮಾತಿನ ಮಂಟಪವೇ?
ಮೊದಲೇ ಹೇಳಿದೆನಲ್ಲ, ಇಲ್ಲಿ ಒಂದು ನಿಯಮವಿಲ್ಲ
ಇರಲೇಬೇಕೆ?

ನಮ್ಮ ಕಣ್ಣರೆಪ್ಪೆಯಲಿ
ಹಿಂಸೆ ಅಹಿಂಸೆಗಳೆರಡೂ ಜೊತೆಗೇ ಜೋತಾಡುತ್ತವೆ
ಸ್ಪರ್ಧೆಗಿಳಿಯುತ್ತವೆ
ನಾವು ಮಾತ್ರ
ನಡೆಸಬಾರದು ಆಟ
ಮೀರಿ ಎದೆಯ ದನಿಯ ಸೂತ್ರ.

ಬೇಟವೋ ಬೇಟೆಯೋ
ಬಯಕೆ ಬತ್ತಳಿಕೆಯ ಬಾಣ ಇಲ್ಲಿ ಎಂದೂ ನಿಲ್ಲಲಾರದು
ನಾವು ಮಾತ್ರ
ಬಿಲ್ಲಿನೆದೆಯಲಿ ಪ್ರೇಮದ ಕಣ್ಣ ಕೊಲ್ಲಬಾರದು.

# ಅಲೆಮಾರಿ ಮತ್ತು ಬೆಕ್ಕು

❖ **ವಾಸುದೇವ ನಾಡಿಗ್**

ಆ ಬೆಕ್ಕು ಸಾವಿರ ಸಲ ಯೋಚಿಸಿತ್ತಲೇ ಇತ್ತು

ಸದಾ ಗಗನದಲ್ಲಿ ಕಣ್ಣ ನೆಟ್ಟು ಕೂತವನ ಬಗ್ಗೆ
ಅನ್ಯಮನಸ್ಕತೆಯ ಹಣತೆ ಉರಿಸುವವನ ಬಗ್ಗೆ
ಬಳಿ ಹೋಗಲೋ ದೂರ ಇರಲೋ
ಅಂತಃಕರಣದ ಕಾರುಣ್ಯದ ಅವನ ಕಣ್ಣ ತಪ್ಪಿಸಿಕೊಳ್ಳಲಾಗದು
ಮಿಡಿವ ನುಡಿ ವೀಣೆಯ ಬೆರಳ ತಳ್ಳಲಾಗದು
ಬೆಕ್ಕಿಗೆ ಇರಲಾಗಲೇ ಇಲ್ಲ ಬಂತು ಹತ್ತಿರಕೆ
ತೀರಾ ಹತ್ತಿರವಾಗುವುದೆಂದರೆ
ದೂರವಾಗುವುದರ ಸತ್ಯದ ಸೂಚನೆ
ತೀರಾ ದೂರ ಅನಿಸಿದರೆ ಒಳಗೇ ಹತ್ತಿರವಾದುದರ ಸಂಜ್ಞೆ

ಇವನದೂ ಕಟು ನಿರ್ಧಾರ
ನಿಷ್ಠುರ ಸತ್ಯಗಳನ್ನು ಆರಾಮಾಗಿ ನುಂಗಿ ತೇಗಿ
ಸಾಗುವ ಖಾಲಿದಾರಿಯಲ್ಲೇ ನಡಿಗೆ
ಆಗಾಗ ಮೀಸೆ ಆಂಟೇನಾದ ಪಿಳಿಪಿಳಿ ಕಣ್ಣ ತರಂಗ
ಹೊಳೆವ ನೋಟ ಕಾಂತಿ ಏಕತಾರಿಯ ಉಸಿರು
ನಾದ ಚಲನೆ, ಹಾಲ ಸುರಿದನು ಕರುಳ ಬಟ್ಟಲಿಗೆ

ನಂಬದ ಬೆಕ್ಕು, ಅಂಟಿಕೊಳ್ಳದ ಅಲೆಮಾರಿ
ಭೂಮಿಯ ಹಾಸಿಕೊಂಡು, ಚಕ್ಕಂಬಕ್ಕಳೆ ಕೂತರು
ಮೋಹದ ಕವಡೆಯಾಟ ಶುರು
ಯಾರು ಸೋತರೂ ಅದು ಇಬ್ಬರ ಗೆಲುವು

ಯಾರು ಗೆದ್ದರೂ ಅದು ಇಬ್ಬರ ಸೋಲು
ಅವಿನಾಭಾವ ಇಟ್ಟ ರಂಗವಲ್ಲಿ ಅಲ್ಲಿ ಹರಿದು

ಇಬ್ಬರೂ ಆಕಾಶ ಹೊದ್ದು ಮಲಗಿದರು
ಇರುಳೆಲ್ಲ ತಾರೆಗಳ ಜೊತೆ ಕುಂಟೋಬಿಲ್ಲೆ
ಹಗಲನ್ನು ಸುರಿ ಸುರಿದು ಕೊಂಡು ದಣಿದರು
'ಹೇಗೋ ಏನೋ ಹೊಂದಿಕೊಂಡು'
'ಅಂಟಿದ ನಂಟಿನ ಕೊನೆಬಲ್ಲವರಾರು?'
ದಂಟಾದರೆ ದೂರತೀರಕೆ ತೇಲಿ,
ಲೋಹವಾದರೆ ಕಾಣದ ತಳ ತಲುಪಿ,
ಅಲೆಮಾರಿ ಊರ ಉಸಾಬರಿಗೆ ಬೆಕ್ಕು ಒಂಟಿ.

ಮತ್ತೆ ಅಲೆಮಾರಿ ಊರ ಬದಲಾಯಿಸಿದ್ದಾನೆ.

ಬೀಗ ಒಳಗೆ ಹಾಕಲಾಗಿದೆಯೋ
ಹೊರಗೆ ಜಡಿಯಲಾಗಿದೆಯೋ ತೆರೆಯದ ಬಾಗಿಲ ಬಳಿ
ನಿಸ್ತೇಜ ಬೆಕ್ಕು, ಕಣ್ಣಲ್ಲಿ ಹಾಲಿನ ನೆನಪು ಹೆಪ್ಪು
ಸೊರಗಿದ ಕೊರಳಲಿ ಅಲೆಮಾರಿಯ ಬೆರಳ ಗೆರೆ
ಎಲ್ಲಿ ಹೋದನೋ? ಬಂದಾನೋ ಬಾರನೋ
ಬಂದರೂ ಬಾರದಂತಾದನೋ, ಬಾರದೆಯೂ ಬಂದು ನಿಂತನೋ
ತೆರೆಯದ ಹೊಸ್ತಿಲಲ್ಲಿ ಹುಲ್ಲ ಬಣವೆ
ಕೂತಿದ್ದ ಕಿಟಕಿ ಹೆಗಲಲ್ಲಿ ಧೂಳ ಕಂದಕ
ಅವನು ಕಾಯಿಸುತಿದ್ದ ಹಾಲ ಪಾತ್ರೆ ಒಲೆ ಮೇಲಿದೆಯೆ?
ತಳದಲ್ಲಿ ಇರುವೆಗಳ ಕೊನೆ ಔತಣ?

ಈಗ ಅಲೆಮಾರಿ ಬಯಲ ಸುರಿವ ಹೈನುಗಳ ಮಧ್ಯೆ ನಿಂತಿದ್ದಾನೆ
ಹನಿ ಹಾಲನ್ನೂ ಕುಡಿಯಲಾರ ಮೂಸಲಾರ
ಅಲ್ಲಿ ಮನೆ ಮನೆಗಳ ಮೆಟ್ಟಿಲುಗಳ ಮೇಲೆ ಬೆಕ್ಕು
ಇಣುಕುತ್ತಿದೆ. ಆಗಾಗ ಹಾಲ ಕದಿಯಲೂ ಕಲಿತಿದೆ
ಯಾರು ಏನು ಕದ್ದರೂ ಏನ ಗೆದ್ದರೋ
ಬಾಳ ಹೆದ್ದಾರಿ ಮುಗಿದಿಲ್ಲ

ಬೆಕ್ಕೆಂಬ ಜೀವನವೋ, ಅಲೆಮಾರಿ ಜೀವವೋ
ಹುಡುಕಾಟ ನಿಲ್ಲುತ್ತಿಲ್ಲ

ನೀವು
ಅಲೆಮಾರಿ ಮತ್ತು ಬೆಕ್ಕು
ಅಲೆಮಾರಿಯ ಬೆಕ್ಕು
ಅಲೆಮಾರಿಯೆಂಬ ಬೆಕ್ಕು
ಅಲೆಮಾರಿಯೇ ಬೆಕ್ಕು
ಹೇಗೆ ಓದಿಕೊಂಡರೂ
ಪದ್ಯ ಮುಗಿಯುವುದಿಲ್ಲ
ಸತ್ಯಗಳು ದಕ್ಕಿದಂತೆನಿಸಿ ದಕ್ಕಿರುವುದಿಲ್ಲ

# ದಾಸವಾಳ

❖ **ಡಾ. ಟಿ. ಯಲ್ಲಪ್ಪ**

ಮುಂಜಾನೆಯ ಇಬ್ಬನಿಯ ಮಬ್ಬಿನಲಿ
ತೂಕಡಿಸುವ ನಿದ್ದೆ ಮಂಪರಿನಲ್ಲಿ
ಕೆಂಪಗೆ ನಳನಳಿಸುವ ದಾಸವಾಳದ ಹೂವು
ತಾಯ ಗರ್ಭದಿಂದ ಈಗಷ್ಟೇ ಹೊರಬಂದ
ರಕ್ತ ಸಿಕ್ತ ಹಸುಳೆಯಂತೆ ಕಾಣುತ್ತಿದೆ
ಕಾಣ್ಕೆ ಬಲ್ಲ ಕವಿ ಅಕ್ಷರಗಳ ದಿಗ್ಬಂಧನದಲ್ಲಿ
ಕಣ್ಕಟ್ಟಿನ ಜಾದೂ ನಡೆಸಿದಂತೆ !

೨

ದಳ ದಳ ತೆರೆದು, ನಾಲ್ಕು–ಎಂಟು–ಹದಿನಾರರ
ಗುಣಿತದಲಿ ಅರಳುತ್ತಿದೆ ಹೂವು, ಅದರ ಬೇರು
ಹರಡುತ್ತಿದೆ ಬ್ರಹ್ಮಾಂಡದ ಕರುಳ ಬಗೆಯುವಂತೆ
ಒಳಗದರ ಬೇರು ಕುಡಿಯುವ ನೀರು ಹರಿಯುತ್ತಿದೆ
ಅತಳ–ವಿತಳ–ಸುತಳ–ಪಾತಾಳ–ತಳಾತಳ ರಸಾತಳಗಳ
ಜಲದ ಜಲಕಣ್ಣ ಕಣ್ಣದಾರಿಗಳ ಹುಡುಕಿ ದಿಕ್ಕುಕಾಣದೆ
ದಿಕ್ಕು ತಪ್ಪಿದ್ದಾಳೆ ಆಕಾಶಗಂಗೆ, ಜಲಪ್ರಳಯಕ್ಕೆಂದೇ ಮುಹೂರ್ತವಿಟ್ಟಂತೆ
ಅವಳೊಡನೆ ಕೈಜೋಡಿಸಿದಂತಿದೆ ಅಂತರಗಂಗಾ ಖದೀಮರ ಅಂತರ್ದಂಗೆ,
ಹೊರಗಿಲ್ಲಿ ನಡೆದೇ ಇದೆ, ಭೂತಾಯ ಭೋಗಿಪ ತಾಯಿಗಂಡರ ಬಹಿರ್ದಂಗೆ !
ದಾಸವಾಳವು ಈಗ ಸಹಸ್ರ ದಳ ತೆರೆದು ಬ್ರಹ್ಮಾಂಡ ಭಾಷ್ಯವ ಬರೆಯುತ್ತಿದೆ,
ನೆತ್ತರ ಕತ್ತಿಯಂತಿರುವ ಅದರ ಪರಾಗದಂಟಿಗೆ ಅಂಟಿರುವ ಉನ್ಮತ್ತ ದುಂಬಿ ದಂಡು,
ಮಧುಬಟ್ಟಲ ಮುಗುಚಿ ಮಧುಪಾನ ಮಾಡುತ್ತಿವೆ ಹೊಕ್ಕುಳಬಳ್ಳಿ
ಕತ್ತರಿಸಿಕೊಂಡ ನೋವಲ್ಲೂ ಮೈಮರೆತ ಕೂಸು
ತಾಯ ಎದೆಗೆ ತುಟಿಯಿಟ್ಟು ಹಸಿವ ನೀಗಿಕೊಳ್ಳುವಂತೆ..

೩
ದೇಶ–ಕೋಶ–ಭಾಷೆ–ಬ್ರಹ್ಮಾಂಡವೆಲ್ಲಾ ಅಳಿದು ಕರಗಿ
ನೀರಲ್ಲಿ ನೀರಾಗಿ ಹರಿದು; ಆಡು, ಹಸು, ಕುರಿ, ಕೋಳಿ,
ನರ, ನಾಯಿ ನರಿಗಳ ಜೀವಶ್ಶವ ತೇಲುತ್ತಿವೆ,
ನೀರು, ನೆತ್ತರು, ಕಂಬನಿಗಳೊಂದಾಗಿ ಬೆರೆತು
ಸಾವಿನಲ್ಲೂ ಸಮತೆಯ ಸಂಕರಗೀತೆ ಮೊಳಗುತ್ತಿವೆ !
೪
ಮತ್ತದೇ ದಾಸವಾಳದ ಆಳಬೇರಿನ ಮೂಲದಿಂದೊಂದು ಗೆಣ್ಣು ಕೊನರುತ್ತಿದೆ,
ಅದರ ಹೊಕ್ಕುಳ ಬಳ್ಳಿಯಲ್ಲೊಂದು ಮೊಗ್ಗು
ಈಗಷ್ಟೇ ದಳತೆರೆದು ಅರಳುತ್ತಾ ಬ್ರಹ್ಮಾಂಡ ಭಾಷ್ಯವ ಬರೆಯುತ್ತಿದೆ,
ಮಣ್ಣ ತಬ್ಬಿರುವ ಮಬ್ಬು ಸರಿದೀತು ದೂರ,
ಕಣ್ಣ ಕವಿದಿರುವ ಮಬ್ಬು ಸರಿಯಲಾರದೆ ದೂರ ಬೆಳಕು ಕಂಡೀತು ಹೇಗೆ ?
೫
ಕಾಣ್ಕೆ ಕಣ್ಕಟ್ಟುಗಳ ಕಣ್ಣ ಪಟ್ಟಿಯ ಕಳಚಿ
ದಾಸವಾಳದ ಬೇರು ಹೊಕ್ಕುಳುಗಳ ಬಗೆಯದೆ ಲೋಕ,
ಬರಿದೇ ಕವಿ–ಕವಿತೆಗಳು ಬಗೆವ ವಿಸ್ಮಯವನೇ ಕಂಡು
ಮೂಖವಿಸ್ಮಿತಗೊಂಡ ಪರಿಗೆ ದಾಸವಾಳವು ನಾಚಿ ಕೆಂಪಾಗಿದೆ
ವಿಷ್ಣುನಾಭಿ ಸಂಜಾತ ಬ್ರಹ್ಮಕಮಲದ ಮುಖ ಕೆಂಪಾದ ದಿನ,
ಶಂಖ, ಚಕ್ರ, ಗದೆಗಳೆಲ್ಲಾ ಭೂಮಿಗಿಳಿದು
ರಾಮ ರಹೀಮರ ಗುತ್ತಿಗೆದಾರರ ಕೈಯ್ಯ ಕೈದುಗಳಾಗಿ
ಬಡಬಗ್ಗರ ರುಂಡ ಚೆಂಡಾಡಿ ಭೂಮಿಯೇ ಕೆಂಪಾದ ದಿನ,
ದೆಹಲಿಯ ಕೆಂಪುಕೋಟೆ, ಕರುನಾಡ ಹೈಕೋರ್ಟುಗಳು ಕೆಂಪಾದ ದಿನ,
ಕಂಬಾಲಪಲ್ಲಿ, ಕೈರ್ಲಾಂಜೆಯ ದಲಿತರ ನೆತ್ತರು ಭೂಮಿಗೆ ಬಿದ್ದು ಕೆಂಪಾದ ದಿನ,
ಗೋಡ್ಸೆಯ ಗುಂಡೇಟಿಗೆ ಗಾಂಧಿಯ ಎದೆಬಿರಿದು ಕೆಂಪಾದ ದಿನ,
ಕಲ್ಬುರ್ಗಿ, ಗೌರಿ ಲಂಕೇಶರ ಎದೆಬಗೆದ ನೆತ್ತರ ಕುಡಿದು
ಕೆಂಪಾದ ದಾಸವಾಳದ ಗಿಡಕೆ,
ಶ್ವೇತಭವನದ ಮೇಲೆ ಹಾರಿಬಿಟ್ಟ ಶ್ವೇತವರ್ಣದ ಪಾರಿವಾಳವು
ಬಂದು ಗೂಡು ಕಟ್ಟಲು ತಾವು ಹುಡುಕುವುದೆಂದು ಬ್ರಹ್ಮಾಂಡ ಗುರುಗಳು
ಬೆಳ್ಳಂಬೆಳಿಗ್ಗೆ ಆತ್ಮದರ್ಶನ ವಾಹಿನಿಯಲ್ಲಿ ಉವಾಚಿಸಿರುವಲ್ಲಿಗೆ...
ದೇಶಕೋಶ ದಾಸವಾಳ ಪುರಾಣ ಸಮಾಪ್ತಿಯಾದುದು.

# ಬಚ್ಚಲು ಮನೆ

**❖ ಡಾ. ಬೂದುಗುಪ್ಪ ಪ್ರಹ್ಲಾದ ರೆಡ್ಡಿ**

ಬಚ್ಚಲಿಗೆ ಕಾಲಿಡುವಾಗ
ನನ್ನಮ್ಮನ ಎಚ್ಚರಿಕೆ
"ಜಾರಿಬಿಟ್ಟೀಯಾ.. ಹುಷಾರು.!!"

ನನ್ನತನ ಜಾಗೃತಗೊಂಡು
"ಏನು ಮಾಡೀತು ಮಹಾ.. ಈ ಬಚ್ಚಲು ಮನೆ"
ಎಂಬ ತಾತ್ಸಾರ ಮನೋಭಾವ

ಬಚ್ಚಲಿಗೆ ಹೋದವರು
ಮರೆಯಬಹುದೇ.. ಸೋಪಿನ ಸಂಗ.?

ನಮ್ಮ ಮೈತುಂಬಾ
ನಮಗಾಗಿಯೇ ಕಾದಿರುವ
ಸೋಪುಗಳ ಹರಿದಾಟ
ತಣ್ಣೀರು ಸುರಿದರೂ
ದೇಹಕ್ಕೆ ಬಿಸಿ ಅನುಭವದ ಪಾಠ

ಬಟ್ಟೆ ಬಿಚ್ಚಿ ಬದಿಗಿರಿಸಿ
ನಾಚಿಕೆ ಸಂಕೋಚ ಕಳಚಿ
ಸೋಪಿಗೆ ಮೈ ಕೊಟ್ಟಾಗ
ಏನೋ... ನಿರಾಳ
ಮನಸ್ಸು ಹಗುರ.. ದೇಹ ಭಾರ

ಮೈತುಂಬಾ ಹರಿದಾಡಿದ
ಹಿಡಿಗಾತ್ರದ ಸೋಪು
ಕೈಜಾರಿ ಕಾಲ್ಗಳಡಿ ಸಿಕ್ಕು
ನನ್ನನ್ನೇ ಜಾರಿಸಿಬಿಟ್ಟಿತು

ಬಿದ್ದ ರಭಸಕ್ಕೆ
ಜೀವಜಲದ ಮಡಿಕೆಯ
ಮುಚ್ಚಳಿಕೆ ಒಡೆದು
ಬಚ್ಚಲೆಲ್ಲಾ ಕೆಂಪು

ಬಚ್ಚಲು ಮನೆಗೆ ಕಾಲಿಡುವಾಗ
ತಿಳಿದಿರಲಿಲ್ಲ
ಕಾಲುಜಾರಿಸುವ ಸೋಪುಗಳು
ಕಾದಿರುತ್ತವೆಂದು.

# ಮಾಯಾ ಸರೋವರ

❖ **ಡಾ. ಗೀತಾ ವಸಂತ**

ನಿದ್ದೆ ಎಚ್ಚರವ ಮೀಟಿ ದಾಟಿ
ಗಾಢ ಸುಷುಪ್ತಿಯ ಕೊಳ್ಳ
ಇಳಿದಿಳಿದು ಹೋದಂತೆ ಆಳ
ಕರೆಯುತಿದೆ ಯಾವುದೋ ಕೊಳಲು
ಸುರತ ಸುಖಕೆಳೆಸುತಿದೆ
ಸಾವಿನಾಚೆಗೂ ಜಿಗಿದು
ಸಾವಿರಸಾವಿರ ಜೀವಗಳ
ಒಮ್ಮೇಲೇ ಗರ್ಭದಲಿ ಚಿಗುರಿಸುವ
ಅದಮ್ಯ ವಾಂಛೆ

ಕುದುರೆಗಳ ಖುರಪುಟ... ಹೇಶಾರವ
ವಿರಹದ ವೀಣಾಸ್ವನ... ಸುಖದ ಚೀತ್ಕಾರ
ಮಂತ್ರದಂಡ ಆಡಿಸಿದಂತೆ
ನಡೆಯುತಿರುವೆ ನಿನ್ನ ಹಿಂದೆಯೇ
ಕನಸಲ್ಲಿ ನಡೆಯುವಂತೆ.
ಏಯ್ ನಿಲ್ಲು....
ಬೆನ್ನು ಮಾತ್ರ ತೋರುತ್ತಿದೆ
ನಿನ್ನ ಮುಖಕಾಣಬೇಕಿದೆ ನಾನು

ಪರ್ವತ ಕಣಿವೆ ನದಿ ಕಾಡು
ಅನೂಹ್ಯ ತಿರುವುಗಳ ಜಾಡು
ಮೇಲೆ ನಕ್ಷತ್ರ ಹೊದಿಕೆ
ಒಳಗೆ ನಿಗೂಢ ಕತ್ತಲು

ಅಲ್ಲಲ್ಲಿ ಹಸಿರುಟ್ಟ ತೋಟ
ಮಾನಸ ಸರೋವರದಲ್ಲಿ
ತೇಲುವ ಧವಳ ಹಂಸ

ಕತ್ತಲಲ್ಲಿ ನೀನು
ಅಂಗಿಬಿಚ್ಚೆಸೆದ ಸದ್ದು
ಬೆತ್ತಲಾಗು ಬಾ ಎನುವ ಪಿಸುದನಿಗೆ
ಒಳಗೆಲ್ಲ ಹರಿದ ಝುಳುಝುಳು ನದಿ
ಎಲ್ಲಿ ಬಂದಿರುವೆ ನಾನು ಎಂದು ಹಲುಬುವ
ನನ್ನ ತುಟಿಯಲ್ಲಿ ನಿನ್ನ ನಗು
ನೀ ಹೇಳಿದ ಅಸಂಖ್ಯ ಕತೆಗಳ ಗುಂಗು

ಬಟ್ಟೆಬಿಚ್ಚಿದಂತೆ ಜನುಮಗಳ
ದುಃಖಸೇತುಗಳು ಲಟಲಟ ಮುರಿದು
ಯಾವುದೋ ರಾಗ ದಳಬಿಚ್ಚಿ
ಅರಳಿದ್ದೊಂದೇ ಗೊತ್ತು
ಮುಂದೆಲ್ಲ ನೀ ಹೇಳಿದಂತೆ
ನಾ ಮಾಡಿದೆನೊ
ನಾ ಹೇಳಿದಂತೆ ನೀ ಕೇಳಿದೆಯೋ
ಅಥವಾ......
ನೋಟ ಮಾಟಗಳಳಿದು
ಬರಿ ಹಂಸೆಯಾಗಿ ತೇಲಿದೆನೊ
ಎಚ್ಚರಾದಾಗ ನಿನ್ನ ಕಾಣೆ

ತಿಳಿಯಾದ ಸರೋವರದಲೀಗ ಅಲೆಗಳಿಲ್ಲ
ತಿರುಗಿ ಹೋಗಲು ತಿಳಿಯುತ್ತಿಲ್ಲ
ಬಂದದ್ದು ಹೆಜ್ಜೆ ಮೂಡದ ಹಾದಿ
ಮುಖವಿಲ್ಲದ ನಿನ್ನ ದನಿಗಳ ನಿನದಕ್ಕೆ
ಕಂಪಿಸುತ್ತಿದೆ ಒಡಲ ಒಂಟಿ ಹಂಸೆ
ನಿಂತಿರುವೆ ಇಲ್ಲೇ

ನಿನ್ನ ರೂಹು ಅರಸುತ್ತ
ತೀರದ ದಾಹಗಳ ಕನವರಿಕೆಯಲ್ಲೇ.

ಕನಸಾಗಿರಲಿಕ್ಕಿಲ್ಲ ನೀನು
ಎಂದು ಭ್ರಮೆಯಾಗುತಿದೆ
ಮಾಯಾ ಸರೋವರದಲಿ ಕ್ರೀಡಿಸಿ
ಬಿಚ್ಚೆಸೆದ ಅಂಗಿ ತೇಲುತಿದೆ ಇಲ್ಲಿಯೇ
ಸರಿದು ಹೋಗಿರಬಹುದು ಯಾವುದೋ
ನಿಗೂಢ ತಿರುವುಗಳಲಿ ನೀ ಬೆತ್ತಲಾಗಿ
ತೀರದಲೇ ನಿಂತಿರುವೆ ನಾ ಬಯಲಾಗಿ.

# ಹೂ ತೋಟದಲ್ಲಿ ಸುರಿದ ರಕ್ತದ ಮಳೆ

❖ ಸೂರ್ಯಕೀರ್ತಿ

೧

ಇಲ್ಲಿ,
ಬೆಳೆಯುವುದೆಲ್ಲ ರಕ್ತ,
ಬಳಸುವುದೆಲ್ಲ ರಕ್ತ
ರಕ್ತ ರಕ್ತವಾಗಿ ಹರಿಯುವುದು
ನಮ್ಮ ಹೊಲ ಗದ್ದೆಗಳಲ್ಲಿ
ಕೂಲಿ ಕಾರ್ಮಿಕರ ಜೀವನಾಡಿಯ ರಕ್ತ!

ಇಲ್ಲಿ,
ಬಾಯಾರಿದಾಗ ಕುಡಿಯುವರು ರಕ್ತ
ಹಸಿದಾಗ ತಿನ್ನುವರು ರಕ್ತ, ಮಾಂಸ!
ಇದಕೆ
ಇತಿಹಾಸ ಬೇಡ, ಗತಿಬಿಂಬ ಬೇಡ
ಅಧಿಕಾರದ ಬೇರು ಎಲ್ಲೆಲ್ಲೂ ಆವರಿಸಿರುವಾಗ
ಇವರು
ಕುಡಿಯುವುದು ಮಾತ್ರ
ದೀನ ದಲಿತ ಬಡವರ ರಕ್ತ ರಕ್ತ!

೨

ಇವರು
ಅಕ್ಕಿಯ ಮಡಿಯಲಿ ರಕ್ತವ ಬಗೆದು ತಿಂದವರು.
ಹುಳ್ಳಿಕಾಳಿನ ಸಾರೊಳಗೆ

ಬಡವರ, ದೈನ್ಯರ ಮಾಂಸದ ತುಂಡುಗಳನ್ನು
ಕತ್ತರಿಸಿಕೊಂಡು, ಚಪ್ಪರಿಸಿಕೊಂಡು
ತಿಂದವರು,
ಇವರಿಗೆ ಇದೆಯೇ ರಕ್ತ?

ಎದೆಯ ತುಟಿಗಳ ಮುಚ್ಚಿಸಿ
ಜೀವಂತ ಶ್ರಾದ್ಧವ ಮಾಡಿದವರು
ನಂಬಿಕೆಯ ಗೋಡೆಗಳ ಕಟ್ಟಿ
ನೆಲದಿಂದ ಆಕಾಶಕ್ಕೆ ಏಣಿಯನ್ನು ಹತ್ತಿಸಿದವರಿವರು,
ಇವರನ್ನು
ಮನುಷ್ಯರೆನ್ನುವುದೇ ಆಘಾತ,
ಇನ್ನು ಇಲ್ಲಿ ನಾವು ಅವರ ತಾಳಕ್ಕೆ ಕುಣಿಯುವುದೇ
ಇನ್ನು ಪ್ರಪಾತ!

೩

ನಮಗೆ,
ಪ್ರಜಾಪ್ರಭುತ್ವ ಎನ್ನುವುದೇ ಅರಿಯದು
ಮಂಕರಿಗಳಲಿ ಕುರಿಗಳನ್ನು ಕೂಡಿ ಹಾಕುವ ಹಾಗೇ
ಗುದುಗಾಲುಗಳನ್ನು ಹಾಕಿ ಮಲಗಿಸಿದ್ದಾರೆ ಇನ್ನು!
ಬಾಯಿಗೆ ಮೂಗುದಾರವನ್ನು ಚುಚ್ಚಿ
ನಾಲಿಗೆಗೆ ಚುರುಕಿನ ಸೊಪ್ಪನ್ನು ಹಚ್ಚಿ
ಮೆತ್ತನೆಯ ಮಾತನಾಡಿ, ಊರ ಬಾಗಿಲುಗಳ
ಮುಚ್ಚಿ, ಇನ್ನು ಮೆಲ್ಲನೆ ಮೆಲ್ಲನೆ ಪಿಸುಗುಟ್ಟುತ್ತಾ
ಅವರ ದನಿ ಕೇಳುವುದಿಲ್ಲ
ಹಾಡುವುದಿಲ್ಲ,
ನಮ್ಮ ಸ್ವರಗಳು ಅವರಿಗೆ ಅರಿವಾಗುವುದಿಲ್ಲ,
ಪ್ರಜೆಗಳೇ ರಾಜರೆಂದ ಮೇಲೆ
ಭಾರತದಲ್ಲಿ ಪ್ರಜೆಗಳು ಪ್ರಜೆಗಳಾಗಿಲ್ಲ!

ಗದ್ದೆ ಹೊಡೆಯ ಬಾರದೆಂದು ನಾಕು ಮೂಲೆಗಳಿಗೆ
ಬದಗಳ ಕಟ್ಟಿದರೂ ಅದ್ಹೇಗೆ ಹೊಡೆದು

ನಾಕು ದಿಕ್ಕುಗಳಿಗೆ
ಭಾರತ ಪಾಲಾಯಿತು?
ಗಾಂಧೀ ಎಂಬ ಶಾಂತಿ ರೈತ
ವಿಶ್ವಬೀಜವನ್ನು ಬಿತ್ತಿದರೂ ಕೂಡ
ಅದ್ಹೇಗೆ ಕ್ರಾಂತಿ ಬೀಜವಾಯಿತು?
ಇದು ಕ್ರಾಂತಿಯೋ, ಭ್ರಾಂತಿಯೋ
ತನ್ನ ರಂಬೆಯನ್ನೆ ತಾನು ಕತ್ತರಿಸಿಕೊಳ್ಳುವ
ಅಜ್ಞಾನವಷ್ಟೇ!

೪

ನನ್ನ ಗದ್ದೆಯಲ್ಲಿ ಭತ್ತವನ್ನು ಬಿತ್ತಿಲ್ಲ
ಹರಿಯುವ ನೀರನ್ನು ಹರಿಸಿಲ್ಲ
ಮೇಕೆಯ ಗೊಬ್ಬರವನ್ನು ಬಿಟ್ಟಿಲ್ಲ
ನೇಗಿಲಿನಿಂದ ಉತ್ತಿಲ್ಲ
ಉಕ್ಕೆಗಳನ್ನು ಹೊಡೆದಿಲ್ಲ
ದನದ ಹೆಜ್ಜೆಗಳು ಕೂಡ ಇಲ್ಲಿ ಇಲ್ಲ.
ನಾವು ಏಕೆ ನಿಮ್ಮ ಗದ್ದೆಗಳನ್ನು
ಊಳಬೇಕೆಂದು ದನಗಳು ಕೂಡಾ ಕೇಳಿಲ್ಲ?

ಉಳುವ ದನಗಳು
ತನ್ನ ಕತ್ತುಗಳ ಬಗ್ಗಿಸಿ, ಮೂಕನಂತೆ ,ದಡ್ಡನಂತೆ
ಹೆಡ್ಡರಂತೆ, ಗಾಣದ
ಎತ್ತುಗಳಂತೆ ಸದಾ ತಿರುಗುತ್ತಲೇ ಇವೆ,
ಇನ್ನು ತಿರುಗುತ್ತಲೇ ಇವೆ!
ಮತ್ತೆ,
ಕತ್ತನ್ನು ಎತ್ತಿ
ಇಲ್ಲಿ ಏಕೆ ತಿರುಗಬೇಕು ?
ಹೊಲ ಗದ್ದೆಗಳಲ್ಲಿ ನಿಮ್ಮ ಹೊಟ್ಟೆ ತುಂಬಲು
ನಾವ್ಯಾಕೆ ದಣಿಯಬೇಕು ?
ಎಂದು ಕೇಳುವುದಾದರು ಯಾವಾಗ?
ಹ್ಮ್, ನನ್ನ ದನಗಳು ಭಾರತದ ಪ್ರಜೆಗಳು

ಎಂದೂ ಇವರು ಪ್ರಶ್ನಿಸುವುದಿಲ್ಲ ,
ಎಂದೂ ಇವರು ಯಜಮಾನ್ಯದ ವಿರುದ್ಧ
ಉತ್ತರಗಳ ಕೇಳುವುದಿಲ್ಲ,
ಥೇಟ್,
ಮೂಗುದಾರಗಳನ್ನು ಬಿಗಿಸಿಕೊಂಡು
ಕತ್ತನುರಿ, ಬಾಯಿಗೆ ಕುಕ್ಕೆ
ಕಾಲಿಗೆ ಗುದಗಾಲುಗಳನ್ನು
ಕಟ್ಟಿಸಿಕೊಂಡು
ಓಡಾಡುವ ದನಗಳು
ನನ್ನ ಭಾರತದ ಪ್ರಜೆಗಳು!

ಇಲ್ಲೇ
ಈ ಹೂ ತೋಟದಲ್ಲಿ ಸುರಿದ ರಕ್ತದ ಮಳೆ
ಹರಿದ ಬೆವರಿನ ಹೊಳೆ
ರಕ್ತ, ಮಾಂಸ, ಮೂಳೆ.
ಇನ್ನು ದುಡಿಯುತ್ತಲೇ ಇವೇ
ಈ ದನಗಳು

# ಗಾಂಧಿಯನ್ನು ಕಂಡಿರಾ?

❖ **ನಾಗರಾಜ್ ನವೀಮನೆ**

ಹೇ ರಾಮ್
ಹೊರಗೆ ಎಲ್ಲೋ ಭಜನೆ ನಡೆಯುತ್ತಿತ್ತು
ಪೂರ್ವದಿಂದ ಪಶ್ಚಿಮಕ್ಕೆ
ಬೆಳಕು ಗಾಳಿಯೊಡನೆ
ಬೆರೆತು ಸಾಗುವಾಗ
ದೃಷ್ಟಿ ಹಾಯಿಸಿ
ಹುಡುಕಿದೆ ಹುಡುಕಿದೆ
ಹುಡುಕೇ ಹುಡುಕಿದೆ,
ಇಲ್ಲ,
'ಗಾಂಧಿ' ಮಾತ್ರ ಕಾಣಲೇ ಇಲ್ಲ
ನೂಲಿಗೆ ಕೈ ಮಗ್ಗ ನೇಯುತ್ತ
ಖಾದಿ ಟೋಪಿ ತಯಾರಿಸುತ್ತಿದ್ದ
ಬಿಳಿಯ ಗಡ್ಡಧಾರಿ
ತಾತನೊಬ್ಬನ ಕೇಳಿದೆ
"ಇಲ್ಲಿ ಎಲ್ಲಾದರೂ
ಗಾಂಧಿಯನ್ನು ಕಂಡಿರಾ?"
ಇಲ್ಲವೆಂದು ತಲೆಯಾಡಿಸಿದರು.

ಮುಂದೆ ಹೆಜ್ಜೆ ಇರಿಸಿದೆ
ರಸ್ತೆಯ ಚರ್ಮದ ತುಂಬಾ
ರಕ್ತದ ಕಲೆ,
ಕ್ಷಣಕಾಲ ಭಯವಾಯಿತು
ನಿಲ್ಲಲಿಲ್ಲ ಮತ್ತೆ

ಮುಂದೆ ಮುಂದೆ ನಡೆದೆ
ಕೊಲೆ ಹಿಂಸೆ ಕಣ್ಮುಂದೆ ಸುಳಿದು
"ಅಸಹಕಾರ ಅಸಹಕಾರ ಎಂದು
ಯಾರೋ ಕೂಗಿದಂತಾಗಿ"
ಕ್ಷಣಕಾಲ ನಿಂತು ಕೇಳಿಕೊಂಡೆ
ಕೋವಿ ಹಿಡಿಯದೆ ಕೋಲನ್ಹಿಡಿದು
ಸ್ವಾತಂತ್ರ್ಯ ತಂದುಕೊಟ್ಟ
ಆ ಮಹಾತ್ಮ ಹೋದದ್ದಾದರೂ ಎಲ್ಲಿಗೆ?

ಬೀದಿಯಲ್ಲಿ ನಿಂತ
ಆ ದಿವ್ಯ ಮೂರ್ತಿಗೆ ಕೇಳಿದೆ
"ನಿನ್ನ ಕನ್ನಡಕದ ತುಂಬಾ
ಮಸಿಯ ಎರಚಿದವರು ಯಾರು?"
ಉತ್ತರ ಬರಲಿಲ್ಲ!
ಗಾಂಧಿಭವನದಲ್ಲಿ
ಗಾಂಧೀ ಇರುವರೆ?
ಕಿಟಕಿ ಬಾಗಿಲುಗಳಿಗೂ ಕೇಳಿದೆ
ದುರುಗುಟ್ಟಿ ನನ್ನನೇ ನೋಡಿದವು!
ಗಾಂಧಿನೋಟಿನಲ್ಲಿ
ಜೇಬಿನಿಂದ ಜೇಬಿಗೆ
ನಡೆಯುತ್ತಿರುವರೆ ಎಂದೇ
ಹಣವೇ ಅಣಕ ಮಾಡಿತು
ಗಾಂಧಿಕ್ಲಾಸಿನಲ್ಲಿ ಕೂತ ಬಾಪೂ
ಬಡವರ ಸಂತೈಸುತ್ತಿರುವನೆ ಎಂದೇ
ಮೌನವೇ
ಉಪವಾಸ ಉಪವಾಸ ಎನ್ನುತ್ತಿತ್ತು!
ಮತ್ತೆ
ಗಾಂಧೀ ಹೋದದ್ದಾದರು ಎಲ್ಲಿಗೆ?
ಎಂದು ಕೇಳುತ್ತಾ
ಒಂದು ಪುಟದ ಪತ್ರ ಬರೆದೆ!
ತಲುಪಿಸಲು ವಿಳಾಸ ಸಿಗಲಿಲ್ಲ!

ಇನ್ನೂ ಕಾಯುತ್ತಲೇ ಇದ್ದೇನೆ
ಗಾಂಧೀ ಬಗ್ಗೆ ಉತ್ತರಿಸುವ
ಯೋಗ್ಯವುಳ್ಳ ಮಹನೀಯರು
ಉಳಿದಿದ್ದಾರೆಯೇ ಎಂದು!
ಬರೆದ ಪತ್ರ ತಲುಪಿಸಲು!

# ಮೃದುಪಾದ

❖ **ಹೇಮಲತಾ ಮೂರ್ತಿ**

ಪುಟ್ಟದೊಂದು ಪಾದದ ಹೆಬ್ಬೆರೆಳು ಮೃದುವಾಗಿ
ಹೃದಯದ ಕವಾಟವನ್ನು
ಬಹು ಮೆಲ್ಲನೊಮ್ಮೆ ಮೀಟಿತು

ಇಡೀ ಜಗತ್ತೇ ಸ್ತಂಭಿಸಿದಂತೆ
ಬ್ರಹ್ಮಾಂಡ ಪ್ರಳಯವಾದಂತೆ
ಏಳು ಸಮುದ್ರಗಳಲ್ಲೂ ಸುನಾಮಿ ಎದ್ದಂತೆ
ಶಿವ ತಾಂಡವದ ನಂತರ ಸುದೀರ್ಘ ಉಸಿರು ಬಿಟ್ಟಂತೆ..

ಒಂದು ಪುಟ್ಟ ಪಾದದ
ಬೆರಳು...
ಜಗತ್ತನ್ನು ಅಲ್ಲೋಲ ಕಲ್ಲೋಲ
ಮಾಡಿದಂತೆ

ಸಳ ಸಳನೇ ಬೆವರು, ಗರ್ಭದಲ್ಲೊಂದು ನವಿರು
ಬೊಗಸೆ ತುಂಬಾ ಮಧು
ಬಟ್ಟಲು ಸುರುವಿದ ಒಗರು

ಮತ್ತಳೋ, ಉನ್ಮತ್ತಳೋ
ಭಾವೋನ್ಮತ್ತಳೋ
ಚಂಡಿಯೋ, ಚಾಮುಂಡಿಯೋ
ರಣಚಂಡಿಯೋ, ಆವಾಹಿಸಿದಳಲ್ಲ
ಅತಳ, ವಿತಳ, ಪಾತಳ, ರಸಾತಳಗಳನ್ನೂ

ತನ್ನ ಅಂಗೈ ಬೆರಳುಗಳ ಮೇಲಿರಿಸಿ ಕುಣಿಸತೊಡಗಿದಳಲ್ಲ
ಕಾಳಿ, ಮಾಂಕಾಳಿ,...

ಬೆರಳು ಪಾದವಾಯಿತು, ಪಾದ ದೇಹವಾಯಿತು
ಎಳೆ ಶಿಶುವೊಂದು ಅವಳ ಕಂಕುಳ
ಕೂಸಾಯಿತು...

ಸೃಷ್ಟಿ ಸ್ಥಿತಿ ಲಯಗಳನ್ನೇ
ನಡುಗಿಸಿದ ಕೂಸು
ಹೃದಯಲ್ಲಿ ಮೊಲೆ ಉಂಡು
ಗರ್ಭದಲ್ಲಿ ನಿದ್ರಿಸಿ ತೋಳು
ತೊಡೆಗಳನ್ನು ಅಂಗಳವಾಗಿಸಿ
ಮನತಣಿಯೆ ಆಟವಾಡಿ
ಬೆಚ್ಚನೆ ಮಡಿಲಲ್ಲಿ ಸರ್ಪದ ಮೇಲಿನ ಮಣಿ ಹೊಳೆದಂತೆ
ಮಿನುಗುತ್ತ ಕಾಲ್ಬೆರಳನ್ನು ಬಾಯಲ್ಲಿಟ್ಟು
ನಿದ್ರಿಸ ತೊಡಗಿದರೆ ಅಶ್ವಿನಿ ದೇವತೆಗಳು
ಅವಕ್ಕಾಗಿ ಶ್ವಾಸವಾಡುವುದ
ನಿಲ್ಲಿಸುತ್ತಿದ್ದರು

ಬೆಳೆಯುತ್ತಾ ಹೋಯಿತು ಕೂಸು, ಭೂಮಿ ಮೀರಿ
ನವಗ್ರಹಗಳನ್ನು ದಾಟಿ..
ಸಹಸ್ರ ಕೋಟಿ ನಕ್ಷತ್ರಗಳನ್ನು ಮೀಟಿ ,
ಅಷ್ಟ ದಿಕ್ಕುಗಳನ್ನು ನುಂಗಿ
ತಾವಿಲ್ಲ ನನಗೆ ತಾಯೇ ಇಕ್ಕಟ್ಟಾಗುತ್ತಿದೆ ಎಂದಿತು

ಜಗದ ತಾಯಿ ಮಹಾಮಾಯಿ
ಹೃದಯದಲ್ಲಿರಿಸಿದ ಪಾದವನ್ನೇ
ನನ್ನ ನೆತ್ತಿಯ ಮೇಲಿರಿಸಿಬಿಡು
ಮಗನೇ ಎಂದಳು

ಅಮೃತವನ್ನು ಹಾಲಾಹಲವಾಗಿಸಿಕೊಂಡ
ಕೂಸು ಧಡಕ್ಕನ್ನೇ ತಾಯಿ ನೆತ್ತಿಯ
ಮೇಲೆ ಪಾದವನ್ನು ಊರಿಯೇ ಬಿಟ್ಟಿತು

ಬಲಿಯ ಮಗಳಿಗೆ ಬಯಲು
ದಕ್ಕಲಿಲ್ಲ, ಪಾತಳ ಸೆಳೆದುಕೊಂಡಿತಲ್ಲ..
ತಾಯೇ! ಸುಳ್ಳು ನುಡಿವುದಲ್ಲೇ
ಜಗತ್ತು , "ಹೆಣ್ಣು ಮಾಯೆ" ಎಂದು!

# ಮೊಳಗುತ್ತಿದೆ ಸೈರನ್!

❖ **ಶಂಕರ್ ಸಿಹಿಮೊಗ್ಗೆ**

ನಾನು
ಅಂದೇ ಹೇಳಿದ್ದೆ!
ಕಿರೀಟ ತೊಟ್ಟವರ ನಂಬದಿರಿ ಎಂದು!
ಜೀವ ಹಿಂಡುವ ರಕ್ತ ಹೀರುವ ಮಂದಿ
ನಮ್ಮ ನಿಮ್ಮಂತೆ ಬರುವುದಿಲ್ಲ!
ಕಿರೀಟ ತೊಟ್ಟಿಯೇ ಬರುತ್ತಾರೆ!
ಥೇಟ್ ಈಗ ಬಂದಿರುವ
ಅರೆಜೀವಿಯಂತೆ!
ಪೀಠವಿಲ್ಲದ ಅರಮನೆಯಲ್ಲಿ
ಕಿರೀಟಿ ರಾಜನದ್ದೆ ಆರ್ಭಟ
ನಿರ್ಗತಿಕ ವಲಸೆಗಾರರ ಬಡವರ
ಕೂಳಿಗೂ ಗತಿ ಇಲ್ಲ!
ಮಂದಗತಿಯ ಮೂರ್ಖ ರಾಜನಿಗೆ
ಕೇಳುವವರು ಯಾರು?
ಅಯ್ಯೋ ಹೇಳುವವರು ಯಾರು?
ಎಂದು ಗೊರವಂಕ ಕೂಗುತ್ತಿರುವಾಗ
ಗಲ್ಲಿಗಲ್ಲಿಗಳ ರಸ್ತೆಗಳಲ್ಲಿ
ಒಣಗಿ ಉದುರಿದ ಎಲೆಗಳ ತಳಗಳಲ್ಲಿ
ಹುಳದಂತೆ ಜನರು ಸಾಯುತ್ತಿರುವ ದೃಶ್ಯವನ್ನು
ತದೇಕ ಚಿತ್ತದಿಂದ ಕಂಬಳಿ ಹುಳುವೊಂದು
ಬರೆದು ದಾಖಲು ಮಾಡುತ್ತಿತ್ತು
"ಯಕಶ್ಚಿತ್ ಕಣ್ಣಿಗೆ ಕಾಣದ
ಅರೆಜೀವಿಯೊಂದರಿಂದ

ಮನುಷ್ಯರು ಉಸಿರುಗಟ್ಟಿ
ಸಾಯುತ್ತಿದ್ದಾರೆ ಅಯ್ಯೋ
ಮನುಷ್ಯರು ಉಸಿರುಗಟ್ಟಿ
ಸಾಯುತ್ತಿದ್ದಾರೆ"

ಮರದ ಮೇಲೆ ಕೂತ ಹಕ್ಕಿ
ಅಯ್ಯೋ ಅಯ್ಯೋ ಈ ಮನುಷ್ಯರಿಗೆ ಏನಾಗಿದೆ?
ಯಾಕ್ಹೀಗೆ ಮುಖಕ್ಕೆ ಮುಸುಕು ಹಾಕಿಕೊಂಡಿದ್ದಾರೆ!
ಕಲ್ಲು ಹೊಡೆಯುತ್ತಿದ್ದ ಕೈಗಳೇ ಕಾಣುತ್ತಿಲ್ಲವಲ್ಲ!
ಎಂದು ವ್ಯಂಗ್ಯವಾಗಿ ಚರಮಗೀತೆಯ ಹಾಡುತ್ತಿತ್ತು!
ಬೆಕ್ಕು, ನಾಯಿ, ಇರುವೆ ಮತ್ತು ಕೋಳಿ
ಮಾತನಾಡಿಕೊಳ್ಳುತ್ತಿದ್ದವು!
ನೋಡಿದೆಯ ಬೆಕ್ಕಣ್ಣ
'ನಮ್ಮ ಕುತ್ತಿಗೆಗೆ ಹಗ್ಗ ಜಡಿದು ಮೂಲೆಗೆ ಕಟ್ಟುತ್ತಿದ್ದ
ಈ ಮನುಷ್ಯರ ಪಾಡು ಇಂದು ಈಗ ಏನಾಗಿದೆಯೆಂದು?
ಕಾಲಕ್ಕೆ ಬೆಲೆ ಕಟ್ಟುವರುಂಟೆ?
ಕೆಲಸವಿಲ್ಲದ ಯುವಕರ ಗೋಣು
ನೇಣು ಕುಣಿಕೆಗೆ ಅಯ್ಯೋ ನೋಡಲಾಗುತ್ತಿಲ್ಲ!
ಕೆಲಸವೇ ಸಿಗುತ್ತಿಲ್ಲ!
ಗುಳೆ ಬಂದವರ ಪಾಡು
ಅವರ ಹಸಿವು ಯಾರಿಗೂ ಬೇಡ!'
ಎಂದು ಬೊಗಳಿತು ನಾಯಿ!
ಹೌದಣ್ಣ ಹೌದು
'ತೋಳಕ್ಕೆ ಸಿಂಹದ ಬಣ್ಣ
ನಾಯಕನ ಬಣ್ಣ ಬಳಿದರೆ
ಎಷ್ಟು ದಿನ ತಾನೇ ಉಳಿದೀತು?
ಮಳೆ ಬಂದಾಗ ಕರಗಿ
ಬಿಸಿಲು ಹೆಚ್ಚಾದಾಗ ಒಣಗಿ
ಹೋಗಲೇಬೇಕಲ್ಲ!
ರಾಜನ ಸತ್ಯದ ಮಿಥ್ಯವು ಜನರಿಗೆ ತಿಳಿಯಲೆ ಬೇಕಲ್ಲ!
ಕ್ಕೊ ಕ್ಕೊ ಕ್ಕೊ ಎಂದು ಕೂಗಿತು ಕೋಳಿ!

ನಂಟು ಗಂಟಿನ ಹಂಗಿನೊಳಗೆ ಯಾವ
ಸಾಂಕ್ರಾಮಿಕ ರೋಗ ಬಂದರೇನು?
ಮನುಷ್ಯ ಬದಲಾಗುವನೇ?
ಇಲ್ಲ ಅವನು ಬದಲಾಗುವುದೇ ಇಲ್ಲ!
ಜಿಡ್ಡುಗಟ್ಟಿದೆ ಮೆದುಳು
ಮದ ಮತ್ಸರ ಮೋಹ ಸ್ವಾರ್ಥದಿಂದ!
ಹಸಿದ ಹೊಟ್ಟೆಗೆ ಅನ್ನ ಇಕ್ಕುವವರಿಲ್ಲ!
ತಿನ್ನುವವರು ರೋಗದ ಹೆಸರಿನಲ್ಲಿ
ಮತ್ತಷ್ಟು ಮಗದಷ್ಟು ತಿನ್ನುತ್ತಲೆ ಇದ್ದಾರೆ!
ಸಾಯುವವರು ಮಾತ್ರ ಸಾಯುತ್ತಲೆ ಇದ್ದಾರೆ!
ಇದಕ್ಕೆ ಕೊನೆ ಎಲ್ಲಿದೆ ಇಲ್ಲಿ?
ಎಂದು ಬುಸುಗುಟ್ಟಿತು ಹಾವು ಪೊಟರೆಯಲಿ!

ಕಾಲದ ಮೃಗ ಓಡುತ್ತಿದೆ ಓಡುತ್ತಿದೆ
ತನ್ನ ಬೆನ್ನ ತಾನೇ ಕಾಣದಂತೆ!
ಮೃಗ ಖಗಗಳು ವ್ಯಂಗ್ಯವಾಡುತ್ತಿವೆ!
ಅಪರೂಪಕ್ಕೆ ಕೇಳುತ್ತಿದ್ದ
ಆ್ಯಂಬುಲೆನ್ಸಿನ ಸೈರನ್ ಸದ್ದು
ಈಗ ನಿತ್ಯದ ಮಂತ್ರವಾಗಿದೆ!
ರಾಮ ಮಂದಿರದ ಭಜನೆಯಂತೆ
ಭಗವದ್ಗೀತೆಯ ಶ್ಲೋಕದಂತೆ!
ಅಲ್ಲಾವುವಿನ ಆದೇಶದಂತೆ
ಕುರಾನಿನ ವಚನದಂತೆ!
ಶಿಲುಬೆ ಮೇಲಿನ ಅಹಿಂಸಾ ಮೂರ್ತಿಯಂತೆ
ಬೈಬಲ್ಲಿನ ವಾಣಿಯಂತೆ!
ಬುದ್ಧನ ಉಪದೇಶದಂತೆ
ಹೊರಗೆ ಹೆಜ್ಜೆ ಇಟ್ಟರೆ ಸಾಕು,
ಮೊಳಗುತ್ತಿದೆ ಸೈರನ್
'ಎಚ್ಚರ ಮನುಷ್ಯ ಎಚ್ಚರ
ನಿನಗಿನ್ನೂ ಬಹಳ ಸಮಯವಿದೆ ಬದಲಾಗು' ಎಂದು!

# ಮುಖದ ಮುಗುಳ್ನಗೆ ಇನ್ನೂ ಮಾಸಿಲ್ಲ

❖ **ಸುಮಾ ರಮೇಶ್, ಬೆಂಗಳೂರು**

ದುರಿತಕಾಲದ ಕವಿತೆಯಂತೆ ಕಾಣುತ್ತಿರುವೆ ನೀನು,
ಸುಕ್ಕುಗಟ್ಟಿದ ಮುಖ, ನಿನ್ನೀ ಬಡಕಲು ದೇಹ
ಪ್ರತಿನಿಧಿಸುತ್ತಿಹುದು ನಿನ್ನ ಶ್ರಮಜೀವನವನ್ನು,
ಅಂದು ನಿನ್ನ ಹುಟ್ಟಿಗೆ ಕಣ್ಗಳನ್ನು ಮಂಜಾಗಿಸಿದ್ದು
ಕಣ್ಣೀರೇ ಹೊರತು ಆನಂದಭಾಷ್ಪಗಳಲ್ಲ,
ಕಾರಣ ಅವರಿಗೆ ಗಂಡು ಮಗು ಹುಟ್ಟಿರಲಿಲ್ಲ!
ಅಳುತ್ತಲೇ ಜಗಕ್ಕಡಿಯಿಟ್ಟರೂ ಭರವಸೆಯ
ಮುಗುಳ್ನಗೆಯ ಮಾತ್ರ ನೀನು ಮರೆಯಲಿಲ್ಲ,
ನಿರ್ಲಕ್ಷ್ಯದಲ್ಲೂ ಬದುಕು ಕಟ್ಟಿಕೊಳ್ಳುವ
ರೀತಿಯನ್ನು ಕಲಿತೆಯಲ್ಲ!

ಬಳಸಿ ಮಿಕ್ಕಿದ್ದು ನಿನ್ನ ಪಾಲಿಗೆ;
ಮನೆಯವರ ಚಾಕರಿಯೊಂದಿಗೆ, ಓದುವುದೇಕೆ ಬೇಕು ನಿನಗೆ?
ಮದುವೆಯಾದ ಮೇಲೆ ಹೊಸ್ತಿಲು ದಾಟಿ
ಹೋಗಲೇಬೇಕು ನೀನು ಬೇರೆ ಮನೆಗೆ!
ನಿರೀಕ್ಷೆಯ ಮುಗುಳ್ನಗೆಯ ಬುಟ್ಟಿ ಹೊತ್ತು
ಕೊಟ್ಟ ಮನೆಯ ಹೊಕ್ಕೆಯಲ್ಲ,
ಈ ಮನೆ ನಿನ್ನದಲ್ಲವೆಂದು ಅಡಿಗಡಿಗೂ
ನಿನ್ನವರು ನೆನಪಿಸುತ್ತಲೇ ಇದ್ದರಲ್ಲ!
ಗಂಡನ ಪ್ರೀತಿ ಹೊಳೆಯಲ್ಲಿ ಮಿಂದೇಳುವ
ಪುಳಕದಲಿ, ಮುಗುಳ್ನಗೆಯ ಆಭರಣವನ್ನು
ತೊಟ್ಟು ಸಂಭ್ರಮಿಸಿದ್ದೆ; ಆದರವನಿಗೆ
ರಸಿಕತೆಯಲ್ಲಿ ಎಳ್ಳಷ್ಟೂ ನಂಬಿಕೆಯೇ ಇರಲಿಲ್ಲ!

ಮಕ್ಕಳು ತಮ್ಮ ಜಗತ್ತೇ ನೀನೆಂದು ಪ್ರೀತಿಸಿದರು,
ಬೆಳೆದಂತೆ ಅವರ ವ್ಯಾಖ್ಯಾನ ಬದಲಾಗಿದ್ದು
ಸಹಜವಾಗಿತ್ತು; ಭವಿಷ್ಯದ ಹೊಂಗನಸಿನ
ರೆಕ್ಕೆಗಳವರನ್ನು ನಗರಕ್ಕೆ ಹಾರಿಸಿಕೊಂಡು ಹೋಗಿಬಿಟ್ಟಿತ್ತು!
ಇಳಿವಯಸ್ಸಿನಲ್ಲೂ ನೆಮ್ಮದಿಯ ನಿರೀಕ್ಷೆ
ಬಿಡಲೊಲ್ಲೆ ನೀನು, ಧೈರ್ಯಗೆಡುವುದು ನಿನ್ನ ಜಾಯಮಾನವಲ್ಲ,
ನಿನ್ನ ಪ್ರಕೃತಿಯ ನಿಜಕರ್ಮವಿದು;
ಹೊತ್ತು ಹೆತ್ತು ಸಲುಹಿ ಪೊರೆಯುವುದು,
ನಿನ್ನಂತಃಕರಣದಂಗಡಿಯ ತೆರೆದಿಟ್ಟೇ ಒಳಕೋಣೆಯೊಳಗುಳಿದೆಯಲ್ಲಾ!

ಹಸಿವಿನ ಮುಂದೆ ಯಾವುದೂ ದೊಡ್ಡದಲ್ಲ,
ತೆರೆದಂಗಡಿಯ ಸಾಮಾನು ಕೊಳ್ಳಲು
ಬರಲೇಬೇಕು ಎಲ್ಲರೂ, ಅಷ್ಟಕ್ಕೂ ಎಲ್ಲರಿಗು
ಹೊಟ್ಟೆಪಾಡು ಇದ್ದೇ ಇರುವುದಲ್ಲ!
ಅರಿವಾಗಿದ್ದಿಷ್ಟು ಈಗ; ಕಾಯಕವ ಮಾಡಿದ ತೃಪ್ತಿ
ನಿನ್ನ ಜೋಳಿಗೆಯ ತುಂಬಿರುವುದರಿಂದಲೇ ಗೆಳತಿ;
ನಿನ್ನ ಮುಖದ ಈ ಮುಗುಳ್ನಗೆ ಇನ್ನೂ ಮಾಸಿಲ್ಲ!

# ವರ್ತಮಾನ ಪುರಾತನ

❖ **ಜಯಲಕ್ಷ್ಮೀ ಪಾಟೀಲ್**

ಪುರಾತನ ಕಲೆಯಿದು ಕೌದಿ ಹೊಲೆವ ಮಾಟ
ಪುರುಸೊತ್ತಿನ ಆಟ
ಸಣ್ಣ ದೊಡ್ಡ ತರಾವರಿ ತುಕಡಿಗಳ ರಾಶಿ
ಅಡಗಿಸಿಕೊಂಡ ಗಂಟು
ಬಿಚ್ಚಿ ನೋಡಿದರೆ ಏನೆಲ್ಲ ಉಂಟು ಎಲ್ಲದರ
ಜೊತೆಗೂ ನೆನಪಿನ ನಂಟು

ಮುದಿಸೀರೆ ಮದವಳಿದ ಧೋತರ
ಜೊತೆಯಾಗಿ ಅಡಿಯ ಪದರಾಗಿ
ಹರೆಯದ ಸೀರೆಯದು ಮೇಲ್ಪದರು ನಡುವೆ
ಸಿಕ್ಕಿಕೊಂಡವೆಲ್ಲ ಹರುಕು
ಮುರುಕು ಮುಲುಕುವ ಕಾಣದ ಕಾಣಬಾರದ
ಮೆದುವಾದ ಹತ್ತಿ ಬಟ್ಟೆ

ಪುಟ್ಟ ಲಂಗದ ತುಕುಡಿ ಪುಗ್ಗಾ ಪೋಲಕದ
ತುಂಡುಗಳು ಕೌದಿಯಲಿ ಅಲ್ಲಲ್ಲಿ
ಹಾರ್ಯಾರಿ ಹೂವಾಗಿ ಚಿಟ್ಟ್ಯಾಗಿ ಕಲರ್ಫುಲ್ಲಾಗಿ
ಕುಳಿತ ಚೆಂದದ ಭಂಗಿ
ಪೋರನ ಅಂಗಿ ಚೊಣ್ಣ ಚಲ್ಲಣಗಳು ಇದೀಗ
ಆನೆ ಒಂಟೆಗಳ ಮೆರವಣಿಗೆಯ ಸಾಲು
ಲಂಗ ಪೋಲಕಗಳೇ ಹೂ ಚಿಟ್ಟೆಗಳ್ಯಾಕೆ ಅಂಗಿ
ಚೊಣ್ಣಗಳೇಕಿಲ್ಲ

ಹಾಗಂತ ನೀವು ಕೇಳುವ ಹಾಗಿಲ್ಲ ಹೂ ಚಿಟ್ಟೆಗಳ
ನಾಜೂಕು ಆನೆ ಒಂಟೆಗಳಿಗಿಲ್ಲ ಎಂದರೆ ಸಾಕಲ್ಲ!

ಹಚ್ಚಹಸರಿನ ಹಚ್ಚಡದ ಎಂಟೂ ದಿಕ್ಕಿಗೂ
ಪ್ರತಿಫಲನ ತ್ರಿಕೋನ
ಹುಡುಗಿಯರ ಪುಗಡಿಯಾಟ ಹುಡುಗರ
ಪಗಡೆಯಾಟ ನಡುನಡುವೆ

ದಾರದ ಸಾಲು ಎಳೆಗಳು ಅವು ನಮ್ಮೆದುರಿನ
ಲಕ್ಷ್ಮಣ ರೇಖೆಗಳು
ಜೋಕೆ, ದಾಟುವ ಭರದಲ್ಲಿ ಉಗುರ ಸೀಳಿಗೆ ಸಿಲುಕಿ ದಾರ
ನರ ನಾಡಿಗಳಿಗೆ ವ್ಯಾಪಿಸೀತು ನೋವ ಧಾರ ಬದುಕಿಡೀ
ಅದರ ನೆನಪಿನ ಕೊರಗಿನ ಮರುಗಿನ ರಾಗ ಏಕತಾರ

ಗೆರೆ ದಾಟುವ ಆಟಕ್ಕೆ ಕುಂಟಾಬಿಲ್ಲೆಯೆಂದು ಹೆಸರು
ಕನಸ ಬಿಲ್ಲೆಯ ಕಣ್ಣಿಗೊತ್ತಿ ಮುತ್ತಿಕ್ಕಿ ಗೆರೆಗೆ
ತಾಗದಂತೆ ಹುಸಿ ಹೋಗದಂತೆ ಚಿಮ್ಮಿ ಎಸೆದರೆ
ಬೇಕಾದ ಚೌಕದಲ್ಲಿ ಅದು ಸೆರೆ

ಜೊತೆಗಿದ್ದುದು ದೂರವಾಗಿ ಒಂಟಿ ಕಾಲಿನ ಸರ್ಕಸ್ಸು
ಗುರಿ ಸೇರಲು ಗೆರೆ ದಾಟುತ್ತಲೇ
ಅಳಿಯದಂತೆ ನೋಡಿಕೊಳ್ಳುವ ಬಿಸಿನೆಸ್ಸು
ಮನೋವ್ಯಾಪಾರವದು ಬಲು ಗೌಪ್ಯ ಲೋಕಕೆ
ಲಾಭ ನಷ್ಟಗಳಷ್ಟೆ ಸತ್ಯ

ಕೆಂಪು ಹಸಿರು ಬಾವುಟದ ಏರು ಯೌವ್ವನ
ತೇರು ಕೇಂದ್ರ ಬಿಂದು
ಸುತ್ತಲೂ ಜೋಡಿ ಇಜ್ಜೋಡಿಗಳ ಮೇಳ
ಬಯಲಾಟದ ಕುಣಿತ

ಧಿಥೈ ಧಿಮಿ ತಕಿಟ ಧಿಥೈ ಧಿಮಿ ತಕಿಟ ಧಿಥೈ
ಧಿಮಿ ತಕಿಟ ಥೈ ತಾಳ ಹಿಡಿದ ಕೈಗೆ ಬೆರಳುಗಳು
ನೂರಾರು ಅಬ್ಬರದ ಜೋರು
ಸಂಪ್ರದಾಯದ ಬೇರು ಸುತ್ತುತ್ತ
ಬದುವ ಬಿತ್ತುತ್ತ ಬೆಳೆಯುತಿದೆ ವೃತ್ತ ಅಲ್ಲಲ್ಲಿ ಅಲ್ಲಲ್ಲಿ
ಎದೆಯ ಹಂಬಲದ ದಿಗಿಣಕೆ ತಾಳೆಯಾಗದ ತಾಳ

ಕುಣಿತದ ಬಿರುಸಿಗೆ ಸಿಂಗಾರಗಳೆಲ್ಲ ಕಳಚಿ
ಮನಸು ಬಿಳಚಿ ಎದ್ದೂಬಿದ್ದೂ ಹೆಕ್ಕಿ ಆಯ್ದು
ಮತ್ತೆ ಮತ್ತೆ ಸಿಂಗಾರಗೊಂಡು ಕಾಲನ
ಹಿಡಿದಿಡುವ ಹಂಬಲ

ಕುಣಿವ ಕಾಲ್ಗಳಿಗೂ ದಣಿವ ಕಾಲ್ಗಳಿಗೂ ಆಸರೆ
ಒಂದೇ ನೆಲ ಜಲ

ಕವುಚಿ ಮಲಗಿದ ಜೀವಕೆ ನೆನಪುಗಳ ರಾಶಿ
ಕಣ್ಣ ರೆಪ್ಪೆಯಡಿ ಹಾಕಿ
ಕೌದಿ ನೇಯುತಿದೆ ನಿದ್ದೆ ನಲಿವಿನ ಜೊತೆಗೆ
ನೋವೂ ಕುತ್ತಿ ಚಿತ್ತಾರವಾದುದ ಕಂಡು
ಮನಸೆಲ್ಲ ಒದ್ದೆಮುದ್ದೆ

# ಋಣಮುಕ್ತಳಾಗುವುದು?

**❖ ಮಂಜುಳಾ ಹುಲಿಕುಂಟೆ**

ಅವನು ಎದುರಾದ ದಿನಗಳ ಕುರಿತು ಹೇಳಬೇಕು
ಕಣ್ಣೀರು ಮುಗಿದು ಕಣ್ಣು ಖಾಲಿಯಾದ ದಿನಗಳವು
ಸೊಂಟದ ಸುತ್ತಾ ಸುಕ್ಕು, ಕಪ್ಪಿಟ್ಟ ತುಟಿ
ಬಣ್ಣ ಕಳೆದುಕೊಂಡ ಬದುಕು ಹೀಗೆ ಎಲ್ಲವೂ...

ಅವನು ಎದುರಾದ ದಿನ
ಮತ್ತೆಂದೂ ಸ್ಪಂದಿಸಲಾರದೆನಿಸಿದ್ದ
ಸೋತ ಹೃದಯ ಹೊಸ ಹುಟ್ಟು ಪಡೆದಿತ್ತು,
ಧ್ವನಿಯೊಂದಕ್ಕೆ ಮರುಹುಟ್ಟೆಂದರೆ ನೀವು ನಂಬುವುದಿಲ್ಲಾ...

ಈ ಪ್ರೇಮದಲ್ಲಿ ಪುಳಕಗೊಂಡಿದ್ದೇನೆ
ಸನಿಹಕ್ಕೆ ಸಂಭ್ರಮಿಸಿದ್ದೇನೆ
ಚೂರಾಗಿದ್ದ ಕನಸ ಕನ್ನಡಿಯ
ಅವನ ಹೂನಗೆಯೊಂದಿಗೆ
ಬೆಳೆದುಕೊಂಡಿದ್ದೇನೆ..
ಕೆಲವೊಮ್ಮೆ ಜೊತೆ ನಡೆದಿದ್ದೇನೆ
ಹೇಳದೇ ಹೊರಟಾಗಲೆಲ್ಲಾ
ತಲ್ಲಣಿಸಿದ್ದೇನೆ...
ಅವನು ಕನವರಿಸಿದ ರಾತ್ರಿಗಳಲ್ಲಿ
ಬೆಚ್ಚಿ ನಿದಿರೆ ಇಲ್ಲದೆ ದಿನಕಳೆದಿದ್ದೇನೆ
ಅವನ ಕಣ್ಣು ದಾರಿತಪ್ಪಿದ ದಿನ
ಬದುಕು ಕೈಜಾರಿದಂತೆನಿಸಿ ಬಿಕ್ಕಳಿಸಿ ಅತ್ತಿದ್ದೇನೆ

ಇಲ್ಲೆಲ್ಲೂ ಅವನ ಬಂಧಿಸಿಡುವ
ಪಡೆದು ಬೀಗುವ ಯಾವ ಹಂಬಲಗಳೂ ನನ್ನೊಳಗಿರಲಿಲ್ಲಾ
ಇದೊಂದು ಪ್ರೇಮ
ಪಡೆದುಕೊಳ್ಳುವುದು,
ಕಳೆದುಕೊಳ್ಳುವುದರಾಚೆಗೂ ನನ್ನೊಳಗುಳಿದಿದೆ,
ನನ್ನೂ ಉಳಿಸಿಕೊಂಡಿದೆ ಎನಿಸುತ್ತದೆ...

ಇಲ್ಲಿನ ನೋವು ನಲಿವು
ಸಂಕಟ ಸಂಭ್ರಮ
ಪ್ರೇಮ ಕೊನೆಗೆ ನಿರಾಕರಣೆ
ಎಲ್ಲವೂ ನನ್ನವು ಮಾತ್ರ?

ಹಾ...
ಬದುಕ ಸಂಭ್ರಮಿಸಿದಂತೆ
ಸಾವಿಗೆ ಸಿದ್ಧಗೊಳ್ಳುತ್ತಿದ್ದೇನೆ
ಕನಸ ಕಸುವು ತುಂಬಿದ
ಅವನ ಕಾರುಣ್ಯದ ಕಣ್ಣುಗಳಲ್ಲೀಗ
ನನ್ನ ಕೊನೆ ಕಾಣುತ್ತಿದೆ..
ಉಸಿರಿಗಿಳಿದ ಧ್ವನಿ ನಿಶ್ಯಬ್ಧದಲಿ
ನನ್ನ ಉಸಿರುಗಟ್ಟಿಸುತ್ತದೆ
ಪ್ರೇಮದಂತೆ ಸಾವೂ ನೋವು ನನ್ನವೆಂದುಕೊಂಡವಳ
ಬಿಡುಗಡೆಗೆ ಅವನ ಮೌನಗಳ ಸಹಿಯಿದೆ...
ಕೊಟ್ಟ ಬದುಕು ಮರಳಿಸುವುದೆಂದರೆ
ಋಣಮುಕ್ತಳಾಗುವುದು?
ನಿಜ..ಕೊಟ್ಟ ಈ ಬದುಕ ಮರಳಿಸುವುದೆಂದರೆ
ಋಣಮುಕ್ತಳಾಗುವುದು..

# ಜೋಗಿ

**❖ ಗಿರೀಶ್ ಹಂದಲಗೆರೆ**

ಮಣ್ಣು ಮುಗಿಲು ಅನ್ನ
ರೈತರ ಬದುಕು ಬವಣೆಗಳ
ಬಸಿದು ಹಾಡಾಗಿಸಿದೆ
ಕೇಳಿದರ ನೀವು ಗೌಡ್ರೇ

ಬುದ್ಧ ಅಂಬೇಡ್ಕರ್
ಖೈರ್ಲಾಂಜಿ ಕಂಬಾಲಪಲ್ಲಿ
ಕ್ರೌರ್ಯ ಕಥನವ ಚಿತ್ರಿಸಿದೆ
ನೀನು ದಲಿತನೇ
ಎಂದು ದೂರ ನಿಂತರು

ಗಾಂಧಿಯ ಸಾವ ಸಂಭ್ರಮಿಸಿ
ಗೋಡ್ಸೆಗೆ ಗುಡಿಕಟ್ಟ ಹೊರಟಿರುವ
ದೇಶ ಭಕ್ತರ ಚಡ್ಡಿಯ ಬಣ್ಣವ ಬರೆದೆ
ಭ್ರೂಣ ಬಗೆದಿದ್ದ ತ್ರಿಶೂಲ ತೋರಿಸಿ
ಕೇಳಿದರು ನೀನು ಲೆಫ್ಟಿಸ್ಟಾ ದೇಶ ಬಿಟ್ಟು ತೊಲಗು

ಮೆಕ್ಕಾ ಮದೀನಾಕ್ಕೆ
ನೆತ್ತರ ಹೊಳೆ ಹರಿಸುತ್ತಿರುವ
ಜಿಹಾದಿಗಳ ಹಿಂಸೆಯನು
ಬುರ್ಖಾದೊಳಗಿನ ಕತ್ತಲೆಯನ್ನೂ
ಖಂಡಿಸಿದೆ ಗಡ್ಡ ನೀವಿಕೊಂಡು

ಕೇಳಿದರು ನೀನು ಚಡ್ಡಿಯಾ
ನನ್ನ ತಲೆಗೆ ಹತ್ತು ಲಕ್ಷ ಬೆಲೆ ಕಟ್ಟಿದರು

ಬಡತನ ಹಸಿವು
ಕೂಲಿ ಕಾರ್ಮಿಕರ ಬೆವರು
ಧಣಿಗಳ ದರ್ಪ
ಕೂಲಿ ಕದ್ದ ಕುಲದ ಬಗ್ಗೆ ಹಾಡಿದೆ
ಗುಡುಗಿದರು ನೀನು ಕಮ್ಯುನಿಸ್ಟಾ

ಬಯಲಾಗಿದ್ದ ದೇವರ
ಗುಡಿಯೊಳಗೆ ಬಚ್ಚಿಟ್ಟು
ಕಾಳಸಂತೆಯಾಗಿಸಿರುವ ದಂಧೆಯ ಬರೆದೆ
ನಾಸ್ತಿಕನಾ ನಾಶವಾಗಿಹೋಗು
ಎಂದು ಹಿಡಿಶಾಪ ಹಾಕಿದರು

ರಕ್ತ ಕ್ರಾಂತಿಯ ಖಂಡಿಸಿ
ಸತ್ಯ ಅಹಿಂಸೆ ಶಾಂತಿ ಚಳುವಳಿಯ
ಮೌಲ್ಯವ ನೆನಪಿಸಿದೆ
ನಕ್ಕರು ನೀನು ಗಾಂಧಿಯೋ

ಭಾರತದ ಸನಾತನ ಸಂಸ್ಕೃತಿ
ಧ್ಯಾನ ಯೋಗ ದರ್ಶನ ಕುರಿತು ಬರೆದೆ
ಹೆಗಲ ಮೇಲೆ ಕೈ ಹಾಕಿ ಏನನ್ನೋ ತಡಕುತ್ತಾ
ಕೇಳಿದರು ಓ ! ನೀವು ನಮ್ಮೋರಾ

ಧರ್ಮ ಸೂತಕವಾಗಿ
ದೇವರು ಸರಕಾಗಿ
ಜಾತಿ ಅಸ್ತ್ರ, ವಿವಸ್ತ್ರವಾಗಿ
ಗಾಂಧಿ ನಗೆಪಾಟಲಾಗಿ
ಬುದ್ಧ ಕೇವಲ ಸಂಕೇತವಾಗಿರುವ

ಸತ್ಯೋತ್ತರ ದುರಿತಕಾಲದಲ್ಲಿ
ಸುಮ್ಮನಿರುವುದು ಸುಮ್ಮಾನ

ದಡಕೆ ಸಿಗದ ನದಿಯಂತೆ
ಹಲವು ಬಣ ಬಣ್ಣ ಚೌಕಟ್ಟುಗಳ ದಾಟಿ
ಮೂರನೇ ದಡ ಅರಸಿ ಹೊರಟ ಬಯಲ ಜೋಗಿ
ಎದೆಯ ಕಣ್ಣಿಲ್ಲದವರ ಮೆಚ್ಚಿಸುವುದುದೆಂತು
ಕಳಚಲಾಗದ ಬೆತ್ತಲುಗಳ ಬಯಲು ಮಾಡುವುದು ಹೇಗೆ?
ಖಾಲಿಯಾಗದ ಗಡಿಗೆಯ ತುಂಬುವುದಾದರೂ ಹೇಗೆ?

# ಅಕ್ಕನ ಮೊಹೆಂಜೋದಾರೋ

❖ **ಶ್ರುತಿ ಬಿ.ಆರ್.**

ನಮ್ಮ ದೇಶದಲ್ಲೇ ನಡೆದಿದ್ದಂತೆ ಕಣೇ
ತುಂಬಾ ಮುಂದುವರಿದ ಜನರಿದ್ದರಂತೆ,
ದೊಡ್ಡ ದೊಡ್ಡ ನಗರಗಳಿದ್ದವಂತೆ,
ಈಗಿನದಕ್ಕಿಂತಾ ಒಳ್ಳೆ ರಸ್ತೆಗಳು
ಒಳ್ಳೊಳ್ಳೆ ಮನೆ ಕಟ್ಟಿದ್ದರಂತೆ?
ಸಮಾಜ ಪುಸ್ತಕ ಹಿಡಿದು
ಆಶ್ಚರ್ಯದಿಂದ ನುಡಿದಳು ತಂಗಿ,

ಕಟ್ಟಿದರೆ ಏನೀಗ ಕಟ್ಟಿಕೊಳ್ಳಲಿ ಬಿಡೇ
ನಮಗೇನಾಗಬೇಕು,
ನಿರುತ್ಸಾಹಿ ಅಕ್ಕನ ಎಂದಿನ ಉತ್ತರ

ಮತ್ತೆ ನುಡಿದಳು ತಂಗಿ,
ಜನರೆಲ್ಲಾ ವ್ಯಾಪಾರ ಮಾಡ್ತಿದ್ದರಂತೆ
ಬೇರೆ ಬೇರೆ ದೇಶದ ಜೊತೆಗೂ
ತುಂಬಾ ಬುದ್ದಿವಂತರಿರಬೇಕು.
ಆಗಿನ ಮನೆ, ಕೊಳ, ರಸ್ತೆ ಎಲ್ಲಾ
ಮಣ್ಣು ಅಗೆದಾಗ ಸಿಕ್ಕಿತ್ತಂತೆ ಕಣೇ ಅಕ್ಕಾ
ಕಂಚಿನ ಮೂರ್ತಿ, ಮಡಿಕೆಗಳು,
ಹೆಂಗಸರ ಒಡವೆಗಳು, ಇನ್ನೂ ಏನೇನೋ?

ಹೌದಾ! ಒಡವೆಗಳು ಸಿಕ್ಕಿದೆಯಾ?
ಆಗ ಹೆಂಗಸರು ಹೇಗಿದ್ದರಂತೆ?
ಏನು ಮಾಡುತ್ತಿದ್ದರಂತೆ?

ಅದೆಲ್ಲಾ ಈ ಪುಸ್ತಕದಲ್ಲಿಲ್ಲ ಕಣೇ ಅಕ್ಕಾ
ನೀನು ಏನೇನೋ ಕೇಳುತ್ತೀ
ಎಂದು ಮುಖ ಗಂಟಿಕ್ಕಿದಳು ತಂಗಿ

ಇನ್ನೇನು ಅಡಿಗೆಯೋ ಮನೆಗೆಲಸವೋ ಮಾಡಿರಬೇಕು,
ಮತ್ತೆ ಮುಟ್ಟು, ಬಸಿರು, ಚುಚ್ಚು ಮಾತು
ಅದು ಹೆಂಗಸರಿಗೇನೆ ಆಗಲೂ–ಈಗಲೂ,
ಬಿಡು ಅಪ್ಪನೋ, ಗಂಡನೋ ಹೇಳಿದಂತೆ
ಕೇಳಿಕೊಂಡು, ಆ ಒಡವೆಗಳೆಲ್ಲ ಹೇರಿಕೊಂಡು
ಮನೆಯಲ್ಲಿ ಬಿದ್ದಿದ್ದಾಳು ಅವಳೂ ಸಹ?

ಅದೆಲ್ಲಾ ಇಲ್ಲಕ್ಕ ಪುಸ್ತಕದಲ್ಲಿ ಎನ್ನುತ್ತಾ
ಅಕ್ಕನ ನಿಟ್ಟುಸಿರು ಅರ್ಥವಾಗದೆ ತಂಗಿ,
ಪಿಳಿ ಪಿಳಿ ಕಣ್ಣುಬಿಟ್ಟಳು?

ಇರಬಹುದು ಅಕ್ಕನಂತದ್ದೇ ನಿಟ್ಟುಸಿರು,
ಆ ಒಡವೆಗಳ ತೊಟ್ಟಿದವಳದೂ?
ಅದೆಲ್ಲಾ ಯಾವ ಲೆಕ್ಕ ಬಿಡಿ,
ತನ್ನ ಇಕ್ಕೆಲಗಳಲ್ಲಿ ಮಹೋನ್ನತ
ಜನಪದವೊಂದು ತಲೆಯೆತ್ತಿ ಮೆರೆದು
ಕಾಲನ ಪ್ರವಾಹದಲ್ಲಿ ಅವಶೇಷವಾದುದ
ಕಂಡಮೇಲೂ ಎಂದಿನಂತೆ ಹರಿವ
ಸಿಂಧೂಳ ನಿರ್ಲಿಪ್ತ ನಡಿಗೆಗೆ?

# ಪ್ರೀತಿಯ ಮೀಸಲಾತಿ

**❖ ಪಿ. ಡಿ. ಸತೀಶ್ ಚಂದ್ರ**

ಹಿಂದುಳಿದ ಮನಸ್ಸಿಗೆ ಏನೇನೋ ಮೀಸಲಾತಿ...
ಪ್ರೀತಿ ಹೇಳದೆ ಬರುವುದಿಲ್ಲ
ಕೇಳದೆ ಬರುವುದಲ್ಲ
ಕೇಳಿದರೆ ಕನಸಾಗುವ ಕಳವಳ
ಅಕ್ಕಸ್ಮಾತಾಗಿ ಒಪ್ಪಿದರೆ ಕೈಗೆಟುಕುವ ಹಂಬಲ
ಬೇಡದೇ ಬರುವ ಸಾಧ್ಯತೆ ಕಡಿಮೆ
ಬೇಡಿದರೆ ಸಿಗುವ ಸಾಧ್ಯತೆ ಇನ್ನೂ ಕಡಿಮೆ
ಇದೇನು ಬೇಡ ಎಂದರೆ ಪ್ರೀತಿಗೆ ಸಿಗುವ ಮೀಸಲಾತಿ
ಬೇರೆಯ ಮೀಸಲಾತಿಯ ಹಾಗೆ ನೆಪಮಾತ್ರ ಆಗುವುದೇ?

ಬರಲಿ ಸಣ್ಣ ಪ್ರವಾಹದ ನೀರು
ಬಿಡಲಿ ಹರೆಯದ ಯೌವನದ ಮುಂಗಾರು
ಸೇರುವ ಎಲ್ಲರ ಹರಕೆಯ ಹಾಗೆ
ನಾನು ನೀನು ಆನೂ ತಾನು

ಇಚ್ಛಿಸುವ ಪ್ರೀತಿ ದೊರಕದಿದ್ದರೂ ಹಸಿರು
ತೋರಿದ ಪ್ರೀತಿ ತಲುಪಿದರೆ ಸಾಕು
ಸಿಕ್ಕರೆ ಸ್ವರ್ಗ ಸಿಗದಿದ್ದರೆ ಮತ್ತೆ ಮುಂಗಾರು
ಮಳೆ ಸುರಿದಾಗ ತುಂಬುವುದು ಏರಿ
ಇಂದಲ್ಲ ನಾಳೆ ಬೇಡವಾಗಬಹುದು
ಪ್ರೀತಿಯ ಮೀಸಲಾತಿ

ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.

**– ಕುವೆಂಪು**

# ಅನುಸಂಧಾನ–೨

# ಕೆಂಡದ ಹೊಂಡ ಹಾಯುವ ಮುಗುಳುಗಳು

❖ **ಪ್ರೊ. ಟಿ. ಯಲ್ಲಪ್ಪ**

ಕಾವ್ಯಗಾರುಡಿ ಕಿರಂ ಸ್ಮರಣೆಯ 'ಕಾಡುವ ಕಿರಂ' ಅಹೋರಾತ್ರಿ ಕಾವ್ಯನಮನ ಕಾರ್ಯಕ್ರಮ ಕನ್ನಡ ಕಾವ್ಯರಸಿಕರ ಪಾಲಿನ ಕಾವ್ಯಸಂಭ್ರಮದ ಹಬ್ಬವಾಗಿ ರೂಪುಗೊಂಡಿದ್ದು ನಾಡಿನ ಎಲ್ಲ ಭಾಗದ ಹಿರಿ–ಕಿರಿ ಕವಿಗಳ ಸಮ್ಮಿಲನ, ಕಾವ್ಯವಾಚನ, ಕಾವ್ಯಾನುಸಂಧಾನ, ಕಾವ್ಯ ಗಾಯನಗಳ ಮೂಲಕ ಕನ್ನಡ ಕಾವ್ಯೋತ್ಸವದಲ್ಲಿ ಇದೊಂದು ಅವಿಸ್ಮರಣೀಯ ಘಟನೆಯೇ ಸರಿ.

ಈ ಸಲದ ಕಾಡುವ ಕಿ.ರಂ ಅಹೋರಾತ್ರಿ ಕಾವ್ಯಾನುಸಂಧಾನದ ಗೋಷ್ಠಿ ಎರಡರ ಅನುಸಂಧಾನ ನನ್ನ ಪಾಲಿಗೆ ಒದಗಿದ್ದು ನನಗೆ ಸಂತಸದ ಸಂಗತಿ. ನಾಡಿನ ಇಪ್ಪತ್ತು ಕವಿಗಳು ಈ ಅನುಸಂಧಾನದಲ್ಲಿ ನನ್ನೊಡನೆ ಭಾಗವಹಿಸಿ ವಾಚಿಸಿದ ಇಲ್ಲಿನ ಕವಿತೆಗಳು ಮಹಿಳಾ ಅಸ್ಮಿತೆ, ಲಿಂಗತಾರತಮ್ಯತೆ, ಮತೀಯತೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ, ಸಮಕಾಲೀನ ಜಗತ್ತಿನ ಅನೇಕ ತಲ್ಲಣಗಳಿಗೆ ತಮ್ಮ ಕವಿತೆಯ ಮುಖಾಂತರ ಧನಿಯಾಗಿದ್ದಾರೆ. ಇಲ್ಲಿನ ಬಹಳಷ್ಟು ಕವಿತೆಗಳಲ್ಲಿ ವಸ್ತು ವೈವಿಧ್ಯತೆ ಇದ್ದರೂ ವಸ್ತುವಿನ ನಿರ್ವಹಣೆ, ಕಸುಬುಗಾರಿಕೆ, ಭಾಷೆಯನ್ನು ಬಳಸುವಲ್ಲಿನ ಸಂಯಮದ ಕೊರತೆ, ಪರಂಪರೆಯೊಡಗಿನ ಅನುಸಂಧಾನದ ಕೊರತೆ, ವಾಚಾಳಿತನಗಳೇ ಮೇಲುಗೈಯ್ಯಾಗಿರುವ ಕವಿತೆಗಳೂ ಇಲ್ಲಿ ಇಲ್ಲದೆ ಇಲ್ಲ.

ಈಗಾಗಲೇ ಕಾವ್ಯದ ಕಸುಬಿನಲ್ಲಿ ಪಳಗಿರುವ ಖ್ಯಾತ ನಾಮರ ಕವಿತೆಗಳೂ ಈ ಅನುಸಂಧಾನದಲ್ಲಿವೆ ಈ ಎರಡೂ ತಲೆಮಾರಿನ ಕವಿಗಳ ಇಂತಹ ಮುಖಾಮುಖಿಗಳಿಂದಲೂ ಕನ್ನಡ ಕಾವ್ಯದ ಭವಿತವ್ಯದ ದಿನಗಳು ಉಜ್ವಲವಾಗಿ ಬೆಳಗೀತೆಂಬುದು ಕೂಡಾ ಈ ಅನುಸಂಧಾನದ ಉದ್ದೇಶವೂ ಆಗಿರುವುದು ಈ ಗೋಷ್ಠಿಯ ಮಹತ್ವವನ್ನು ವೇದ್ಯವಾಗಿಸಬಲ್ಲದು.

## ಖಾದಿ ತೊಟ್ಟ ಕವಿತೆ

### ❖ ಚಂಸು ಪಾಟೀಲ

ಈ ಗೋಷ್ಠಿಯ ಮೊದಲ ಕವಿತೆ ಚಂಸು ಪಾಟೀಲರ 'ಖಾದಿ ತೊಟ್ಟ ಕವಿತೆ' ಕವಿ ತನ್ನ ಕವಿತೆಯ ಹಠಕ್ಕೆ ಮಣಿದು ಖಾದಿ ಜುಬ್ಬಾ ಪೈಜಾಮ ತೊಡಿಸಿದ ಕೂಡಲೆ ಅದಕ್ಕೆ ರಾಜಕೀಯ ಪುಢಾರಿಯ ಎಲ್ಲ ತೆವಲು ಮೈಹತ್ತಿಕೊಳ್ಳುತ್ತೆ. ಸಾವಿನ ಮನೆಗೆ ಹೋಗಿ ಸಾಂತ್ವನದ ನಾಟಕ ಮಾಡಿ ಅವರ ಕೈಗೆ ಗರಿಗರಿ ನೋಟು ಕೊಡುವ, ದೇವರ ಗುಡಿಯ ಜೀರ್ಣೋದ್ಧಾರಕ್ಕೆ ನೋಟು ಕೊಟ್ಟು ನಮಸ್ಕರಿಸುವ ಈ ರೂಪಾಂತರಿ ಕವಿತೆ, ಸರ್ಕಾರಿ ಶಾಲೆಗೆ ಶಿಕ್ಷಕರಿಲ್ಲ ಎಂಬ ಬೇಡಿಕೆಗೆ ಊರಿಗೆ ರಸ್ತೆ ಬೇಕು, ಆಸ್ಪತ್ರೆ ಬೇಕೆಂದವರ ವಿರುದ್ಧ ಎಗರಾಡುತ್ತದೆ. ಆದರೆ ಅದರ ಅನುಯಾಯಿಗಳು ಬಂದ ಕೂಡಲೆ ಬಾಯಿ ತುಂಬಾ ಬೆಣ್ಣೆ ಮಾತಾಡಿ ಯಣ್ಣಾ, ಯಪ್ಪಾ ಎನ್ನುತ್ತಾ ಅವರ ಸಲುವಾಗಿಯೇ ಜನ್ಮವೆತ್ತಿದ ಅವತಾರ ಪುರುಷನ ಪೋಸು ಕೊಟ್ಟು ರೀಲು ಬಿಡಲು ಶುರುವಿಟ್ಟುಕೊಳ್ಳುತ್ತದೆ.

ಕವಿ ಅದನ್ನು ಮನೋವೈದ್ಯರ ಬಳಿ ಕರೆದೊಯ್ದರೆ ಅವರು 'ಶಕುನಿ ಮೇನಿಯಾ' ಎಂಬ ವಾಸಿಮಾಡಲಾಗದ ಮನೋರೋಗ ಬಂದಿದೆ ಎನ್ನುತ್ತಾನೆ. ಮಾಟಗಾರ ಇದಕ್ಕೆ 'ಖಾದಿ ದೆವ್ವ' ಹಿಡಿದಿದ್ದು ಅದನ್ನು ಬಿಡಿಸುವುದು ಅಸಾಧ್ಯ ವೆನ್ನುತ್ತಾನೆ. ಕವಿ ಜನರ ಮಧ್ಯೆ ಆ ಕವಿತೆಯನ್ನು ನಿಲ್ಲಿಸಿ ಅದರ ಮೈಮೇಲಿನ ಖಾದಿ ಬಟ್ಟೆ ಕಳಚಿ ಬೆಂಕಿಗೆ ಹಾಕಿ ಸುಟ್ಟ ಮೇಲೇಯೇ ಕವಿತೆ ಮೊದಲಿನಂತೆಯೇ ನಿರಾಭರಣ ಸುಂದರಿಯಾಯಿತೆಂದು ಕವಿ ನಿಟ್ಟುಸಿರುಬಿಡುತ್ತಾನೆ. ಹೀಗೆ ಪ್ರಭುತ್ವದ ಸೋಂಕಿರಲಿ, ಅವರ ಪೋಷಾಕಿನಲ್ಲಿಯೂ ಅವರದೆ ವ್ಯಕ್ತಿತ್ವದ ಚಹರೆಗಳು ತುಂಬಿವೆ ಎಂಬ ವಿಡಂಬನೆಯೊಂದಿಗೆ ಪುಢಾರಿ ರಾಜಕಾರಣಿಗಳು ತೊಟ್ಟು ಮೆರೆವ ಖಾದಿಯಿಂದಾಗಿ ಖಾದಿಯೂ ಕೂಡಾ ತನ್ನ ಪಾರಂಪರಿಕ ಮೌಲ್ಯವನ್ನು ಕಳೆದುಕೊಂಡು ಅದನ್ನು ತೊಟ್ಟ ಕವಿತೆಗೂ ಅದೇ ಗುಣ ಸೋಂಕಿನ ಹಾಗೆ ಅಂಟಿಕೊಂಡಿತೆಂಬ ವಿಡಂಬನೆ ಕವಿಯದು.

## ಫ್ರಾನ್ಸ್ ಮತ್ತು ಕಾವ್ಯ

### ❖ ದಯಾನಂದ

ಈ ಕವಿತೆಯಲ್ಲಿ ಕಾವ್ಯವನ್ನು ಆಸ್ವಾದಿಸುವುದಕ್ಕೆ ಬೇಕಾಗಿರೋದು ಬದುಕನ್ನು ಆಸ್ವಾದಿಸುವ ತೀವ್ರತೆಯೇ ಹೊರತು ವ್ಯಾಕರಣ ಮತ್ತು ಕಾಗುಣಿತದ ಪರಿಶುದ್ಧತೆಯಲ್ಲ. ಬೋದಿಲೇರ್‌ಗೆ ಅಗಾಧವಾದ ಜೀವನ ಪ್ರೇಮ ಮತ್ತು ಸತ್ಯದ

ಹೊಗೆ ಮುಸುಕಿನಲ್ಲಿ ಮುಚ್ಚಿ ಹೋಗಿರಬಹುದಾದ ಬದುಕಿನ ನಗ್ನ ಸತ್ಯ ಮತ್ತು ಸೌಂದರ್ಯಗಳನ್ನು ಕಾಣಲು ಬೇಕಾದ ಕಣ್ಣು ಮತ್ತು ಕಾಣ್ಕೆಗಳಿದ್ದವು. ಆದರೆ ಕವಿ ಫ್ರಾನ್ಸ್‌ಗೆ ಇದಾವುದೂ ಇರಲಿಲ್ಲ ಆತನಿಗೆ ಕಾವ್ಯದ ಪ್ರೀತಿಗೆ ಬದಲಾಗಿ ಭಯವೇ ತುಂಬಿಕೊಂಡಿದ್ದರಿಂದಾಗಿ ಇದಾವುದನ್ನು ಅವನಿಂದ ನಿರೀಕ್ಷೆ ಮಾಡಲು ಆಗುತ್ತಿರಲಿಲ್ಲ.

ಸೂಳೆಗೇರಿಗಳಲ್ಲಿ ಅಲೆಯುತ್ತಿದ್ದ ಬೋದಿಲೇರ್ ಜೀನ್ ದುವಾಳ ಎದೆ–ನಿತಂಬ–ತೊಡೆಗಳನ್ನು ಕಂಡು ಮೋಹಗೊಂಡಿದ್ದ ಅದು ಜೀನ್ ದುವಾಳಿಗೆ ಹಿಡಿಸದೆ ಅವನನ್ನು ದ್ವೇಷಿಸತೊಡಗಿದಳು. ಗಂಡು ಹೆಣ್ಣುಗಳು ಹೀಗೆ ದೈಹಿಕ ಮಿಲನಕ್ಕಾಗಿ ಹಾತೊರೆಯುವುದು ಜೀವವಿಕಾಸದ ತುಡಿತವೇ ಹೊರತು 'ಪಾಪದ ಹಣ್ಣು' (Fruit of sin)ಗಾಗಿ ಆಗಲಿ ಅಲ್ಲ. ಪಾಪದ ಹೂಗಳ ಸಲುವಾದ ಲೋಲುಪ ಬಯಕೆಗಾಗಿಯೂ ಅಲ್ಲ ಎಂಬುದು meterialisticಗಳಾದ ಕವಿ ಫ್ರಾನ್ಸ್ ಹಾಗೂ ಜೀನ್ ದುವಾಳಿಗಾಗಲಿ ಅರ್ಥವಾಗದೆ ಹೋದದ್ದು ಮಾತ್ರ ಬೋದಿಲೇರ್ ಪಾಲಿನ ದುರಂತವೇ ಸರಿ ಎಂಬುದನ್ನು ಈ ಬೋದಿಲೇರ್ ಕವಿತೆಯಲ್ಲಿ ವಿಷಾದಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

## ಹುತ್ತಗಟ್ಟಬೇಕು

### ❖ ಸುಜಾತ ಲಕ್ಷ್ಮೀಪುರ

ಈ ಕವಿತೆಯ ಪ್ರಾಯದ ತಾಯಿಗೆ ತನ್ನ ಒಡಲಲ್ಲಿ ಆಡುವ ಹಸಿದ ಕಂದನಿಗೆ ಒಡಲು ತುಂಬಿಸುವ ಇರಾದೆ. ತಾಯಿಯಾಗಿ ಅದು ಅವಳ ಕರ್ತವ್ಯವೂ ಹೌದು, ಬದ್ಧತೆಯೂ ಹೌದು. ದುರಂತವೆಂದರೆ ಅವಳೂ ಹಸಿದವಳೇ. ಅದಕ್ಕಾಗಿ ಉರಿಯದ ಉರುವಲ ಒಲೆಗಿಕ್ಕಿ ಒಲೆ ಹತ್ತಿಸಲು ಅವಳು ಪಟ್ಟ ಪ್ರಯತ್ನ ವಿಫಲಗೊಂಡು ಬೂದಿ ಮೈಮೇಲೆ ಸಿಡಿದದ್ದೇ ಬಂದ ಭಾಗ್ಯ. ಒಲೆ ಉರಿಯಲಿಲ್ಲ. ಅನ್ನ ಬೇಯಲಿಲ್ಲ. ಆಕಾಶದಲ್ಲಿ ಹಾರುವ ಹದ್ದುಗಳು, ಗದ್ದೆ ಬಯಲಿನಲ್ಲಿ ಪೊರೆಬಿಟ್ಟ ಹಾವುಗಳ ನದರು ತಪ್ಪಿಸಿ, ಸೊಂಟ, ಮೀನಖಂಡಗಳ ಮರೆ ಮಾಡಿದ್ದೇ ಬಂತು. ಒಡಲ ಒಳಗೆ ಆಡುವ ಯೌವ್ವನದ ಹಸಿವಿಗೂ ಅನ್ನ ಸಿಗಲಿಲ್ಲವೆಂಬಲ್ಲಿಗೆ... ಒಡಲು ಗೊಂಡವಳ ಇಬ್ಬಗೆಯ ಹಸಿವಿನ ಪರಿಯನ್ನು ಮಾರ್ಮಿಕವಾಗಿ ಹೇಳಲಾಗಿದೆ.

## ಏಕಾಂಗಿ ಬಿಳಿಯ ಪಾರಿವಾಳ

### ❖ ರಾಜೇಶ್ ಮಳವಳ್ಳಿ

ಈ ಕವಿತೆಯ ನಾಯಕ ಹಿಂಸೆಯ ತಾಳಕ್ಕೆ ಮಿಡಿಯುತ್ತಿರುವ ಜಗದಲ್ಲಿ ಪ್ರೇಮದ ಬೀಜ ಬಿತ್ತುವ ಉಮೇದಿನಿಂದ ಹೊರಟು ಒಂದೆರಡು ಬೀಜ ನೆಟ್ಟು,

ಅವು ಮೊಳೆಯದೇ ಹೋದಾಗ, ರಕ್ತವನ್ನೇ ಉಂಡುಟ್ಟು ಹಸಿದ ನೆಲಕ್ಕೆ ಪ್ರೇಮದ ಚಿಗುರೊಡೆಸುವ ಶಕ್ತಿಯಿಲ್ಲದೆ ಭತ್ತ, ಗೋಧಿಯ ತೆನೆಯಲ್ಲೂ ಬಾಂಬಿನ ಕಾಳನ್ನು, ಗುಲಾಬಿಯ ಎಸಳಲ್ಲೂ ನೆತ್ತರು ಒಸರುವುದನ್ನು ಕಂಡು ವಿಷಾದಿಸುತ್ತಾನೆ. ಆದರೆ ಈ ರಕ್ತಬೀಜಾಸುರರ ಭೂಮಿಯಲ್ಲಿ ಪ್ರೇಮದ ಬಿತ್ತನೆಗೆ ತೊಡಗಿದ ಮಹಾನ್ ಮಾನವ ಪ್ರೇಮಿ ಗೌತಮ ಬುದ್ಧನಿಗೂ ಸಹಸ್ರ ವರ್ಷಗಳ ಹಿಂದೆ ದೊರೆತದ್ದೂ ಇದೆ ಫಲಿತಾಂಶವೇ. ಆದರೂ, ಹಿಂಸೆಯ ವಿರುದ್ಧದ ಈ ಪ್ರಯತ್ನವು ಜಗತ್ತು ಅಹಿಂಸೆಯ ಬೆಳಕು ಕಾಣುವ ತನಕ ಸಾಗುತ್ತಲೇ ಇರಬೇಕು.

ಯುದ್ಧಭೂಮಿಯಲ್ಲೂ ಹಗೆಯ ಮನಸನ್ನು ತಿಳಿಯಾಗಿಸುವ ಶಾಂತಿಯ ಪಾರಿವಾಳಗಳೂ ಹಾರಾಡಬೇಕು ಹಾರಿಬಿಡುತ್ತಿರಲೇಬೇಕು ಎಂಬ ಆಶಯ ಕವಿಯದು.

## ಪದಬಂಧ

### ❖ ಡಾ. ಲಕ್ಷ್ಮಣ್ ವಿ. ಎ

ಬೇರೆ ಯಾರೊ ಅರೆಬರೆದು ಇಟ್ಟ ಪದಬಂಧಕ್ಕೆ ಪದ ಹುಡುಕಲು ಹೊರಟ ಕವಿ ಶಕುಂತಲೆಯ ಮೂರಕ್ಷರದ 'ಉಂಗುರ' ಪದದಿಂದ ಹಿಡಿದು ಎರಡಕ್ಷರದ 'ಭಾರ' ಕಾಯ, 'ಕೂಗು', 'ತೇಗು'ಗಳ ಮೂಲಕ ಹಸಿದವರ ಬವಣೆ, ಉಳ್ಳವರು ಇಲ್ಲದವರ ಮೇಲೆ, ಬಂಡವಾಳಶಾಹಿಗಳು ಕೂಲಿ ಕಾರ್ಮಿಕರ ಮೇಲೆ ನಡೆಸುವ ಸವಾರಿಯ ಪರಿಯನ್ನೂ ಧ್ವನಿಸುತ್ತಾರೆ. ಕವಿ ಯಾವುದೋ ಮೈಮರೆವಿನಲ್ಲಿ ಕಳೆದುಕೊಂಡ ಮೌನ ಯಾರದೋ ಶಾಪಕ್ಕೆ–ಇನ್ನಾರದೋ ಬಲಿ, ಯಾರದೋ ಋಣಭಾರಕ್ಕೆ ಹೆಗಲು ಕೊಡುವ ಅಮಾಯಕರು ಹೀಗೆ ಎಲ್ಲರೂ ಇಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಕಳೆದು ಹೋದದನ್ನು ಹುಡುಕುವವರೆ, ಜೊತೆಗೆ ಕಳೆದು ಹೋದವರ ನೆರಳುಗಳನ್ನು ಹುಡುಕುತ್ತಿರುವವರೆ. ಹೊಂದಿಕೆಯಾಗದ ಜಗದಲ್ಲಿ, ಹೊಂದಿಕೆಯಾಗುವ ಪದಕ್ಕಾಗಿ ಹುಡುಕಾಡುವ ಪದಬಂಧದ ಆಟದಂತೆ ಕೊಟ್ಟು ಮರೆತವನು ಕಲ್ಲಾಗಿ ಮೇಲೆ ಕುಳಿತಿರಲು, ಮೂರು ಲೋಕ ಸುತ್ತುವ ನಿನಗೆ ಎರಡಕ್ಷರದ ಪದಕ್ಕಾಗಿ ದಮ್ಮಯ್ಯ–ಕರುಣಿಸೆಂದು ಹಲುಬುವ ಕವಿ, ಈ ಎಲ್ಲ ನೊಂದವರಿಗೆ, ಬೆಂದವರಿಗೆ, ಕಳೆದುಕೊಂಡವರಿಗೆ ಕಳೆದು ಹೋದವರಿಗೂ ಬೇಕಾದ ಆ ಎರಡಕ್ಷರದ ಪ್ರೀತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ ವಿನೂತನವಾದ ಪದಸಂಬಂಧದ ಪರಿಭಾಷೆಯಲ್ಲಿ ನಿರೂಪಿಸಿದ ಕವಿತೆ.

## ಚಿಲ್ಲರೆ ಪದ್ಯ

**❖ ನಾಗರಾಜ್ ಕೋರಿ**

ಈ ಕವಿತೆಯ ನಾಯಕನದು ವಿಕ್ಷಿಪ್ತ ಮನಸ್ಥಿತಿ ಅದು ಅವನೊಳಗನ್ನೂ ಬಾಧಿಸಿದೆ. ಅವನು ತನ್ನ ಸತ್ವ ಹಾಗೂ ಸತು ಎರಡನ್ನೂ ಪರೀಕ್ಷಿಸಿಕೊಂಡು ಅಸ್ವಸ್ಥ ನಾಗಿದ್ದಾನೆ. ಅವಳ ಸಲುವಾಗಿ ಇವನು ಹಂಬಲಿಸಿ ಕೂಡಿದ್ದೂ ಬದುಕಿನ ಸಾರ್ಥಕ ಗಳಿಗೆಯಾಗಲಿಲ್ಲವೆಂಬ ಅಸಹನೆ ಮತ್ತು ಅಳವಂಡಗಳನ್ನು ನೀಗಿಕೊಂಡು ಕೈಚಾಚಿದ ಆದರ್ಶಗಳ ಹಿಂದೆ ಬಿದ್ದು ಭ್ರಮನಿರಸನಗೊಂಡು ದೇವರು–ಧರ್ಮ, ಅಲ್ಲಾ–ಮುಲ್ಲಾ, ಕೊಳ್ಳಿದೆವ್ವ, ನಾಳೆಯ ಬಜೆಟ್ಟು, ಅವಳ ಮುಟ್ಟಿನ ಸ್ರಾವ, ಫೇಸ್ ಬುಕ್, ಇನ್‌ಸ್ಟಾಗ್ರಾಮ್, ಎಲ್ಲೆಂದರಲ್ಲಿ ತನ್ನ ದಶಾವತರಾದ ಸಿಂಬಲ್ ಅಂಟಿಸಲು ಪಟ್ಟ ಹರಸಾಹಸ, ಎಲ್ಲೂ ಜಾಗವಿಲ್ಲದೆ, ಎಲ್ಲೂ ಸಲ್ಲದೆ, ಕೊನೆಗೆ ತನ್ನ ಅಪ್ಪ, ಅವ್ವನ ಸಮಾಧಿ, ಮಸಾರಿ ಹೊಲ, ಹುಂಚೆಮರ, ಕುರಿ, ಆಕಳು, ಊರ ಬಣವೆಗಳ ಚೆಲುವಿಗೆ ಮರಳಿ ಬರುವಲ್ಲಿಗೆ ಕಣ್ಣಿಗೆ ಬಿದ್ದ ಒಂದೇ ಒಂದು ಲೈಕ್ ಕಂಡು ಶಮನಗೊಳ್ಳುವ ನಾಯಕನ ವಿಕ್ಷಿಪ್ತತೆ, ಆಧುನಿಕ ಬದುಕಿನ ಮುಗಿವಿಲ್ಲದ ಬಯಕೆ ಮತ್ತು ಅತೃಪ್ತಿಗಳ ನಡುವಿನ ಸಂಘರ್ಷದ ಪರಿಯನ್ನು ಇಲ್ಲಿ ಕಾಣಬಹುದು.

## ಕಾಡುವ ಸಂತ

**❖ ಅನುಸೂಯ ಯತೀಶ್**

ಅನುಸೂಯ ಯತೀಶ್‌ರವರ ಈ ಕವಿತೆ ಗಾಂಧಿಯೋತ್ತರ ಭಾರತದಲ್ಲಿ ಗಾಂಧೀ ಪ್ರತಿಪಾದಿಸಿದ ಸತ್ಯ ಅಹಿಂಸೆಗಳಿಗೆ ಒದಗಿರುವ ದುಃಸ್ಥಿತಿಯನ್ನು ಗಾಂಧೀಜಿಯವರಿಗೆ ಮನನ ಮಾಡಿಸುವ ಸಲುವಾದ `Reporting' ಧಾಟಿಯಲ್ಲಿ ಕವಿತೆ ಸಾಗುತ್ತದೆ.

ಗಾಂಧೀ ಹಾಗೂ ಆತನ ತತ್ವಗಳನ್ನು ಆತ ಪ್ರತಿಪಾದಿಸಿದ ಸತ್ಯ, ಅಹಿಂಸೆ, ಶಾಂತಿ ತತ್ವಗಳನ್ನು ನಾವು ಶಿಲಾಫಲಕಗಳ ಮೇಲೆ ಕೆತ್ತಿಸಿದ್ದೇವೆ. ಗಾಂಧೀ ಪ್ರತಿಮೆ ಗಳನ್ನು ಪ್ರತಿಷ್ಠಾಪಿಸಿದ್ದೇವೆ. ನಮ್ಮ ಆಚರಣೆ ಆಡಂಬರಗಳಿಗೆ ಗಾಂಧಿಯನ್ನು ಸೀಮಿತಗೊಳಿಸಿ ನಮ್ಮ ನಡೆ–ನುಡಿಯಲ್ಲಿ ಗಾಂಧೀಜಿಯವರನ್ನು ಮರೆತೇ ಹೋಗಿರುವ ದುರಂತಕ್ಕಾಗಿ ಕವಿ ವಿಷಾದಿಸಿದ್ದಾರೆ.

ಗಾಂಧೀ ಕನಸಿನ 'ರಾಮರಾಜ್ಯ'ದ ಕನಸಿನ್ನೂ ನನಸಾಗದೆ ಹೋದದ್ದರ ಬಗ್ಗೆ, ವಿಷಾದಿಸುವ ಕವಿ, ಗಾಂಧೀಜಿಯವರೇನಾದರೂ ಮತ್ತೊಮ್ಮೆ ಇಲ್ಲಿ ಹುಟ್ಟಿ ಬಂದರೆ ತನ್ನ ತತ್ವಗಳಿಗೆ ಒದಗಿರುವ ದುಃಸ್ಥಿತಿಗೆ ಕಣ್ಣೀರು ಹಾಕುತ್ತಾ ಕೂರದೆ, ಈ ದೇಶ ಬದಲಾದ ಈ ಕಾಲಮಾನದಲ್ಲಿ ಭ್ರಷ್ಟಾಚಾರ ಮುಂತಾದವುಗಳನ್ನು ತೊಲಗಿಸಿ ಸತ್ಯ

ಪ್ರಾಮಾಣಿಕತೆಗಳನ್ನು ಮರುಸ್ಥಾಪಿಸುವ ಉದ್ದೇಶಗಳೊಂದಿಗೆ ಬರುವುದಾದರೆ ಬಾ ನಿನ್ನ ಹಳೆಯ ಸತ್ಯಾಗ್ರಹ ಅಹಿಂಸೆಯ ಅಸ್ತ್ರಗಳು ಈಗ ಮೊಂಡಾಗಿ, ಕೆಲಸಕ್ಕೆ ಬಾರದ ವಸ್ತುಗಳಾಗಿವೆ ಎಂಬ ವಿಡಂಬನೆಯನ್ನು ಹಾಗೂ ಗಾಂಧೀವಾದಕ್ಕೆ ಒದಗಿರುವ ದುಃಸ್ಥಿತಿಯನ್ನು ಕವಯಿತ್ರಿ ವಿಡಂಬಿಸಿದ್ದಾರೆ.

## ಚಿತ್ರಸಂತೆಯಲ್ಲಿ ಚದುರಿಬಿದ್ದ ಕನಸುಗಳು

**❖ ಶಿವಶಂಕರ ಸೀಗೆಹಟ್ಟಿ**

ಇಡೀ ಜಗತ್ತು ಮನುಷ್ಯನ ಕ್ರೌರ್ಯ ಹಿಂಸೆಗಳಿಗೆ ಸಿಕ್ಕಿ ಮತ್ತೆ ಮತ್ತೆ ತಲ್ಲಣಿಸುತ್ತಿರುವ ಈ ಗಳಿಗೆಯಲ್ಲಿ ನಮ್ಮ ಹೃದಯಕ್ಕೇ ಸುಫಾರಿ ಪಡೆದವರು ಅಲ್ಲಿ ಪಹರೆ ತಿರುಗುತ್ತಿದ್ದಾರೆಂಬ ಗುಮಾನಿ ಬಲಿತ ಈ ದಿನಗಳಲ್ಲಿ ಅವರಿಗೂ ಕರುಣಾಮೈತ್ರಿಯ ಆನಂದವನ್ನು ಹಂಚಲೇಬೇಕೆಂಬ ಇರಾದೆ ಕವಿಯದ್ದು.

ಬಯಲ ಮಾತೆಯ ಮಮಕಾರವ ಮರೆತು ಅವಳನ್ನು ದೋಚಿದ ಲೂಟಿಕೋರರಿಗೆ ಪ್ರಜ್ಞೆಯನ್ನು ಉಣಬಡಿಸುವ ಇರಾದೆ ಕವಿಯದ್ದು.

ತಾಯ್ನುಡಿಯ ಸೊಬಗ ಸಂಪದವನ್ನು ಮೆದ್ದವರೇ ಪರನುಡಿಯ ವ್ಯಸನದಲ್ಲಿ ಲೋಲುಪರಾದ ಅದೆಷ್ಟೋ ಪದಗಾರುಡಿಗರು ಅಧಿಕಾರದ ಗದ್ದುಗೆಗಳನ್ನೇರಿ ತಾಯ್ನುಡಿಯ ಬೆಳಕನ್ನು ನಂದಿಸುವ ದಂಧೆಕೋರರಿಗೆ ಅರಿವಿನ ದೀವಿಗೆಯನ್ನು ನೀಡುವ ಇರಾದೆ ಕವಿಯದ್ದು. ಉಳ್ಳವರ ಮೋಜು, ಮಸ್ತಿ, ಹಸಿದವರು ಅನ್ನದ ಆಹಾಕಾರಗಳ ನಡುವೆ ಕಂದಕ ಏರ್ಪಟ್ಟಿರುವ ಈ ಗಳಿಗೆಯಲ್ಲಿ ಹಸಿದವರಿಗೆ ಅನ್ನದ ಬಟ್ಟಲು ಹಿಡಿದು ನನ್ನಿಯ ಇರಾದೆ ಕವಿಯದು.

ಇಂತಹ ಮನವ ಕಾಡುವ ಚಿತ್ರಗಳ ಸಂತೆಯಲ್ಲಿ ಆತ್ಮವೇ ಭಗ್ನಗೊಂಡ ಕನ್ನಡಿಯ ಚೂರುಗಳಾಗಿ ಆ ಚೂರುಗಳ ತುಂಬೆಲ್ಲಾ ಛಿದ್ರಗೊಂಡಿರುವ ಚಿತ್ರಗಳ ಸೇರಿಸಿ ಒಂದು ಸುಸಂಗತ ಸ್ವಾಸ್ಥ್ಯ ಸಮಾಜದ ಚಿತ್ರವಾಗಿಸುವ ಇರಾದೆ ಈ ಕವಿತೆಯನ್ನು ಬರೆದ ಕವಿಯದ್ದು.

## ದಾರಿ ಇನ್ನೂ ದೂರ

**❖ ಎಡೆಯೂರು ಪಲ್ಲವಿ**

ಮತ್ತೆ ಮತ್ತೆ ನೋಯುವ ಹಲ್ಲಿಗೇ ಹೊರಳುವ ನಾಲಿಗೆಯಂತ, ಸ್ತ್ರೀ ಸಂವೇದನೆ, ಪುರುಷನನ್ನು ಒಳಗೊಳ್ಳುವ ಹಾಗೂ ಹೊರ ಹಾಯುವ ತನ್ನ ಮುಂದಿನ ಎರಡೂ ದಾರಿಗಳ ಆಯ್ಕೆಯಲ್ಲಿ ಅವಳಿಗೆ ಗಂಡಿನ ಆಯ್ಕೆ ಆಸರೆಗಾಗಿಯೋ? ಅಥವಾ

ಅವನ ಕರುಣೆಗಾಗಿಯೋ? ಎಂಬ ಅದೇ ಮೂಲಭೂತ ಪ್ರಶ್ನೆಗಳ ನಿಷ್ಕರ್ಷೆಯಲ್ಲೇ ತನ್ನ ಮುಂದಿನ ದಾರಿ ಮತ್ತು ಹೆಜ್ಜೆಗಳ ಆತ್ಮಾವಲೋಕನಕ್ಕೆ ತೊಡಗುತ್ತಿದ್ದಾಳೆ. ಈ ಆತ್ಮಾವಲೋಕನದಲ್ಲಿ ಕವಿತೆ ತನ್ನ ಕೂಸಿನಂತಹ ಚೆಂದದ ಕವಿತೆ, ಹೊಳಪು ಕಣ್ಣಿನ ಕವಿತೆ, ಕತ್ತಲೆಯ ಕೂಪದಿಂದ ಹೊರಬರಲಾರದೆ ಅವಿತು ಕೂತ ಕವಿತೆ/ತನ್ನ ಹೆಡೆ ಬಿಚ್ಚಿ ಬುಸುಗುಡಬೇಕೋ? ಇಲ್ಲವೇ ಹೆಡೆ ಮಣಿದು ಹೆಡಿಗೆಯಲ್ಲೇ ಮುದುರಿ ಕೊಂಡು ತನ್ನನ್ನು ಉಪಮಾನವಾಗಿಸಿಕೊಂಡು, ತನ್ನ ನೋವಿಗೆ ಮಿಡಿವವರಿಲ್ಲದೆ ತನ್ನ ಆತ್ಮ ಸಂಗಾತಿಯಾದ ಕವಿತೆಯೊಡನೆಯೇ ತನ್ನ ಒಡಲ ತೆರೆದಿಡುವ ಮೂಲಕ ಕವಯಿತ್ರಿ ಕಾವ್ಯಕ್ಕೆ ಮೊರೆಯಿಡುವ ಪರಿ ಹಾಗೂ ಸ್ತ್ರೀ ಅಸ್ಮಿತೆಯ ಹುಡುಕಾಟದ ಪರಿ ಈ ಕವಿತೆಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ.

## ಕಣ್ಣುಗಳು

**❖ ಪ್ರಕಾಶ್ ಕೋನಾಪುರ**

ಕವಿತೆ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರನಾಗಬೇಕೋ ಅನ್ಯಾಯದ ವಿರುದ್ಧ ಝಳಪಿಸುವ ಖಡ್ಗವಾಗಬೇಕೋ ಅಥವಾ ಜನರು ತಿನ್ನುವ ಅನ್ನದ ಅಗುಳಾಗಬೇಕೋ? ಹೀಗೆ ಬಹುಮುಖಿಯಾದ ಕಾವ್ಯದ ಬಗೆಗಿನ ಆಶಯಗಳ ಜೊತೆಗೇ ಸಂವಿಧಾನದ ಆಶಯಗಳನ್ನೂ ಮೂಲಭೂತ ಹಕ್ಕುಗಳನ್ನೂ ಮೂಲೆಗುಂಪಾಗಿಸುತ್ತಿರುವ ಈ ದುರಿತ ಕಾಲದಲ್ಲಿ ಕವಿ ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯದ ನಾಲಗೆಯನ್ನು ಕಿತ್ತು ನಾಯಿಗೆಸೆಯುತ್ತಿರುವ ಕಾಲದಲ್ಲಿ 'ಈ ಕವಿ' ನನ್ನ ಕವಿತೆಗೆ ಕಣ್ಣು ಕೊಡುತ್ತೇನೆ, ಜನರ ಕಣ್ಣನ್ನು ತೆರೆಸುವ ಕಣ್ಣು ಕೊಡುತ್ತೇನೆ, ನನ್ನ ಕಣ್ಣು ಕಿತ್ತರೂ ಸರಿಯೇ, ನನ್ನ ಕವಿತೆಗೆ ಕಣ್ಣು ಕೊಡುತ್ತೇನೆ ಎಂಬ ತೀವ್ರತರವಾದ ಹಂಬಲಕ್ಕೆ ಬಿದ್ದಿರುವುದು ಈ ಕವಿಯ ಸಾಮಾಜಿಕ ಕಳಕಳಿಯ ತೀವ್ರತೆಗೆ ಹಿಡಿದ ಕನ್ನಡಿಯಂತಿದೆ.

**ಪ್ರಭುತ್ವವೇ ಕಣ್ಣು ಕಿವಿ ಕರುಳುಗಳನ್ನು**
**ಕಳೆದುಕೊಂಡು ಕುರುಡಾಗಿರುವಾಗ**
**ಜನರ ಕಣ್ಣಿನ ಪೊರೆ ತೆರೆಯಲು**
**ಮತ್ತೆ ಮತ್ತೆ ಕವಿತೆ ಬರೆಯುತ್ತೇನೆ**
**ಕವಿತೆಗಳಿಗೆ ಕಣ್ಣು ಕೊಡುತ್ತೇನೆ**
**ಜೈಲಾದರೇನು ಗಲ್ಲಾದರೇನು?**
**ಮತ್ತೆ ಮತ್ತೆ ಕಣ್ಣಿರುವ**
**ಕವಿತೆಗಳನ್ನೇ ಬರೆಯುತ್ತೇನೆ**

ಎನ್ನುವ ಕವಿಯ ಸಮಾಜಮುಖೀ ಜವಾಬ್ದಾರಿಯನ್ನು ಈ ಕವಿತೆಯು ನೆನಪಿಸುವಂತಿದೆ.

## ನಡೆಯುವುದು ಅನಿವಾರ್ಯ

**❖ ದೊಡ್ಡಕಲ್ಲಹಳ್ಳಿ ನಾರಾಯಣಪ್ಪ**

ಈ ನಡಿಗೆ, ದಾರಿ ಎರಡೂ ಬದುಕಿನ ಪಯಣದ ಆತ್ಯಂತಿಕ ಸತ್ಯಗಳು ಅಂತೆಯೇ ಬದುಕಿನ ಬೆನ್ನಿಗೆ ಅಂಟಿಕೊಂಡೇ ನೆರಳಾಗಿರುವ ಸಾವಿನ ಸಾಂಗತ್ಯ. ಇದು ಅವ್ಯಕ್ತವಾದರೂ ವಾಸ್ತವಿಕ ಕಠೋರ ಸತ್ಯ, ಅದರ ಕ್ರೌರ್ಯ ಮರಿ ನಾಯಿಯ ಕರುಳಿನ ಹಾರದಿಂದ ಅಲಂಕೃತಗೊಂಡ ದಾರಿಯೂ ಕೂಡಾ ತೃಪ್ತಿಯ ಪದ ಹಾಡುತ್ತಿರುವಂತೆ ಕೇಳಿಸುತ್ತದೆ, ಕಾಣಿಸುತ್ತದೆ. ಕವಿಗೆ ಜಗಳವಿರುವುದು ಅಥವಾ ತಕರಾರು ಇರುವುದು ತಾನು ನಡೆಯುತ್ತಿರುವ ಆ ಸತ್ತನಾಯಿಯ ಕರುಳಿನಿಂದ ಅಲಂಕೃತಗೊಂಡ ದಾರಿಯೊಂದಿಗೆ.

ಈ ದಾರಿಯ ಮೇಲಿನ ಪ್ರತಿಯೊಬ್ಬರ ಪಯಣವೂ ತನಗೆ ತಾನೇ ಪ್ರತ್ಯೇಕ ಎಂಬಂತೆ ಕಂಡರೂ ಆ ಪ್ರತಿಯೊಬ್ಬರ ಪಾದದ ಪ್ರತಿ ಹೆಜ್ಜೆ ಗುರುತೂ ತನ್ನ ಹಣೆಯ ಮೇಲೂ ಮೂಡಿದೆ ಅಂತ ಕವಿಗೆ ಭಾಸವಾಗುವ ಮೂಲಕ ವ್ಯಷ್ಠಿ ಪ್ರಜ್ಞೆ ಸಮಷ್ಠಿ ಪ್ರಜ್ಞೆಯೊಂದಿಗೆ ಬೆರೆತುಹೋಗಿ ತುಳಿತ ವೈಯಕ್ತಿಕವಾಗಿ ನಡೆಯದೆ ಅದು ಸಾಮೂದಾಯಿಕ ಸಂವೇದನೆಯಾಗಿಯೂ ವಿಸ್ತರಿಸಿಕೊಂಡು ಕವಿ ಕಸಿವಿಸಿ ಗೊಳ್ಳುತ್ತಾನೆ. ನಮ್ಮ ಪ್ರತಿಯೊಂದು ಹೆಜ್ಜೆಯೂ ದಾರಿಯ ಮೇಲೆ, ನಮ್ಮ ಪಾದದ ಅಡಿಯ ಮಣ್ಣಲ್ಲಿ ಮಣ್ಣಾದ ಪೂರ್ವಸೂರಿಗಳ ಮೇಲೆ ನಮ್ಮ ನಡಿಗೆ ಎಂಬ ಸತ್ಯ ಗೋಚರಿಸಿ ಈಗಾಗಲೇ ಮಣ್ಣಿಗುದುರಿ ಹುಡಿಯಾದ ತರಗೆಲೆಯ ಪಿಸು ಮಾತುಗಳೂ ಕೇಳಿಸಿದಂತಾಗಿ ಸಂವೇದನಾಶೀಲನಾದ ಕವಿಗೆ ದಿಗ್ಭ್ರಮೆ ಗೊಂದಲಗಳು ಆವರಿಸಿ ಕೊಳ್ಳುತ್ತವೆ. ಈ ನಡಿಗೆ–ಈ ಮಣ್ಣಲ್ಲಿ ಬಿದ್ದು ತರಗೆಲೆಯಲ್ಲಿ ಬೆರೆತು ಹೋಗುವ ಪರಿ ಇವೆಲ್ಲವೂ ನಿಸರ್ಗ ಸಹಜವಾದ ಬದುಕಿನ ಪರಿಗಳೇ ಆಗಿದ್ದರೂ–ಅವರೆಲ್ಲರ ಹೆಜ್ಜೆ ಗುರುತು ನಮ್ಮ ಹಣೆಯ ಮೇಲೆ ಅಥವಾ ನಮ್ಮ ಹೆಜ್ಜೆ ಗುರುತು ಅವರೆಲ್ಲರ ಹಣೆಯ ಮೇಲೆ' ಎಂಬುದು ಅರಿವಿಗೆ ಬಂದ ಮೇಲೆ ನಮ್ಮ ಜಗವ ಗೆಲ್ಲುವ ದಾಪುಗಾಲಿನ ಠೇಂಕಾರದ ಠೀವಿಯ ನಡಿಗೆಗೆ ಅಮ್ಮನ ಎದೆಯ ಮೇಲೆ ಪಾದ ಊರುವ ಮಾರ್ದವತೆ ವಿನಮ್ರ ಸ್ಪರ್ಶ ನಮ್ಮ ನಡಿಗೆಗೂ ದಕ್ಕೀತೆಂಬ ಆಶಯ.

ಕವಿಗೆ ಅವಳು ಹೂ ಮುಡಿದಾಗ ಗರಿಗೆದರುವ, ತುಟಿಯಲ್ಲೇ ಬಂಧಿಯಾದ ಎದೆಯ ಗೋಳನ್ನು ಕಣ್ಣ ಪಸಾಲೆಯಲ್ಲಿ ಹನಿಯೊಡೆಯದ ದುಃಖವನ್ನು ಒಂದು ಸುಳ್ಳು ನಗೆಯ ಲೇಪನದಲ್ಲಿ ಮರೆಸಿ, ಮನದ ಭಾರವನ್ನು ಹೆಜ್ಜೆಗಿಳಿಸಿದಾಗ

ತತ್ತರಿಸಿದ ತನ್ನ ಕಾಲ ಕೆಳಗಿನ ನೆಲವನ್ನೂ ಕ್ಷಮೆ ಯಾಚಿಸುವ ಕವಿಯ ಔದಾರ್ಯದಲ್ಲಿ, ನಮ್ಮನ್ನೆಲ್ಲಾ ಪೊರೆವ ಭೂತಾಯ ಮೈಯನ್ನು ತುಳಿದೇ ನಡೆಯ ಬೇಕಾದ ಅನಿವಾರ್ಯ ಸಂಕಟವೂ–ಬೆನ್ನಿಗಂಟಿದ ಸಾವಿನ ಭಾರದಂತೆಯೇ ಎಂಬ ಕಟು ಸತ್ಯವನ್ನು ಹೃದಯಾದ್ರ್ರವಾಗಿ ಕವಿ ದಾಟಿಸಿದ್ದಾನೆ.

## ಕಲ್ಕಿಯವತಾರಕೆ ಮುನ್ನ

### ❖ ರಾಜ್ ಆಚಾರ್ಯ

ಜಾತಿ, ಮತ, ಧರ್ಮಗಳ ಹೆಸರಲ್ಲಿ ದೇವರ ಹೆಸರಲ್ಲಿ ಈ ದೇಶದಲ್ಲಿ ನಡೆಯುವ, ನಡೆಯುತ್ತಿರುವ ಮನುಷ್ಯತ್ವದ ಕಗ್ಗೊಲೆಗಳ ಹಿಂದಿನ ಕ್ರೌರ್ಯವನ್ನು ಕಂಡು ಕವಿಯ ಮನಸು ರೋಸಿ ಹೋಗಿದೆ. ಅನ್ಯಾಯ ಅಧರ್ಮಗಳು ತಲೆ ಎತ್ತಿದಾಗಲೆಲ್ಲಾ ನಾನು ಹುಟ್ಟಿ ಬಂದು ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಸಂರಕ್ಷಿಸುತ್ತೇನೆಂದ ಆ ಗೀತಾಚಾರ್ಯನಿಗೂ ಇಲ್ಲಿನ ಈ ಪರಿಸ್ಥಿತಿಯಲ್ಲಿ ಸಂಭವಿಸಲು ಭಯವಾಗಿರಬೇಕು ಎಂದು ಅನಿಸಿದೆ.

ಪ್ರೀತಿಯು ದ್ವೇಷವನ್ನು ನಿವಾರಿಸುವ ಔಷಧಿಯಾಗಿ ಉಳಿಯದೆ, ಅಹಂಕಾರ, ಆತ್ಮರತಿ, ಆತ್ಮರತಿಗಳ ಆಡಂಬರ, ಮೊನ್ನೆ ಮೊನ್ನೆ ನಡೆದ ಕ್ರೀಡಾವನಿತೆಯರ ಸ್ವಾಭಿಮಾನಕ್ಕೆ ವಿರೋಧಿಯಾದ ದಮನದವರೆಗೆ ವ್ಯಷ್ಠಿ ಮತ್ತು ಸಮಷ್ಠಿಯ ಸೃಜನಶೀಲತೆಯನ್ನು ಕಸಿದುಕೊಂಡು ಕವಿತೆಯ ಸೃಜನಶೀಲತೆಯನ್ನೂ ಹರಾಜಿಗಿಟ್ಟುಕೊಂಡು ಎಲ್ಲವೂ ನಗೆಪಾಟಲಿಗೆ ಈಡಾಗಿರುವ ಈ ವಿಷಮ ಕಾಲದಲ್ಲಿ – ಪರಸ್ಪರ ನಂಬಿಕೆಯ ಕೊಂಡಿಗಳು ಕಳಚಿ ಬೀಳುತ್ತಿರುವ ಈ ಕಾಲದಲ್ಲಿ ಆಧುನಿಕ ಮನುಷ್ಯನ ವಿಕೃತಿಗಳಿಗೆ ಪ್ರಕೃತಿಯೇ ಸರಿಪಾಠ ಕಲಿಸುವ ಗುರುವೆಂಬ ಅರಿವಿನ ಕಡೆಗೆ ಕವಿತೆ ಕೈಮರವಾಗುತ್ತದೆ.

### ❖ ಕಾಶ್ಮೀರ

### ರವಿ ತೊಂಡಗೆರೆ

ಭೂತ ಪ್ರೇತಗಳಿಲ್ಲದ ಭೂಕೈಲಾಸ, ಶಿವಶಿವೆಯರ ಆವಾಸಸ್ಥಾನ 'ದೇವರ ನಾಡು' ಎಂಬ ಅಭಿದಾನಗಳಿಗೆ ಪಾತ್ರವಾದ ಕಾಶ್ಮೀರದ ಮಡಿಲನ್ನು ಹಂಬಲಿಸಿ ಹೊರಡುವ ಈ ಕವಿತೆಯ ನಾಯಕನಿಗೆ ಬಹಳ ಬೇಗ ಭ್ರಮನಿರಸನವಾಗುತ್ತದೆ, ಅಲ್ಲಿನ ಗಡಿ ಕದನ, ದೇಶಕ್ಕಾಗಿ ಪ್ರಾಣಾರ್ಪಣೆಗೊಳ್ಳುವ ಯೋಧರ ಮರಣ, ಗಡಿಯಾಚೆಗಿನವರ ಆಕ್ರಮಣ ಈಚೆಗಿನ ನಮ್ಮವರ ಹಿಂದೂ ಗರ್ಜನೆ, ಸನಾತನ ಪರಂಪರೆಯ ಪ್ರತೀಕವೆಂಬ ತಿಲಕ ಲೇಪಿಸಿಕೊಂಡು ನರಳುತ್ತಿರುವ ಕಾಶ್ಮೀರವೆಂಬ

ನಿಸರ್ಗ ಸುಂದರಿಯ ನರಳಾಟ, ಕಾಶ್ಮೀರಿ ಪಂಡಿತರ ಹತ್ಯೆ, ೩೭೦ನೇ ವಿಧಿಯ ಪರಿಪಾಲನೆಯ ಪಡಿಪಾಟಲು ಅಲ್ಲಿನ ಹೆಣ್ಣುಮಕ್ಕಳ ಮಾನಾಪಹರಣಗಳನ್ನು ಕಣ್ಣಾರೆ ಕಂಡ ಕವಿಯ ಮನಸ್ಸು ವಿಷಾದದ ಬೇಗೆಯಲ್ಲಿ ಸುಟ್ಟು ಹೋಗುತ್ತದೆ. ತನ್ನ ದೇಹವೂ ಸುಟ್ಟು ಹೋಗಲಿ ಅದರ ಬೂದಿಯು ಶ್ವೇತಶುಭ್ರ ಕಾಶ್ಮೀರದ ಮೈಗಂಟಿದ ರಕ್ತದ ಕಲೆಗಳನ್ನೆಲ್ಲಾ ಮುಚ್ಚಿ ಹಾಕಲಿ, ತನ್ನ ಪ್ರೀತಿ ಅಭಿಮಾನಗಳ ಕಾಶ್ಮೀರ–'ಪ್ರೇಮ ಕಾಶ್ಮೀರ'ವೆಂಬ ತನ್ನ ಮೂಲ ಅಭಿದಾನದೊಂದಿಗೆ ನಳನಳಿಸಲೆಂಬ ಕವಿಯ ಅಪೇಕ್ಷೆ ನಮ್ಮ ಹುಸಿ ದೇಶಭಕ್ತಿಯ ಅನಾಚಾರಗಳನ್ನು ವಿಷಾದಯುಕ್ತವಾಗಿ ವಿಡಂಬಿಸುತ್ತದೆ.

## ❖ ನನ್ನ ಹುಟ್ಟು

### ❖ ಮಂಜುಳಾ ಭಾರ್ಗವಿ

ಈ ದೇಶದಲ್ಲಿನ ಹೆಣ್ಣು ಮಕ್ಕಳು ತಮ್ಮ ಹುಟ್ಟಿನ ಬಗ್ಗೆ, ತಮ್ಮ ಹೆಣ್ತನ, ತಾಯ್ತನ, ತಮ್ಮ ದೈಹಿಕ, ಜೈವಿಕ ಅನನ್ಯತೆಗಳ ಬಗ್ಗೆ ಸಂಭ್ರಮಿಸುವ ಹೆಮ್ಮೆಪಟ್ಟುಕೊಳ್ಳುವ ದಿನಗಳು ಇನ್ನೂ ಬಂದಿಲ್ಲವೆ? ಅದಾಗಲೇ ಬಂದಾಯಿತು ಎಂದು ಸಂಭ್ರಮಿಸುವ ಕೆಲವೇ ಹೆಣ್ಣು ಮಕ್ಕಳ ಆ ಸಂಭ್ರಮವೂ ಕೂಡಾ ದೀರ್ಘಾಯುವಾದುದಲ್ಲ ಎಂಬುದನ್ನು ಸಾಬೀತುಪಡಿಸುವ ಅನೇಕ ನಾಚಿಕೆಗೇಡಿನ ಸಂಗತಿಗಳು ಈ ದೇಶದಲ್ಲಿ ಮತ್ತೆ ಮತ್ತೆ ನಡೆಯುತ್ತಿರುವುದರಿಂದಲೇ ಮಂಜುಳಾ ಭಾರ್ಗವಿ ಅವರಂತಹ ಕವಿಗಳು ಇನ್ನೂ ಹೀಗೆ ಅಲವತ್ತುಕೊಳ್ಳುತ್ತಾರೆ ಎಂಬುದೂ ಕಠೋರ ವಾಸ್ತವವೇ.

ಹುಟ್ಟಿನಿಂದ ಯಾವ ಹಣೆಪಟ್ಟಿಗಳೂ ಇಲ್ಲದೆ ಕಣ್ ಬಿಡುವ ಮಗುವನ್ನು ಹೆಣ್ಣು ಗಂಡು, ತೃತೀಯಲಿಂಗಿ, ಅಬಲೆ, ಸಬಲೆ ಅದು ಬಿಟ್ಟವಳು, ಇದು ಬಿಟ್ಟವಳು ಎಂಬಿತ್ಯಾದಿ ಹಣೆಪಟ್ಟಿಗಳನ್ನು ಅಂಟಿಸಿಬಿಟ್ಟು ಕಿತ್ತರೂ ಬರದ ಈ ಹಣೆಪಟ್ಟಿಗಳನ್ನೇ ತಮ್ಮ ಹಣೇಬರಹಗಳೆಂದು ನಂಬಿಕೊಂಡು ನಡೆಯುತ್ತಿರುವ ಹೆಣ್ಣುಮಕ್ಕಳು ತಮ್ಮ ಈ ವಿಷಾದ ಗೀತೆಗಳನ್ನು ಹಾಡುತ್ತಿರುವಾಗಲೇ ನೆಲ ಮುಗಿಲುಗಳ ಎತ್ತರಕ್ಕೆ ತಮ್ಮ ಹಲವು ಕ್ಷೇತ್ರಗಳ ಉತ್ತುಂಗ ಸಾಧನೆಯ ಮೂಲಕ, ಪುರುಷ ಪ್ರಧಾನ ಸಮಾಜದ ಬೇಲಿಗಳ ಜಿಗಿದು, ಮುಗಿಲಿಗೆ ನೆಗೆದು ಧೃವತಾರೆಗಳಾಗಿ ಮಿನುಗುತ್ತಿರುವ ಊರ್ಧ್ವ ಮುಖಿಯರ ಬಗ್ಗೆ ತಲೆ ಎತ್ತರಿಸಿ, ಧೀರೋಧಾತ್ತತೆಯ ಹಾಡ ಗುನುಗಲಿ ಕನಸಲಿ, ಕನವರಿಸಲಿ ಎಂದು ಪ್ರಾಂಜಲ ಮನಸಿನಿಂದ ಹಾರೈಸುತ್ತಾ ಕೂತುಬಿಡದೆ ಅಣ್ಣ ತಮ್ಮಂದಿರಾಗಿ ಪುರುಷರೂ ಅವರ ಕನಸುಗಳಿಗೆ ರೆಕ್ಕೆಕಟ್ಟುವಲ್ಲಿ ಕೈ ಜೋಡಿಸಲು ನಿಲ್ಲುವ ಸಂಕಲ್ಪ ಮಾಡಬೇಕಾಗಿದೆ.

## ಸ್ತ್ರೀ ಅಂದರೆ ಅಷ್ಟೇ ಸಾಕೆ?

### ❖ ಮೃತ್ಯುಂಜಯ ಎಂ. ಸಾಲಿಮಠ

ಈ ಕಾವ್ಯಾನುಸಂಧಾನದಲ್ಲಿ ನನ್ನ ಮನಸಿಗೆ ಬಹಳ ಆಪ್ತವಾಗಿ ಕಾಡಿದ ಕವಿತೆಗಳಲ್ಲಿ 'ಮೃತ್ಯುಂಜಯ ಎಂ. ಸಾಲಿಮಠ'ರ 'ಸ್ತ್ರೀ ಎಂದರೆ ಅಷ್ಟೇ ಸಾಕೆ?' ಎಂಬ ಜಿ. ಎಸ್. ಶಿವರುದ್ರಪ್ಪನವರು ಸ್ತ್ರೀ ಕವಿತೆಯ ಸಾಲನ್ನೇ ಶೀರ್ಷಿಕೆಯನ್ನಾಗಿ ಹೊತ್ತ ಈ ಕವಿತೆಯೂ ಒಂದು. ಅಮ್ಮನ ಬಗ್ಗೆ ಯಾರೇ ಕವಿತೆ ಬರೆಯಲಿ ಆ ಕವಿತೆ ಅಮ್ಮನ ಸಲುವಾದ ಭಾವಕೋಶ ಜೀವಕೋಶಗಳ ಸಮೇತವಾಗಿ ಮೈಪಡೆದು ಕೊಂಡೇ ಹೊರಹೊಮ್ಮುವುದರಿಂದ ಆ ಕವಿತೆ ಜೀವಂತವಾಗಿ ಮೈತಾಳಿರುತ್ತದೆ. ಅದರಲ್ಲೂ ಮೃತ್ಯುಂಜಯ ಎಂ. ಸಾಲಿಮಠರಂತಹ ಭಾಷೆಯನ್ನು ಬಡಿದು, ನಾದಿ, 'ಅರ್ಥದ, ನಾದದ ಅಲೆಗಳನ್ನು ಸ್ವಭಾವೋಕ್ತಿಯ ಮೂಲಕವೇ ಸಶಕ್ತವಾಗಿ ಎಬ್ಬಿಸಬಲ್ಲ ಕವಿ, ಅಮ್ಮನ ಬಗ್ಗೆ ಬರೆದಾಗ ಪಿ. ಲಂಕೇಶ್, ಎಲ್. ಹನುಮಂತಯ್ಯ ನನ್ನನ್ನೂ ಒಳಗೊಂಡಂತೆ ಅದೆಷ್ಟೋ ಕವಿಗಳು ಅಮ್ಮನ ಬಗ್ಗೆ ಬರೆದ ಕವಿತೆಗಳೆಲ್ಲಾ ಸ್ಮೃತಿ ಪಟಲದ ಮುಂದೆ ಹಾದು ಹೋದವು.

ಈ ಕವಿಯ ಮಾತಿನಲ್ಲೇ ಹೇಳಬೇಕೆಂದರೆ ಇವರಮ್ಮ ಕಾಲಕಾಲಕ್ಕೆ ಮಾತು ಕಳೆದುಕೊಳ್ಳುತ್ತಲೇ ಬಂದ ಧ್ವನಿಪೂರ್ಣವಾದ ಕವಿತೆಯಂತೆ, ಕೊನೆಗೆ ಧ್ವನಿಯಿಲ್ಲದ ಧ್ವನಿಯಾಗಿ, ಮುಕ್ಕಾದ ಪ್ರತಿಮೆಯಾಗಿ, ಶಿಲ್ಪವಾಗಿ, ಸರ್ವಕಾಲ, ಋತು, ಜನ ಮನ ಸಂಸಾರದೊಳಗಣ ಜನಮನಗಣದಂತೆ ಮಿಳಿತಗೊಂಡು ಶಬ್ದ ಸೀಮೆಯೊಳಗೆ ತನ್ನ ದುಃಖದ ಬಿಕ್ಕಳಿಕೆ ಹುಗಿದಿಟ್ಟು, ಆಲಯದೊಳಗಣ ಬಯಲಾಗಿ, ಆಲಯ ದಾಟದೆ, ತನ್ನ ಪ್ರೀತಿಗೆ ಕರುಣೆ ವಾತ್ಸಲ್ಯಗಳ ಜೋಕಾಲಿಯಲ್ಲಿ ಕರುಳ ಕುಡಿಗಳ ತೂಗಿ, ಅರಳಿ, ಜಿಗಿದು, ಒಳಕಲ್ಲಿನ ಒಳಗಿನ ಖಾರ ಅರೆಯುತ್ತಾ ಹಸಿ ಆರದ ಕಟ್ಟಿಗೆಗಳೊಡನೆ ಗುದ್ದಾಡುತ್ತಾ, ಬೆಂಕಿಯನ್ನು ಬೆಳಕಾಗಿಸುವ ಸೆಟೆದ ಅಕ್ಕಿಯನ್ನು ಅನ್ನವಾಗಿಸುವ ಸಲುವಾಗಿ ತಾನೂ ಬೇಯುತ್ತಾ ಬಂದವಳು.

ತಾನು ಹಸೆಯೇರಿ ಸೇರೊದ್ದು, ಸೊಸೆಯಾಗಿ ಗಂಡನ ಮನೆಗೆ ಬಂದ ಲಾಗಾಯ್ತಿನಿಂದ ಕಾಲಿಗೆ ತಗುಲಿದ ಹೊಸ್ತಿಲ ಮೊಳೆ, ತಾನು ಒಟ್ಟಿದ ಒಲೆಯ ಸೌದೆ, ತನ್ನ ತುಕ್ಕು ಹಿಡಿದ ಟ್ರಂಕು, ಜೀವ ಬಸಿದು ಹಡೆದ ಮಕ್ಕಳು, ಕೈ ಹಿಡಿದ ಗಂಡ, ಇವುಗಳೊಂದಿಗೆ ತನ್ನ ಕನಸುಗಳ ರವರವಷ್ಟೇ ಕರಗಿಸಿಕೊಂಡು ಕರಗಿ ಹೋದ ತನ್ನಮ್ಮನಿಗೆ ಅವಳ ಬಯಕೆಯಂತೆ 'ಅಮ್ಮಾ' ಎಂಬ ಬಿರುದೇ ಅವಳ ವ್ಯಕ್ತಿತ್ವದ ಘನತೆಗೆ ಮಗನಾಗಿ ತಾನು ಸಲ್ಲಿಸಬಹುದಾದ ಅತ್ಯಂತ ಸಾರ್ಥಕವಾದ ಬಿರುದೆಂಬುದು ಕವಿಯ ಭಾವ ಸಮರ್ಪಣೆ.

## ಬಣ್ಣದ ಸಿಗ್ನಲ್

### ❖ ಕೋಮಲ ಕಲ್ಲೂಡಿ

ನಗರದ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ತಮ್ಮ ಹೆಗಲಿನ ಜೋಲಿಯಲ್ಲಿ ಎಳೆಯ ಕಂದಮ್ಮಗಳನ್ನಿಟ್ಟುಕೊಂಡು ಹೊಟ್ಟೆಯ ಪಾಡಿಗೆ ಬಲೂನು ಮಾರುವ ತಾಯಿಯೊಬ್ಬಳ ತಳಮಳ, ವಾಹನ ಸವಾರರ ಕಡೆಗಣ್ಣ ನೋಟದ ನಿರ್ಲಕ್ಷ್ಯ, ಜೋಲಿಯಲ್ಲಿ ಮಲಗಿಯೇ, ಜಗತ್ತಿನ ಕಡೆಗೆ ಮುಗುಳು ನಗೆ ಬೀರುವ ಮಗುವಿನ ನಗೆಯ ಮೂಲಕ ನಗು ಮರೆತ ನಾಗರೀಕ ಜಗತ್ತಿನ ಬದುಕನ್ನೂ ಕವಿ ಕವಿತೆಯ ಮೊದಲ ಭಾಗದಲ್ಲಿ ವಿಡಂಬಿಸುತ್ತಾರೆ.

ಬಣ್ಣದ ಬಲೂನುಗಳನ್ನು ಮಾರುವ ಮೂಲಕವೇ ತನ್ನ ಒಡಲನ್ನು ತುಂಬಿಕೊಂಡು, ಮಗುವಿಗೂ ಹಾಲೂಡಿಸಬೇಕಾದ ಈ ತಾಯಿಯ ಕನಸು ಚಿಗುರೊಡೆಯುವುದೂ ಕೂಡಾ ಮತ್ಯಾರದೋ ಕೂಸು ತನ್ನ ತಂದೆ–ತಾಯಿಗಳನ್ನು ಕಾಡಿ ಬೇಡಿ ಅಥವಾ ಅತ್ತು ರಚ್ಚೆ ಹಿಡಿದುಕೊಂಡುಕೊಳ್ಳುವ ಐದೋ ಹತ್ತೋ ರೂಪಾಯಿ ಬಲೂನಿನ ವ್ಯಾಪಾರದ ಮೂಲಕವೆ. ಹೀಗೆ ಪುಡಿಕಾಸಿನ ತನ್ನ ವ್ಯಾಪಾರದ ಮೂಲಕವೇ ತನ್ನ ಕರುಳ ಕುಡಿಗೆ ಹಾಲು ಕುಡಿಸಬೇಕಾಗಿರುವ ಈ ತಾಯಿಯ ಬಗಲ ಕೂಸಿನ ಬಗ್ಗೆಯಾಗಲಿ ಅವಳ ಹೊಟ್ಟೆಯ ಹಸಿವನ್ನಾಗಲೀ ಕಾಣದ ಕಾಮುಕ ಜಗತ್ತಿಗೆ ಕಾಣುವುದು ಅವಳ ಮೈಯಷ್ಟೇ. ಕೆಂಪು ದೀಪದ ನೆರಳಲ್ಲಿ, ಕಪ್ಪು ಕೈಗಳ ಕರಾಳ ಕೃತ್ಯಕ್ಕೆ ಸಿಲುಕಿ ನಲುಗಿ ಹೋಗುವ ಇಂತಹ ಹೆಣ್ಣುಗಳ ಕಣ್ಣುಗಳಲ್ಲಿ ಕಾಲೂರಿದ ಕಣ್ಣೀರಿನ ಉಪ್ಪು ಕಡಲು ಮಾತ್ರ ಅವಳಂತಹ ಬಣ್ಣದ ಬಲೂನು ಮಾರುವ ಅದೆಷ್ಟೊ ಹೆಣ್ಣುಮಕ್ಕಳ ಕಣ್ಣೀರಿನ ಕಥೆಗೆ ಮೂಕಸಾಕ್ಷಿಯಾಗುವುದನ್ನು ಕವಿತೆ ಹೃದಯ ವಿದ್ರಾವಕವಾಗಿ ಧ್ವನಿಸುತ್ತದೆ.

## ವುಹಾನಿನ ಹುಡುಗಿ

### ❖ ಮಂಜುನಾಥ ಕೆ. ಆರ್. ಕಂಟನಕುಂಟೆ

ಇಡೀ ಜಗತ್ತನ್ನು ತಲ್ಲಣಗೊಳಿಸಿದ 'ಕರೋನ' ಎಂಬ ವೈರಾಣುವಿನ ಅಟ್ಟಹಾಸದ ಬಗ್ಗೆ ಕಳೆದೆರಡು ವರ್ಷಗಳಿಂದ ನೂರಾರು ಕವಿತೆಗಳು ರಚನೆಯಾಗಿವೆ. ಈ ಕವಿತೆಯಲ್ಲಿ 'ಕರೋನ'ವನ್ನು ವುಹಾನಿನ ಹತ್ತೊಂಬತ್ತರ ಹರೆಯದ ವಿಶ್ವಸುಂದರಿಗೆ ಹೋಲಿಸಲಾಗಿದೆ. ಅವಳು ಹೇಗೆ ತನ್ನ ಸೌಂದರ್ಯ, ಬೆಡಗು, ಬಿನ್ನಾಣ, ಬಿಗುಮಾನಗಳ ಮೂಲಕ ಇಡೀ ಜಗತ್ತಿನ ಜನರ ಎದೆಗೆ ಕಾವೇರಿಸುವ ವಿಶ್ವಸುಂದರಿಯ ಹಾಗೆ ಜಗತ್ತನ್ನು ತನ್ನ ತೆಕ್ಕೆಗೆ ತೆಗೆದುಕೊಂಡು

ಸಾವೆಂಬ ಸಮ್ಮೋಹಿನಿಯ ಜಾಲಕ್ಕೆ ಕೆಡವಿಬಿಟ್ಟಳು ಎಂಬುದನ್ನು ಬಿಂಬಿಸಲಾಗಿದೆ.

ಈ ವುಹಾನ್ ಸುಂದರಿಯೆಂಬ ಮೋಹಿನಿ ಜನ, ಜಾನುವಾರು, ಲೋಕ ಸಮಸ್ತವನ್ನೂ ಭಣಗುಡುವ ಸ್ಮಶಾನವನ್ನಾಗಿ ಮಾಡಿ ಹೋದಳೆಂಬುದನ್ನು ಜಗತ್ತು ಅವಳಿಂದ ಅನುಭವಿಸಿದ ಆ ಕರಾಳ ಚಿತ್ರಗಳನ್ನೆಲ್ಲಾ ಕಣ್ಣ ಮುಂದೆ ತಂದು ನಿಲ್ಲಿಸುವ ಕೆಲಸವನ್ನು ಕವಿತೆ ಮಾಡಿದೆ. ಜಗತ್ತನ್ನು ಕಾಡಿದ ಇಂತಹ ಕ್ರೂರಿಯನ್ನು 'ವಿಶ್ವಸುಂದರಿ' ಎಂದು ಕರೆವ ಬದಲು ವಿಕಾರ ರೂಪಿ ವಿಶ್ವರಾಕ್ಷಸಿ ಎಂದು ಕರೆದಿದ್ದರೇನೇ ಹೆಚ್ಚು ಸೂಕ್ತವಾಗಿತ್ತೇನೋ ಅಂತಲೂ ಅನ್ನಿಸುತ್ತದೆ.

## ಅಂಗೈ ಹುಣ್ಣು

### ❖ ಚಂದ್ರಕಲಾ ಎಂ ಇಟಗಿಮಠ

ಚಂದ್ರಕಲಾ ಎಂ ಇಟಗಿಮಠ ಅವರ 'ಅಂಗೈ ಹುಣ್ಣು' ಕವಿತೆಯು ಸತ್ಯದ ಹುಡುಕಾಟದಲ್ಲಿರುವವರಿಗೆ ಬರೆದ ಮುನ್ನುಡಿಯಂತಿದೆ. ವಾಸ್ತವದ ಬದುಕಿನಲ್ಲಿ ಮನುಷ್ಯನಿಗೆ ಕೆಂಡದಂತಹ ಸತ್ಯ ಕಂಡಾಗ ಅದಕ್ಕೆ ಮುಲಾಮು ಹಚ್ಚಿ ತಣ್ಣಗೆ ಮಾಡಲು ಸಾಧ್ಯವೇ ಎಂದು ಇಲ್ಲಿ ಪ್ರಶ್ನಿಸುತ್ತಿದೆ. ಸತ್ಯದ ಆಳವರಿಯದೆ ಮನಸಿನೊಳಗಿರುವ ದುಃಖ ದುಮ್ಮಾನಕ್ಕೆ ನೆಮ್ಮದಿ ಸಿಗದು ಎಂದು ವಿಷಾದದ ದನಿಯಲ್ಲಿ ನೋವನ್ನು ಹೊರಹಾಕುತ್ತಿದೆ.

## ನವಿಲ ನರ್ತನ

### ❖ ಅರುಣ್ ಪುಷ್ಪದಂತ

ಕವಿಯಾದವನು ಅಮೂರ್ತದ ಬೆನ್ನ ಬಿದ್ದರೆ, ಬೆಂಕಿ ಬೆಳದಿಂಗಳುಗಳ ಕಡೆದು ಬೆಳಕನ್ನಾಗಲಿ ಹುಣ್ಣಿಮೆಯನ್ನಾಗಲಿ ಕಾಣಲಾಗದು. ಹೀಗೆ ಕಾಣದ್ದರ ಹಿಂದೆ ಬಿದ್ದು ಕಾಡು ಅಲೆದಂತೆ ಎಲ್ಲವೂ ಗೋಜಲು ಗೋಜಲು.

ನೆರಳು ಕೊಟ್ಟು, ಹಣ್ಣು ಕೊಟ್ಟು, ಇಲ್ಲವಾಗುವ ಮರದಮ್ಮನ ಮಮಕಾರವ ಮರೆಯಲಾರದ ಭಾವಋಣಕ್ಕೆ, ಮತ್ತೆ ಮೈಪಡೆವ ನವಿಲ ದೇವತೆಯ ವರ್ಣವಿಲಾಸ, ಬೆಳಕ ತೊಡುವ ದೀಪ, ಈ ಎಲ್ಲದರ ಋಣಸಂದಾಯದ ಹಂಬಲದಲ್ಲಿ ಬಿಟ್ಟೂ ಬಿಡಲಾರದೆ ಲೌಕಿಕ–ಅಲೌಕಿಕಗಳ ನಡುವಿನ ಸಮತೋಲನಕ್ಕಾಗಿ ಅಸ್ವಸ್ಥಗೊಂಡು ತೊಳಲಾಡುವ ಮನಸಿನ ಪರಿಯ ಅಮೂರ್ತ ಹುಡುಕಾಟ ಈ ಕವಿತೆಯಲ್ಲಿದೆ.

## ಕಾಯುತ್ತಿರುವೆ ಜಂಗಮ

### ❖ ದೊ.ಚಿ. ಗೌಡ (ರೈತ ಕವಿ)

ಈ ಕವಿತೆಯಲ್ಲಿ ಜಂಗಮನೊಬ್ಬನ ಹಿಂದೆ ಬಿದ್ದು, ಅವನ ಅಂಗಸುಖಕ್ಕಾಗಿ ಹಂಬಲಿಸುತ್ತಿರುವ ಹೆಣ್ಣೊಬ್ಬಳ ವಿರಹತಪ್ತ ಆರ್ತನಾದವಿದೆ. ತುಂಬು ಯೌವನ ಪ್ರಾಯದ ಈ ಹೆಣ್ಣಿನ ಗಂಡ ಗತಿಸಿದ್ದಾನೆ. ಇವಳ ಹರೆಯವೇ ಇವಳ ಪಾಲಿಗೆ ಹೊರೆಯಾಗಿದೆ.

ನಮ್ಮ ಜನಪದ ಸಾಹಿತ್ಯದಲ್ಲಿ–ಸಂಸಾರ ತ್ಯಜಿಸಿ ಸನ್ಯಾಸಿಗಳಾಗಿ ಊರೂರು ಸುತ್ತುವ ಜಂಗಮಯ್ಯಂದಿರ ಹಿಂದೆ ಬಿದ್ದು ಪ್ರೇಮನಿವೇದನೆ ಮಾಡಿಕೊಳ್ಳುವ ಅನೇಕ ಸಂಸಾರಸ್ಥ ಹೆಣ್ಣುಗಳ ಪರಿಪರಿಯಾದ ಚಿತ್ರಣ ಕಂಡುಬರುತ್ತದೆ. ಅಲ್ಲೆಲ್ಲಾ ಬಹಳಷ್ಟು ಸಮಯದಲ್ಲಿ ಜಂಗಮಯ್ಯಗಳು ತಮಗಾಗಿ ಹಂಬಲಿಸಿ ಬಂದ ಇಂತಹ ಸಂಸಾರಸ್ಥ ಹೆಣ್ಣುಮಕ್ಕಳಿಗೆ ಬುದ್ಧಿ ಹೇಳಿ ಮತ್ತೆ ಅವರನ್ನು ಅವರ ಸಂಸಾರಗಳಿಗೆ ಮರಳಿಸುವವರನ್ನು ಹೆಚ್ಚಿಗೆ ಕಾಣುತ್ತೇವೆ.

ಈ ಕವಿತೆಯಲ್ಲಿ ಬರುವ ಹೆಣ್ಣು ಕವಿತೆಯ ಉದ್ದಕ್ಕೂ ಜಂಗಮಯ್ಯನ ಕೂಟಕ್ಕಾಗಿಯೇ ಹಂಬಲಿಸುತ್ತಿದ್ದವಳು. ಕವಿತೆಯ ಕೊನೆಯ ಭಾಗದಲ್ಲಿ ಮುಕ್ತಿಯ ಸಲುವಾಗಿಯೇ ತಾನು ಭಕ್ತಿ ಮಾರ್ಗದಲ್ಲಿ ನಡೆದು ಅವನಿಗೆ ಶರಣಾಗತಳಾಗು ತ್ತಿರುವುದಾಗಿ ಹೇಳುತ್ತಾಳೆ. ಅವನನ್ನು ತನ್ನ ಪಾಲಿನ 'ಮಂಗಳಕರ ಲಿಂಗ' ಎಂದೂ ಕರೆಯುತ್ತಿದ್ದಾಳೆ ಆದರೆ ಅವಳಲ್ಲಿ ಇದ್ದಕ್ಕಿದ್ದ ಹಾಗೆ ಉಂಟಾದ ಈ ಪರಿವರ್ತನೆಗೆ ಕಾರಣವಾಗಲಿ, ವಿರಹದಿಂದ – ಭಕ್ತಿಗೆ ಹೊರಳಿಕೊಂಡ ಅವಳ ಈ ಮಾಗುವಿಕೆಗೆ ಕಾರಣವಾದ ಸಂಗತಿಗಳಾಗಲಿ ಕವಿತೆಯಲ್ಲಿ ಇಲ್ಲದೇ ಹೋಗಿರುವುದು ಕವಿತೆ ಯನ್ನು ಈ ಕಾರಣಗಳಿಗಾಗಿಯೂ ಕವಿ ಮರು ರೂಪಿಸುವ ಅಗತ್ಯವಿದೆಯೆಂದು ನನ್ನಂತೆಯೇ ಕಾವ್ಯ ಪ್ರೇಮಿಗಳೆಲ್ಲರಿಗೂ ಅನ್ನಿಸಬಹುದೆಂದು ತೋರುತ್ತದೆ.

ಈ ಗೋಷ್ಠಿಯ ಕವಿಗಳ ಕವಿತೆಗಳೊಂದಿಗೆ ಅನುಸಂಧಾನ ಮಾಡುವ ನೆಪದಲ್ಲಿ ನಾಡಿನ ನಾಲ್ಕೂ ಭಾಗಗಳ ಇಪ್ಪತ್ತು ಕವಿತೆಗಳನ್ನು ಆಸ್ವಾದಿಸುವ ಅವಕಾಶವನ್ನು ಒದಗಿಸಿದ ಕಾಡುವ ಕಿ. ರಂ. ೨೦೨೩ ಅನ್ನು ಆಯೋಜಿಸಿದ ಎಲ್ಲ ಪದಾಧಿಕಾರಿಗಳಿಗೂ ವಿಶೇಷವಾಗಿ ಇದನ್ನು ಆಗು ಮಾಡಿದ ಕ್ರಿಯಾಶೀಲ, ಸೃಜನಶೀಲ ಯುವ ಮಿತ್ರರಾದ ಸೂರ್ಯಕೀರ್ತಿ ಹಾಗೂ ಶಂಕರ್ ಸಿಹಿಮೊಗ್ಗೆ ಅವರುಗಳಿಗೆ, ಕವಿತೆ ವಾಚಿಸಿದ ಎಲ್ಲ ಕವಿಗಳಿಗೆ ನನ್ನ ಅನಂತ ಧನ್ಯವಾದಗಳು.

# ಖಾದಿ ತೊಟ್ಟ ಕವಿತೆ

**❖ಚಂಸು ಪಾಟೀಲ**

ನನ್ನ ಕವಿತೆ
ಇದ್ದಕ್ಕಿದ್ದಂತೆ
ತನಗೆ ಖಾದಿ ಬಟ್ಟೆ ಬೇಕು
ಎಂದು ಹಠ ಹಿಡಿಯಿತು!

'ಬೇಡ ಅದೆಲ್ಲ ನಿನಗೆ ಸರಿ ಬರೊಲ್ಲ'
ಎಂದು ಗಿಣಿಗೆ ಹೇಳಿದ ಹಾಗೆ ಹೇಳಿದೆ..
ಆದರೂ ಅದರದು ಅದೇ ಹಠ!
ರಚ್ಚೆ ಹಿಡಿಯಿತು!

'ಹಾಳಾಗಿ ಹೋಗು' ಎಂದು ಖಾದಿ ಜುಬ್ಬಾ ಹೊಲಿಸಿ,
ಧೋತರ ತಂದು ಗರಿ ಗರಿ ಇಸ್ತ್ರೀ ಮಾಡಿಕೊಟ್ಟೆ!
ಹೊಸ ಬಟ್ಟೆ ತೊಟ್ಟಿದ್ದೇ ತಡ,
ಕವಿತೆ ಹೊಸ ಅವತಾರ ಪಡೆದಂತೆ ಕುಣಿದು ಕುಪ್ಪಳಿಸಿತು.

ಊರಲ್ಲಿ ಯಾರಾದರು ಸತ್ತರೆ
ಸೀದಾ ಅವರ ಮನೆಗೆ ಬಿಜಂಗೈಯಿಸಿ,
ಒಂದೆರಡು ಗರಿ ಗರಿ ನೋಟು ತೆರೆದು
ಸತ್ತವನ ಸಂಬಂಧಿಗಳ ಕೈಯಲ್ಲಿ ತುರುಕಿ,
ಹೆಗಲ ಮೇಲೆ ಕೈ ಹಾಕಿ ಸಾಂತ್ವನ ಹೇಳತೊಡಗಿತು.
ಬೇರೆ ಬೇರೆ ಜಾತಿಯ ಮುಖಂಡರನ್ನು
ಬೇರೆ ಬೇರೆ ಸಂದರ್ಭದಲ್ಲಿ ಸಂಧಿಸಿ

'ನಿಮ್ಮ ದೇವರ ಗುಡಿಯ ಜೀರ್ಣೋದ್ದಾರ ಮಾಡಿ ನಾಯಕರೆ,
ಆ ಯವ್ವನ ಕೃಪೆ ಇದ್ದರೆ ಒಂದಕ್ಕೆ ಹತ್ತು ಕೊಟ್ಟಾಳು'
ಮತ್ತೆ ಒಂದಿಷ್ಟು ನೋಟಿನ ಕಂತೆಗಳನ್ನು
ಕೈಯಲ್ಲಿಟ್ಟು ನಮಸ್ಕರಿಸಿಬಿಟ್ಟಿತು.
ಮೊನ್ನೆ ಪಾಪ ಯಾರೊ ಅಮಾಯಕರು ಬಂದಿದ್ದರು.
ಏನೋ ಶಾಲೆಯಲ್ಲಿ ಶಿಕ್ಷಕರಿಲ್ಲ.
ಊರಲ್ಲಿ ಆಸ್ಪತ್ರೆ ಇಲ್ಲ. ಬಸ್ಸೂ ಬರುವುದಿಲ್ಲ.
ರಸ್ತೆಗಳು ಗುಂಡಿ ಬಿದ್ದಿವೆ..
ಅಂತೇನೇನೋ ಸಮಸ್ಯೆ ಹೇಳಿಕೊಂಡು
ಅಲವತ್ತುಕೊಂಡರು.
ಕವಿತೆ ಕಣ್ಣು ಕೆಂಪಗೆ ಮಾಡಿ,
ಅವರ ಮೇಲೆ ಯದ್ವಾತದ್ವಾ ಯಗರಾಡಿತು.
ಆಮೇಲೆ ಯಾರೊ ಅನುಯಾಯಿಗಳಂತೆ
ಅವರು ಬಂದರು.
ಆಹಾ! ಆಗ ನೋಡಬೇಕಿತ್ತಿದರ ವರಸೆ!
ಮುಗುಳ್ನಗುತ್ತಲೆ ಬಾಯ್ತುಂಬ ಯಪ್ಪ,
ಯಣ್ಣ ಎನ್ನುವುದೇನು,
ಬಣ್ಣ ಮಾತಲ್ಲಿ ಬೆಣ್ಣೆ ಹಚ್ಚುವುದೇನು.. ಬಪ್ಪರೆ!
ಜನರುದ್ಧಾರಕೆಂದೇ ಜನ್ಮವೆತ್ತಿರುವ
ಅವತಾರ ಪುರುಷನಂತೆ ರೀಲು ಬಿಟ್ಟಿತು.
ನನಗೊ ಸಖೇದಾಶ್ಚರ್ಯ!
ಇದನ್ನು ಹೀಗೆ ಬಿಟ್ಟರೆ ಇನ್ನು ಏನೇನು
ಅನಾಹುತ ಮಾಡುತ್ತದೆಯೊ ಎಂದು ಭಯಬಿದ್ದು,
ಕವಿತೆಯನ್ನು ಕೂಡಲೇ
ಮನೋರೋಗತಜ್ಞರ ಬಳಿ ಕರೆದೊಯ್ದೆ.
ಅವರು ಅದರ ನಡೆನುಡಿ ಎಲ್ಲ ಪರೀಕ್ಷಿಸಿ.
ಆಮೇಲೆ ನನ್ನನ್ನು ಕರೆದು
'ದಯವಿಟ್ಟು ಕ್ಷಮಿಸಿ,
ಇದಕ್ಕೆ 'ಶಕುನಿಮೇನಿಯಾ' ಆಗಿದೆ.
ಇದೊಂದು ವಿಚಿತ್ರ ಮನೋಕಾಯಿಲೆ.
ಇದನ್ನು ವಾಸಿ ಮಾಡುವುದಸಾಧ್ಯ' ಎಂದು ಬಿಟ್ಟರು.

ನನಗೆ ಏನು ಮಾಡಬೇಕೆಂಬುದೆ ತೋಚದಂತಾಯ್ತು.
ಮತ್ತೆ ಯಾರೋ ಮಾಟಗಾರರ ಬಳಿ ತೋರಿಸಿ
ಗುಣವಾಗುತ್ತೆ ಎಂದು ಯಾವುದೋ ವಿಳಾಸ ಕೊಟ್ಟರು.
ಅಲ್ಲಿಗೂ ಹೋಗಿ ತೋರಿಸಿದೆ.
ಆತ ಏನೇನೋ ತಿಸಕ್ ಮುಸಕ್ ಮಾಡಿ ನಿಟ್ಟುಸಿರಿಟ್ಟ.
ನಂತರ ಸುಧಾರಿಸಿಕೊಂಡು ಹೇಳಿದ.
'ಇದಕ್ಕೆ ಖಾದಿ ದೆವ್ವ ಬಡಿದಿದೆ.
ಎಂಥ ದೆವ್ವಾನಾದ್ರೂ ಬಿಡಿಸ್ತೇವೆ.
ಆದ್ರೆ ಈ ದೆವ್ವ ಬಿಡಿಸೋದು ನಮ್ಮಿಂದ ಅಸಾಧ್ಯ!'
ನನಗೂ ತಲೆ ಕೆಟ್ಟು ಹೋಯಿತು.
ಕವಿತೆಯನ್ನು ದರದರನೆ ಎಳೆತಂದು,
ನಾಲ್ಕು ಜನರ ಮಧ್ಯೆ ನಿಲ್ಲಿಸಿ ಎರಡು ಬಾರಿಸಿದೆ.
ಖಾದಿಬಟ್ಟೆಯನ್ನು ಹರಿದು ಗುಡ್ಡೆ ಹಾಕಿ ಸುಟ್ಟು ಬಿಟ್ಟೆ.
ನೋಡುತ್ತೇನೆ.
ನನ್ನ ಕವಿತೆ ಮೊದಲಿನಂತೆಯೆ
ನಿರಾಭರಣ ಸುಂದರಿ!

# ಫ್ರಾನ್ಸ್ ಮತ್ತು ಕಾವ್ಯ

❖ **ದಯಾನಂದ**

ಬೋದಿಲೇರ್ ಹೇಳಿದ:
'ಫ್ರಾನ್ಸ್‌ಗೆ ಕಾವ್ಯವೆಂದರೆ ಭಯ,
ಫ್ರಾನ್ಸ್ ಕವಿಯಿಂದ ನಿರೀಕ್ಷಿಸುವುದು
ವ್ಯಾಕರಣ ಮತ್ತು ಕಾಗುಣಿತದ ಪರಿಶುದ್ಧತೆಯನ್ನು ಮಾತ್ರ'

ಸೂಳೆಗೇರಿಯಲ್ಲಿ
ಅಲೆಯುತ್ತಿದ್ದ ಬೋದಿಲೇರ್‌ಗೆ
ಜೀನ್ ದುವಾಲ್ ಸಿಕ್ಕಳು
ಅವಳ ಎದೆ ನಿತಂಬ ತೊಡೆ ತೋಳಲ್ಲಿ
ಪಾಪದ ಹೂಗಳು
ಬಿರಿಯುವುದ ಕಂಡ
ಬೋದಿಲೇರ್‌ನ
ವ್ಯಾಮೋಹವನ್ನು
ಜೀನ್ ದ್ವೇಷಿಸಿದಳು

ಕನ್ನಡಿಯನ್ನು ಒರೆಸುತ್ತಾ
ಕುಂತ ಬೋದಿಲೇರ್‌ನ
ಮುಖ ಅಳಿಸಿ ಹೋಯಿತು
ಸತ್ಯದ ಹೊಗೆಯಲ್ಲಿ
ಅವನ ಉಸಿರು ಬಿಗಿಯಿತು

ಫ್ರಾನ್ಸ್ ಮತ್ತು ಜೀನ್
ಇಬ್ಬರಿಗೂ
ಬೋದಿಲೇರ್ ಅರ್ಥವಾಗಲೇ ಇಲ್ಲ.

# ಹುತ್ತಗಟ್ಟಬೇಕು

❖ ಸುಜಾತ ಲಕ್ಷ್ಮೀಪುರ

ಉರಿಯದ ಒಲೆಯ ಮುಂದೆ ಕುಳಿತು
ಹೊಗೆ ಕುಡಿದು ಕುಡಿದು ಕೆಮ್ಮಿ
ಶ್ವಾಸಕೋಶದ ತುಂಬಾ ಹೊಗೆ ತುಂಬಿಕೊಂಡು
ಕಣ್ಣುಗಳಿಗೆ ಬೂದಿ ಹಾರಿಸಿದ ಕಿಡಿ
ಮೈಕೈಯೆಲ್ಲಾ ಮಸಿ,ಕಸಿವಿಸಿ
ಚಿತ್ತ ಹುತ್ತಗಟ್ಟದೆಯೇ ಕೆತ್ತಿತೇನೋ!?
ಹಸಿವಿಗನ್ನದ ಚಿತ್ರ ಕಣ್ತುಂಬಿಕೊಳ್ಳುತ್ತ
ಹುತ್ತಗಟ್ಟಬೇಕು.

ಎಡೆಬಿಡದೆ ರಚ್ಚೆ ಹಿಡಿವ ಕಂದ
ತಳಸೇರಿದ ಬಾವಿಯೊಳಗಿನ ನೀರು
ಮೂಲೆಯಲಿ ಕುಟಾಣಿ ಸದ್ದು
ತಟ್ಟೆ ಹಿಡಿದು ಊಟ ಬೇಡುವ ಕೈಗಳು
ಬಡಿಸಿ, ಹಾಲೂಡಿ, ಬಳಿದು ಉಣ್ಣೋದೇ
ನಿತ್ಯ ದಿಗ್ವಿಜಯ.
ಸೋಲಿಲ್ಲ ಗೆಲುವಿಲ್ಲ. ಪ್ರಾಣ ತೆಗೆಯೋಲ್ಲ
ಬದುಕಿಸಿ ಬದುಕುವ ಪಾತ್ರ.

ಹೊಲದ ಸುತ್ತ ಬೇಲಿ ಪುಂಡದನಗಳ ಕಾಟ
ಸೆರಗು ಜಾರದಂತೆ ಬಿಗಿದು
ಮೊಣಕಾಲು ಕಾಣದಂತೆ ನಿಗಾ ಮಡಗಿ
ಬಗ್ಗಿ ನಾಟಿ ಮಾಡುವಾಗ ಹದ್ದಿನ ನೋಟಕೆ

ಸಿಕ್ಕಿಯೂ ಸಿಕ್ಕದಂತೆ ಉಳಿದರೂ
ಹಿತ್ತಲಿನಲಿ ಸರಿದ ಹಾವಿನ ಪೊರೆ.

ನೆತ್ತಿ ಮೇಲೆ ಸುಡುವ ಸೂರ್ಯ
ಗಾಳಿ ಬೀಸಲೂ ಬೇಸರಿಸುವ ಜವರಾಯ
ಎಷ್ಟು ಕುಡಿದರೂ ದಾಹ ತೀರದ ಹರೆಯ
ಮಡಿಲ ಮೇಲಾಡುವ ಕಂದನ ನಗೆಗೆ
ಉದರದೊಳಗಾಡುವ ಮೃಗಕೆ
ಕಂಡು ಕಾಣದ್ಹಂಗಿದ್ದು ಕೈಲಾಸ ಕಾಣಬೇಕು
ಇದ್ದಲ್ಲೇ ಇರುವಂತೆಯೇ ಚಿತ್ತ ಹುತ್ತಗಟ್ಟಬೇಕು.

# ಏಕಾಂಗಿ ಬಿಳಿಯ ಪಾರಿವಾಳ

**❖ರಾಜೇಶ್ ಮಳವಳ್ಳಿ**

ಹಿಂಸೆಯ ತಾಳಕ್ಕೆ
ಜಗದ ಎದೆ ಬಡಿತ ಮಿಡಿಯುತ್ತಿರುವಾಗ
ಪ್ರೀತಿಯ ಸಂದೇಶ ಹಿಡಿದು ಹೊರಟೆ
ಪ್ರೇಮದ ಒಂದೆರಡು ಬೀಜಗಳ ನೆಟ್ಟೆ

ನೆಲವಿನ್ನು ಹದವಿರಲಿಲ್ಲ, ಪ್ರೇಮದ
ಬೀಜ ಮೊಳೆಯಲಿಕ್ಕೆ
ಗಿಣಿಯಂತೆ ನನಗೂ ಪಾಠವೊಪ್ಪಿಸಿದರು
ನನ್ನದೇ ಮಾತುಗಳ
ಒಂದೆರಡು ಪದಗಳ ಅದಲು ಬದಲಾಯಿಸಿ

ರಕ್ತವನ್ನೇ ಉಂಡು
ರಕ್ತವನೇ ಬಸಿದು
ಹಸಿದಿರುವ ನೆಲದಲ್ಲಿ
ಪ್ರೇಮ ಮೊಳೆಯುವುದೇ?

ತಪ್ಪು ನನ್ನದೇ
ಸಹಸ್ರಾರು ವರ್ಷದಿಂದ
ರಕ್ತ ಬೀಜಾಸುರರನ್ನೇ ಬೆಳದ
ಭೂಮಿಯಲ್ಲಿ
ಏಕಾಏಕಿ ಹಸಿರು ನೆಟ್ಟಿದ್ದು

ನಿಜದಲ್ಲಿ ನನ್ನ ಬೀಜಗಳಾವವೂ
ಈ ನೆಲಕ್ಕಲ್ಲ
ಇಲ್ಲಿ ಭತ್ತ ಗೋಧಿಯ ಗಿಡದಲ್ಲೂ
ಬಾಂಬು ಬೆಳೆಯುತ್ತದೆ
ಗುಲಾಬಿಯ ಎಸಳಲ್ಲೂ
ನೆತ್ತರು ಒಸರುತ್ತದೆ

ನಿಮ್ಮಂತೆಯೇ ನಾನೂ ಏಕಾಂಗಿ
ಹಿಂದೊಬ್ಬ ಬುದ್ಧನಂತೆ
ನನ್ನಂತಹದೇ ಹುಚ್ಚ
ಸಾಹಸಕ್ಕೆ ಕೈ ಹಾಕಿ ಸುಟ್ಟುಕೊಂಡ
ಫಲವತ್ತಾದ ಪ್ರೇಮದ ಬೀಜಗಳನ್ನೇ
ಬಿತ್ತಿಯೂ
ಜೊಳ್ಳುಗಳು ಹುಟ್ಟಿದ್ದ ಕಂಡು
ನಿರುತ್ತರನಾದ

ಈಗ ನಾನೂ
ನಿಮ್ಮಂತೆಯೇ
ಯುದ್ಧ ಭೂಮಿಯಲ್ಲಿಯ
ಏಕಾಂಗಿ ಬಿಳಿಯ ಪಾರಿವಾಳ
ಹಗೆಯ ಹೊಗೆಯ
ರಣಾಂಗಣದ ಮೇಲೆ
ಶಾಂತಿಯ ಬೀಜ ಚೆಲ್ಲುವ
ಏಕಾಂಗಿ ಪಾರಿವಾಳ..!

# ಪದಬಂಧ

❖ ಡಾ. ಲಕ್ಷ್ಮಣ್ ವಿ.ಎ.

ಯಾರೊ
ಬರೆದಿಟ್ಟ ಪದ ಬಂಧದ
ಚೌಕದಲಿ ಮೈ ಮರೆತು ಕಳೆದು ಹೋಗಿದ್ದೇನೆ
ಹುಡುಕಿ ತಡುಕಿ ಹೊಂದಿಸಲಾಗದೆ ಈ ಗೊಂದಲ
ಗೋಜಲು ಪದಗಳ

ಯಾವ ಮೈ ಮರೆವಿನಲಿ
ಕಳೆದುಹೋಯಿತು ಶಕುಂತಲೆಯ
ಮೂರಕ್ಷರದ 'ಉಂಗುರ'
ಬದುಕು ಮೂರಾಬಟ್ಟೆ ಮೀನ ಹೊಟ್ಟೆ
ಬಗೆಯುವವರೆಗೆ ಈಗ

ತೊಗಲ ಚೀಲದ ' ಭಾರ '
ಹೊತ್ತು ತಿರುಗುವ 'ಕಾಯ '
ಅರೆ ಹೊತ್ತಿನಲಿ ಕೆರಳುವ ಸಣ್ಣ
ಕರುಳಿನ 'ಕೂಗು'
ಹಸಿದವರ ಮುಂದೆ ಉಂಡವರ
ಹುಳಿ 'ತೇಗು'
ಎಡದಿಂದ ಬಲಕೆ ಎರಡೇ ಎರಡು ಅಕ್ಷರ

ಸಿಕ್ಕರೆ ತಂದು ಕೊಡಿ ನಿಮ್ಮ ದಮ್ಮಯ್ಯ !

ಯಾರದೋ ಶಾಪಕೆ ಯಾರೋ ಶಿಕಾರಿ
ಕುರುಡು ಕುದುರೆಯ ಮೇಲಿನ
ಬದುಕಿನ ಸವಾರಿ
ಯಾವುದೋ ಮೈ ಮರೆವಿನಲಿ
ಕಳೆದುಕೊಂಡ ಮಾನ
ಒಡಲು ಗೊಂಡವಳಿಗೆ ಮಾತ್ರ
ತಿಳಿಯುವುದು ಕಳೆದುಕೊಂಡವರ
ನೋವ

ಯಾರ ಯಾರದೋ ಋಣದ ಭಾರ
ಹೆಗಲು ಹೊತ್ತು
ಮರೆತು ಮೆರೆವ ಲೋಕ

ಹಗಲಿರುಳೂ
ಹುಡುಕುತ್ತಲೇ ಇದ್ದಾರೆ
ಎಲ್ಲರೂ ಏನಾದರೊಂದು ಇಲ್ಲಿ ಕಳೆದುಹೋದವರ
ನೆರಳುಗಳನ್ನು ಇದ್ದವರ ಕಣ್ಣಿಗೆ ಹೊಂದಿಸಿ

ಹೊಂದಿಕೆಯಾಗದ ಜಗ
ತುಂಬಲಾಗದ ಬಿಟ್ಟ ಜಾಗ
ಕೊಟ್ಟು ಮರೆತವನನು ಕಲ್ಲಾಗಿ
ಕುಳಿತಿರಲು ಮೇಲೆ

ಮೂರು ಲೋಕ ಸುತ್ತುವ
ನಿನಗೆ
ಎರಡಕ್ಷರದ ಪದ
ಸಿಗಲಾರದೇ ನಿಮ್ಮ ದಮ್ಮಯ್ಯ !
ಮೂರಕ್ಷರ ಪದದ ಉಂಗುರ ತಂದು
ಕೊಡು ತಂದೆ ನಿಮ್ಮ ಪಾದ!
ಇಂದೇ
ಬಿಡಿಸುವೆ ಪದ ಬಂಧ

# ಚಿಲ್ಲರೆ ಪದ್ಯ

❖ನಾಗರಾಜ ಕೋರಿ

ಯಾಕಿಷ್ಟು ಹಗುರತನ
ನಮ್ಮೊಳಗೆ ನಾವು ನಾವಾಗಲಿಲ್ಲ
ಬರೀ ಬದುಕೆಂದರೆ ಅಂಡಬಂಡವೇ

ಸತುವು ಮೀರಿ
ತುರುಬು ಕಟ್ಟಿ ಹಾಕಬೇಕೆಂದು
ಹಗಲೆಲ್ಲ ಒದ್ದಾಡಿದರೂ
ಒಂದು ನಿಮಿಷದ ಸ್ಖಲನದ ಕಸಮುಸುರಿಯಷ್ಟೇ

ಕೊನೆಗೆ ಸಾಕಾಗಿ
ಅವಳ ತಂಬೂರಿಯಂಥ ಒಣ ಹೇಸಿಗೆ
ಹೆಪ್ಪಿಟ್ಟು, ಕಾದಿಟ್ಟ ರಾತ್ರಿಯನ್ನು
ಮೂರು ಮೂಲೆಗೆ ತಳ್ಳಿ
ಜಗವ ನಿರಾಕರಿಸಿರುವುದೇ ತಣಿವಿನ ಪುಣ್ಯವಂತೆ
ಛೇ.. ಏನು ಮಾಡಲಿ
ಅವತ್ತೆ
ಜೋತಿಷ್ಯ ಗೀಚಿದ
ರಾಹುಗಾಲದ ಯಮಗಂಡ ಕಾಣವಂತೆ?
ಎಲ್ಲವೂ ಹತೋಟಿಗೆ
ತರಬೇಕೆಂದು, ನೀಗಬೇಕೆಂದು, ಮಾಗಬೇಕೆಂದು
ಪಾವು ಖಂಡದಷ್ಟಿದ್ದ ಆಳತಳವು ಮಾರಿ
ಬಯಲು ಬಯಲಾಗಿ ನಿಂತೆ

ಅವರೆನ್ನುವ ದಟ್ಟ ಕಾಡೊಳಗೆ
ಬೆತ್ತಲೆ ಫಕೀರನನ್ನಾಗಿಸಿದರು
ಸುಮ್ಮನೆ ಖಾಲಿತನ ಜಾಡಿಸಿಕೊಳ್ಳಲು.

ಸಾಕು ಮಾಡು ಒಗಲುತನ
ಮುಗಿಲೆತ್ತರಕೆ ಏರಿಸಿದೆನೆಂದು
ನಕಲಿ ಬೀಗಬೇಡ
ಎಂದೋ ಬುನಾದಿ ಹಾರಿದವನು
ಧೂಳಿಡಿದಿದ್ದಾನೆಂದು
ಇಲ್ಲೆಲ್ಲೋ ಮಳ್ಳಬೆಕ್ಕು ಬೊಗಳಿದ್ದೇ ದುರಂತ.

ಈ ಪುಕ್ಕಟೆಯ
ಹಗಲು ರಾತ್ರಿಗಳನು
ದೇವರ ಸುತ್ತ ಹಾಳುಗುಡಿಯ ಜಂತಿಗೆ
ನೇತು ಹಾಕಬೇಕೆಂದು
ತೊರಗ ಬರಗ ಕಿಸಾಮತ್ ಮಾಡಿದ್ದೆ
ತಣ್ಣೀರು ತಣ್ಣೀರಾಗಿದ್ದೆ
ಈ ಕಾಲದ ಪವಾಡವಂತೆ.

ಯಾರೋ
ನಾಯಿತಲೆ ತಿಂದವನು
ದರೋಡೆ ಮಾಡಿ ಹೋಗಿದ್ದ.
ಅವನನ್ನು ಅಡ್ಡಾದಿಡ್ಡಿ
ದಿಡ್ಡಿ ಬಾಗಿಲಲ್ಲಿ ಹುಡುಕಿದೆನೆಂದರೆ
ಮೈಯಲ್ಲಿ ಕರೆಂಟಿಲ್ಲವೆಂದು
ಮುಲ್ಲಾ ಕೂಗುವ ಮುನ್ನ
ಕೊಳ್ಳಿದೆವ್ವ ಬೊಗಳಿತು
ನಾಳೆಯ ಬಜೆಟ್ಟಿನ ಸಬ್ಸಿಡಿಗೆ
ಓದು ಬರಹ
ಸಾಕುಸಾಕೆಂದು ನಿಲುಬಿದ್ದು, ನುಚ್ಚೆದ್ದು
ಅವಳ ನೀಲಿ ಬ್ರಾದಂತೆ ಕಾಣುವ,

ದೀಗಿಯಂತೆ ಉರಿವ
ಮುಟ್ಟಿನಂತೆ ಒಸರುವ
ಫೇಸ್ಬುಕ್, ಇನಸ್ಟಾಗ್ರಾಂ ಅನಿಸಿ
ಅಲ್ಲಿ ನನ್ನದೇನಾದರೂ
ದಶಾವತಾರ ಸಿಂಬಲ್ಲುಗಳಿಗೆ
ಒತ್ತಿದೆನೆಂದರೆ
ಅಲ್ಲಿ ಜಾಗವಿಲ್ಲದ ಜಗಲಿನೇ ಇರಲಿಲ್ಲ.
ಅದೊಂದು ತತ್ವಮೀರಿದ
ನರಸತ್ತವರ ಕಾಮಟೀಪುರವಾಗಿದ್ದೆ ಸೋಜಿಗ.

ಅಲ್ಲೊಂದು
ಅಪ್ಪವ್ವನ ಕಡೆ ಸಮಾಧಿವರೆಗೂ
ತಲೆ ತಿನ್ನುವ, ಒಡಲುರಿವ,
ಮಸಾರಿ ಹೊಲ, ಹುಂಚೆಮರ,
ತೊಂಡುಮೇವು, ಕರಿ ಆಕಳ, ಊರ ಬಣವೆ,
ಹಾಳುಮನೆಯ ಚೆಲುವೆಗೆ
ಒಂದು ತುಡುಗುತನದ ಲೈಕಿತ್ತಷ್ಟೇ?

# ಕಾಡುವ ಸಂತ

❖ **ಅನುಸೂಯ ಯತೀಶ್**

ಕಾಲದ ಹಂಗು ಮೀರಿ
ಎಲ್ಲರನು ಸದಾ ಕಾಡುವ ಪಕೀರ
ಶಾಂತಿಯ ಜಪಿಸುತ್ತಲೆ
ಈ ನಾಡ ಶಾಂತಿಯ ಬೀಡಾಗಿಸಲು
ಹಗಲಿರುಳು ತಪವನ್ನೆ ಮಾಡಿದೆ

ಸಂತ,
ನಿನ್ನೊಳಗಿನ ಅಪರಿಮಿತ ಭರವಸೆ
ನಮ್ಮ ಮೇಲೆ ಛಾಯೆ ಬೀರಿದೆ ನೋಡು
ನಾವದನೆಲ್ಲ ಹುಸಿ ಮಾಡಿ
ಹುಡುಕುತ್ತಿದ್ದೇವೆ ಮತ್ತದೇ ಮಂತ್ರವನ್ನು

ಸತ್ಯದ ಬೀಜ ಬಿತ್ತಿ ಮರೆಯಾದೆ
ನಾವೀಗ ಸುಳ್ಳಿಗೆ ಬಂಗಾರದ ಲೇಪನ ಹಚ್ಚಿ
ನಾವಾಡುವ ನುಡಿಗಳಲ್ಲಿ, ನಡೆಗಳಲ್ಲಿ
ಅಮರವಾಗಿಸಿದ್ದೇವೆ
ಎಂದೂ ಅಳಿಸದಂತೆ, ಮಾಸದಂತೆ

ಹಿಂಸೆ ಕ್ರೌರ್ಯಗಳ ಬಗ್ಗೆ
ನಿನಗದೆಷ್ಟು ತಿರಸ್ಕಾರವಿತ್ತು
ಕೇಳು ಸಂತ
ಈಗ

ಊರು ಕೇರಿಗಳಲ್ಲಿ, ಗಲ್ಲಿಗೂಡುಗಳಲ್ಲಿ
ಖಡ್ಗ ಝಳಪಿಸಿ
ಪವಿತ್ರ ಧರೆಗೆ ಕೆಂಬಣ್ಣದ
ಸೀರೆಯನುಡಿಸಿ ಸಂಭ್ರಮಿಸುತ್ತಿದ್ದೇವೆ

ನಿನ್ನೆಲ್ಲ ಆದರ್ಶಗಳು ತತ್ವಗಳು
ಮರೆಯಾಗುತ್ತಿವೆ ಎಂದು ರೋಧಿಸದಿರು,
ಮರುಕವ ಪಡದಿರು
ನೋಡು ನೋಡುತ್ತಲೇ ಇರು ಕತ್ತೆತ್ತದೆ
ಅಲ್ಲಿ ಕಾಣುತ್ತಿವೆ ನೋಡು
ಎತ್ತರದ ಗೋಪುರದ ಮೇಲೆ
ನೀಲಿ ಮಿನಾರದ ಕೆಳಗೆ
ನಿನ್ನದೆ ಹೆಸರಿನ ಘೋಷವಾಕ್ಯಗಳು

ನಾವು ಸಂಭ್ರಮಿಸುತ್ತಲೇ ಇರುತ್ತೇವೆ ಸಂತ
ನಿಲ್ಲಿಸಿದ ಸ್ತಂಭಗಳ ಪ್ರತಿಮೆಗಳ
ಅನಾವರಣಗೊಳಿಸಿ ಹೆಮ್ಮೆಯಿಂದ ಬೀಗುತ್ತಿದ್ದೇವೆ

ಸತ್ಯಾಗ್ರಹವನ್ನು ನಾವೂ ನಿನ್ನಂತೆ
ಅಸ್ತ್ರ ಮಾಡಿಕೊಂಡಿದ್ದೇವೆ
ವ್ಯತ್ಯಾಸವೊಂದೆ
ನಿನ್ನ ಹೋರಾಟದಲ್ಲಿ ತಿರುಳಿತ್ತು, ತ್ಯಾಗವಿತ್ತು
ನಮ್ಮಲ್ಲಿ ಸ್ವಾರ್ಥ ಲಾಲಸೆ ಅವಕಾಶವಾದಿತನದ
ಮುಖವಾಡವಿದೆ, ಚಿಂತಿಸದಿರು
ರಾಮರಾಜ್ಯದ ಕಲ್ಪನೆ ನೆನೆದು

ಕಣ್ಣೀರು ಹಾಕದಿರು ನಮಗಾಗಿ
ನೀನೊಮ್ಮೆ ಯೋಚಿಸು
ಬೇರು ಬಿಟ್ಟ ಅಸಮಾನತೆಯ
ಜಾಡು ತೊಲಗಿಸಲಾದೀತೆ
ಲಾಭ ನಷ್ಟಗಳ ತಕ್ಕಡಿಯಲ್ಲಿ

ಸೇವಾ ಮನೋಭಾವ ತುಂಬಲಾದೀತೆ
ಯಾವುದು ಮೊದಲಿನಂತಿಲ್ಲ ಪ್ರಭುವೆ
ಎಲ್ಲವನ್ನು ಆದಿಯಿಂದ ಪ್ರಾರಂಭಿಸಬೇಕಿದೆ

ಮತ್ತೊಮ್ಮೆ ಹುಟ್ಟಿ ಬರಬೇಕೆಂಬ
ಆಶಯ ನಿನ್ನಲ್ಲಿದ್ದರೆ ಯೋಚಿಸಿ ನೋಡು
ಭ್ರಷ್ಟತೆ, ಮತಾಂಧತೆ, ದಾರಿದ್ರ ತೊರೆದು
ಪ್ರಾಮಾಣಿಕ ಗೂಡುಕಟ್ಟಲು ಸಿದ್ಧನಾಗಿ ಬಾ

ನಿಲ್ಲು ಮತ್ತದೇ ಸತ್ಯ ಶಾಂತಿ ಅಹಿಂಸೆಯ
ಅಸ್ತ್ರ ತಂದರೆ ಸಾಲದು
ಬೇರಿನಿಂದ ಬೇಧಬಾವ ಕಿತ್ತೊಗೆಯಲು
ಹೊಸದೊಂದು ಶಸ್ತ್ರ ತಾ
ಬೂಟಾಟಿಕೆ ತೋರುವ ಜನರಿಗೆ
ತಕ್ಕ ಶಾಸ್ತಿ ಮಾಡಲು ಬಾ

# ಚಿತ್ರಸಂತೆಯಲಿ ಚದುರಿಬಿದ್ದ ಕನಸುಗಳು

**❖ಶಿವಶಂಕರ ಸೀಗೆಹಟ್ಟಿ**

ಜಗವೆಂಬ ಜಗವೆಲ್ಲ ಆಡುಂಬೊಲವೇ ಆಗಿ...
ಹೃದಯ ಹೃದಯಗಳಿಗೂ
ಬಂದೂಕಿನ ನಳಿಕೆ ಹಿಡಿದು
ಗುಂಡು ಹಾರಿಸಿ
ಕೊಲ್ಲುವ ಸುಪಾರಿಗಿಳಿದವರು
ಸುತ್ತಲೂ ಸರಹದ್ದಿನಲ್ಲಿದ್ದಾರೆ
ಅವರಿಗೆ ಕರುಣಾಮೈತ್ರಿಯ ಆನಂದವನು ಹಂಚದೆ
ಅಂಚಿಗೆ ಸರಿಸುವುದಾದರೂ ಹೇಗೆ?

ಬಯಲ ಮಕ್ಕಳ ತಾಯಿ
ಬಂಧನಗಳಿದ್ದರೂ ಬಾಂಧವ್ಯ ಕಟ್ಟಿಕೊಂಡಿದ್ದವಳು
ಎದೆಯ ಬಟ್ಟಲೊಳಗಣ
ಪ್ರೀತಿಯ ಪಾಕವನ್ನು
ಮೊಗೆದು ಕೊಟ್ಟವಳು
ಆಕೆಯ ತನುವ ಓಗರವನುಂಡು ಮನವ ಹರಾಜಿಗಿಟ್ಟು
ಪರಾರಿಯಾದ ಖದೀಮರು
ನಿತ್ಯವೂ ತಿರುಗಾಟದಲ್ಲಿದ್ದಾರೆ
ಅವರ ಉಸಿರಿಗೆ ಪ್ರಜ್ಞೆಯ ಉಣಬಡಿಸದೆ
ಇಲ್ಲಿ ತಾಳಿ ಬಾಳುವುದಾದರೂ ಹೇಗೆ?

ತಾಯ್ನುಡಿಯು ಬೆಟ್ಟದಷ್ಟಿದ್ದು
ಬೆಟ್ಟದ ಬಯಲಿನಲಿ ಸಿಕ್ಕಷ್ಟು ಮೆದ್ದು

ಪೊರೆದ ತಾಯ್ತನವ
ಪರರಿಗೆ ಅಡವಿಡಲು
ಗುಡಿಯೊಳಗೆ ಪದಗಾರುಡಿಗರ ದಂಡೆ ಕಾಯುತ್ತಿದೆ
ಪೊರೆಬಂದ ಆಸ್ಥಾನದಲ್ಲಿ ಅವರೀಗ ಪೀಠಸ್ಥರು
ನುಡಿದೀಪದ ಎಣ್ಣೆಬತ್ತಿಯ ಕಾಲದಲ್ಲಿ
ಕತ್ತಲಿಗೆ ಕಂದೀಲು ಹಚ್ಚಿ
ಬೆಳಕನ್ನು ಬೆಳಕಾಗಿಸದೆ
ಬಂಧಿಸುವುದಾದರೂ ಹೇಗೆ?

ಮೋಜು ಮಸ್ತಿಯ ಆಟಾಟೋಪದಲಿ
ಬಿದ್ದಿರುವಂತೆ ಅನೇಕರು
ತುತ್ತು ಅನ್ನಕ್ಕಾಗಿ ಜೀವಯಾನದಲಿ
ಬಸವಳಿದಿದ್ದಾರೆ ಅಸಂಖ್ಯಾತರು
ಅವರ ಹಸಿವಿಗನ್ನವನಿಕ್ಕದೆ
ಭೋಗದಲಿ ಭಕ್ಷ್ಯವನು
ಸೇವಿಸುವುದಾದರೂ ಹೇಗೆ?

ಚದುರಿಬಿದ್ದ ಚಿತ್ರಸಂತೆಯಲಿ
ಆತ್ಮ ಕನ್ನಡಿಯ ಚೂರುಗಳು
ಚೆಲ್ಲಾಪಿಲ್ಲಿಯಾಗಿವೆ
ಅವು ಬರಿಯ ಚೂರುಗಳಲ್ಲ
ಚುಚ್ಚುವ ಸೂಜಿಮೊನೆ
ಅವು ಬರಿಯ ಕನ್ನಡಿಯಷ್ಟೇ ಅಲ್ಲ
ಕಾಡುವ ನೆನಪಿನ ಖಜಾನೆ
ಬಿಟ್ಟು ಹೊರಡುವುದೋ
ಎತ್ತಿ ನಡೆಯುವುದೋ
ಕಾಡುತಿದೆ ಒಳಹೊರಗೆ

# ದಾರಿ ಇನ್ನೂ ದೂರ

**❖ಎಡೆಯೂರು ಪಲ್ಲವಿ**

ಮನದ ಹಾಸಿಗೆಯಲ್ಲಿ ಮಾಗಿ
ಹುಟ್ಟುವುದು ಚೆಂದನೆ ಕೂಸು ಕವಿತೆ
ಹೊಳಪು ಕಣ್ಣಲ್ಲಿ
ಕರೆಗೆ ಮಿಡಿದ ಅದರ ಪ್ರಕಟಣೆ
ಹೋಗಬೇಕು
ಗಂಡಿನ ಕರುಣೆಯಲ್ಲೇ?
ಅವನ ಆಸರೆಯಲ್ಲೇ

ಅಲೆಗಳಿಂದ ಹೊರದೂಡಲ್ಪಟ್ಟ
ಮತ್ಸ್ಯದ ಆಕ್ರಂದನ ಬೆಸ್ತನಿಗೆ ಅಂಟುವುದೇ?

ಕಂಬನಿಯ ಕೂಪದೊಳಗೆ
ಇಂಗಿದ
ಬೆದರಿ ಕತ್ತಲೆಯಿಂದೊರಬರದ
ಅವಿತ ಕವಿತೆಗಳೆಷ್ಟೋ

ಸಿಗುವುದು ಒಂದೇ ಆಯ್ಕೆ
ಹೆಡೆ ಬಿಚ್ಚಿ ನಿನ್ನ ದಾರಿ
ನೀ ನೋಡಿಕೊ
ಇಲ್ಲ,
ಹೆಡೆ ಸೆಟೆಸದೆ

ಬುಟ್ಟಿಯಲ್ಲಿ ಜನ್ಮ ಸಾರ್ಥಕ ಪಡಿಸಿಕೊ
ಇರುವುದು ಒಂದೇ ಆಯ್ಕೆ, ಸಿಗುವುದು ಅಷ್ಟೆ

ಮೌನದೇವಿ? ಸಿರಿದೇವಿ?
ವಾಗ್ದೇವಿ? ಮೂದೇವಿ?
ನಿಮ್ಮದೇ ನಾಮಕರಣಗಳು

ಯಾರ ಬಳಿ ಬಿಕ್ಕಲಿ ಇದ
ಆತ್ಮ ಬಂಧುಗಳು? ಒಡನಾಡಿಗಳು?
ಸ್ನೇಹಿತರೇ?
ತಾಪತ್ರಯಗಳ ಜಡ ಲೋಕದಲ್ಲಿ
ಒಳಪಟ್ಟರೆ
ನನ್ನ ನೋವು ತಾತ್ಸಾರಕೆ

ಕೊನೆಗೆ,
ಯಾರಿಗೆ ಬೇಕಿದೆ ಕವಿತೆ?

ಮಡಿಲಲ್ಲಿ ಅವಿತಿಟ್ಟು
ಮನದಲ್ಲೇ ನೇವರಿಸಿ
ಬಿಗಿದಪ್ಪಿ ಹೊದ್ದು
ಮಲಗುವೆ ಕವಿತೆಯನ್ನೇ

ಗರ್ಭ ಕಟ್ಟುವ ಹಕ್ಕಿಗೂ
ಸ್ವಾತಂತ್ರ್ಯ ಸಿಗುವುದೆಂತು
ಮಾತಿಗೆ ನಿಲ್ಲುವುದೆಂತು
ಗೆಳತಿ,
ಸವೆಸಬೇಕಿದೆ ದಾರಿ ಇನ್ನೂ
ದೂರ ದೂರ ದೂರ

# ಕಣ್ಣುಗಳು

**❖ಪ್ರಕಾಶ್ ಕೋನಾಪುರ**

ಎರಡು ಕಣ್ಣುಗಳ ಮೇಲೆರಡು ಕಣ್ಣು
ಬರಲು ಕಾಯಬೇಕು ಚಾಳೀಸು
ಚಾಳೀಸಿಗೆ ರೆಪ್ಪೆಯ ಅಪ್ಪಣೆ ಬೇಕಿಲ್ಲ
ರೆಪ್ಪೆಗೋ ಚಾಳೀಸಿನ ಹಂಗಿಲ್ಲ

ಕವಿಯ ಕವಿತೆಗೂ ಕಣ್ಣುಗಳಿವೆ
ಕವಿಯು ಕವಿತೆಗೆ ಕಣ್ಣು ಕೊಟ್ಟಿದ್ದಕ್ಕೆ
ಕವಿಯನ್ನು ಜೈಲಿಗೆ ಅಟ್ಟಲಾಗಿದೆ
ಕಣ್ಣಿರುವ ಕವಿತೆಗಳನ್ನು ನಿಷೇಧಿಸಲಾಗಿದೆ

ಪ್ರಭುತ್ವದ ಕಣ್ತೆರೆಯಲೆಂದು
ಕವಿತೆ ಬರೆದು ಜನರ ಕಣ್ತೆರೆಸಿದ
ಕವಿಯ ಕಣ್ಣನ್ನು ಕೀಳಲಾಗುತ್ತಿದೆ

ಕವಿ ತನ್ನ ಕವಿತೆ ಓದಬೇಡಿ ಓದಬೇಡಿ
ಎಂದು ಜೋರಾಗಿ ಕಿರುಚಿ ಕಿರುಚಿ
ಹೇಳಿದರೂ ಕಣ್ಣಿನ ಬಿಡುಗಡೆಗೆ
ಜಾಮೀನು ನಿರಾಕರಿಸಲಾಗಿದೆ

ಪ್ರಭುತ್ವದ ಕರ್ಣಗಳಿಗೆ ಕಣ್ಣಿರುವಂತೆ
ಕರುಳಿಗೆ ಕಣ್ಣಿರಬೇಕಿತ್ತು
ಪ್ರಭುತ್ವದ ಕಣ್ಣಿಗೆ ಲಕ್ವಾ ಹೊಡೆದಿದೆ

ಮಾರುಕಟ್ಟೆಯಲ್ಲೀಗ ಬಣ್ಣ ಬಣ್ಣದ
ಚಾಳೀಸಿನದೇ ಅಬ್ಬರ
ಹಸಿವಿನಿಂದ ಹೊಟ್ಟೆ ಬೆನ್ನಿಗೆ
ಅಂಟಿಕೊಂಡರೂ
ಜನರ ಕಣ್ಣಿಗೆ ಪೊರೆ ಬಂದಿದೆ

ಜನರ ಕಣ್ಣಿನ ಪೊರೆ ತೆರೆಯಲು
ಮತ್ತೆ ಮತ್ತೆ ಕವಿತೆ ಬರೆಯುತ್ತೇನೆ
ಕವಿತೆಗಳಿಗೆ ಕಣ್ಣು ಕೊಡುತ್ತೇನೆ
ಜೈಲಾದರೇನು ಗಲ್ಲಾದರೇನು
ಮತ್ತೆ ಮತ್ತೆ ಕಣ್ಣಿರುವ
ಕವಿತೆಗಳನ್ನೇ ಬರೆಯುತ್ತೇನೆ

# ನಡೆಯುವುದು ಅನಿವಾರ್ಯ

**❖ದೊಡಕಲ್ಲಹಳ್ಳಿ ನಾರಾಯಣಪ್ಪ**

ದಾರಿಯೊಂದಿಗಿನ ಜಗಳ ಇಂದು ನಿನ್ನೆಯದಲ್ಲ
ನಾಳೆಗೆ ಕೊನೆಯಾಗುವುದೂ ಅಲ್ಲ
ಕಾಲು ಸೋತರೂ ಮನಸಿಲ್ಲಿ ನಡೆಯುತ್ತೇನೆ
ಜೊತೆಯಲ್ಲೇ ಇರುವ ಸಾವು ರಕ್ತದಾಹದಿಂದ
ಈಗಷ್ಟೇ ಎಳೆಯ ನಾಯಿಯ ಕರುಳಿನ ಹಾರದಿಂದ
ಅಲಂಕೃತ ಗೊಂಡು ತೃಪ್ತಿಯ ಪದ ಹಾಡುತ್ತಿದೆ

ಅವರ ಪಯಣ ಅವರದಾದರೂ
ಒಬ್ಬರ ಮೇಲೊಬ್ಬರು ನಡಯುತ್ತಲೇ ಇರುತ್ತಾರೆ
ನನ್ನ ನೆತ್ತಿಯ ಮೇಲೆ ಮೂಡಿರುವ ಪ್ರತಿ ಹೆಜ್ಜೆ
ವಿಚಿತ್ರತೆಯ ಸಂಕೇತವಾಗಿ ಮೆರೆದಿದೆ
ದಾರಿಯಲ್ಲಿ ಬೆರೆತು ಹೋಗುತ್ತಿರುವ ತರಗೆಲೆಯ
ಕೊನೆಯ ಮಾತು ನಿದ್ದೆ ಕೆಡಿಸಿದೆ
ಬಿದ್ದವರು ಬಿದ್ದ ಹಾಗೆ ಹೋದವರು ಹೋದ ಹಾಗೆ
ಪಯಣವೇ ಏಕೆ ಹೀಗೆ ಅತಿಯಾದ ಗೊಂದಲ ನನಗೆ

ನಡುದಾರಿಯಲ್ಲಿ ಇದ್ದೆ ; ಸುತ್ತ ವಾಹನಗಳ ಸದ್ದು
ಆ ಸಾಲುಗಳು ಆಗಲೇ ಹುಟ್ಟಬೇಕೆ
ಋಣವಿಲ್ಲ ಮರೆತು ಬಿಡು ಅಂದಿತು ಗಾಳಿ
ಅದು ಸಾಧ್ಯವಾಗುವ ಮಾತೇ ಹೇಳಿ
ಮತ್ತೆ ಮತ್ತೆ ಹೇಳಿಕೊಂಡೆ ಹಾಡಿಕೊಂಡೆ
ಎದೆಯಲ್ಲಿ ಭದ್ರಪಡಿಸಿದೆ

ಎಂದಾದರೂ ಒಂದು ದಿನ ಬರೆದು ಓದಬೇಕು
ಅವಳು ಮತ್ತೆ ಹೂ ಮುಡಿದಾಗ

ತುಟಿಯ ದಾಟಿ ಹೋಗದ ಎದೆಯ ಗೋಳು
ಕುದಿ ಕುದಿಯುತ್ತಲೇ ಸಾಗುವುದು ಕಷ್ಟ ಸಾಧ್ಯ
ರೆಪ್ಪೆಯ ಅಣೆಕಟ್ಟು ದುರ್ಬಲಗೊಳ್ಳದಿರಲು
ನಗುವ ಮೆತ್ತಿಕೊಂಡು ಅರ್ಥವಾಗದ ಪದವನ್ನು
ಗುನುಗುತ್ತ ನಡೆಯಲು ಯತ್ನಿಸಿದ್ದೇನೆ
ಮನದ ಭಾರ ಹೆಜ್ಜೆಗಳಿಗೆ ಇಳಿದಿದ್ದು ಗೊತ್ತಾಗಲೇ ಇಲ್ಲ
ಕ್ಷಮಿಸು ದಾರಿಯೇ ನಡೆಯುವುದು ಅನಿವಾರ್ಯ

# ಕಲ್ಕಿಯವತಾರಕೆ ಮುನ್ನ

❖ರಾಜ್ ಆಚಾರ್ಯ

೧

ಜಾತಿ–ಧರ್ಮ–ಕುಲದ ಕುಲುಮೆಗಳಲಿ
ಕ್ರೌರ್ಯದ ಕತ್ತಿಗಳುತ್ಪಾದನೆ ಅನವರತ
ಕಾಯ್ವ ದೈವಗಳ ಹೆಸರಿನಲಿ ಕೊಲುವ
ಕಾಯಕ ಕಲೆ ಮನುಜನಿಗೆ ಮಾತ್ರ ಕರಗತ
ದ್ವೇಷಾಸೂಯೆಗಳ ರುಜಿನಕೆ ಪ್ರೀತಿ ಎಂದಿಗೂ
ಅವಧಿ ಮೀರಿದ ಔಷಧದಂತೆ ಅನುತ್ಪಾದಿತ
ಧರ್ಮಸ್ಥಾಪನೆಗೆ ಮತ್ತೆ ಇದೇ ಭುವಿಯಲಿ
ಅವತಾರವೆತ್ತಲು ಭಯ ಬಿದ್ದನಂತೆ ಭಗವಂತ

೨

ಮನಸುಗಳ ಮುಳ್ಳು–ಕಂಟಿಗಳಿಗೆ ಹಬ್ಬಿದ
ಬಳ್ಳಿಯಲಿ ರಸಗಂಧವಿರದ ಹೂವ ಸಹಜತೆ
ಅಹಮಿಕೆಯ ಧೂಳು ಧಾಳಾಗಿ ಮೆತ್ತಿದ
ಕನ್ನಡಿಯಲಿ ಅಸ್ಪಷ್ಟ ಬಿಂಬ ಮಾನುಷತೆ
ಆತ್ಮರತಿ ಕ್ರೀಡೆಯಲಿ ತನ್ನತನವನೇ ಮಾರಿ
ಅವರಿವರಿಗೆ ಅಡವಿಡಲಾದ ಆತ್ಮನಿಷ್ಠತೆ
ಸೃಜನವಾಗದ ಗುಣಹೀನ ಅಂತರಂಗದ
ಪಡಿಪಾಟಲ ಪದಗಳ ನಗೆಪಾಟಲು ಕವಿತೆ

೩

ಸಡಿಲಾದ ನಂಬಿಕೆಯ ನೊಗಕೆ ಕಟ್ಟಿದ
ಸಂಬಂಧಗಳ ಬದುಕು ಬಂಡಿಯ ಪಯಣ
ಅತ್ತ ಗುರುವಿಲ್ಲ ಇತ್ತ ಗುರಿಯಿಲ್ಲ ಸಾಗಿದೆ
ಮಾನವನ ಸ್ವವಿನಾಶಕೆ ಬೀಳುವುದೆ ಕಡಿವಾಣ
ಅಸಹಜತೆಯೇ ಸಹಜ ವಿಕೃತಿಯೇ ಪ್ರಕೃತಿ
ಮೆರೆವ ಮನುಜ ಎಂದಿಗೂ ಪರಿಸರಕೆ ತೃಣ
ಕಲ್ಕಿಯವತಾರಕೆ ಕಾಯದೆ ಕಟ್ಟಲಾದೀತೆ
ಮೌಲ್ಯಗಳ ಮೇಲೆ ಹೊಸಜಗದ ನಿರ್ಮಾಣ?

# ಕಾಶ್ಮೀರ....

**❖ರವಿ ತೊಂಡಗೆರೆ**

ಬೇಸತ್ತು ನಡೆದೆ ಹೋಗುತ್ತಿದ್ದೇನೆ
ದೇವರ ನಾಡಿಗೆ ಅದೂ ನನ್ನ ಕಾಶ್ಮೀರ
ಭೂತ ಮೃಗವಿಲ್ಲವಂತೆ ಶಿರವಂತೆ ಶಿವತಾಣವಂತೆ

ಅಂಟಿದ ಜಾತಿಕೀವು ಬಿಟ್ಟರು ಬಿಡದೆ
ನೆಟ್ಟಗೆ ನೆಂಟನಂತೆ ಬೆಟ್ಟದಂತೆ ಹಿಂಬಾಲಿಸಿ
ಬಯಲಾಗಿ ಹೊರಬಿದ್ದೆ ಶುದ್ಧವಾದ ಭಾವ

ಗಡಿಯಾಚೆ ನಿಂತು ಮುಟ್ಟದವ ಅಸ್ಪೃಶ್ಯನೆಂದೆ
ತಿವಿದು ಚಿಲಕ ಚಡಿದು ತಿಲಕ ಎಳೆದರು ಬೆನ್ನ ತಟ್ಟಿ
ನನ್ನ ಗರ್ವದಿಂದ ಘರ್ಜಿಸು ನೀನು ಹಿಂದೂ ಎಂದರು

ಸನಾತನ ಪರಂಪರೆಗೆ ವಸಂತಕಾಲ
ನಾಡಿನುದ್ದಕು ಮಂಕುಭೀತಿ ಹುಟ್ಟಿನ ರುಜುವಾತಿಗೆ
ದಾಖಲೆಗಳ ಶೋಧನೆ ರೋಧನೆ ಬೋಧನೆ

ಅದೋ ಅಲ್ಲಿ ಒಂದು ಸಂತಸ ಎರಡು
ಬೇಸರ ವಿಗ್ರಹ ವಿರೋಧಿಗಳು ಪಟವಿಡಿದು
ನಿಂತು ಬಾಬಾ ದೇವರನ್ನು ಕೂಗಿಕೂಗಿ ಕರೆಯುತ್ತಿದ್ದರು

ಅದೋ ಶ್ವೇತ ವರ್ಣದ ಕಾಶ್ಮೀರ ಅಲ್ಲಿ
ಪಂಡಿತರ ಗುಂಡಿಗೆಯ ಸುಟ್ಟಬಾಡಿನ ಘಮಲು
ಹೆಂಗಸು ಮಕ್ಕಳ ಹರೆಯ ತಿಂದು ತೇಗಿದವರ ಅಮಲು ಆರಿರಲಿಲ್ಲ

ನಿಸರ್ಗದ ಮೇಲೆ ರಕ್ತದ ಕಲೆಗಳು
ನರರ ಬೆಂದ ಬೂದಿ ಕೊಳೆತು ಕರಗುತ್ತಿದ್ದವು ಉಗ್ರ
ಆ ಮಾಯಕರು ಬೆಂಕಿ ಹಚ್ಚಿ ಮೌನಿಯಾಗಿದ್ದರು

ರಸ್ತೆಗಳ ಮೇಲೆ ಮುಂಜಾವಿನ ಬಿಳಿಸೆರಗು
ತ್ರಿವರ್ಣ ಧ್ವಜಕೆ ಕೋವಿಗಳ ಗಸ್ತು ಕಲ್ಲೊಡೆಯುವವರು
ಕಾಡತೂಸುಗಳ ನುಗ್ಗಿಸುವವರು ಎರಡೆ ಜಾತಿ

ಕೀರ್ತನೆಗಳ ಸದ್ದಡಗಿ ಕಫದರೋಗ
ಅಸಮಾನ್ಯರಿಗೆ ಪಾಕಂಡಿತನ ಮೂಲ ವ್ಯಾದಿ ಈಗ
ಕೆಮ್ಮಿ ಉಗುಳುವ ಕೆಲಸವಿಲ್ಲ ೩೭೦ ವಿಧಿ ಸತ್ತ ಭಯ

ರಕ್ತಕಾರದ ನೋವುಂಡು ಬಂದೆ ಕಾಶ್ಮೀರ ನೀನೂ
ಕ್ರೂರಿ ಸುಟ್ಟುಬಿಡು ನನ್ನ ಬೂದಿಯು ನಿನ್ನ ಮುಖ ಮುಚ್ಚಿ
ಪ್ರವಾಸಿಗರು ಮೆಚ್ಚಲಿ ಉಗ್ರಕಾಶ್ಮೀರ ಪ್ರೇಮಕಾಶ್ಮೀರವಾಗಲಿ

# ನನ್ನ ಹುಟ್ಟು

❖ **ಮಂಜುಳಾ ಭಾರ್ಗವಿ**

ನನ್ನ ಹುಟ್ಟಿನೊಂದಿಗೆ
ಯಾವ ಹಣೆಪಟ್ಟಿಯನ್ನೂ
ಕೊಡಲಿಲ್ಲ ನನ್ನವ್ವ.
ಕೇವಲ ನೋವಿನಲಿ ಜನ್ಮವಿತ್ತಿದ್ದಳು.
ಇಂದು ನನಗೆ ಎಷ್ಟೊಂದು
ಹಣೆಪಟ್ಟಿಗಳು ನೋಡು.

ಗಂಡಡೆಯುವಾಗಲೂ
ಅದೇ ನೋವು ಅದೇ ಹಿಂಸೆ
ರಕ್ತ ಮಾಂಸಗಳ ಸುಂಕ
ಯಾಕವ್ವ ನನಗೆ ಹೆಣ್ಣೆಂಬ ತೂಕದಾ ಹೆಸರು
ಹಣ್ಣಾದರೆ ತಾನೆ ಹೆಣ್ಣಾಗುವುದು
ಹೆಂಗರುಳ ದನಿಯಾಗುವುದು.

ಬಾಧಿಸುವ ಹೆಣ್ತನವನ್ನು
ದುರ್ಬೀನಿನಲಿ ಕಾಣುವ ಲೋಕ
ಗಾಣದೆತ್ತಿನಂತೆ ದುಡಿದರೂ
ಅಬಲೆಯೆನ್ನುವ ಶಾಪ
ಎದೆ ಮಟ್ಟದ ನೋವಿಗೆ
ಉಸ್ತುವಾರಿಯ ನೇಪಥ್ಯ.

ಯಾರೋ ಬರೆದ ಉಯಿಲು
ಅರೆ ಬೆಂದ ಮನದೊಳಗೆ
ಝೇಂಕರಿಸುವ ಅಹಮಿಕೆ
ದಯಿಸುವ ನೋವು
ಎಷ್ಟಿದ್ದರೂ ಮತ್ತೆ ಮತ್ತೆ
ಚಿವುಟಿಸಿಕೊಳ್ಳುವೆ ಎದೆಯೊಳಗೆ.

ಎಲ್ಲವೂ ಹಕೀಕತ್ತು.
ಎಷ್ಟೊಂದು ಜತನದಿಂದ ಬಂದ
ಕಟ್ಟು ಪಾಡುಗಳು
ಪಾಲಿಸುತ್ತಲೇ ಇರುವೆ ನಾನೂ ಕೂಡ ಆದರೂ ನನ್ನ
ಹುಟ್ಟಿನೊಂದಿಗೆ ಯಾವ ಹಣೆಪಟ್ಟಿಯನ್ನೂ
ಕೊಡಲಿಲ್ಲ ನನ್ನವ್ವ.

# ಸ್ತ್ರೀ ಅಂದರೆ ಅಷ್ಟೇ ಸಾಕೆ?

❖ **ಮೃತ್ಯುಂಜಯ ಎಂ. ಸಾಲಿಮಠ**

ಆಗ ತನ್ನಪ್ಪನಿಗೆ
ಆಮೇಲೆ ನನ್ನಪ್ಪನಿಗೆ
ಈಗೆಲ್ಲಾ ನನಗೆ
ಬೆಚ್ಚಿಯೋ ಮಮಕಾರಕ್ಕೋ
ಕಕ್ಕುಲಾತಿಗೋ ಚುರ್ರೆನ್ನುವ
ಕರುಳ ಕಾರಣಕ್ಕೋ
ಕಾಲ ಕಾಲಕ್ಕೆ ಮಾತು ಕಳೆದುಕೊಳ್ಳುತ್ತಲೇ
ಬಂದಿರುವ ನನ್ನಮ್ಮನೂ ಕವಿತೆಯೇ...
ಧ್ವನಿ ಕಳೆದುಕೊಂಡ ಧ್ವನಿ!
ಮುಕ್ಕಾದ ಪ್ರತಿಮೆ;
ಸುಕ್ಕಾದ ಶಿಲ್ಪ!

ಎಲ್ಲಾ ಕಾಲಕ್ಕೂ ಸಂದುತ್ತಾಳೆ
ಎಲ್ಲಾ ಕಾಲಕ್ಕೂ ಹೊಂದುತ್ತಾಳೆ
ಸರ್ವ ಕಾಲದಲೂ ಸಿಕ್ಕುತ್ತಾಳೆ; ಶಬ್ದ
ಹೊಸಲು ದಾಟದ ಹಾಗೆ ಬಿಕ್ಕುತ್ತಾಳೆ

ಗಂಡ ಮಕ್ಕಳು ಮನೆ
ಪೂಜೆ ಹಬ್ಬ ಹರಿದಿನ
ತಿಂಡಿ ಊಟ ಕಸ ಮುಸುರೆ;
ಅವಳ ಕನಸುಗಳಾವು ಅವಳೆದೆ
ದಾಟಿ ಅಡುಗೆ ಮನೆಯ ಸೂರ

ಸಂದಿ ಹಾದು ಆಕಾಶಕ್ಕೆ ಮುಖ
ಮಾಡಲೇಯಿಲ್ಲ!; ಆಲಯದೊಳಗಣದವಳ
ಬಯಲು; ಆಲಯ ದಾಟಲೇ ಇಲ್ಲ!

ಹುಟ್ಟುವ ಹೊತ್ತಿನೊಡನೆ
ಹುಟ್ಟುವವಳ ದಿನ;
ಮುಳುಗುವ ಹೊತ್ತೇನು ಖಾತರಿಯಿಲ್ಲ
ನಿರಂತರ ತಿರುಗುವ ಯಂತ್ರ; ಕಾಲನ ಹಂಗಿಲ್ಲ

ಪೂಜೆಯೊಳು ಶರಣೆ
ಅಂತರಂಗದೊಳ್ ಕರುಣೆ
ಮೈಯೆಲ್ಲಾ ಹೃದಯ
ಕಷ್ಟದರಿವೆ ಹೊತ್ತ ಕಾಯ
ಪ್ರೀತಿ ವಾತ್ಸಲ್ಯ; ಮೂಳೆ
ಮಾಂಸ ಉಸಿರು ತ್ವಕ್ಕು;
ಬೆಂಕಿಯೊಳು ಹಾದು ಬಂದ
ಬೆಂದ ಬದುಕ ವ್ಯಥೆ
ಕಥೆ ಹೇಳುವ ಸುಕ್ಕು!

ಕರುಳು ಬಳ್ಳಿಯಾಗಿ
ಹಬ್ಬಿ ತಬ್ಬಿ ಟಿಸಿಲು
ಒಡೆದೆಡೆಯೆಲ್ಲ ಎಲೆ ಹೂವು
ಕಾಯಿ ಹಣ್ಣು;
ಕಾಲಿಗಡರುವ ಮಕ್ಕಳು
ಕಾಲಿಗಡರಿದವೆಲ್ಲ ಮಕ್ಕಳು!

ಮೊಗೆ ಮೊಗೆದು
ಉಣಿಸಿದ್ದು ಎದೆ ಹಾಲು;
ಪ್ರೀತಿ ವಾತ್ಸಲ್ಯ ಪ್ರಾಣ
ಜೀವದುಸಿರು!; ಅವಳು
ಕಲಿಸಿದಕ್ಷರದ ಆ – ಆನೆ

–ಯೇರಿಕೊಂಡವಳ ಕನಸುಗಳಿಷ್ಟು
ಕಂಡು ಬಂದೆ; ಸುತ್ತೇಳು
ಕೆರೆಯ ನೀರ ಕುಡಿದು ನಿಂದೆ

ಅವಳು ಮಾತ್ರ ಒಳಕಲ್ಲಿನೊಳಗೆ
ಸಾರಿನ ಖಾರ ಅರೆಯುತ್ತ
ಹಸಿಯಾರದ ಕಟ್ಟಿಗೆಗಳೊಡನೆ
ಗುದ್ದಾಡುತ್ತಾ; ಬೆಂಕಿ ಬೆಳಕಾಗಿಸಿ
ಜಡದಕ್ಕಿ ಅನ್ನವಾಗಿಸುವತ್ತ;
ತಾ ಬೇಯುತ್ತಾ
ಎಸ್ ಪಿ ಬಿ, ಎಸ್ ಜಾನಕಿಯರ ಯುಗಳ
ಸ್ವರದ ಹಿನ್ನೆಲೆಯಲ್ಲಿ ನಿತ್ಯದವಳ
ಕಥೆಯ ಪುಟವಾಗುತ್ತಿದ್ದಳು....

ಶಾಲೆಯಿಂದ ಓಡೋಡಿ
ಬರುವವಳ ಮಕ್ಕಳು
ಕೂಳು ನೆನಪಾಗಿ ಕುಂಯ್ ಗುಡುವ
ಕುನ್ನಿ
ಬಾಯಾರಿ ಬೊಬ್ಬಿಡುವ ಎಮ್ಮೆ;
ಹಸಿದು ಬಾಯಾರಿ ಬಂದ ಜೀವಿಗಳಿಗೆಲ್ಲ
ತಾಯಿ; ಕಾಮಧೇನು ಕಲ್ಪವೃಕ್ಷ!

ಮಿಕ್ಕಂತೆ..
ಅಬಲೆ
ಆದರ್ಶ ಭಾರತೀಯ ನಾರಿ
ಗ್ರಾಮೀಣ ಮಹಿಳೆ...
ಅವಳ ಕನಸುಗಳು;
ಅಪ್ಪನ ಕೈ ಹಿಡಿದು ಮನೆಯೊಳಗೆ
ಕಾಲಿಡುವಾಗ ಹೊಸಿಲಿಗೆ ಹೊಡೆದ
ಮೊಳೆಯೊಳಗೆ ಒಂದಿಷ್ಟು..
ನಿತ್ಯ ಅವಳು ಒಟ್ಟುವ ಒಲೆಯ ಆ

ಕಟ್ಟಿಗೆಗಳೊಳಗೊಂದಿಷ್ಟು...
ತುಕ್ಕು ಹಿಡಿದ ಅಟ್ಟದ ಮೇಲಿನ
ಟ್ರಂಕಿನೊಳಗೊಂದಿಷ್ಟು... ತಾ
ಜೀವ ಬಸಿದು ಹೆತ್ತ ಮಕ್ಕಳೊಳಗೊಂದಿಷ್ಟು
ನನ್ನಪ್ಪನೊಳಗೊಂದಿಷ್ಟು; ಕರಗಿದವು
ಕೊರಗಿದವು ಮರುಗಿದವು ಅರೆ ಬರೆ
ನನಸಾಗಿ ಇರಲೇ ಇಲ್ಲವೆನುವ ಹಾಗೆ ಸತ್ತಂತೆ
ಬದುಕಿದವು; ಸತ್ತವು!!

ಸ್ತ್ರೀ ಅಂದರೆ ಅಷ್ಟೇ ಸಾಕೆ
ಅಂದೆ
ಅಮ್ಮಾ ಅನ್ನು ಅಂದಳು
ಅಮ್ಮಾ ಅಂದೆ...
ಓ ಅಂದಳು.. ಓ ಅನ್ನುತ್ತಾ ಇರುತ್ತಾಳೆ..
ಇವಳು ನನ್ನಮ್ಮ
ಬಹುಶಃ ನಿಮ್ಮಮ್ಮನೂ ಇರುತ್ತಾಳೆ!

# ಬಣ್ಣದ ಸಿಗ್ನಲ್

**❖ ಕೋಮಲ ಕಲ್ಲೂಡಿ**

ಹಸಿರು ಬಣ್ಣದ ಸಿಗ್ನಲ್ಲಿನಲ್ಲಿ
ಇಳಿಸಂಜೆ ಅವಳು
ಬೀದಿಗಿಳಿಯುತ್ತಾಳೆ ,ಪಾಪ!
ತನ್ನೆದೆಯ ಭೀಕರ ಆಕ್ರಂದನಗಳ
ಒಟ್ಟು ಮಾಡಿ ಜೋಲಿ ಕಟ್ಟಿ
ಮಸುಕಾದ ಹೂಗಳ ಹರಿದ
ಸೀರೆಯಲ್ಲಿ ಬೆರಳು ಚೀಪುವ
ಹಾಲುಗಲ್ಲದ ಕಂದನ
ಮಡಿಲಲ್ಲಿ ಬೆಚ್ಚಗಿರಿಸಿ.

ಬದುಕಿನ ಧಾವಂತ..
ಹೊಟ್ಟೆ ಹೊರೆಯಲು ಅವಳು
ಆತುರಾತುರವಾಗಿ ತನ್ನೆರೆಡು
ಕೈಗಳಲ್ಲಿ ತರತರದ ಬಲೂನುಗಳ ಸೂತ್ರ ಹಿಡಿದು
ಆಟೋ,ಕಾರು,ಬೈಕುಗಳ
ಮಂದಿಯ ಬಳಿ ಸಾರಿ
ಕೊಳ್ಳಿರಿ ಕೊಳ್ಳಿರೆಂದು ಜೋತು
ಬೀಳುತ್ತಾಳೆ
ಕ್ಯಾರೇ ಎನ್ನದ ದರ್ಪದ ಮಂದಿಯ
ಮೊಗವನ್ನು ಅಡಗಿ ಮಲಗಿರುವ ಕೂಸು
ದಿಟ್ಟಿಸಿ ನೋಡಿ ಮುಗುಳ್ನಗುತ್ತದೆ
ನಗು ಮರೆತ ನಾಗರಿಕರು

ಮುಖ ಗಂಟಿಕ್ಕಿಕೊಂಡು
ಶರವೇಗದಲ್ಲಿ ಮಾಯವಾಗುತ್ತಾರೆ...

ಅದೇ ಪಕ್ಕದ ಫುಟ್ಪಾತಿನಲ್ಲಿ
ಅವ್ವನ ಕಿರುಬೆರಳು ಹಿಡಿದು
ನಡೆವ ,ಮಿಠಾಯಿಗಾಗಿ
ರಚ್ಚೆ ಹಿಡಿದ ಒಡಲ ಬಳ್ಳಿಗೆ
ಮುತ್ತು ನೀಡಿ ರಮಿಸುವಾಗ
ಬಣ್ಣಬಣ್ಣದ ಬಲೂನು ಕಂಡು
ತೋರ್ಬೆರಳು ನೀಡಿ ತೋರುವ
ಅದಕ್ಕೆಷ್ಟು ಬೆಲೆ
ಐದೇ ರೂಪಾಯೆಂದು ತೆಗೆದು
ಕೈಯಲ್ಲಿತ್ತುವ ಬಲೂನಮ್ಮನಿಗೆ
ರಾತ್ರಿ ಜೋಳಿಗೆ ತುಂಬಿತೆಂದು ಖುಷಿಯೋ ಖುಷಿ...
ನಿಮಿಷಾರ್ಧದಲ್ಲಿ ಗಾಳಿಯಲ್ಲಿ
ತೇಲುವ ಕನಸುಗಳು...

ಬಾಯಾರಿದ ಗಂಟಲಿಗೆ
ಕಾವೇರಿದ ಮೊಲೆಯುಣಿಸಲು
ಗುಡಿಸಲಿನತ್ತ ಪಯಣ ಬೆಳೆಸಿದ
ಹೆಜ್ಜೆಗಳ ಅನುಸರಿಸಿದ್ದು ಪಥಿಕರ
ಕಾಮದ ಕೆಂಗಣ್ಣು,ಹಿಂಬಾಲಿಸಿದ್ದು
ವಿಪರ್ಯಾಸ,ಕೆಂಪು ದೀಪದ ನೆರಳು.
ನಿಡುಸುಯ್ದು ಅವಳು ಕೆಂದುಟಿಗಳಿಗೆ
ಸ್ರವಿಸಿದ್ದು ಮಾತ್ರ ಹನಿಹನಿ ನೆತ್ತರು
ಇದಾವುದರ ಅರಿವಿಲ್ಲದ ವತ್ಸ
ನಿದ್ದೆಗೆ ಜಾರುತಿತ್ತು,ಅಮ್ಮನ
ಕಣ್ಣಂಚಲಿ ಉಪ್ಪಿನ ಕಡಲಿತ್ತು..

# ವುಹಾನಿನ ಹುಡುಗಿ

❖ **ಡಾ. ಮಂಜುನಾಥ ಕೆ.ಆರ್. ಕಂಟನಕುಂಟೆ**

ವುಹಾನಿನ ಹುಡುಗಿ
ಹತ್ತೊಂಭತ್ತರ ಬೆಡಗಿ ಕೊರೋನ
ಹಸಿದವಳು; ಅಕ್ಕಿ, ರಾಗಿ, ಗೋಧಿ,
ಜೋಳಗಳೆಂದರೆ–ಬಣ್ಣ ಮಾಸಿತೆಂದಳು,
ರಕ್ತಮಾಂಸವೆಂದರೆ–ಘಮವಿಲ್ಲ, ಸಪ್ಪೆಯೆಂದಳು,
ಸೇಬು, ದ್ರಾಕ್ಷಿ, ಮೂಸಂಬಿ, ಮಾವು, ಹಲಸು, ಬಾಳೆ
ಕೊನೆಗೆ ನನ್ನ ನೇರಳೆಯನ್ನು ಅಪಥ್ಯವೆಂದಳು;

ಹಸಿದ ಸಿಟ್ಟಿಗೆ ತವರುಮನೆಯಲ್ಲಿ
ಭಾರಿ ಸದ್ದುಮಾಡಿದ ಹುಡುಗಿ
ದಿನಬೆಳಗಾಗುವುದರೊಳಗೆ ಬೆಳೆದಿದಾಳೆ;
ಲಾಸ್ ಏಂಜಲೀಸ್ನ ತೀರ್ಪುಗಾರರ
ಎಲ್ಲಾ ಅಳತೆಗೋಲುಗಳನ್ನು ಮೀರಿ
ಹತ್ತೊಂಭತ್ತರ ಹರೆಯಕ್ಕೆ ವಿಶ್ವಸುಂದರಿಯಾಗಿ.

ಚೆಲುವೆ ಮಗಳಿಗೆ
ಮೃಷ್ಟಾನ್ನ ಬಡಿಸಿದ್ದಾಳೆ ಅಮ್ಮ;
ಆರೋಗಿಸದ ಹುಡುಗಿ ಹಾವು ಚೇಳು
ನಾಯಿ, ನರಿ, ಇಲಿ, ಹೆಗ್ಗಣ ಓತಿಕ್ಯಾತಗಳೆಲ್ಲಾ
ಹಲ್ಲಿಗೆ ಸಿಗದ ಕ್ಷುದ್ರಜಂತುಗಳು:
ಹಸು, ಕುರಿ, ಮೇಕೆ, ಹಂದಿ, ಹುಲಿ, ಸಿಂಹಗಳೋ
ನನ್ನ ಮೈಕಟ್ಟಿಗೊಗ್ಗದ ಕೊಬ್ಬಿನ ಪ್ರಾಣಿಗಳು;

ಬಿಸಿನೆತ್ತರಲಿ ಬೆಂದ ನಿನ್ನ ಮಾಂಸಖಂಡಗಳೇ
ಕೊಬ್ಬಿರದ ನನ್ನ ವೈಯ್ಯಾರದ ಒಡಲಿಗೆ ದಿವ್ಯಾನ್ನ;
ಅದರ ಪರಿಮಳವೇ ಸೂಸುತ್ತಿಲ್ಲೆಂದು
ಮುನಿಸಿಕೊಂಡು ಹೊರಟಿದ್ದಾಳೆ;
ಕಂಡಕಂಡವರನ್ನೆಲ್ಲಾ ಅಪ್ಪಿಕೊಂಡು.

ಅಪ್ಪನಿಗೂ ನೆತ್ತಿಗೇರಿದೆ ಕೋಪ
ಅರಮನೆಯ ಚಾರರನ್ನು ಕರೆದು
ಕಟ್ಟಾಜ್ಞೆ ಹೊರಡಿಸಿದ್ದಾನೆ; ರಾಜಬೀದಿಗಳಲ್ಲ
ಸಂದುಗೊಂಧಿಗಳಲ್ಲಿ ಅಡಗಿದ್ದರೂ ಸರಿಯೇ!
ಬಂಧಿಸಿ ದಾವಾಖಾನೆಯಲ್ಲಿಡುವಂತೆ.
ಎಚ್ಚೆತ್ತ ಹುಡುಗಿ ಕೊಬ್ಬಿದ ಕುದುರೆಯೇರಿ
ಕ್ಷಣಾರ್ಧದಲ್ಲಿ ಹಾರಿದ್ದಾಳೆ; ಜಗತ್ತಿನ ಮಹಾಗೋಡೆ
ಕಂಡಕಡೆಗೆಲ್ಲಾ ಕುದುರೆ ತಿರುಗಿಸಿ

ಖುರಪುಟದ ಸದ್ದಿಗೆ
ಯಜ್ಞಯಾಗಾದಿಗಳ ತಳದಲ್ಲಿ ಬಿರುಕುಗಳೆದ್ದು
ಹೋಮ, ಹವನ ಮಂತ್ರಾಕ್ಷರಗಳು ಕೆಟ್ಟುನಿಂತಿವೆ!
ರಿಪೇರಿಯ ವಸ್ತುಗಳನ್ನೆಲ್ಲಾ ಮಡಿಬಟ್ಟೆಯಲಿ ಸುತ್ತಿ,
ದೇವಾನುದೇವತೆಗಳ ವಾರಸುದಾರರೆಲ್ಲಾ
ಗುಡಿ, ಚರ್ಚು, ಮಸೀದಿ, ಮಂದಿರಗಳಿಗೆ
ಬೀಗ ಹಾಕಿದ್ದಾರೆ; ಸೃಷ್ಟಿಕರ್ತನನ್ನೂ ಬಂಧಿಸಿ!
ಬಾಗಿಲು ತೆರೆದರೆ ಪೂಜೆಗೆ ಬರುವ ಹುಡುಗಿ
ಪ್ರಸಾದಕ್ಕೆ ಕೈಹಾಕಿಬಿಡುವಳೆಂಬ ಗುಮಾನಿ ಮೇಲೆ!

ಪಳಪಳನೊಳೆಯುತ್ತಿದ್ದ ತಾರೆಗಳೆಲ್ಲಾ
ಮರೆಗೆ ಸರಿದು ಮನೆಯಲ್ಲಿ ಕಸರತ್ತು ನಡೆಸುತ್ತಿವೆ;
ಮಂದಿರ ಮೈದಾನ ಮಹಲುಗಳೆಲ್ಲಾ ಖಾಲಿಯಾಗಿ
ವೇಳಾಪಟ್ಟಿ ಬದಲಿಸಿ ಧ್ಯಾನಕ್ಕೆ ಕುಳಿತಿವೆ;
ಮದ್ದು, ಗುಂಡು, ಬಾಂಬು, ಬಂದೂಕು,
ಗ್ರನೇಡ್, ಯುದ್ಧ ಟ್ಯಾಂಕುಗಳನ್ನು ಬೆಳೆದು

ರಣಕೇಕೆ ಹಾಕುತ್ತಿದ್ದ ಯುದ್ಧೋನ್ಮೋಹಿಗಳೆಲ್ಲಾ
ಶಸ್ತ್ರಾಸ್ತ್ರ ಕೆಳಗಿಟ್ಟು, ರಸ್ತೆಗಳನ್ನೆಲ್ಲಾ ಬರಿದು ಮಾಡಿಸಿದ್ದಾರೆ;
ಮನೆಯ ಬಾಗಿಲು ಮುಚ್ಚಿ
ಚಪ್ಪಾಳೆ ತಟ್ಟಲು ಕಟ್ಟಪ್ಪಣೆ ವಿಧಿಸಿ.

ಅಂತರಿಕ್ಷದ ದಾರಿಗಳನ್ನೆಲ್ಲಾ ಬಂದುಮಾಡಿರುವ
ಹುಡುಗಿ, ಬಿಕೋ ಎನ್ನುತ್ತಿರುವ ರಸ್ತೆಗಳಲ್ಲಿ
ವಿರಾಜಮಾನವಾಗಿ ಹೊರಟಿದ್ದಾಳೆ
ಸಿಕ್ಕವರನ್ನೆಲಾ ಅಪ್ಪಿಕೊಂಡು, ಆರೋಗಿಸಿ;
ಸಂದುಗೊಂಧಿಗಳನ್ನೆಲ್ಲಾ ಬರಿದುಮಾಡಿರುವ
ಸೇನಾಪಡೆಗಳು ರಾಜಬೀದಿಗಳಲ್ಲಿ ಗಸ್ತುತಿರುಗುತ್ತಿವೆ
ಅಡ್ಡಬಂದವರನ್ನೆಲ್ಲಾ ಅಡ್ಡಗಟ್ಟಿ, ಅಪ್ಪಿಕೊಂಡವರ
ಪಟ್ಟಿಮಾಡುತ್ತಾ, ಹೆಜ್ಜೆಗುರುತಿನ ಚಿತ್ರ ಹುಡುಕಿ;
ಈಗ ಜಗದಗಲ ಪರದೆ, ಹಾಳೆಗಳಲ್ಲಿ
ಮೈಮನಗಳಲ್ಲಿ ಅದೇ ಸುದ್ದಿ, ಚಿತ್ರ.

# ಅಂಗೈ ಹುಣ್ಣು

❖ **ಚಂದ್ರಕಲಾ ಎಂ ಇಟಗಿಮಠ**

ಕೈಯಲ್ಲಿ ಕಾಣುವ ಗೆರೆ
ಹೇಳುತ್ತಿದೆ ಜಾತಕ,
ಕೇಳು ನೀ ಕನ್ನಡಿಯು ಬೇಕೆ
ಹಣೆಬರಹವ ಬರೆಯಲು ಎಂದು

ಬದುಕು ಕಟ್ಟಿಕೊಳ್ಳಲು
ಭರವಸೆಯ ಬೆಳಕು ಸಾಕು
ಅಂಗೈ ಹುಣ್ಣಿಗೆ ಕನ್ನಡಿಯ ಕಣಿ ಬೇಕೆ?

ಗೇಣು ಹೊಟ್ಟೆಯ ಬುತ್ತಿಗೆ
ಮಣ್ಣ ಮಸಿಯಾಗಿಹ ಹದಡಕ್ಕೆ
ಹಂದರದ ಅರಿಸಿಣದ ಆರೈಕೆಯೇ?

ಅಂಗೈ ಗೆರೆಯಲ್ಲಿ ತೊಗಲ ಪದರುಚ್ಚಿ
ಕೆಂಡದಂತ ಕಂಡ ಕಾಣುತಿದೆ
ತಣ್ಣಗಾಗುವ ಮುಲಾಮು ದೊರಕಿತೇ?

ಮಾಯದ ಗಾಯಕೆ
ಆರದ ನೋವಿಗೆ ದಿನವೂ ಔಷಧಿಯೇ
ಅರಿಯದಾಗಿದೆ ಅಂಗೈಲಿರುವ ಹುಣ್ಣು

# ನವಿಲ ದೇವತೆ

❖ **ಅರುಣ್ ಪುಷ್ಪದಂತ**

ಸದಾ ಹೀಗೆ ನೆರಳು ಕೊಟ್ಟು
ಹಣ್ಣುಕೊಟ್ಟು ಜೀವ ಉಳಿಸುವ
ಈ ಸೋಜಿಗಕ್ಕೆ ಏನನ್ನಬೇಕೊ ಗೊತ್ತಿಲ್ಲ
ಆದರೂ ಹುಡುಕಿ ಹುಡುಕಿ
ಒಂದರ್ಥ ಸಿಕ್ಕಿದವನಂತೆ ಏನೋ ಖುಷಿ

ಹಾ ಹೌದೌದು ಈಗೀಗ
ಇದು ಅಭ್ಯಾಸವಾಗಿ ಬಿಟ್ಟಿದೆ
ಅದೆ ಸಿಗದದ್ದನ್ನು ಹುಡುಕುವುದು
ತಿಳಿಯದೆ ಹೋದರೆ
ಅವರಿವರ ಬೆನ್ನು ಹತ್ತಿ
ಕೊನೆಗೆ ನವಿಲೆಂದು ಕರೆಸಿಕೊಂಡವಳ
ನಗುವ ಚಿತ್ತಾರವ ಕೆತ್ತುತ್ತ

ಈಗಷ್ಟೆ ನೆರಳುಕೊಟ್ಟು ಹಣ್ಣುಕೊಟ್ಟ
ವೃಕ್ಷವನೊಮ್ಮೆ ಅಪ್ಪುವ ಆತುರ
ಇಲ್ಲಿ ಅಪ್ಪಲು ಹೋದರೆ
ನವಿಲಾದವಳು ಕೇಳುತ್ತಾಳೆ
ಅಪ್ಪು ಬಿಗಿದಪ್ಪು
ಆದರೆ ಬಿಸಿಯಾಗುವಷ್ಟು ಬೇಡವೆಂದು

ಇದೆಲ್ಲವೂ ಸರಿ
ಹುಡುಕ ಹೊರಟ ಈ ಹೊತ್ತಿಗೆಗೆ
ದೀಪ ಬೆಳಕ ತೊಟ್ಟಿದೆ
ಮೌನ ಮಾತು ಬೆತ್ತಲಾಗಿ
ಮನಸು ನಗ್ನಗೊಂಡು
ಈಗ ಇರುಳು ಬೆಳಕ ನಡುವೆ
ಅದೆಂತದ್ದೊ ತೀರದ
ಶತಮಾನದ ಸಂಘರ್ಷ ಶುರು

ನೆರಳು ಕೊಟ್ಟು ಹಣ್ಣು ಕೊಟ್ಟು
ದಣಿದ ಎದೆಗೆ
ಹಸಿದು ಉದ್ವೇಗಗೊಂಡ ಈ ಶಾಂತತೆಗೆ
ಈ ನವಿಲ ದೇವತೆಯು
ಪ್ರತ್ಯಕ್ಷಗೊಂಡಳು

ಅವ್ವನೆದೆಯ ಅಮೃತದ ಸವಿ
ರುಚಿಸಿ ರುಚಿಸಿ ರಕ್ತವ ಹೀರಿದ್ದು
ಮರೆತು ಬಿಡು ತಾಯಿ
ಈ ನೆರಳು ಹಣ್ಣು ನಿನ್ನ ಸಮ್ಮಾನಗಳೆಲ್ಲ
ಈ ಹೊತ್ತಿಗೆ ಮಾಗಲೆಂದು
ಮೌನದ ಮೇಲೆ ಮಾತನಿಟ್ಟು
ನಿನ್ನ ತುಟಿಗೆ ನಗುವ ಅಂಟಿಸಿದ್ದೇನೆ

ಸದಾ ಕಾಡುವ ಈ ವೇಳೆಗೆ
ನಿನ್ನ ಚಿತ್ರವ ಅಂಟಿಸಿದ್ದೇನೆ
ಅಲ್ಲೆ ಇರು ಜಾಗ ಬದಲಿಸಬೇಡ

# ಕಾಯುತ್ತಿರುವೆ ಜಂಗಮ

**❖ ದೊ.ಚಿ. ಗೌಡ ರೈತಕವಿ**

ಮುಟ್ಟು ಬಂದು ಮೂರು ದಿನವಾಗೆ
ನಾಲ್ಕು ನೀರಾಗಿ ಸೂತಕವ ಕಳೆದು
ಮಡಿಗೊಂಡು ತುರುಬಿನೊಳ ಕೇದಿಗೆಯನ್ನಿಟ್ಟು
ನಿನಗಾಗಿ ಕಾಯುತ್ತಿದ್ದೇನೆ ಜಂಗಮ

ಮನವ ಕಾಡಿ ಒಡಲಕೂಡಿ ಸುಖಿಸಿದ ನಲ್ಲ
ಹರೆಯದ ಹೊರೆ ಇಳಿಮುನ್ನ ಕಥೆಯಾದನಲ್ಲ
ರಸಕಾಯದಂಗದ ತುಂಬಿದೆದೆಗಳ ಭಾರವೋ
ಮೋಹದಲೆಗಳ ಅಬ್ಬರದ ಓಲಾಟವೋ
ಸಹಿಸಲಾರೆನು ಜಂಗಮ

ಸತ್ತ ಬಾಳಿನ
ಭಾವ ಬಡವಿಯು ನಾನು
ತಮದ ಬದುಕಿನ ಪುಟಕ್ಕೆ
ಬೆಳಕಿನಕ್ಷರವ ಬರೆ ನೀನು
ಕ್ಷಣ ಕೊಡೆ ನೀನೆನ್ನ
ಭವದ ಬಂಧನದೀ ನಾ..

ಮುಕ್ತಿ ಮುತ್ತೈದೆಯಯ್ಯಾ ಜಂಗಮ
ಇಹ ಪರದ ಮತಿಯನ್ನರಿತ ಯತಿ ನೀನು
ಕಲ್ಲಾದೆದೆಯ ಅಣೆಸಿ ನೀನಾಗೆನ್ನ ಅಮೃತತ್ವದ ಕಣ್ಣು
ಶ್ರೇಷ್ಠನು ಜೇಷ್ಠನು ಭೂಗರ್ಭದೊಡಲ ಆಗರ್ಭ ನೀನು

ಮಣಿದಿರುವೆ ನಾ ನಿನಗೆ ತಣಿದೆನ್ನ
ನಿನ್ನ ಸಾಂಗತ್ಯದ ಸಂವಿಧಾನಕ್ಕೆ ಸೆಳೆದುಕೋ ಜಂಗಮ

ಭಕ್ತಿಯಿಂ ಮುಕ್ತಿಗಾಗಿ ಈ ಅಲ್ಪಳ
ಕೋಟಿ ಕೋಟಿ ಶರಣು ಜಂಗಮವೇ
ಕೈ ಹಿಡಿದು ನಡೆಸೆನ್ನನು ಮಂಗಳಕರ ಲಿಂಗವೇ
ಶರಣು ಶರಣೆಂಬೇ ಸನ್ಯಾಸಿಯೇ
ಶರಣು ಶರಣಾರ್ಥಿಯು ವೈರಾಗಿಯೇ

# ಅನುಸಂಧಾನ–೩

# ಕಾಲದ ಕಾಲುದಾರಿ ಮತ್ತು ಚಲಿಸುತ್ತಿರುವ ಕವಿತೆಗಳು

❖ **ಡಾ. ಗೀತಾ ವಸಂತ**

ಕಾವ್ಯ ಒಳಗನ್ನು ಕಾಣುವ ಕನ್ನಡಿ ಹಾಗೂ ಹೊರಗನ್ನು ನೋಡುವ ಕಿಟಕಿ. ಈ ನೋಡುವ ಹಾಗೂ ಕಾಣುವ ಕ್ರಿಯೆಯಲ್ಲಿ ಕಾವ್ಯದ ಬೀಜಾಂಕುರವಾಗುತ್ತದೆ. ವ್ಯಕ್ತಿಯ ಪ್ರಜ್ಞೆ ಹಾಗೂ ಪರಿಸರದ ನಡುವಿನ ಸಾವಯವ ಸಂಬಂಧದಲ್ಲಿ ಕವಿತೆಯು ಬೆಳೆಯುತ್ತ ಹೋಗುತ್ತದೆ. ಇದು ಒಂದು ಬಗೆಯ ಲೋಕಾಂತ ಹಾಗೂ ಏಕಾಂತಗಳ ಬೆಸುಗೆ. ಏಕಾಂತದ ಮೌನದಲ್ಲಿ ಆಲಿಸುವ ಸೂಕ್ಷ್ಮ ಸ್ವರಗಳಿಗೆ ಭಾಷೆಯ ಮೂಲಕ ಚಲನೆಯನ್ನು ಕಲ್ಪಿಸುತ್ತಾ ಕಾವ್ಯವು ಹರಿಯುತ್ತದೆ. ಇದೊಂದು ಹರಿವು ಏಕೆಂದರೆ ಸಿದ್ಧಚೌಕಟ್ಟುಗಳಲ್ಲಿ ಕಾವ್ಯವು ಸಂಭವಿಸುವುದಿಲ್ಲ. ಅದು ನಿಶ್ಚಯ ನೋಟಕ್ರಮಗಳನ್ನು, ಸಿದ್ಧಗೊಂಡ ಹೆದ್ದಾರಿಯನ್ನು, ತರ್ಕದ ಲೆಕ್ಕಾಚಾರಗಳನ್ನು ಮೀರಿ ಇರುತ್ತದೆ. ಮೀರುವಿಕೆಯಿಲ್ಲದೇ ಕಾವ್ಯವಿಲ್ಲ. ಆದ್ದರಿಂದ ಚಲನಶೀಲ ಮನಸ್ಸಿಗೆ ಮಾತ್ರ ಕಾವ್ಯವು ಒಲಿಯುತ್ತದೆ. ಚಲನಶೀಲ ಮನಸ್ಸು ಮಾತ್ರ ಭಾಷೆಗಿರುವ ಅನಂತ ಸಾಧ್ಯತೆಗಳನ್ನು ಕಾಣಬಲ್ಲದು.

ಕಾವ್ಯವು ಕಾಲುದಾರಿಯ ಪಯಣ. ಅದು ಅಣುವಿನೊಳಗೆ ಮಹತ್ತನ್ನು ಕಾಣಿಸಬಲ್ಲ ಪ್ರಾತಿಭಾಶಕ್ತಿ. ಆದ್ದರಿಂದಲೇ ಸುತ್ತಲಿನ ಸಣ್ಣ ಸಣ್ಣ ಸಂಗತಿಗಳೂ ಕಾವ್ಯಕ್ಕೆ ಮುಖ್ಯವೆನಿಸುತ್ತವೆ. ಎಲ್ಲವನ್ನೂ ತೀವ್ರವಾಗಿ ಪರಿಭಾವಿಸುವ ಕ್ರಮದಿಂದಾಗಿ ಕಾವ್ಯಭಾಷೆಯು ಉಜ್ವಲವಾಗಿ ತೋರುತ್ತದೆ. ಹೆದ್ದಾರಿಯಲ್ಲಿ ಸಾಗುವಾಗ ಕಾಣದ ಸೂಕ್ಷ್ಮಸಂಗತಿಗಳನ್ನು ಕಾಣಲು ಕಾವ್ಯದ ಕಾಲುದಾರಿಯನ್ನು ನಿರ್ಮಿಸಿಕೊಳ್ಳ ಬೇಕಾಗಿರುವುದು ಈ ಕಾಲದ ತುರ್ತು ಕೂಡ ಹೌದು. ಬದುಕನ್ನು ಬೀಸು ಹೇಳಿಕೆಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಅನುಭವಗಳ ನಿಕಷದಲ್ಲಿ ಮರಮರಳಿ ಬದುಕು ಅರಳಬೇಕಾಗುತ್ತದೆ. ತನ್ನ ಅನುಭವಗಳ ನಿಜವನ್ನು ತಾನೇ ಶೋಧಿಸಿ ಕೊಳ್ಳುವ ಪ್ರಕ್ರಿಯೆ ಇಲ್ಲಿ ಜರುಗುತ್ತದೆ. ಜೀವವೊಂದು ಅನುಭವಗಳನ್ನು ಅಂತಃಕರಣದಲ್ಲಿ ಸೋಸಿ ಲೋಕಕ್ಕೆ ನೀಡುವ ಜೀವಕಾರುಣ್ಯವು ಕಾವ್ಯ. ಇಂದು ಭಯ ಶಂಕೆ ಮನಸ್ತಾಪಗಳನೇ ಹುಟ್ಟಿಸುತ್ತಿರುವ ಮಾತುಗಳ ಜಗತ್ತಿನಲ್ಲಿ ನಾವು

ಜೀವದ ಮಾತುಗಳನ್ನಾಡಲು ಒಂದು ಸ್ಪೇಸ್ ಬೇಕು. ಅದು ಕಾವ್ಯದ ಸ್ಪೇಸ್ ಕೂಡ ಹೌದು. ಕಿ.ರಂ. ಅವರು ಕೂಡ ಇಂಥ ತಂಗುದಾಣದ ಹುಡುಕಾಟದಲ್ಲೇ ಇದ್ದವರು. ಅದಕ್ಕಾಗಿಯೇ ಅವರು ಇಂದಿಗೂ ನಮ್ಮಂಥವರನ್ನು ಕಾಡುತ್ತಾರೆ. ಹಾಗೆ ತೀವ್ರವಾಗಿ ಕಲಕುವದು, ಕಾಡುವದು ಕಾವ್ಯದ ಹುಟ್ಟುಗುಣ.

ಕಿ.ರಂ. ನೆಪದಲ್ಲಿ ಈ ತಲೆಮಾರಿನ ಕವಿತೆಗಳೊಂದಿಗೆ ಒಡನಾಡುವ ಈ ಸಂದರ್ಭ ನಿಜಕ್ಕೂ ಚೈತನ್ಯದಾಯಕವಾದುದು. ಭಿನ್ನ ಧ್ವನಿಗಳನ್ನು ಆಲಿಸುವ, ಆ ಧ್ವನಿಗಳ ಒಡಲ ಕಂಪನಕ್ಕೆ ಕಿವಿಯಾಗುವ ಸಂದರ್ಭವಿದು. ಕಾವ್ಯವು 'ಒಡಲ ನೂಲಿನಿಂದಲೇ ನೇಯ್ದ ಜಾಲ' ಎಂದಾದಾಗ ಕವಿಪ್ರಜ್ಞೆಯ ಎಲ್ಲ ಸ್ತರಗಳೂ ಇಲ್ಲಿ ಹೆಣೆದುಕೊಂಡಿರುತ್ತವೆ. ಈ ಕಾವ್ಯಜಾಲವು ಪ್ರತಿ ಕವಿಯ ಅನನ್ಯ ಒಳತೋಟಿಗಳಿಗೆ ಮೈಗೊಟ್ಟಿದೆ. ಕವಿತೆಯೊಂದು ಆಗುವ ಕ್ಷಣವನ್ನು ಶ್ವೇತಾ ಮಂಡ್ಯ ಅವರ 'ಬೇಯುವುದೆಂದರೆ' ಎಂಬ ಕವಿತೆ ಕಟ್ಟಿಕೊಡುತ್ತದೆ. ಬೇಯುತ್ತಲೇ ಹದಗೊಳ್ಳುವ ಬದುಕಿನ ವಾಸ್ತವವನ್ನು ಕವಿತೆ ರೂಪಕಗಳಲ್ಲಿ ಸೆರೆಹಿಡಿದಿದೆ. ಅಕ್ಕಿ ಅನ್ನವಾಗುವ ಪ್ರಕ್ರಿಯೆಗೂ ಬದುಕಿನ ಸಂಕಟಗಳಲ್ಲಿ ಕುದಿಯುತ್ತಲೇ ಅರಳುವ ಭಾವಗಳಿಗೂ ಇಲ್ಲಿ ಏಕಸೂತ್ರವಿದೆ. ಅನ್ನವು ಪ್ರಾಣವಾಗುವ ಹಾಗೆ ಕವಿತೆಯೂ ಜೀವ ಜೀವಾಳವನ್ನು ತಾಕುತ್ತದೆ. ಹಾಗೆ ತಾಕಿದ್ದನ್ನು ಕಲೆಯಾಗಿಸುವುದು ಆಂತರ್ಯದ ಕೌಶಲ. 'ಬೆಂದ ಹಿಟ್ಟನ್ನು ಗಂಟಿಲ್ಲದಂತೆ ನಾದುವ' ಹದ ಬದುಕಿಗೂ ಬೇಕು, ಕಾವ್ಯಕ್ಕೂ ಬೇಕು. ಅಂಥ ಘಳಿಗೆಗಾಗಿ ಕಾಯಬೇಕು. 'ಬೇಯಿಸಿದರೆ ಅನ್ನ ಕಾಯಿಸಿದರೆ ಕವಿತೆ' ಎಂಬಲ್ಲಿ ಕಾವ್ಯ ಮೀಮಾಂಸೆಯೊಂದು ಮೆಲ್ಲಗೆ ಅರಳಿ ಕೊಳ್ಳುತ್ತದೆ. ನಾವೆಂಕಿ ಕೋಲಾರ ಅವರ ಕವಿತೆ 'ಈ ಮಣ್ಣ ಕಣ್ಣಾಗು' ಪ್ರಕೃತಿಯ ಜೀವಪೋಷಕ ನೆಲೆಯನ್ನು ಕಟ್ಟಿಕೊಡುತ್ತಲೇ, ಮನುಷ್ಯನೊಳಗೂ ಅಂಥದೇ ಅಂತಃಕರಣವನ್ನು ಹುಡುಕುತ್ತದೆ. ಭೂಮಿಯ ಮೇಲಿನ ಅಧಿಕಾರಜನ್ಯ ಹಿಂಸೆಗೆ ಪ್ರತಿಯಾಗಿ ಕಾರುಣ್ಯವನ್ನು ಧ್ಯಾನಿಸುವ ಕವಿತೆಯಿದು. 'ಕೊರಳು ಹಿಂಡಿದವರನ್ನೂ ಕ್ಷಮಿಸುವ ಕ್ಷಮಯಾಧರಿತ್ರಿ'ಯನ್ನು ಕಾಣುವ ಹಂಬಲದ ಕವಿತೆಯಿದು. ಭೂಮಿಯ ಕಣ್ಣಾದವರ ಶ್ರಮಸಂಸ್ಕೃತಿಯನ್ನು ಕವಿತೆ ಪ್ರತಿನಿಧಿಸುತ್ತದೆ. ಸ್ವಭಾವ ಕೋಳಗುಂದ ಅವರ 'ಕೇದಿಗೆ ಹೂವು' ದೇಹದ ತಳಮಳಗಳನ್ನು ಹಾಗೂ ಮಡಿಮೈಲಿಗೆಗಳಲ್ಲಿ ದೇಹಾನುಭವಗಳನ್ನು ಹುದುಗಿಸುವ ಹುನ್ನಾರಗಳನ್ನು ಸೂಕ್ಷ್ಮವಾಗಿ ಹೇಳುವ ಕವಿತೆ. "ಅಂಗಳದ ತುಳಸಿ ಬಾಡಿತ್ತು ಕರ್ಪೂರ ಕಡ್ಡಿಯ ಕಾವಿಗೆ" "ಕೇದಗೆಯ ಗರಿ ತುರುಬಿನಲಿ ನಕ್ಷತ್ರವಾಗಿತ್ತು" ಎಂಬಂಥ ಪ್ರತೀಕಗಳು ಕವಿತೆಗೆ ಅನುರಣನ ಶಕ್ತಿಯನ್ನು ತುಂಬಿವೆ.

ಕವಿತೆ ಮನುಷ್ಯ ಸಂಬಂಧಗಳ ಸೂಕ್ಷ್ಮ ಪಲಕುಗಳನ್ನು ಕಾಣಿಸುವ ಕನ್ನಡಿಯೂ ಹೌದು. ಸಂಬಂಧಗಳು ನಮ್ಮನ್ನು ಬೆಸೆಯುವಂತೆ, ಅವುಗಳೇ ನಮ್ಮನ್ನು ಮುರಿದು ಬಿಸಾಕುತ್ತವೆ. ಹಳೆಯದಾದಂತೆಲ್ಲ ಹಳಸುವ ವಸ್ತುಗಳಂತೆ ಸಂಬಂಧವನ್ನೂ ಬಿಕರಿಗಿಟ್ಟ ವಿಷಾದದೆಳೆಗಳು ಲಿಂಗರಾಜ ಸೊಟ್ಟಪ್ಪನವರ 'ಗುಜರಿ ಅಂಗಡಿಯ ಆಂಟಿಕ್ ಪೀಸ್‌ಗಳು' ಕವಿತೆಯಲ್ಲಿ ಕಾಡುತ್ತವೆ.

**ಎಷ್ಟು ಮಾತು ಅವು**
**ಕೈಕೈ ಹಿಡಿದು ಸಾಗುತ್ತಿದ್ದರೆ**
**ರಸ್ತೆಗಳೆ ಚಿಕ್ಕವು**

ಆಡಿ ಮುಗಿಸುವ ಮಾತುಗಳಲ್ಲಿ ಪ್ರೀತಿಯ ಅನಂತ ದಾಹವನ್ನು ಹಿಡಿದಿಡಲಾಗದು. "ಕಡತಂದ ಬೆಳದಿಂಗಳು ಎಷ್ಟು ದಿನ ಉಳಿದೀತು?" ಎಂದು ಪ್ರಶ್ನಿಸುವ ಕವಿ ಮಾತಿನಾಚೆಯ ಅನುಭೂತಿಯ ಹಸಿವನ್ನು ಪ್ರಕಟಿಸುತ್ತಾರೆ. ಆಂಟಿಕ್ ಪೀಸುಗಳನ್ನು ಮಾರಿ ಕೈತೊಳೆದುಕೊಂಡಂತೆ ಸಂಬಂಧಗಳನ್ನು ಗುಜರಿಗೆ ಹಾಕಲಾಗದು. ಪ್ರತಿ ಪ್ರೀತಿಯೂ ಆಯಾ ಒಡಲ ಕಂಪನದಲ್ಲಿ ಮೂಡಿದ್ದು. ಪರಸ್ಪರರಿಗೆ ಅವರದೇ ಆದ ಆಪ್ತ ಘಮಲೊಂದು ಚಿರಪರಿಚಿತವಿರುವಂತೆ ಅದು ಅತ್ಯಂತ ಖಾಸಗಿಯಾದುದು. ಮುಟ್ಟಿದರೆ ಪುಡಿಯಾಗುವಂತ ನವಿರು ಭಾವವನ್ನು ಲಿಂಗರಾಜ ಅವರು ಅಷ್ಟೇ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ. ಯಂಶ ಬೇಂಗಿಲ ಅವರ 'ಹಲಸು' ಎಂಬ ಕವಿತೆಯಲ್ಲೂ ಸಂಬಂಧಗಳ ಹೆಣಿಗೆಯಿದೆ.

**ಅಪ್ಪನಿಗೆ ಹಲಸಿನಮೇಲೆ ಸಿಟ್ಟೇನಿಲ್ಲ**
**ಆಗಾಗ ಆರೋಗ್ಯ ಕೆಡುವ ಉಮ್ಮನ ಮೇಲೆ ಕಾಳಜಿ**

ಅಧಿಕಾರ ಮತ್ತು ಪ್ರೀತಿಯು ಜೊತೆ ಜೊತೆಗೆ ಸಾಗುತ್ತ ಬೆರಗಿನಲ್ಲಿ ಕವಿತೆ ನಿಲ್ಲುತ್ತದೆ. ಕವಿತೆಯು ಕತೆಯೊಂದನ್ನು ಹೇಳುವಂತೆ ಸರಳವಾಗಿ, ನಾಟಕೀಯವಾಗಿ ಬೆಳೆಯುತ್ತ ಕೊನೆಯಲ್ಲಿ ಹಲಸನ್ನು ಬಿಚ್ಚಿಟ್ಟಂತೆ ಸಂಬಂಧದ ಒಳಸುಳಿಗಳನ್ನು ಬಿಚ್ಚಿಡುತ್ತದೆ. ನಮ್ಮ ಸಿದ್ಧತೀರ್ಮಾನಗಳ ಸರಳರೇಖೆಗೆ ನಿಲುಕದ ಸಂಬಂಧಗಳ ಸಂಕೀರ್ಣತೆಯನ್ನು ದರ್ಶನಮಾಡಿಸುತ್ತದೆ.

ಇಂದಿನ ಕವಿತೆ ಬಹುವಚನದ ಸ್ವರ. ಅಲಕ್ಷಿತ ಲೋಕವೊಂದು ಹೊಸ ಬೆಳಕಿನಲ್ಲಿ ಸಶಕ್ತವಾಗಿ ತೆರೆದುಕೊಂಡು ನಮ್ಮ ನೋಟದ ಕ್ರಮವನ್ನೇ ಪಲ್ಲಟಿಸುವ ಪರಿವರ್ತನಶೀಲತೆ ಕವಿತೆಗೆ ಸಾಧ್ಯ. ರಾಘವೇಂದ್ರ ಆಲೂರು ಅವರ 'ದೇವದಾಸಿಯ ಸ್ವಗತ' ಶಾರದಾ ಎಸ್. ಅವರ 'ಮಾರುಕಟ್ಟೆಯ ಗಡಿಯಾರ' ರೇಣುಕಾ ಕೊಡಗಂಟಿಯವರ 'ಕಂದೀಲು' ಮುಂತಾದ ಕವಿತೆಗಳು ಸಮಾಜದ ಅಂತರಂಗವನ್ನು ಬಯಲುಮಾಡುತ್ತವೆ. ಸಂಸ್ಕೃತಿಯ ಒಳಧಾರೆಗಳನ್ನು ತೆರೆದು

ತೋರುತ್ತವೆ. ಸಮಾಜ ವ್ಯವಸ್ಥೆಯೇ ವ್ಯಕ್ತಿಯನ್ನು ಹತ್ತಿಕ್ಕುವ ಅಧಿಕಾರವಾಗಿ ತನ್ನ ಕಬಂಧ ಬಾಹುಗಳನ್ನು ಚಾಚಿದಾಗ ಪ್ರತಿರೋಧದ ಧ್ವನಿ ಅನಿವಾರ್ಯವಾಗುತ್ತದೆ. ಈ ಪ್ರತಿರೋಧವನ್ನು ಘೋಷಣೆಯಾಗಿಸದೇ ಕಲಾತ್ಮಕವಾಗಿ ಅಭಿವ್ಯಕ್ತಿಸುವ ಹದ ಈ ಕವಿಗಳಿಗೆ ದಕ್ಕಿದೆ. ಇಲ್ಲಿ ಕಲಾತ್ಮಕವೆಂದರೆ ನೋವನ್ನು ಸಿಂಗರಿಸುವ ಶಬ್ದಾಡಂಬರವಲ್ಲ. ರೂಪಕಾತ್ಮಕ ಅಭಿವ್ಯಕ್ತಿಯ ಮೂಲಕ ಪರಿಣಾಮವನ್ನು ಗಾಢವಾಗಿಯೂ ಸಾಂದ್ರವಾಗಿಯೂ ಮಾಡುವುದು. ದೇವದಾಸಿಯ ಸ್ವಗತ ಹೀಗೆ ನಮ್ಮನ್ನು ಕಂಗೆಡಿಸುತ್ತದೆ.

**ಇರುಳಿನಲಿ ನಾನು ನಿರ್ಜೀವ**
**ಮಾತಿಲ್ಲದ ಗೊಂಬೆ**
**ಒಲೆಹತ್ತಿ ಉರಿಯುವ**
**ಕಟ್ಟಿಗೆಯ ತುಂಡು!**

ಮರಣವೂ ಇಲ್ಲದ, ಮೋಕ್ಷವೂ ಇಲ್ಲದ ಬೆಂತರದ ಸ್ಥಿತಿಯಲ್ಲಿ ಬಾಳುವ ಲೈಂಗಿಕ ದಾಸಿಯ ಈ ಚಿತ್ರ ಹೆಣ್ಣಿನ ತೆರೆಮರೆಯ ಚರಿತ್ರೆಯ ಸಂಕಟಗಳನ್ನು ಉಸುರುತ್ತದೆ. ಹೆಣ್ಣು ಗರತಿ–ಸೂಳೆ ಎಂಬ ಕಪ್ಪು ಬಿಳುಪುಗಳಲ್ಲಿ ಕಾಣುವುದು ಸಮಾಜದ ದ್ವಂದ್ವ ನೈತಿಕತೆಗೆ ಸವಾಲು. ಏಕಾಂತದಲ್ಲೂ ಚೌಕಾಸಿಗಿಳಿಯುವ ತೊಗಲ ವ್ಯಾಪಾರದಲ್ಲಿ ಆತ್ಮಸಂಗಾತವನ್ನು ಹುಡುಕುವ ಅವಳ ಚಿತ್ರ ಚಾರಿತ್ರಿಕವಾದುದು.

**ಅರಿವೆ ಹರಿದಿದೆ**
**ಆತ್ಮವೇ ಒಡೆದ ಮನೆ!**
**ಮನಸ್ಸು ನನ್ನೊಳಗಿಲ್ಲ!**

ದೇಹಾತ್ಮಗಳ ಸಂಬಂಧದಲ್ಲಿ, ದೇಹಕ್ಕಾಗುವ ಘಾತ ಆತ್ಮವನ್ನೂ ಮುರಿದು ಹಾಕುವ ನೋವಿನ ಅನುಭೂತಿ ಇಲ್ಲಿ ಹೆಪ್ಪುಗಟ್ಟಿದೆ.

ರೇಣುಕಾ ಕೊಡಗುಂಟಿಯವರ 'ಕಂದೀಲು' ಎಂಬ ಪದ್ಯ ದೇಸಿ ಪರಂಪರೆಯ ಅಂತಃಸತ್ವದೊಂದಿಗೆ ಮುಖಾಮುಖಿಯಾಗುತ್ತದೆ. ಆಧುನಿಕ ಬದುಕಿನ ಹಳವಂಡಗಳು ಸುತ್ತಲೂ ಕತ್ತಲು ಕವಿದಂಥ ಸನ್ನಿವೇಶವನ್ನು ನಿರ್ಮಿಸಿವೆ. ಕತ್ತಲಿಗೆ ಅನಂತ ಮುಖ. ಅದು ಅನಾದಿಯೂ ಹೌದು. ಕಂದೀಲು ಈ ಕತ್ತಲ ಜೊತೆ ಸೆಣಸಿ ಗೆಲ್ಲುವ ಕೆಚ್ಚುಳ್ಳದ್ದು. 'ತನ್ನ ಸಹನೆಯ ಕಿಡಿಯನ್ನು ತಾನೇ ತಾಗಿಸಿಕೊಂಡ' ಕಂದೀಲು ಕತ್ತಲೊಂದಿಗಿನ ಹೋರಾಟದ ರೂಪಕವೂ ಹೌದು. ದೀಪವಾರಿಸಲು ಹೊಂಚುಹಾಕುತ್ತಿರುವ ಗಾಳಿಯನ್ನು ತನ್ನೊಳಗೆ ಬಿಟ್ಟುಕೊಳ್ಳದೇ ಇರುವ ಕಂದೀಲು ನಮ್ಮ ಸಾಂಸ್ಕೃತಿಕ ಅಸ್ಮಿತೆಯ ರೂಪಕವೂ ಹೌದು. ಪ್ರತಿರೋಧವು ಕಲೆ, ಸಾಹಿತ್ಯ, ಆಚರಣೆ ಈ ಎಲ್ಲ ಜಗತ್ತಿನಲ್ಲೂ ಸುಪ್ತವಾಗಿದೆ.

**ಹಬ್ಬವನುಂಡ ಬಾಣಂತಿಯ**
**ವರಸಿನ ಹಗ್ಗದ**
**ಸಂದಿಸಂದಿಯಿಂದ ಜೋಗಮ್ಮನ ಚೌಡಕಿಯ ಸದ್ದು**
**ಸುಡುಗಾಡು ಸಿದ್ದನ ಬುಡುಬುಡಕಿ ಸದ್ದು**
**ದುರುಗಿಮುರುಗಿಯರ**
**ಉರುಮಿಯ ಸದ್ದು ಹೊಂಟೈತಿ**

ಇಂಥ ಸೂಕ್ಷ್ಮಸದ್ದುಗಳನ್ನು ಆಯಾ ಸಾಂಸ್ಕೃತಿಕ ಆವರಣದಲ್ಲಿಯೇ ಸೆರೆ ಹಿಡಿದು ಕಾವ್ಯಾನುಭವವನ್ನು ಸ್ವಾಯತ್ತಗೊಳಿಸುವ ಸಶಕ್ತ ಅಭಿವ್ಯಕ್ತಿ ಈ ಪದ್ಯದಲ್ಲಿದೆ. ಬದುಕಿನ ಕತ್ತು ಹಿಸುಕಲೆಣಿಸುವ ಕೇಡುಗಳಿಗೆ ಎದುರಾಗಿ ದೇಸಿ ಬದುಕಿನ ಅಂತಃಸತ್ವವನ್ನು ಎದುರಾಗಿಸುವ ಕವಿತೆ ವಿಶಿಷ್ಟವಾಗಿದೆ. ಘತ್ತರಗಿ ಭಾಗವ್ವನ ಸಿಡಿ, ವೀರಭದ್ರನ ಶಸ್ತ್ರ, ಒಡಪುಗಳು, ಮುಸ್ಲಿಂರ ಅಲಾಯಿದೇವರ ಮೆರವಣಿಗೆ ಇವೆಲ್ಲವೂ ಮೂಡಿಸುವ ಸಾಮೂಹಿಕ ಸ್ವರಗಳನ್ನು ರೇಣುಕಾ ಅವರು ಹೀರಿಕೊಳ್ಳುತ್ತಾರೆ. ತಮ್ಮ ನುಡಿಗಳಿಗೆ ಅಲ್ಲಿಂದ ಕಸುವು ಪಡೆಯುತ್ತಾರೆ. ಕಾವ್ಯಕ್ಕಿರ ಬಹುದಾದ ಸಮಾಜೋಸಾಂಸ್ಕೃತಿಕ ಆಯಾಮಗಳು ಇಲ್ಲಿ ಅಭಿವ್ಯಕ್ತವಾಗಿವೆ.

**ಕಂದೀಲದ ರವಸಕ್ಕ**
**ಬೆದರಿದ ಗಾಳಿ**
**ಬೆವೆತು ಬಂದದಾರಿ ಹಿಡಿದೈತಿ**

ಕೊನೆಗೂ ತನ್ನ ಬೆಳಕು ಕಾಪಿಟ್ಟುಕೊಳ್ಳುವ ಕಂದೀಲು ಲೋಕಾಂತ ಮತ್ತು ಏಕಾಂತಗಳ ಎಷ್ಟೆಲ್ಲ ಸಂಗತಿಗಳಿಗೆ ರೂಪಕವಾಗುತ್ತದೆ. ಇಲ್ಲಿ ಬೇಂದ್ರೆಯವರ' 'ಬಿಸಿಲು ಬೆವೆತು ಬಂದದ ಮಳೆಯ ಹದಕ' ಎಂಬ ಅಭಿವ್ಯಕ್ತಿ ನೆನಪಾಗುತ್ತದೆ. ಶಾರದಾ ಎಸ್. ಅವರ 'ಮಾರುಕಟ್ಟೆಯ ಗಡಿಯಾರ' ಎಂಬ ಕವಿತೆಯೂ ಕಾಲದ ರೂಪಕದಲ್ಲಿ ಸಮಾಜವನ್ನು ನಿರೀಕ್ಷಿಸುತ್ತದೆ. ಕಾಲದ ಎಲ್ಲ ಬಿಂದುಗಳನ್ನೂ ಶ್ರಮಿಕರ ಉಸಿರು ಕೇಳದಂತೆ ಕಾಣದಂತೆ ಆವರಿಸಿದೆ. ಆದರೆ ನಮ್ಮ ಚರಿತ್ರೆಯು ಉಳ್ಳವರ, ಗೆದ್ದವರ, ಅಧಿಕಾರ ಪಡೆದವರನ್ನೇ ನಮಗೆ ಕಾಣಿಸಿದೆ. ಕಾವ್ಯದ ಕಾಲುದಾರಿಯಲ್ಲಿ ಈ ಕಾಣದ ಚಹರೆಗಳು ಫಕ್ಕನೆ ಮಿನುಗುತ್ತವೆ. ಪರ್ಯಾಯ ಚರಿತೆಯೊಂದು ಮೂಡುತ್ತದೆ. ಕಾಲದ ಮೌನ ಮಾತಾಗುತ್ತದೆ. ಮಾರುಕಟ್ಟೆಯ ಸಾಕ್ಷಿಪ್ರಜ್ಞೆಯಂತೆ ಗಡಿಯಾರ ಭೌತಿಕವಾಗಿ ನಿಂತಿದೆ. ಆದರೂ ಓಡುವ ಕಾಲವನ್ನು ಅದು ಕಾಣಿಸುತ್ತಿದೆ. ಮೂಟೆಮೂಟೆ ತರಕಾರಿ ಹೂಹಣ್ಣುಗಳ ದೈನಿಕ ಪಥಸಂಚಲನದಲ್ಲಿ ಮಾಸಿದ ಮುಖದ ಬೆವರಿನ ದೇವರುಗಳು ಕಾಣುತ್ತಾರೆ. ಈ ಹಸಿದ ದೇವತೆಗಳ ಉಸಿರನ್ನು ಕೇಳಿಸಿಕೊಳ್ಳುವ ಕವಿತೆ ದೈನಿಕದಲ್ಲಿಯೇ ಬೆರೆತಿರುವ

ದೈವಿಕ ಆವರಣವನ್ನು ಅನಾವರಣಗೊಳಿಸುತ್ತದೆ. ನಾರಾಯಣಸ್ವಾಮಿ ಅವರ 'ಜೀತದಾಳುವಿನ ಒಡಲೊಳಗೆ' ಎಂಬ ಕವಿತೆಯೂ ಒಡಲ ಸಂಕಟಗಳನ್ನು ನೇಯ್ದ ಕವಿತೆ. ನೊಂದವರ ನೋವ ನೋಯದವರೆತ್ತಬಲ್ಲರು? ಎಂಬ ಅಕ್ಕಮಹಾದೇವಿಯ ಒಳತೋಟಿ ಇಲ್ಲಿನ ಸಾಮಾಜಿಕ ಸಂದರ್ಭದಲ್ಲೂ ಧ್ವನಿಸುತ್ತದೆ. ಒಂದು ಹೊತ್ತಿನ ಗಂಜಿಗಾಗಿ ಕಂಡವರ ಹೊಲದಲ್ಲಿ ಸಿಗ್ಗಿಲ್ಲದೆ ದುಡಿಯುವ ಅಪ್ಪ ಹಾಗೂ ಅವನ ಕಣ್ಣೀರನ್ನು ಬೆವರೆಂದು ಭಾವಿಸುವ ಮಗ, ಈ ಇಬ್ಬರ ಮುಖಾಮುಖಿಯಲ್ಲಿ ಕವಿತೆ ನೋವಿನ ಮೌನ ಚರಿತೆಯನ್ನು ಕಟ್ಟಿಕೊಟ್ಟಿದೆ. ಜ್ಞಾನದ ಬುತ್ತಿಗಾಗಿ ಕೈಚಾಚಿದ ಮಗನ ಮೂಲಕ ಹೊಸಚರಿತ್ರೆಯ ಹಂಬಲಕ್ಕೂ ಇಂಬು ನೀಡಿದೆ.

ಪಾಪುಗುರು ಅವರ 'ಏಕಾಂಗಿ', ವಿಶ್ವೇಶ್ವರ ಗಾಂವ್ಕರ್ ಅವರ 'ಬೆಳಕಿನ ದಾರಿಯಲ್ಲಿ', ವಿಭಾ ಪುರೋಹಿತ ಅವರ 'ಕಡೇಮಾತು' ಮುಂತಾದ ಕವಿತೆಗಳು ಒಳಮಾತುಗಳನ್ನು ಲೋಕದ ಬೆಳಕಿನಲ್ಲಿ ಶೋಧಿಸಿಕೊಳ್ಳುತ್ತಿವೆ. ಅಂತರಂಗದ ತೊಳಲಾಟವನ್ನು ತಾತ್ವಿಕ ಎಚ್ಚರದಲ್ಲಿ ನಿರುಕಿಸುವ ಬಗೆಯು ಈ ಕವಿತೆಗಳೊಳಗೆ ಮಂಥನದ ಮೂಲಕ ಹೊಸ ಅರಿವಿನ ಕಾವು ಕಣ್ಬಿಟ್ಟಿದೆ. ಕವಿತೆ ಬದುಕಿನ ವಿಪರ್ಯಾಸಗಳಿಗೆ ಕನ್ನಡಿ ಹಿಡಿದಿದೆ. ಕಾಲ ಬದಲಾದರೂ ಪಾತ್ರಗಳು ಹಾಗೆಯೇ ಉಳಿವ ನೋವನ್ನು ಇದು ಹೇಳುವ ಪರಿ ವಿಶಿಷ್ಟವಾಗಿದೆ. ಕಾಲದ ಎಷ್ಟೆಲ್ಲ ಸಂಕೀರ್ಣ ಸಂಗತಿಗಳನ್ನು ಕವಿತೆ ಧ್ವನಿಪೂರ್ಣವಾಗಿ ಹಿಡಿದಿಡುತ್ತದೆ. ಕವಿತೆಯ ಶಕ್ತಿಯನ್ನು ಅರಿತು ಅಭಿವ್ಯಕ್ತಿಸುವ ಇಂತಹ ರಚನೆಗಳು ಕ್ಷಣಕಾಲ ನಮ್ಮನ್ನು ಜಗ್ಗಿ ನಿಲ್ಲಿಸುತ್ತವೆ.

ಪಾಪುಗುರು ಅವರ ಏಕಾಂಗಿಯಲ್ಲಿ ಆದರ್ಶ ಹಾಗೂ ವಾಸ್ತವಗಳ ನಡುವಿನ ಮುಖಾಮುಖಿಯಿದೆ. ಕಾಲದ ದ್ವಂದ್ವಗಳನ್ನು ಸದೂರದಲ್ಲಿ ನಿಂತು ನೋಡುವ ಹಾಗೂ ಅಂತರಂಗದೊಳಗಿಟ್ಟು ನೋಯುವ ಎರಡೂ ಕ್ರಮಗಳ ಮೂಲಕ ಕವಿತೆ ಅಂತರಂಗ ಬಹಿರಂಗಗಳೆರಡನ್ನೂ ಬೆಸೆದು ನೋಡುತ್ತದೆ. ಸತ್ಯದ ಜೊತೆ ಸದಾ ಪ್ರಯೋಗಕ್ಕಿಳಿಯುವ ಗಾಂಧಿ ಈ ಎಲ್ಲ ಹುಡುಕಾಟಗಳಿಗೆ ಭಿತ್ತಿಯಾಗಿರುವುದು ವಿಶೇಷ. 'ಧರಣಿ ಮಂಡಲ ಮಧ್ಯದ ಗೋವು ಜಿಹ್ವೆಯಲಿ ಜೀವಂತ' 'ಅದೇ ಗಂಟೆಗಳು ಆದರೆ ಸಮಯವಿಲ್ಲ' ಇಂಥ ನುಡಿಗಳು ಹಿಡಿದಿಟ್ಟು ಕಾಡುತ್ತವೆ.

ಅಸಪ ಗೇರುಕಟ್ಟೆ ಅವರ 'ಅಪ್ಪಾ' ಕವಿತೆ, ಸಂಬಂಧಗಳು ಸಾಯುವುದಿಲ್ಲ. ಬದುಕೇ ಸಂಬಂಧಗಳ ಹೆಣಿಗೆ. ವ್ಯಕಿಯೊಬ್ಬ ಈ ಹೆಣಿಗೆಯಾಚೆ ಅಪೂರ್ಣ ಎಂದು ಹೇಳುತ್ತಾ, ಅಪ್ಪನ ನೆನಪುಗಳನ್ನು ಕಟ್ಟಿಕೊಡುವ ಈ ಕವಿತೆ ಅಪ್ಪನೊಟ್ಟಿಗೇ ಬದುಕಿನ ಹಲವು ಮಗ್ಗುಲಗಳನ್ನು ತೆರೆದು ತೋರುತ್ತ ಹೋಗುತ್ತದೆ. ಸಾವಿನ

ವಾಸ್ತವವನ್ನು ಒಪ್ಪಿಕೊಳ್ಳಲಾಗದೇ ತಳಮಳಿಸುವುದು ಮನುಷ್ಯರ ವಿಧಿ, ಆದರೆ ನೆನಪುಗಳಲ್ಲಿ ಸದಾ ಜೀವಂತವಾಗಿರುವ ಬಾಂಧವ್ಯದ ಎಳೆಗಳನ್ನು ಕವಿತೆ ಎಳೆಎಳೆಯಾಗಿ ತೆರೆದಿಡುತ್ತದೆ. ಮನೆಯೊಂದರ ದೈನಿಕದ ಲಯವನ್ನು ಕಾಣಿಸುತ್ತ ಅಲ್ಲಿ ಅಪ್ಪನ ಅಸ್ತಿತ್ವವನ್ನು ದಟ್ಟವಾಗಿ ಕವಿ ಮೂಡಿಸುತ್ತಾರೆ. ಹಾಗೇ ಭಾವದೊಳಗೂ ತುಂಬಿರುವ ಅಪ್ಪನ ವ್ಯಕ್ತಿತ್ವ ಅದರ ಅಭಾವದಲ್ಲಿ ಚಡಪಡಿಸುವ ತೀವ್ರತೆಯನ್ನು ಪದಗಳಲ್ಲಿ ಕಟ್ಟುವ ಮಾಯಕ ಕವಿತೆಗೊಲಿದಿದೆ.

ಮಹದೇವ ಹೇರಂಬ ಅವರ 'ನಿರುತ', ವಾಸ್ತವದ ಸುಡುಬೆಂಕಿಯಿಂದ ಪಾರಾಗಲು ಜೀವಜಲವನ್ನು ಹುಡುಕುತ್ತಾ ನಡೆಯುವ ಮನುಷ್ಯ, ಕವಿತೆಯಲ್ಲಿ ಅದನ್ನು ಧ್ವನಿಸುವ ಪರಿಗೆ ಈ ಕವಿತೆಯೊಂದು ನಿದರ್ಶನ. 'ಕರುಳ ಹುಣ್ಣಿಗೆ ನಗುವಿನ ಮುಲಾಮು ಹುಡುಕುವ' ರೂಪಕದಲ್ಲಿ ಅದು ಹೊಳೆಯುತ್ತದೆ. ಪಾಪದ ಮೂಟೆಗಳ ಇಳಿಸಿ ಹಗುರಾಗಲು ಪ್ರೇಮ ಹಾಗೂ ನಂಬಿಕೆಗಳ ರುಜುಮಾರ್ಗವನ್ನು ಕವಿತೆ ಅನ್ವೇಷಿಸುತ್ತದೆ. ಬದುಕು ಎಂಬುದು ವಿಘಟನೆಯಲ್ಲ, ಅದು ಬಾಂಧವ್ಯ ಎಂಬ ಅರಿವಿನಲ್ಲಿ ವಿರಮಿಸುತ್ತದೆ. ವಾಸ್ತವದ ಉದ್ವಿಗ್ನತೆಯನ್ನು ಹಲವು ರೂಪಕಗಳಲ್ಲಿ ಧ್ವನಿಸುವ ಕವಿತೆ ಏಕಕಾಲಕ್ಕೆ ಸಾಂದರ್ಭಿಕವೂ, ಸಾರ್ವತ್ರಿಕ ಭಾವವು ಆಗಿ ಕಾಡುತ್ತದೆ.

ಯಶ್ವಂತ್ ಎಂ ಅವರ 'ಭಾವ' ಕವಿತೆಯಲ್ಲಿ, ಭಾವವೊಂದು ಒಡಮೂಡಿ, ಒಡಲ ಭಾಗವೇ ತಾನಾಗಿ, ನಮ್ಮ ಅಣುಅಣುವನ್ನು ವ್ಯಾಪಿಸುವ ಅಮೂರ್ತ ಪಯಣವನ್ನು ಯಶ್ವಂತ್ ಕಟ್ಟಿಕೊಟ್ಟಿದ್ದಾರೆ. ಚಿಗುರೊಡೆದ ಸಸಿಯೊಂದು ನವಿರಾಗಿದ್ದರು ಅದು ಎಲ್ಲಾ ಸವಾಲುಗಳಿಗೆ ಎದೆಯೊಡ್ಡಿ ಮಣ್ಣು, ಗಾಳಿ, ನೀರು, ಬೆಳಕನ್ನು ಹೀರಿ ವಿಸ್ತರಿಸುವ ಸೋಜಿಗದಂತೆ ಭಾವವೊಂದು ನಮ್ಮೊಳಗೇ ವಿಸ್ತರಿಸುತ್ತದೆ. ನಮ್ಮೊಳಗನ್ನೇ ತನ್ನ ರಾಗದಿಂದ ಪರಿವರ್ತಿಸುತ್ತದೆ. "ನಿಂತ ತನುವಲಿ ಹರಿದ ರಾಗವೇ / ಅನುರಾಗಿಯಾಗಲು ನೋವುಂಟು ಮಾಡಿದೆ " ಎಂಬಲ್ಲಿ ಭಾವವು ನಮನ್ನು ತುಂಬಿಕೊಳುತ್ತ, ಜೀವಂತಗೊಳಿಸುತ್ತ ನಮಗೆ ಹೊಸದೇ ವ್ಯಕ್ತಿತ್ವವನ್ನು ನೀಡುತ್ತಾ ಹರಿಯುವ ಬೆರಗು ಇಲ್ಲಿ ಕವಿತೆಯಾಗಿದೆ.

'ಏನೂ ಇಲ್ಲದವರು' ಕವಿತೆಯಲ್ಲಿ, ಗಾಢ ವಿಷಾದದ ಉಸಿರೊಂದನ್ನು ಕವಿತೆಯಾಗಿಸುವಲ್ಲಿ ಎ. ರಘುಪತಿಯವರು ಶ್ರಮಿಸಿದ್ದಾರೆ. ಕವಿತೆಯ ಆಂತರಿಕ ಲಯವೂ ದುಃಖ, ವಿಷಾದದ ಜೊತೆ ಸೂಕ್ಷ್ಮ ಪ್ರತಿರೋಧವನ್ನು ವ್ಯಕ್ತಪಡಿಸುತ್ತದೆ. ಉಳ್ಳವರು ಹಾಗೂ ಏನೂ ಇಲ್ಲದವರ ವೈರುಧ್ಯವನ್ನು ತಣ್ಣಗೆ ಧ್ವನಿಸುತ್ತದೆ. ಎಲ್ಲವೂ ತನಗೆ ಬೇಕೆಂಬ ಲೋಭವು ಎಲ್ಲರನ್ನೂ ನೇಪಥ್ಯಕ್ಕೆ ಅಟ್ಟುತ್ತ, ಕೊನೆಗೆ ತನ್ನೊಳಗೆ ತಾನು ಏಕಾಂಗಿಯಾಗುವ ಸತ್ಯವು ಇಲ್ಲಿ ಗೋಚರಿಸುತ್ತದೆ. ಹೆಣ ಹೊರುವವರೂ

ಇಲ್ಲದೆ ಹದ್ದು ಕಾಗೆಗಳ ಪಾಲಾಗುವ ದೇಹದ ನಶ್ವರತೆಯನ್ನು ಸ್ವಾರ್ಥದ ಅಧಿಕಾರದ ಮುಂದೆ ಮುಖಾಮುಖಿಯಾಗಿಸುತ್ತದೆ.

ಧರಣಿಕಾಂತ್ ಅವರ ಕವಿತೆಯ ಶೀರ್ಷಿಕೆಯಂತೆ, ಅದು ದಿನದ ಬದುಕಿನ ಜಂಜಡಗಳನ್ನು ಪ್ರಸ್ತುತಪಡಿಸುತ್ತಿದೆ. ಇಲ್ಲಿ ಕವಿಯು ರಾತ್ರಿ ಎಂಬುದು ಕಣ್ಣಿಗೆ ಮಾತ್ರ, ಆದರೆ ಜಗತ್ತು ಮಲಗುವುದೇ ಇಲ್ಲ, ನಿರಂತರವಾಗಿ ಎಚ್ಚರದಿಂದಲೇ ಇರುತ್ತದೆ, ನಾಳೆಗಳೆಂಬುದು ಅಸತ್ಯಗಳ ಮೆಟ್ಟಿಲು, ಎಚ್ಚರವಾದರೆ ನಾವೆಲ್ಲರೂ ಅದರ ಮೇಲೆಯೇ ನಡೆಯಬೇಕು, ನಡೆದು ಬದುಕ ಸವೆಸಬೇಕು ಎಂದು ವಾಸ್ತವದ ಅರಿವನ್ನು ತೀಕ್ಷ್ಣವಾಗಿ ಹೇಳುತ್ತಾರೆ.

'ಅಂತರಂಗದ ಅಳಲು' ಕವಿತೆಯಲ್ಲಿ, ಆಸೆ, ಕನಸುಗಳನ್ನು ಹೆಣೆದು ಸಾಕಾರಗೊಳಿಸಲು ಶ್ರಮಿಸುವುದು ಮನುಷ್ಯರ ಪಾಡು. ಆದರೆ ಒಳಗಿನ ನವಿರಾದ ಜಗತ್ತು ಹೊರಗಿನ ಸೂಕ್ಷ್ಮ ವಿದ್ಯಮಾನಗಳಿಗೆ ಅಪ್ಪಳಿಸಿ ಚೂರಾಗುತ್ತದೆ. ವಾಸ್ತವದಲ್ಲಿ ಕರಗಿ ರೂಹು ಕಳೆದುಕೊಳ್ಳುತ್ತದೆ. ಅಂತರಂಗದ ಈ ಅಳಲನ್ನು ಮಂಜುಳಾ ಬಿ.ವಿ. ಅವರ ಕವಿತೆ ಸೂಕ್ಷ್ಮವಾಗಿ ಧ್ವನಿಸಿದೆ. 'ಮಡುಗಟ್ಟಿದ ಜ್ವಾಲಾಮುಖಿ ಸಿಡಿದೇಳದೇ ಅನಂತದಲಿ ಲೀನವಾಗುವ' ವಾಸ್ತವ ಸಂಕಟದ್ದು. ಎಲ್ಲೂ ಉದ್ವಿಗ್ನಗೊಳ್ಳದೇ ಅದನ್ನು ತಣ್ಣನೆಯ ಧ್ವನಿಯಲ್ಲಿ ದಾಟಿಸುವಲ್ಲಿ ಕವಿತೆ ಗೆದ್ದಿದೆ.

ನರಸಿಂಹ ವರ್ಮ ಅವರ 'ಕನ್ನಡಿ' ಕವಿತೆಯಲ್ಲಿ, ಮಿಥ್ಯಗಳಲ್ಲಿ ಬಗ್ಗಡವಾದ ಬದುಕಿನ ಪಾರದರ್ಶಕವಾದ ತಳವನ್ನು ಕಂಡಾಗ ಅದೊಂದು ಸಾಕ್ಷಾತ್ಕಾರದ ಮಹಾಕ್ಷಣವಾಗಿ ಗೋಚರಿಸುತ್ತದೆ. ಕನ್ನಡಿಯ ಮುಂದೆ ನಿಲ್ಲುವ ಪ್ರಾಮಾಣಿಕ ಕ್ಷಣವೂ ಅಂತಹುದೇ. ನಮ್ಮೊಳಗೆ ಅವಿತ ಸತ್ಯಗಳು ಕಾಣತೊಡಗಿದಾಗ ಅದು 'ಕಾಣ್ಕೆ'ಯಾಗುತ್ತದೆ. ನೋಟಕ್ಕೆ 'ದರ್ಶನ'ದ ಆಯಾಮವು ಪ್ರಾಪ್ತವಾಗುತ್ತದೆ. "ಅದು ದರ್ಪಣವೋ ದರ್ಶನವೋ / ಹಣೆಯ ಮೇಲಿನ ನೇರಿಗೆಗಳಲ್ಲಿ / ಸಾಲು ಸಾಲು ಕತೆಗಳು/..." ಕಾಣದ, ಕೇಳದ ಸಂಕಟಗಳನ್ನು ಸೂಚ್ಯವಾಗಿ ಕಾಣಿಸುವಂತೆ, ಕೇಳಿಸುವಂತೆ ಭಾಷೆಯನ್ನು ಸೂಕ್ಷ್ಮಗೊಳಿಸಿಕೊಳ್ಳುವ ಪರಿ ಇಲ್ಲಿ ಹರಳುಗಟ್ಟಿದೆ. ಜಗತ್ತಿಗೇ ಬೆನ್ನುಹಾಕಿ ನಡೆದವನ ಬೆನ್ನಿನ ಮೇಲೆ ಅವರವರಿಗೆ ಆಕರ್ಷಕವೆನಿಸಿದ ಬೆನ್ನುಡಿ ಬರೆದುಕೊಳ್ಳಬಹುದು ಎಂಬ ಸಾಲು ಮತ್ತೆ ಮತ್ತೆ ಅನುರಣಿಸುವಂತಿದೆ.

ಡಾ.ಬದರೀನಾಥ ಜಹಗೀರದಾರ ಅವರ 'ಸರಿ ಯಾವುದು ಎಂದಾರಿಸು' ಕವಿತೆಯಲ್ಲಿ, ಸರಿ ಎಂಬುದು ಯಾವುದು? ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಶಾಂತಿ, ಮಾಧುರ್ಯ ಇವೆಲ್ಲಾ ಮನಸ್ಸು ಬಯಸುವ ಮೌಲ್ಯಗಳು. ಆದರೆ ಬದುಕು ಕಪಟ–ಕ್ರೌರ್ಯಗಳನ್ನು ಧಾರಣೆಮಾಡಿದೆ. ಇದರಲ್ಲಿ ಯಾವುದು ಸರಿಯೆಂದು ಆರಿಸುವುದು ಆತ್ಮಸಾಕ್ಷಿಯ ಕೆಲಸ. ಕಾವ್ಯದ ಕೆಲಸವೇ ಇಂಥ ಹುಡುಕಾಟ. ತನ್ನನ್ನು

ಶೋಧಿಸಿಕೊಳ್ಳುತ್ತಲೇ ಜಗತ್ತನ್ನು ನಿರ್ಮಲಗೊಳಿಸಬೇಕೆಂಬ ಹೋರಾಟ ಕಾವ್ಯದ್ದು. ಮನುಷ್ಯತ್ವವನ್ನು ಕಟ್ಟುವ ಕಾಯಕವಿದು. ಅದನ್ನು ವಾಚ್ಯಾವಾಗಿ ಕವಿತೆ ನಿರ್ವಹಿಸಿದೆ.

ಕವಿತೆ ವರ್ತಮಾನದ ಕತ್ತಲ ಭಯ ತಲ್ಲಣಗಳನ್ನೂ ಸೂಕ್ಷ್ಮವಾಗಿ ಧ್ವನಿಸುತ್ತಿದೆ. ಧರ್ಮರಾಜಕಾರಣದ ಒಳಸುಳಿಗಳು ನಮ್ಮ ಮನೆಯಲ್ಲೇ ನಮ್ಮನ್ನು ಅಪರಿಚಿತರನ್ನಾಗಿಸಿದ ವಿಹ್ವಲತೆಯೂ ಇಲ್ಲಿ ಇಣುಕುತ್ತದೆ. ಅನ್ಯತೆಯ ನೋವು ಹಾಗೂ ತಲ್ಲಣಗಳೆರಡೂ ಇಲ್ಲಿ ಹರಳುಗಟ್ಟಿವೆ. ಇಂಥ ಮನೆಯ ಛಾವಣಿ ಕಳಚಿ ಬಯಲಾಗಬೇಕೆಂಬುದು ಜೀವದ ಹಂಬಲ

ಎಲ್ಲ ಕೃತಕ ಸಿದ್ಧಾಂತಗಳನ್ನು ಮೀರುತ್ತ ಅನಿಕೇತನ ಪ್ರಜ್ಞೆಯನ್ನು ಉಳಿಸಿ ಕೊಳ್ಳುವುದೇ ಕವಿತೆಯ ಕಾಯಕವಾಗಬೇಕಾದುದು ವರ್ತಮಾನದ ತುರ್ತು. ಆಗ ಮಾತ್ರ 'ಆಗುತ್ತಲೇ' ಇರುವ ಚಲನಶೀಲತೆಯನ್ನು ಉಳಿಸಿಕೊಳ್ಳಬಹುದು. ಅಂಥ ಚಲನೆಯನ್ನು ಕಾಣಿಸುತ್ತಿರುವ ಹೊಸ ತಲೆಮಾರು ನಿಜಕ್ಕೂ ಭರವಸೆ ಹುಟ್ಟಿಸುತ್ತಿದೆ.

# ಈ ಮಣ್ಣ ಕಣ್ಣಾಗು

❖ **ನಾವೆಂಕಿ ಕೋಲಾರ**

ಅದೆಂಥಾ
ಕೊಳಕು ಮನುಸು ನಮ್ಮದು
ಅದೆಂಥಾ ಕ್ರೂರಿಗಳು ನಾವು ..
ಮೂಕ ಜೀವಗಳ ಹೆಗಲ ಸೆಗಳು
ಶ್ರಮಿಕ ಮಕ್ಕಳ ಬಸಿದ ಬೆವರು
ರಕ್ತ ಕಣ್ಣೀರ ಕೋಡಿ ಹರಿದು
ಭೂಮಿ ಸೀಳಿ ಬರುವ
ಭತ್ತ ಗೋಧಿ ಜ್ವಾಳದ ಮೊಳಕೆ
ಅವರ ಮಗುವಾಗೇ ಬೆಳೆಸುತ್ತಾರೆ
ಜೀವ ಸಂಕುಲಕ್ಕೆ ಆಹಾರವಾಗಿ ನೀಡುತ್ತಾರೆ –

ಹಸಿದ ಹೊಟ್ಟೆಗೆ ಅನ್ನದ ಅಗಳು
ರೊಟ್ಟಿಯ ಚೂರು ಸುಮ್ಮನೆ ಬರುವುದಲ್ಲ
ಬಡಕಲು ದೇಹದ ಗಟ್ಟಿ ರೆಟ್ಟೆಯ
ಶ್ರಮ ತ್ಯಾಗ ಬೆವರಿನ ಫಲ
ಕವಳವಿಲ್ಲದೆ ಸತ್ತ ಜೀವಗಳ ಲೆಕ್ಕ
ಯಾರ ಬಳಿ ಇದೆ; ಇದ್ದರೆ ಎದೆ
ನಡುಗಿ ಹೋಗುತ್ತದೆ –
ಪಿಸ್ತೂಲು ಗುಂಡುಗಳು ಸಿಡಿಸಿ
ಸುಟ್ಟು ಬಿಸಾಡಿದ ದೇಹರಾಶಿ
ಇದೇ ಮಣ್ಣಲ್ಲೇ ಕರಗಿ ಕಣ್ಣಾಗಿವೆ

ಅವು ಇಂದಲ್ಲಾ ನಾಳೆ ಕೆದರಿ
ಚಿಗುರಿ ವಿಷದ ಅನ್ನ ಉಣಿಸದಿರವು –

ಪ್ರಕೃತಿ ಖರೀದಿಸುವ ಸ್ವತ್ತಲ್ಲ
ಅದು ಮುನಿದರೆ ಕೊನೆಗೆ ಮಿಗಿಲೋದು
ಮಸಣ, ಮಸಣದಲ್ಲಿ ಹತ್ತಾರು ಗಿಡಗಂಟಿ
ನಿಟ್ಟುಸಿರುಬಿಟ್ಟು ನೆರಳು ಹಣ್ಣು ಬೀಜವಾಗಿ
ಕೊರಳು ಹಿಂಡಿದವರನ್ನೂ ಕ್ಷಮಿಸಿಬಿಡುತ್ತದೆ –

ಕನ್ನ ಹಾಕಿದ ಹಣದ ಕಂತೆ
ಟನ್ನುಗಳ ಚಿನ್ನ ತಿನ್ನಲಾರಿರಿ
ಬದುಕಲು ಹಿಡಿ ಅನ್ನವನ್ನೋ
ಚೂರು ರೊಟ್ಟಿಯನ್ನೋ
ತಿನ್ನಬೇಕಲ್ಲಾ
ನಾವೆಲ್ಲಾ ಮನುಷ್ಯರಾದರೇ –

ಹುಟ್ಟು ಸಾವಿಗೂ ಅನ್ನದ ಅಗಳು
ಬೇಕೇಬೇಕೆನ್ನುವ ನಾವು ಮಾಡಬೇಕಾದ್ದೇನು?

# ಕೇದಿಗೆಯ ಹೂವು

**❖ ಸ್ವಭಾವ ಕೋಳಗುಂದ**

ಬೆಟ್ಟದ ಮೇಲಿನ ಅಜ್ಜನಿಗೆ
ನೆರೆಯದ ಹುಡುಗಿಯ ಕೈ ಊಟ
ಉಘೋ ಉಘೋ ಭಕ್ತ ಗಣ
ರುದ್ರಾಕ್ಷಿ ವಿಭೂತಿಯ ಅಭಿಷೇಕ

ಗಂಧ ಲೇಪಿತ ಮೈಗಂಧ ಸುಗಂಧ
ವಾರ ಹುಣ್ಣಿಮೆಗೋ ಮಜ್ಜನಾನಂದ
ಬೈಗುಳವೋ ಮಂತ್ರವೋ
ಪೂಜಾರಿಯ ಏದುಸಿರು ನಿತ್ಯ ನರಕ

ಕಾಡು ಹೂಗಳ ರಸಾಯನ ನೈವೇದ್ಯ
ಬಿಸಿ ಬಿಸಿ ತಳಿಗೆಯ ಹಸಿವಿನ ಯುದ್ಧ
ಮೋಟು ಮಕ್ಕಳ ಕೈಯಲ್ಲೂ
ಚಂಡೆ ಮದ್ದಳೆಯ ಕೋಲಾಟ ಮೇಲಾಟ

ಅವಳ ಮೂರು ದಿನ ಹೊರಗೆ ಯಮನ ಬಂಧಿ
ಕೋಣೆಯಲಿ ಅಜ್ಜಿಯ ಬೊಚ್ಚು ಬಾಯ ಬೈಗುಳ
ಅಂಗಳದ ತುಳಸಿ ಬಾಡಿತ್ತು ಕರ್ಪೂರ ಕಡ್ಡಿಯ ಕಾವಿಗೆ
ನಮಗೋ ಹುಡುಗಾಟ ಮುಟ್ಟಾದವಳ ಮುಟ್ಟುವುದು

ಕೇದಗೆಯ ಗರಿ ತುರುಬಿನಲಿ ನಕ್ಷತ್ರವಾಗಿತ್ತು
ಹರಿದ ಹುರುಳಿ ಚಡ್ಡಿಯ ಜೋಬಿನೊಳಗೆ
ಹಕ್ಕಿಕಡಿದ ಗಿಣಿಮಾವು ರುಚಿ ರುಚಿ
ಅಡ್ಡೆಯಲಿ ತಂದ ನೀರು ಗುಡಾಣ ತುಂಬಿಸಿತ್ತು

# ಬೇಯುವುದೆಂದರೆ...

❖ **ಶ್ವೇತಾ ಮಂಡ್ಯ**

ಕವಿತೆಗೆ ಹೆಸರಿಡುವಾಗ
ಅನ್ನಕ್ಕೂ ಹೆಸರಿಟ್ಟಿದ್ದೆ
ಅನ್ನದ ತುತ್ತಿಗೂ ಕವಿತೆಯ ಮತ್ತಿಗೂ ಭೇದವಿಲ್ಲ ಇನಿತು
ಅನ್ನ ಪ್ರಾಣವಾಗುವ ಹಾಗೆ
ಕವಿತೆ ಜೀವವಾಗುತಲಿದೆ
ಮನದ ಪಾತ್ರೆಯಲ್ಲಿ ಬೆಂದು...

ಒಲೆಯ ಮೇಲಿಂದ ಬೆಂದ ಹಿಟ್ಟನ್ನು ಕೆಳಗಿಳಿಸಿ,
ಗಂಟು ಕಟ್ಟದ ಹಾಗೆ ನಾದಬೇಕು
ಅದರೊಳೀ ಕೈಗಳು
ಕರಗತವಾಗಬೇಕು
ಹಿಟ್ಟು ಪ್ರಾಣದಾಯವಾಗಿಸುವಂತೆ
ವಹಿಸುವ ಎಚ್ಚರ
ಪದಗಳ ಪೋಣಿಸಿ ಬರೆಯುವ
ಈ ಕವಿತೆಗೂ ಬೇಕು...

ಸಾಲು ಸಾಲುಗಳ ಬರೆದು
ಬರೆದುದ್ದನ್ನು ಹದವಾಗಿ ಭಾವಸಂಪದಗೊಳಿಸಿ
ನಾದಕೆ ಬೆಸುಗೆಗೊಳಿಸಿ
ಸಹೃದಯರಿಗೆ ಪಾಕಗೊಂಡ ಸಿಹಿಯಂತೆ
ಕವಿತೆ ಅರಳಬೇಕು
ಅನುಭವದ ಆಳದಲಿ

ಮಿಂದ ಸಾಲುಗಳು
ಘಮ–ಘಮಿಸಿ, ನಳ–ನಳಿಸಿ,
ಮುತ್ತಿನ್ಹಾರದ ಹಾಗೆ ಕಂಗೊಳಿಸಬೇಕು....

ಬೇಯಿಸಿದರೆ ಅನ್ನ
ಕಾಯಿಸಿದರೆ ಕವಿತೆ
ಪ್ರಾಣದಾಯಕವಾದ ಈ ಎರಡು
ತನು–ಮನವನು ಸಂತೈಸುವ ಹಾಗೆ
ಬೇಯಬೇಕು...

# ಗುಜರಿ ಅಂಗಡಿಯ ಆಂಟಿಕ್ ಪೀಸ್ಗಳು

**❖ ಲಿಂಗರಾಜ ಸೊಟ್ಟಪ್ಪನವರ**

ಎಷ್ಟು ಮಾತು ಅವು
ಕೈ ಕೈ ಹಿಡಿದು ಸಾಗುತ್ತಿದ್ದರೆ
ರಸ್ತೆಗಳೆ ಚಿಕ್ಕವು

ಸಾಗರದ ದಡ ಪರ್ವತದ ತುದಿ
ದೇಗುಲದ ಕಟ್ಟೆ ಪಾರ್ಕಿನ ಬೆಂಚು ಎಲ್ಲಕೂ ಮಾತು ಕಲಿಸಿದೆವು

ನಿತ್ಯ ಗದರುತ್ತಿದ್ದ ಪಾರ್ಕಿನ ಗಾರ್ಡು
ಸೆಕೆಂಡ್ ಶೋ ನಂತರ ಅರ್ಧ ದಾರಿಯಲ್ಲಿ ತಡೆಯುತ್ತಿದ್ದ ಪೋಲಿಸಪ್ಪ
ಗುರ್ರ ಎನ್ನುತ್ತಿದ್ದ ವಾರ್ಡನ್
ಎಲ್ಲರೂ ಪ್ರೀತಿಸುವದ ಕಲಿತುಬಿಟ್ಟರು

ಬೈಟೂ ಕಾಫೀ ಮುಂದಿಟ್ಟುಕೊಂಡು
ಏನು ಮಾತಾಡಿದೇವೊ ನಿತ್ಯ ಸಂಜೆಗಳು ಹೇಗೆ ಸರಿದವೊ
ಇಂದು ಎಂಬುದು ಬಹು ದೊಡ್ಡ ಅಚ್ಚರಿ

ನಾವೀಗ ಮನೆ ಕಟ್ಟಿಕೊಂಡಿದ್ದೇವೆ
ಸರಿ ಹೊತ್ತಿಗೆ ಟೀ ಕಾಫೀ ಎಲ್ಲ ಸಲ್ಲುತ್ತವೆ
ಯಾವುದಕ್ಕೆ ಕೊರತೆಯಿದೆ
ಸಂಜೆ ಮಾತ್ರ ಅನಾಥವಾಗಿದೆ

ನಮ್ಮ ನಡುವೆ ಅಗಾಧ ಮೌನ
ಹೆಚ್ಚೆಂದರೆ ಎರಡು ತುಂಡು ಮಾತು

ಹೌದು.. ಇಲ್ಲ
ಆಯ್ತು.. ಬಿಡು
ಪಾರ್ಕು ಸಾಗರ ತೀರ ಸಂಗಮ್ ಥೇಟರ್
ಹೊರ ಹೋಗದೆ ಎಷ್ಟು ದಿನಗಳಾದವು
ಸುಖದ ದುಮ್ಮಾನ ಹೀಗೂ

ಜನ್ಮ ಜನ್ಮಾಂತರಕ್ಕೆ ಬಳ್ಳಿಯಂತೆ ಚಾಚಿಕೊಂಡಿದ್ದೆವು
ಆಸೆ ಕಂಗಳು ಅರೆ ಮುಚ್ಚಿ
ಅಮೋದ ಸಲ್ಲಾಪ
ಅವೆಷ್ಟು ಜನ್ಮಗಳ ಜೀವಿಸಿದೆವು

ಈಗ
ಬಾಯಿ ದುರ್ಗಂಧ ಎಂಬ ದೂರು
ತುಟಿಯೆಂಬುದು ಮಾಂಸದ ಎಸಳು
ನನಗೊಂದು ನಿನಗೊಂದು ಆಪ್ತ ಘಮಲು ಇತ್ತಲ್ಲ
ಅರೇ
ಮರೆವಿಗೆ ಜಾರಿ ಎಷ್ಟು ದಿನಗಳಾದವು

ಹಳೆಯ ಸರಕನ್ನೆಲ್ಲ ಕಿತ್ತು ಕಿತ್ತು ಜೋಡಿಸಿಡುತ್ತಿದ್ದೇನೆ
ಕಿಲುಬು ಹತ್ತಿದ್ದಾದರೂ ಹೇಗೆ
ಆಂಟಿಕ್ ಚೀಜ್‌ಗಳ ಕಿಮ್ಮತ್ತು
ಮಾರುಕಟ್ಟೆ ಜಮಾನದಲ್ಲಿ..
ಮಾರಿಕೊಂಡಿದ್ದೇವೆ ನಾವು ನಾವೇ

ಈಗೀಗ ಹಗಲು ದೀರ್ಘವಾಗುತ್ತಿದೆ
ರಾತ್ರಿ
ಬೇಗ ಕಳೆದರೆ ಸಾಕು

ಕಡ ತಂದವಷ್ಟು ಬೆಳದಿಂಗಳು
ಸಾಕಾಗಬಹುದು
ಇನ್ನೆರಡು ದಿನ

# ಭಾವ

**❖ ಯಶ್ವಂತ್ ಎಂ**

ಚಿಗುರೊಡೆದ ಹಸಿರಾದ ಭಾವವೆ
ಉಸಿರಾಡಲೆಡೆಯುಂಟೆ ಕಗ್ಗತ್ತಲ ಹಗಲಿನಲಿ
ಕಾದಿಹ ನಖಗಳನು ಬಳಸಿ
ಕೀಟ ಬಾಧೆಯನು ಭೇದಿಸಿ
ಸಸಿಯಾಗಿ ನಿಂತಿಹ ಕಸಿವಿಸಿಯ ಭಾವವೆ
ನೀರಾಗಿ ಪೊರೆವ ಮನವುಂಟೆ ನಿನಗೆ?

ನಿಂತ ತನುವಲಿ ಹರಿದ ರಾಗವೇ
ಅನುರಾಗಿಯಾಗಲನುವುಂಟು ಮಾಡಿದೆ
ಸೊರಗುತಿಹ ಸಾಗರಕೆ ಸಲಿಲವಾದೆ
ನದಿಯಾಗೆ ಅಣೆಕಟ್ಟು, ಅವರಿಚ್ಛೆಗನುಗುಣ ಹರಿವೆ
ನಿಲ್ಲಿಸಿ, ನಲುಗಿಸಿ, ನಲಿವರು
ಶುದ್ಧ ಮುಖವಾಡದ ಕುಬ್ಜ ಮನದವರು

ಹಸುಗೂಸಲಿ ಜನಿಸಿ ಬೆಳೆದಿಹೆ
ನಿನ್ನಸಿವೆಯಿಲ್ಲ ಮಸಿ ಬಳಿದಿಹ ಜನಕೆ
ತೋರಿಕೆಯು ತಾರಕಕೇರಿ ತಾರೆಯ ಮುಟ್ಟಿರೆ
ಸ್ಪರ್ಶಿಸಲು ಭುವಿಯ ಆವಿರ್ಭವಿಸು ನೀನಲ್ಲಿ
ತಮ ಕಳೆದು ಸುಮ ಚೆಲ್ಲಲವರ ಮನದಿ
ಸಮ್ಮತದಿ ನೆಲೆಸವರ ನಾಳಿನ ಬಾಳಲಿ

ನೀರವ ಮೌನದಿ ನುಡಿಸು ಸಪ್ತಸ್ವರ
ದನಿಯಾಗು ಮೂಕನ ಕಲ್ಪನೆಯ ಲೋಕಕೆ
ದಿಟ್ಟಿಯದು ನೀ ಕುರುಡರ ಕೇರಿಗೆ
ಇರುವೆಯಲು ಇರುವ ನವಿರಾದ ಭಾವವೆ
ಸೇರು ಎನ್ನಂತರಾತ್ಮವ ಈ ಘಳಿಗೆ
ನೀರಾಗಿ ಅರಿತು ಪೊರೆವೆ ಇರುಸು ಮುರುಸಿಲ್ಲದೆ

# ಜೀತದಾಳುವಿನ ಒಡಲೊಳಗೆ

❖ **ನಾರಾಯಣಸ್ವಾಮಿ ವಿ. ಮಾಲೂರು**

ಶತಮಾನಗಳಿಂದ ಎದೆಯಲಿ ನೋವನುಭವಿಸಿ
ಕಂಡೊರ ಹೊಲದೊಳಗೆ ಸಿಗ್ಗಿಲ್ಲದೆ ದುಡಿದು
ಒಂದೊತ್ತಿನ ಗಂಜಿಗಾಗಿ ಕೈಯನೊಡ್ಡಿ ನಿಂತ
ಜೀತದಾಳುವಿನ ಒಡಲೊಳಗೆ ಜನ್ಮವೆತ್ತಿದವನು ನಾನು

ಹಸಿವಿನಿಂದ ನೊಂದು ಬಸವಳಿದು ಹೋಗಿ
ಸೋತ ರೆಟ್ಟೆಯೊಳಗೆ ತೂರಾಡುವ ಹೆಬ್ಬೆರಳನಿಡಿದು
ಕಾಲ್ನಡಿಗೆಯಲಿ ಹಾದು ಹೋಗುವಾಗ
ಕಣ್ಣಂಚಿನಲಿ ಜಿನಗುತಿರುವ ಹನಿಗಳು
ಬೆವರೆಂದು ಬಗೆದು ಸಾಗಿದ ಮುಗ್ಧನು ನಾನು

ತೂತುಬಿದ್ದ ಚಡ್ಡಿಯನು ಹಗಲಿರುಳೆನ್ನದೆ
ತ್ಯಾಪೆ ಹಾಕುತಾ
ವರುಷಕ್ಕೊಮ್ಮೆ ನನ್ನ ಅಂಗಿಯನು
ಬದಲಾಯಿಸಿಕೊಂಡವನು
ಯುಗಾದಿಯ ಹಬ್ಬದ ದಿನ ಬಿಳಿ ಬಿಳಿಯಾಗಿದ್ದ
ಅನ್ನದ ಅಗಳನು ಕಂಡು ಸಂಭ್ರಮಿಸಿದವನು ನಾನು..

ಗಾಳಿಗೆ ತೂರಿ ಹೋಗುವ ತೆಂಗಿನ ಗರಿಗಳು
ಅಡವಿಯೊಳಗೆ ಒಣಗಿ ಬಿದ್ದ ಬಿದಿರು ದಬ್ಬೆಗಳಿಂದ
ಮೇಲ್ಚಾವಣಿ ಮಾಡಿ ಕಟ್ಟಿದ

ತಟಕವಿಲ್ಲಾದ ಸೋಗೆ ಸೂರಿನ ಗುಡಿಸಲಿನಲಿ
ಮಂಕಾಗಿ ಬೆಳೆದವನು ನಾನು

ಮುರುಕಲು ಹೆಂಚಿನ ಮನೆಯೆಂಬ
ಕನ್ನಡ ಶಾಲೆಯು ನನ್ನ ಕೈಬೀಸಿ ಕರೆದಾಗ
ಕನ್ನಡಮ್ಮನ ಪದಗಳು ನನ್ನೆದೆಯನು ನಾಟಿದಾಗ
ಬುಡ್ಡಿಯ ದೀಪದ ಬೆಳಕಿನಲಿ
ಅಕ್ಷರಗಳನ್ನು ತಡಕಾಡಿದ ಅಂಧನು ನಾನು

ಪಿಜ್ಜಾ, ಬರ್ಗರ್, ನೂಡಲ್ಸ್‌ಗಳೆಂಬ ಹೆಸರನು ಉಚ್ಚಾರಣೆ
ಮಾಡಲು ಬಾರದವರ ಎದೆಯಂಗಳದಲ್ಲಿರುವಾಗ
ನನ್ನವ್ವ ಕೆಂಡದ ಮೇಲೆ ಸುಡುವ ರಾಗಿ ರೊಟ್ಟಿಯ
ಘಮಲಿನಲ್ಲೆ ಹಸಿವನು ನೀಗಿಸಿಕೊಂಡವನು ನಾನು

ಜಾತಿ ಮತವು ದೇಶವನು ಅಂಧಕಾರದಲಿ ದೂಡುತ್ತಿರುವಾಗ
ನೊಂದವರ ನೋವು ಎದೆಯಲಿ ಸಿಡಿಲಾಗಿ ಬಡಿಯುವಾಗ
ಕಾಡುವ ನೆನಪುಗಳು ಸುಡುವಾಗ್ನಿಯಾಗಿ ನನ್ನ ಸುಡುವಾಗ
ಜ್ಞಾನದ ಬುತ್ತಿಗಾಗಿ ಕೈಚಾಚಿ ವಿರಾಗಿಯಂತೆ ಹೊಂಟವನು ನಾನು

# ಹಲಸು

❖ **ಯಂಶ ಬೇಂಗಿಲ**

‘ಈ ಮನೆಗೆ ಹಲಸು ತರಬಾರದು’
ಅಪ್ಪನ ಗಡಸು ಧ್ವನಿ
ಕಡಲ ಮೊರೆತದ ಹಾಗೆ!

ಹಲಸು ಉಮ್ಮನ
ಅಚ್ಚುಮೆಚ್ಚಿನ ಹಣ್ಣು

ಅಪ್ಪನಿಗೆ ಹಲಸಿನ ಮೇಲೆ ಸಿಟ್ಟೇನಿಲ್ಲ
ಆಗಾಗ ಆರೋಗ್ಯ ಕೆಡುವ
ಉಮ್ಮನ ಮೇಲೆ ಕಾಳಜಿ

ಅಪ್ಪ ತಿಳಿದುಕೊಂಡಿದ್ದೋ
ನಂಬಿಕೊಂಡಿದ್ದೋ ಗೊತ್ತಿಲ್ಲ
ಹಲಸು ಹಲವು
ಆರೋಗ್ಯ ಸಮಸ್ಯೆಗಳ ಮೂಲವಂತೆ

ಅಪ್ಪ ಹೇಳುವ ಹಾಗೆ
ಬಾಯಿಗೆ ಸಿಹಿಯಾಗಿದ್ದು ಹಲವು
ದೇಹಕ್ಕೆ ಕಹಿಯಂತೆ
ಬಾಯಿಗೆ ಕಹಿಯಾಗಿದ್ದು ಹಲವು
ದೇಹಕ್ಕೆ ಸಿಹಿಯೂ ಅಂತೆ

ಕದ್ದು ಮುಚ್ಚಿ ಹಲಸು ತಿನ್ನುವ
ಉಮ್ಮನ ಬಯಕೆಗೆ
ಬಹಳಷ್ಟು ಬಾರಿ
ಅಪ್ಪನ ಬೈಗುಳದಾರತಿಯೂ ಆಗಿದ್ದಿದೆ

ಉಮ್ಮನ ಮೊಮ್ಮಗಳು
ನನ್ನ ಮಗಳು
ಉಮ್ಮನದೇ ಪಡಿಯಚ್ಚು
ಹಲಸೆಂದರೆ ಪಂಚಪ್ರಾಣ

ಇತ್ತೀಚೆಗೆ ಮನೆಗೆ ಹಲಸು ತಂದರೆ
ತೊಂದರೆಯೇನಿಲ್ಲ
ಒಂದೊಂದು ಹಣ್ಣನ್ನೂ ಸುಲಿದು
ಬೀಜ ಬೇರ್ಪಡಿಸಿ
ಪುಟ್ಟ ಮಗಳ ಕೈಗಿಡುವಾಗ
ಉಮ್ಮನ ಮುಖವನ್ನೊಮ್ಮೆ
ತಣ್ಣಗೆ ದಿಟ್ಟಿಸುವ ಅಪ್ಪ

ಮೊನ್ನೆ ಅಪ್ಪನೇ ಹಲಸು ತಂದು
ಉಮ್ಮ ಮತ್ತು ಮೊಮ್ಮಗಳಿಗೆ
ಸುಲಿದು ತಿನ್ನಿಸುವುದು ಕಂಡಾಗ
ಈ ಮನೆಗೆ ಹಲಸು ತರಬಾರದು ಅಂದ
ಅಪ್ಪನ ಅದೇ ಧಾಟಿಯಲ್ಲಿ

"ಈ ಮನೆಗೆ ಹೆಣ್ಣು ತಂದಿದ್ದೂ ಹೀಗೆಯೇ"
ಅಂದು ನಸು ನಕ್ಕ ಅಪ್ಪ!

## ಮಾರುಕಟ್ಟೆಯ ಗಡಿಯಾರ

❖ **ಶಾರದ ಎಸ್.**

ಮಾರುಕಟ್ಟೆಯ ನಡುವೆ ನಿಲ್ಲಿಸಿದ ಗಡಿಯಾರ.
ನಿಲ್ಲಿಸಿದ್ದಾರೆ, ಆದರದು ಓಡುತ್ತಲೇ ಇದೆ
ಸದಾ ಓಡುವ ಆ ಜನರ
ಬದುಕಿನ ಕಾಲುಗಳಂತೆ,
ಅಲೆದಾಟ ಅರಚಾಟದ ಬಿಕರಿಗಳ ನಡುವೆ
ಕೆಡವಿಹೋದ ಕಟ್ಟಲಾಗದ ಬದುಕುಗಳ ಕಾಲ್ಗಳಂತೆ?!

ಅಲ್ಲೊಂದು ಇಲ್ಲೊಂದು ತಲೆನರೆತ
ರಾಜ ಕಟ್ಟಡಗಳು ನಿಂತಿವೆ
ಗತಕಾಲದ ವೈಭವದ ಅಣಕುಗಳಂತೆ.
ಆ ಎಲ್ಲ ಗಜಿಬಿಜಿಯ ಸದ್ದುಗದ್ದಲದ ನಡುವೆ
ಇಡೀ ಮಾರುಕಟ್ಟೆಯೇ ತಲೆದೂಗುತ್ತಿದೆ,
ಧೂಳುದೇವಿಯ ಲಾಲಿ ಹಾಡಿಗೆ.

ಪೋರಿಯೊಬ್ಬಳು ನಿಂತಿದ್ದಾಳೆ ರೂಪಾಯಿ ಹಿಡಿದು
ಯಾವ ಬಣ್ಣದ ಐಸ್ ಕ್ರೀಮ್ ಕೊಳ್ಳಲೆಂದು ತಿಣುಕುತ್ತಾ,
ನಡೆದಿದೆ ಮೂಟೆ ಮೂಟೆ ತರಕಾರಿ
ಹೂ ಹಣ್ಣುಗಳ ದೈನಿಕ ಪಥಸಂಚಲನ,
ಅಂಗಿ, ದುಪ್ಪಟ್ಟಾಗಳು ಹಾರುತಿವೆ ಕೊಳ್ಳುವವರ ಬ್ಯಾಗಿಗೆ
ಪಾತ್ರೆಪಗಡಿಗಳು ಒಡೆಯನ ದಾರಿ ಕಾಯುತಿವೆ?!

ಇದಿಷ್ಟರ ನಡುವೆಯೇ ಕಾಣಸಿಗುವ ಡೇರೆಯ ಗುಡಿಗಳು,
ಅದರೊಳಗೊಂದಿಷ್ಟು ಹರಿದ ಬಟ್ಟೆಯ,ಅರೆಹೊಟ್ಟೆಯ
ಮಾಸಿದ ಮುಖದ ಬೆವರಿನ ದೇವರುಗಳು.
ಕೈಚಾಚದ, ರಟ್ಟೆ ಮುರಿವ ಹಸಿದ ದೇವರುಗಳು.
ಇದೆಲ್ಲದರ ಮೂಕ ಸಾಕ್ಷಿ ಆ ಗಡಿಯಾರ.
ನೋಡುತ್ತಲೇ ನಿಂತಿದೆ. ಅಲ್ಲಾ ಅಲ್ಲಾ ಓಡುತ್ತಲೇ ನಿಂತಿದೆ.

# ಅಪ್ಪಾ!!

**❖ ಅಸಪ ಗೇರುಕಟ್ಟೆ**

ಜಂಜಾಟಗಳು
ಬರಸೆಳೆದು ಉಸಿರುಗಟ್ಟಿಸಲು
ಹೆತ್ತವರ ನುಡಿ
ಆಮ್ಲಜನಕ!
ದಿನಾ ಮಾತಿಗೆ ಸಿಗುವ ಮಗ
ತಪ್ಪಿದರೆ ಕರೆ ಮಾಡಿ
"ಏನು ಸುದ್ದಿ ಇಲ್ಲ" ಕೇಳುವ ಅಪ್ಪ
ಇರ್ವರ ಮನಸ್ಸು ಹಗುರ!

ತೃಪ್ತಿಯಾಗದ
ಮನಸ್ಸಿಗೆ ಮನೆಯ ಕರೆಯೊಂದು ಸಾಕು
ನಿರಾಳವಾಗುವುದು.
ಈಗ ಹಾಗಿಲ್ಲ
ಎಲ್ಲಾ ಮುಗಿದರೂ ಅಪರಿಪೂರ್ಣ.
ಅಪ್ಪನ ಧ್ವನಿ ಕೇಳದ
ಕರೆ ಭರ್ತಿಯಾಗುವುದಿಲ್ಲ;
ಮನಸ್ಸು ಸುಲಭವಾಗಿ ವಾಸ್ತವಕ್ಕೆ ಒಗ್ಗುವುದಿಲ್ಲ!

ತುಂಬಿದ ಮನೆ
ಮಕ್ಕಳ ಚಿರಿಪಿರಿ
ಹೆಂಗಸರ ನಗುವಿಗೆ ಪಾತ್ರೆಗಳ ತಾಳಮದ್ದಳ
ಅಮ್ಮನ ಕಿರು ನಗು

ಇಷ್ಟರ ನಡುವೆ ಅಪ್ಪನ ಮೇರು ಧ್ವನಿ
ಒಳ ಬದುಕು ಚಂದವಾಗಿತ್ತು,
ಮುಸ್ಸಂಜೆಯ ಕಟ್ಟಂಚಹಾಗೆ
ಅಪ್ಪನ ಗತ ತೆರೆದುಕೊಂಡರೆ
ಎಲ್ಲರ ಮನಸ್ಸು ತುಂಬುವುದು
ಈಗ ಕಣ್ಣುಗಳು!!

ನೆನಪುಗಳ ಕಾಲದಿಂದಲೂ
ಧೈರ್ಯವಂತ ಸ್ವಾಭಿಮಾನಿ
ಇಂತಹದ್ದೆ ಮಾಡುವ ಹೇರಿಕೆಯಿಲ್ಲ
ಪ್ರತಿಯೊಬ್ಬರಿಗೂ ಆಯ್ಕೆಯ ಸ್ವಾತಂತ್ರ್ಯ
ಹೆಜ್ಜೆಗಳು ಬಿರುಸಾಗಬೇಕು.
ಎಡವಿದಾಗೆಲ್ಲಾ ಸಿಡಿಯದೆ
ಹೊಸತನ ಹುಟ್ಟು ಹಾಕಿ
ಸೋಲನ್ನು ಮಟ್ಟ ಹಾಕುವರು!
ನಗುಮಿಶ್ರಿತ ಗಾಂಭೀರ್ಯದಿ ಕಟ್ಟಿ ಹಾಕುವರು!

ಕಣ್ಣುಜ್ಜಲು
ಹೊಸತಿಗೆ ಕರೆಯುತಿದ್ದ ಮುಂಜಾನೆ
ಈಗ ಕಣ್ತುಂಬುತ್ತದೆ
ಎಲ್ಲಾ ನೆನಪುಗಳಿಗೆ ಬೀಗ ಹಾಕುವ
ನಿದಿರೆ ಈಗೀಗ ಸೋತು ಮಾರುದ್ದ ಓಡುತ್ತದೆ
ಬದುಕು
ಸುಳಿಗೆ ಸಿಕ್ಕು ಅಲ್ಲಾಡಲು
ಅಪ್ಪ ತೀರ ನೆನಪಾಗುತ್ತಾರೆ;
ಹೆಜ್ಜೆಗಳು ಜಾಗ್ರತೆ ವಹಿಸಿದಷ್ಟು ಸಾಲುದಿಲ್ಲ
ನಡುರಾತ್ರಿ ಖುದಾನೆಡೆಗೆ
ಎತ್ತುವ ಕೈಗಳೆರಡಿಲ್ಲ!
ಮಕ್ಕಳ ಪಾಲಿಗೆ ಅಪ್ಪ ಸಾಯುವುದೂ ಇಲ್ಲ.!!

# ದೇವದಾಸಿಯ ಸ್ವಗತ

**❖ ರಾಘವೇಂದ್ರ ಡಿ. ಆಲೂರು**

ಪರದೆ ಸರಿಸದೆ
ಕುಣಿವ ನರ್ತಕಿ
ನಾಲ್ಕು ಗೋಡೆಯ ಮಧ್ಯೆ!,
ಅನುರಾಗ ಬಂಧನ ವಿಲ್ಲ,
ಬರಹವಿಲ್ಲದ ಸಾಹಿತ್ಯ
ನನ್ನ ಪುಟ!...

ಜಗದೆಡೆಗೆ ನುಗ್ಗಿದ ಬೆಳಕು
ನನ್ನೊಳಗೆ ಒಡ ಮೂಡಲಿಲ್ಲ,
ರವಿ ಕೈ ಚಾಚಲಿಲ್ಲ,
ಎಲ್ಲವೂ ನಶ್ವರ!...
ನನಗಿಲ್ಲ ಅಸ್ತಿತ್ವ
ಕೊಳಕು ತುಂಬಿದ ಮೂಸೆ
ನನ್ನ ಅಗ್ರಹಾರ..........

ಅರುಣೋದಯವೇ
ನನ್ನ ಕಾಯುವಿಕೆ,
ಚಂದ್ರೋದಯವೇ
ನನಗಂಟಿದ ಬಿಸಿ ಶಾಖ!..
ನೆತ್ತರು ಹರಿಸಿದರು,
ದೇಹ ದಂಡಿಸಿದರು,

ಬೇನೆ ಕಳೆದಿಲ್ಲ!,
ದಾಹ ತೀರಿಲ್ಲ,
ಹಸಿವೊಂದೆ ಜೋಳಿಗೆಯಲಿ
ಬಿಟ್ಟ ಬೇರು!....
ಚಿಮ್ಮುತ್ತಿಲ್ಲ ನೀರು!....

ಇರುಳಿನಲಿ ನಾನು ನಿರ್ಜೀವ,
ಮಾತಿಲ್ಲದ ಗೊಂಬೆ;
ಒಲೆಹತ್ತಿ ಉರಿಯುವ
ಕಟ್ಟಿಗೆಯ ತುಂಡು!...
ಲೋಕ ಮುಖಕೆ
ಸಗ್ಗದ ಸುಂದರಿ,
ಕಾಮಾಸುರರಿಗೆ!...
ಮದನನ ರಾಣಿ
ಕಾಮ ಕೇಳಿಯಲಿ!.....

ಕುಣಿಯುತ್ತಿರುವ ನರ್ತಕಿ
ದೇಹ ಸೊಬಗಿರುವ ರೂಪಸಿ!..
ಬಸವಿಯಾದೆನು....
ದೇವರಿಗೆ ಬಿಟ್ಟ ದಾಸಿ
ಅಮರಾವತಿಯಲಿ.....

ಕಲ್ಯಾಣದಾರತಿ ಇಲ್ಲ,
ಕಟ್ಟಿದ ಮಂಗಳ ಸೂತ್ರವಿಲ್ಲ
ಷೋಡಷ ಕಳದಂದಿನಿಂದ...
ಬಂಧು ಬಳಗವೇ
ಒಡೆದ ಗಾಜು
ನೂರು ಚೂರು!.....
ಮರಣ ಬಂದಿಲ್ಲ,
ಮೋಕ್ಷ ಸಿಕ್ಕಿಲ್ಲ,
ಆಯಸ್ಸು ಕರಗಿಲ್ಲ,

ನೂರೆಂಟು ಚೌಕಾಸಿ
ಏಕಾಂತದಲ್ಲು...

ಅರಿವೆ ಹರಿದಿದೆ
ಆತ್ಮವೇ ಒಡೆದ ಮನೆ!...
ಮನಸ್ಸು ನನ್ನೊಳಗಿಲ್ಲ!
ಹದುಳಿದ್ದಿರೆ?
ವಿಚಾರಿಸುವ ವಲ್ಲಭನಿಲ್ಲ...
ಕರಗುತ್ತಿದ್ದೇನೆ....
ಕೆಂಪು ದೀಪದ ಬೆಳಕಿನಲ್ಲಿ...

ಶಿಲೆಯಾಗಿ, ಅಬಲೆಯಾಗಿ,
ಕಾಮ ಕನ್ನಿಕೆಯಾಗಿ,
ಬೆಂದಿದ್ದೇನೆ...
ಕರಗದ ಕಲ್ಲಾಗಿ!
ಕಡಲ ಸೇರದ ನದಿಯಾಗಿ,
ದೇವರ ಪಾದ
ಸೇರದ ಹೂವಾಗಿ!
ಮಾತಿಲ್ಲದೆ ಮೌನಿಯಾಗಿ

# ಕಂದೀಲು

❖ **ರೇಣುಕಾ ಕೊಡಗುಂಟಿ**

ಕತ್ತಲು ಕಾಲಿಡುವ ದಾರಿಯಾಗ
ಬಿಗುಮಾನದ ಕಡ್ಡಿಪಟ್ಟಣ
ಬಾಯಿಗೆ ಬೀಗ ಜಡಿದುಕೊಂಡು
ಬಾಗಿಲಿಗೆ ಬೇಲಿ ಬಡಿದುಕೊಂಡ
ಹೊತ್ತಿನ್ಯಾಗ

ತನ್ನ ಸಹನೆಯ ಕಿಡಿಯನ್ನು
ತಾನೆ ತಾಗಿಸಿಕೊಂಡ
ಕಂದೀಲು
ಬೆಳಕಿನ ಕುಡಿಯನ್ನು ಹಡೆದು
ಕಂದನನ್ನು
ಎದೆಗವಚಿಕೊಂಡು ಕುಂತೈತಿ

ಹಬ್ಬವನುಂಡ ಬಾಣಂತಿಯ
ವರಸಿನ ಹಗ್ಗದ
ಸಂದಿಸಂದಿಯಿಂದ, ಜೋಗಮ್ಮನ ಚೌಡಕಿಯ ಸದ್ದು
ಸುಡುಗಾಡು ಸಿದ್ಧನ ಬುಡುಬುಡಕಿ ಸದ್ದು
ದುರುಗಿಮುರುಗಿಯರ
ಉರುಮಿಯ ಸದ್ದು ಹೊಂಟೈತಿ
ಕುಡಿಯೊಡೆದ ಕಂದೀಲದ
ಖದರನ್ನು ಕಂಡ
ಗಾಳಿ

ಹೊಟ್ಟೆ ಕಿವಿಚಿಕೊಂಡೈತಿ
ಒಳಗೆ ನುಸುಳಲು ಸಂಚು ಹೂಡೈತಿ

ತಡವಲು ಬಂದ ಗಾಳಿಯ ಕೆಡವಲು
ಕಂದೀಲು
ಘತ್ತರಿಗಿ ಭಾಗವ್ವನ ಸಿಡಿಯ ಸಿಕ್ಕಿಸಿಕೊಂಡು
ಸುತ್ತು ಹೊಡೆವಂಗ
ವೀರಭದ್ರನ ಶಸ್ತ್ರ ಚುಚ್ಚಿಸಿಕೊಂಡು
ಒಡವು ಹೇಳುವಂಗ
ಕತಲ್ ರಾತ್ರಿಯ ಬೆಂಕಿಯ ನಾಲಿಗಿ ಮ್ಯಾಲೆ
ಅಲಾಯಿ ದೇವ್ರು ನಡೆವಂಗ

ಕೆಕ್ಕರಿಸಿ ಕಣ್ಣ ಬಿಟ್ಟು ಕುಣದೈತಿ
ಕಂದೀಲು
ಕೆಕ್ಕರಿಸಿ ಕಣ್ಣ ಬಿಟ್ಟು ಕುಣದೈತಿ

ಕಂದೀಲದ ರವಸಕ್ಕ
ಬೆದರಿದ ಗಾಳಿ
ಬೆವತು, ಬಂದ ದಾರಿ ಹಿಡದೈತಿ.

# ಏನೂ ಇಲ್ಲದವರು

❖ **ಎ. ರಘುಪತಿ**

ನೂರಕ್ಕೆ ನೂರು, ಏನೂ
ಇಲ್ಲದವರೇ ಇದ್ದಾರೆ
ಅಟ್ಟುವುದಾದರೆ ಅಟ್ಟಿಬಿಡು
ದಟ್ಟಡವಿ ಬಂದಿಖಾನೆಗೆ
ಅದು ಊರಾಗಿ ಬಿಡುತ್ತದೆ
ಬಹುಜನರಿದ್ದಾರೆ

ಉಳುವವನು ಹೊರುವವನು
ಆರಕ್ಕೆ ಮೂರು ಅಗೆವವನು
ಎಲ್ಲರೂ ಇದ್ದಾರೆ
ಅಟ್ಟುವುದಾದರೆ ಅಟ್ಟಿಬಿಡು
ನಿನ್ನೆಣವ ಹೊರಲು ಯಾರಿಲ್ಲದೇ
ಬೀದಿ ಹೆಣವಾಗಿ ಹದ್ದು
ಕಾಗೆಗಳು ಕಿತ್ತುತಿಂದಾವು

ಮಾಸಲು ಬಟ್ಟೆಯವರು
ಹಸನು ಬದುಕಿಲ್ಲದವರು
ಬದುಕ ಬೆಸೆದು ಕೊಳ್ಳಲು
ಭವಣೆಯಲ್ಲಿ ಇದ್ದಾರೆ
ಅಟ್ಟುವುದಾದರೆ ಅಟ್ಟಿಬಿಡು
ಅವರ ಕಟ್ಟ ಕಡೆಗೆ

ನಿನ್ನ ಅಟ್ಟಹಾಸ ಹುಟ್ಟಡಗಿ
ಮಣ್ಣಾಗಿ ಹೋದಾವು

ಅನ್ನಕಾಣದವರು ಹೊನ್ನ
ನೋಡದವರು ಕರೆಂಟ್ ದೀಪ
ಥಾರ್ ರಸ್ತೆಯೂ ಇದೆ
ಎಂದರಿಯದವರೂ ಇದ್ದಾರೆ
ಅಟ್ಟುವುದಾದರೆ ಅಟ್ಟಿಬಿಡು
ಬತ್ತಿಹೋದ ಕಣ್ಣುಗಳು
ನಿನ್ನ ಕಾಲಲಿ ಆಲೀ ಕಣ್ಣುಗಳಾಗಿ
ಕೀವು ರಕ್ತಗಳು ಸೋರಿಹೊದಾವು

ಉಳಿದ ನಾಕಾರು ಅಗ್ರಹಾರ
ನಿಮ್ಮದೇ ಆದರೂ ಬದುಕೇ
ಬಂದಿಖಾನೆಯಂತೆಯೇ ಸರಿ
ನರಕವಾಗಿಬಿಡುತ್ತದೆ
ಉಳುವವರು ಇಲ್ಲದೆಲೇ ಅನ್ನ
ಹೊರುವವರು ಇಲ್ಲದೆಲೆ ಬೀದಿ ಹೆಣ
ಹದ್ದು ಕಾಗೆಗಳ ಪಾಲಾದಾವು

ನುಸುಳುವವನ ನುಸುಳಿದಲ್ಲಿಯೇ
ತಡೆ, ತಟ್ಟು ಅಲ್ಲಿಯೇ ತೊಡೆ ಗಂಡೆಂದು
ನುಸುಳಿ ಬಂದನೆಂದು ಊರೂರು
ಹುಡುಕಿ ಕಲಕಿ ಎಲ್ಲರನೂ
ಅಲ್ಲೋಲ ಕಲ್ಲೋಲವಾಗಿಸದಿರು
ಬದುಕ ಜೇನು ಗೂಡಂತೆ
ಕಲ್ಲೆಸೆಯದಿರು ಕಲ್ಲೆಸೆಯದಿರು.

# ಏಕಾಂಗಿ

❖ **ಪಾಪುಗುರು**

ತಲೆ ತುಂಬ ಗಾಂಧಿ ಚಿಂತನೆಗಳು
ಆದರೆ ಈಗ ಮೋಡಿ ಕಾಲ
ಟಾರ್ ರಸ್ತೆಗೆ ಅಪ್ಪಿಕೊಳ್ಳುವ ಹವಾಯಿ ಚಪ್ಪಲಿಗಳಿಗೆ
ಬಿಸಿಲು ಹಾಗೂ ರಸ್ತೆಯ ಟೆಂಡರಿನ ಲೆಕ್ಕವಿಲ್ಲ

ಕಚ್ಚೆಗಳು ಈಗಿಲ್ಲ
ಇದ್ದರೂ ಕೊಚ್ಚೆಯಾಗಿಲ್ಲ
ಕರ್ಮದಿಂದ ಕಟ್ಟಿಕೊಂಡ ಬುತ್ತಿ ಹಳಸಿಲ್ಲ
ದುಡಿಮೆಯ ಮೈಬೆವರಿನ ವಾಸನೆಗೆ
ಮುದುರಿಕೊಂಡ ಹಾಸಿಗೆಗೆ ಬಹುಷಃ ತಿಳಿದಿಲ್ಲ

ಕಾಲ ಸರಿಯಿದೆ
ಕಲಿಯ ಪ್ರವೇಶ ಎಲ್ಲರ ಎದೆ ತಟ್ಟಿರಬಹುದು
ಉಸಿರ ಮುಟ್ಟಿ ಕುಟ್ಟಿ
ಚಿತಾಗಾರದ ಸಾಲಿನಲ್ಲಿ ನಿಲ್ಲಿಸಿದೆ
ನಿಂತ ಮರಗಳು ಗಹಗಹಿಸಿವೆ
ನೋಡ ನೋಡುತ್ತಲೇ
ಎಲ್ಲರದೂ ಏಕಾಂಗಿ ಸಂಚಾರವೇ

ಸರ್ಕಾರಿ ಶಾಲೆಯಲ್ಲಿನ
ಗಟ್ಟಿತನದ ಪಾಠಗಳು
ಮಗ್ಗಿಯ ಉರುಳು ಬದುಕು ಕಟ್ಟಿವೆ

ಗಾಂಧಿ ಟೋಪಿಯ ಮೇಷ್ಟ್ರು ಈಗ ಬದುಕಿಲ್ಲ
ಆದರೆ
ಧರಣಿ ಮಂಡಲ ಮಧ್ಯದೊಳಗಿನ ಗೋವು
ಜಿವ್ವೆಯ ಮೇಲೆ ಜೀವಂತ

ಬಣ್ಣದ ತಗಡಿನ ತುತ್ತೂರಿಗೂ
ಕಸ್ತೂರಿ ನೋಡುವಾಸೆ
ಆದರೀಗ ಕಾಸಿಗೂ ಪರದಾಟ
ಅಜ್ಜಿಯ ವಿಧವಾ ವೇತನ
ಅವ್ವನ ಪಿಂಚಣಿ ಯಾವೂ ಸಾಕಾಗುತ್ತಿಲ್ಲ
ಅದೇ ಗಂಟೆಗಳು ಆದರೆ ಸಮಯವಿಲ್ಲ

ಒಂಟಿತನದ ಕುಂಟು ನೆಪಗಳಿಗೆ
ಚಟಗಳ ಕಡಿತ
ಬೆಳಿಗ್ಗೆ ಥರ್ಟಿ ಮಧ್ಯಾಹ್ನ ನೈಂಟಿ
ರಾತ್ರಿಗೆ ಕೂಳಿಲ್ಲದ ಕೂಗಾಟ
ಅಯ್ಯೋ ನಾ ಏಕಾಂಗಿ
ಅದಕ್ಕೆನಂತೆ ಅದಕ್ಕೊಂದು ಸಿಕ್ಸ್ಟಿ
ಆಗ
ನೆನಪಾಗುವ ನನ್ನ ಹಳೇ ಪ್ರೇಯಸಿ ಮುಂದೆ
ನಾ ಅಲೆಕ್ಸಾಂಡರ್

ಮಡದಿ ಮಕ್ಕಳ ಬೈದಾಟಕ್ಕೂ ಒಂಟಿ
ರಸ್ತೆಯಲ್ಲಿ ನಾ ಬಿದ್ದಾಗ ಪಾಪಿ
ನಶೆ ಇಳಿದು ಮನೆ ಬಂದಾಗ
ಮಕ್ಕಳಿಬ್ಬರೂ
ಒಬ್ಬರಿಗೊಬ್ಬರ ಕಣ್ಣೀರು ನೆಕ್ಕುತ್ತಾ
ಅಪ್ಪ ಎಂದರೆ ಆಕಾಶ ಓದುತ್ತಿದ್ದರು
ಸತಿ ಹಸಿಮೆಣಸಿನ ಕಾಯಿ ಹಿಂಡಿ ಕುಟ್ಟುತ್ತಿದ್ದಳು
ನನ್ನವ್ವ ಬಿದ್ದಿಯಾ ಮಗ
ಎಂದಾಗಲೇ

ನನ್ನ ಏಕಾಂಗಿತನ ಅಂಗಿ ಬಿಚ್ಚಿದ್ದು
ಆಗಲೇ ಗುಂಡಿಗಳ ಖಾಜಗಳು ನಕ್ಕಿದ್ದು
ಎದೆಯ ರೋಮಗಳು
ಮಾನವ ಧರ್ಮಕ್ಕೆ ಜಯವಾಗಲಿ ಕೂಗುವಾಗಲೇ
ಕಣ್ರೆಪ್ಪೆಗಳು ಮದಕ್ಕೆ ಮುಚ್ಚಿಕೊಂಡವು

# ಸರಿ ಯಾವುದು ಎಂದಾರಿಸು ಮನವೇ...

**❖ ಡಾ. ಬದರೀನಾಥ ಜಹಗೀರದಾರ**

ಸಹನೆ ಮೀರದೇ ಸವಾಲುಗಳ ಎದುರಿಸುವಂತಾಗಲಿ
ತೊಂದರೆಗಳು ನೂರಿರಬಹುದು ಆತ್ಮಸ್ಥೈರ್ಯ ಜಾಗೃತವಾಗಿರಲಿ
ಸಾಕ್ಷಿಪ್ರಜ್ಞೆ ಮೂಕವಾದರೆ ಆಧಾರವೇ ಇಲ್ಲದಂತಾದೀತು
ತೋರ್ಗಾಣಿಕೆಯ ಬದುಕಾದರೆ ಭರವಸೆಗಳು ಮುಗುಚಿಬಿದ್ದೀತು

ಶಾಂತಿ ಬಯಸುವ ಮನಗಳು ಸಾಧಿಸಿದ್ದು ಬಹಳವಿದೆ
ಸಕಾಲಕೆ ಆಲೋಚನೆ ಜೊತೆಗೂಡಲು ಎಲ್ಲವೂ ಸಾಧ್ಯವಿದೆ
ಅಸಹನೆ ತುಂಬಿಕೊಂಡು ಕೊರಗಿ ನರಳಿ ಮಾಡುವುದೇನಿದೆ?
ಸಾಧಕನಾಗಬೇಕಾದರೆ ಎಲ್ಲವನೂ ಅರಿತು ನಡೆಯಬೇಕಿದೆ

ಮಾಧುರ್ಯವಿಲ್ಲದ ಮಾತುಗಳು ಮನಸ್ಸಿನೊಳಗಣ ದ್ವಂದ್ವಗಳು
ಮನಸ್ಸನ್ನು ಕಲುಷಿತಗೊಳಿಸಿ ಅಸಂತುಷ್ಟತೆ ಹೊರಚೆಲ್ಲಿವೆ
ಎಲ್ಲವನೂ ಬಯಸುವ ಮನುಜ ವ್ಯಾಪ್ತಿಯನು ಹೆಚ್ಚಿಸುತ
ಕೊನೆಕಾಣದ ಕರ್ಮಫಲಕೆ ಮನಸ್ಸನ್ನು ಹಿಂಸಿಸುವಾತ

ಬದಲಾಗುತಿವೆ ಬಯಕೆಗಳು ಭಯಭೀತಿಯ ಹುಟ್ಟಿಸುತ
ಸತ್ಯ –ನಿಷ್ಠೆಗಳ ಹಿಂದೆ ಸರಿಸುತಿವೆ ಸತತ
ಅನ್ಯ ಮಾರ್ಗವನರಿಸಿ ಆನಂದ ಪಡೆಯುವ ಮೊದಲು
ಸರಿಯಾವುದು ಎಂದಾರಿಸು ಮನವೇ ಬದುಕಿ ಬಾಳಲು

ಪ್ರಾಮಾಣಿಕತೆ ಮರೆಯಾಗುತಿದೆ ಅಸಹನೆ ಮಿತಿಮೀರುತಿದೆ
ಕಪಟ ಕ್ರೌರ್ಯಗಳು ಮುಗ್ಧರ ಜೀವ ಹಿಂಡುತಿವೆ
ಆಮಿಷಕ್ಕೊಳಪಟ್ಟು ಆತ್ಮಸಾಕ್ಷಿಯ ಹರಾಜಿಗಿಟ್ಟರೆ
ಕೊಂಡುಕೊಳ್ಳುವವರು ಕಟುಕ ಪ್ರವೃತ್ತಿಯ ಮನಸ್ಸಿನವರೇ

ಮನಸ್ಸು ಹಿಡಿತ ಮೀರದಿರಲಿ ನಮ್ಮೊಳಗಿದ್ದು ಧೈರ್ಯ ತುಂಬಲಿ
ದುಡುಕಿ ತೀರ್ಮಾನಿಸುವ ಮುನ್ನ ಆತ್ಮದೊಳು ವಿಮರ್ಷಿಸಲಿ
ಅಡೆತಡೆಗಳ ನಡುವೆ ಆತ್ಮದೀಪ ದಾರಿತೋರಲಿ
ದುರ್ಗತಿಯ ಸ್ಥಿತಿಯೊಳು ದೈವತ್ವವು ಹೃದಯ ಸ್ಪರ್ಶಿಸಲಿ.

# ನಿರುತ

❖ **ಎಸ್.ಪಿ. ಮಹದೇವ ಹೇರಂಬ**

ಪಾಪದ ಮೂಟೆಗಳ ಗೌಜಲ ಹೊತ್ತು
ಪ್ರತಿ ದಿವಸ ಪ್ರೇಮವ ಹುಡುಕುತ್ತಾ
ನಡೆವ ದಾರಿಯಲ್ಲಿ ನೆರಳುಕಂಡಾಗ
ತನ್ನ ಭಾವನೆಗಳ ಒಂದೊಂದೇ ಬಿಚ್ಚುತ್ತಾ
ಮನಸ್ಸು ಮೈನೆರೆಯಲು ಕಾಣುವ ಕನಸ್ಸಿಗೆ
ಬೇಲಿಯಾಗಿಬಿಡುತ್ತೇವೆ

ಕೊನೆಯ ತೀರ್ಪಿನವರೆಗೂ ಕಾಯದೇ
ಮಧ್ಯದಲ್ಲಿಯೇ ಮುಖ ಊದಿಸಿಕೊಂಡು
ಕಾವೇರಿಸಿ ಕಾದಾಡುವ ಮನುಜರ
ಮಣಭಾರದ ಮರ್ಜಿಗಳನ್ನ
ಮೈಗೆ ಮೆತ್ತಿಕೊಂಡಿರುತ್ತೇವೆ

ಹೊಟ್ಟೆಯೊಳಗಿನ ಉರಿ
ನೆತ್ತಿಗೇರಲು ಬಿಟ್ಟು
ಸುಡುವ ಅಸೂಯೆಗಳು ಬಸಿರಾಗಿ
ಕರುಳಿನ ಹುಣ್ಣಿಗೆ ನಗುವಿನ ಮುಲಾಮು
ತಡಕುತ್ತಿರುತ್ತೇವೆ

ಕಪಟವಿಲ್ಲದೆ ಜತನದಿಂದ ಕೂಡಿದ
ಬಾಂಧವ್ಯದ ಕಿರುಗನಸಿನ ಪರಿಚಾರಿಕೆಗೆ
ಇಲ್ಲಸಲ್ಲದ ಜರಡು ಮಾತನಾಡುತ

ಅಪನಂಬಿಕೆಯ ಮನಸ್ಥಿತಿಗಳ
ನಾಟಿ ಮಾಡುತ್ತಿದ್ದೇವೆ

ಕಾಡುವ ನೆನಪುಗಳ
ಎದೆಯ ಗೋರಿಯ ಮೇಲೆ
ಹಸಿರು ಗಿಡಗಳ ನೆಟ್ಟಿ
ಆದಷ್ಟು ಬೇಗನೆ ಹೂ ಬಿಟ್ಟರೆ ಸಾಕು
ಕೈಮುಗಿದು ದೇವರಾಗಿಸಲು
ಕಾಯುತ್ತಿರುತ್ತೇವೆ

# ಕಡೇ ಮಾತು

**❖ ವಿಭಾ ಪುರೋಹಿತ್**

ತಡೆಯಬೇಡ ಗೆಳತಿ
ಅಳೆಯಬೇಡ
ಪಾವತಿಸಬೇಡ
ಕಡ ಕೊಟ್ಟಾದರೂ
ಕ್ಷಣಗಳ ಕರೆತರುವೆ

ಊರದೇವರ ಮುಂದೆ
ಬಲದ ತಿರುವಿನಲ್ಲಿ
ಮೀನು ಬಾಜಾರಿನಲಿ
ಒತ್ತಡದ ಕೆಲಸದಲ್ಲಿ
ಫೋನು ಎತ್ತಿದ್ದೇ ತಡ
ಕಡೆಗೆ ಮಾಡುವೆನೆಂದು
ಕೊರಳ ಕತ್ತರಿಸುತ್ತಾಳೆ !

ಕಡೇ ಮಾತಿಂದ
ಭಾವನೆಗಳ ಭಾಗಿಸಿದರೂ
ನಿಶ್ಶೇಷವಾಗಲಾರೆ
ಕಡಗೋಲು ಆಡಿಸಿದಂತೆ
ಚಡಪಡಿಸಿ
ಉದಿಸಲಾರದ ನವನೀತ
ತುಟಿಯಲ್ಲಿ ಕಮರಿ
ಕವಿತೆಯಾಗದೇ ಒಣಗಿ

ಉಳಿದ ಭಾವನೆಯ ಚರಟ
ಖಂಡ ಕಥೆಯ ಬೇಡುವ ಹಾಗೆ !

ಲೋಟದಲಿ ನಿರ್ಜಲ
ನಿಟ್ಟುಸಿರನ್ನೇ ಗಟಗಟ
ಕುಡಿಸಿದಳು
ಹುಳಿತೇಗು ಹೂಂಕರಿಸಿದಾಗ
ಮಥಿಸದ ಮಾತುಗಳ
ಅಜೀರ್ಣತೆ ಅರ್ಥವಾಗಿದ್ದು!

ಗೆಳೆತನವೆಂದರೆ
ಬರೀ ಕೆನೆಗಟ್ಟುವದಲ್ಲ
ಭಾವೈಕ್ಯದಲಿ ಚಿರಕಾಲ
ಘಂ...ಮೆನುವ ಘೃತವಲ್ಲವೇ...

# ಕನ್ನಡಿ

**❖ ನರಸಿಂಹ ವರ್ಮ**

ಒಂದು ಮಹಾಸ್ಫೋಟಕ್ಕೆ
ಅಣಿಯಾದ
ಮೌನ ಮುನ್ನುಡಿಯಂತೆ
ಕನ್ನಡಿಯ ಮುಂದವನು
ನಿಲ್ಲುತ್ತಾನೆ

ಅದು ದರ್ಪಣವೋ
ದರ್ಶನವೋ;
ಹಣೆಯ ಮೇಲಿನ ನೆರಿಗೆಗಳಲ್ಲಿ
ಸಾಲು ಸಾಲು ಕಥೆಗಳು,
ಇಳಿಬಿದ್ದ ಕಣ್ಣರೆಪ್ಪೆಗಳಲ್ಲಿ
ಜಾರಿ ಹೋದ ಕನಸುಗಳು,
ಕೆನ್ನೆ ಮೇಲಿನ ಸುಕ್ಕು ಕಣಿವೆಗಳ
ಆಳದಲ್ಲಿ ಬಿಕ್ಕುತಿರುವ ಹತಾಶೆಗಳು

ಈಗೀಗ ಪಾದರಸ ತಳ
ನಿಧಾನ ಕಳಚುತ್ತಾ ಮತ್ತಷ್ಟು
ದಿಗಿಲೆಬ್ಬಿಸುವ ಕನ್ನಡಿ;
ತಳ ಕಳೆದುಕೊಳ್ಳುತ್ತಿರುವ ಬದುಕು

ಈಗವನು
ಇಡೀ ಜಗತ್ತಿಗೇ
ಬೆನ್ನು ಹಾಕಿ ನಡೆಯುತ್ತಿದ್ದಾನೆ:
ಯಾರು ಬೇಕಾದರೂ
ಅವರವರಿಗೆ ಅಕರ್ಷಕವೆನಿಸಿದ
ಬೆನ್ನುಡಿ ಬರೆದುಕೊಳ್ಳಬಹುದು.

# ದಿನದ ಕವಿತೆ

**❖ ಧರಣಿಕಾಂತ್**

ಮುಂಜಾನೆ ಎಂದರೆ ವಿಷವೇರುವ ಭಾವ
ಪಾದಕ್ಕೆ ತಾಗಿರುವ  ಮುಳ್ಳಿನ ನಂಜು
ಹೃದಯದಲಿ ಹಸಿಯಾಗಿ ಹನಿಯಾಗಿ ಜಿನುಗುತ್ತದೆ.
ಇನ್ನೇನು ಉಳಿದಿದೆಯೋ ಬದುಕ ಬಯಲಿನಲ್ಲಿ
ಘಳಿಗೆಗಳೆಣಿಸುತ್ತಿರುವೆ.

ಉರಿದೇಳುವ ಮಧ್ಯಾಹ್ನವೂ ಹಸಿದಿರಬೇಕೇನೊ
ಭೂರಿ ಭೋಜನಕ್ಕೆ ಕರೆದವರು ಯಾರಾದರೇನಂತೆ
ಕಡೆಯ ಬಾರಿ ಎಂಬಂತೆ ಉಂಡು
ಉಬ್ಬಸವೇರಿ ತೇಗಿ ಮುಗಿಸುತ್ತೇನೆ
ಸಂಜೆಯ ಭರವಸೆ ಕ್ಷೀಣಿಸುತ್ತಿಲ್ಲ

ಹಗಲು ನರಳುವ ಹೊತ್ತಿಗೆ
ನಡೆಯುತ್ತೇನೆ ಬಿರುನಡಿಗೆ ಬಹುದೂರ
ದಾರಿ ಸಾಗುವುದಿಲ್ಲ
ಸೋತ ಕಾಲುಗಳ ಉಂಗುಷ್ಟಗಳಲ್ಲಿಯ
ರಕ್ತ ಹೆಪ್ಪುಗಟ್ಟಿ ಕೇಳುತ್ತದೆ!
'ಎಡವಿದ್ದು ಹಗಲಲ್ಲೋ ರಾತ್ರಿಯೋ'?
ನೆನಪಾಗುವುದಿಲ್ಲ.!

ಕತ್ತಲು ಕವಿಯುವುದು ಕಣ್ಣಿಗೆ ಮಾತ್ರ
ಜಗವು ಮಲಗುವುದೇ ಇಲ್ಲ!
ಸಂತೆ ಇಂದಿಗೆ ಮುಗಿದರೆ
ನಾಳೆಗಳು ಸುಳ್ಳುಗಳ ಜಾತ್ರೆ!
ಏಳುತ್ತೇನೆ ನಾಳೆ ಮತ್ತೆ ನನಗೂ ಬೆಳಗಾದರೆ!

# ಬೆಳಕಿನ ದಾರಿಯಲ್ಲಿ

**❖ ವಿಶ್ವೇಶ್ವರ ಗಾಂವ್ಕರ**

ಅನುಭವದ ತೈಲವ ಬೆರೆಸಿ
ಜ್ಞಾನದ ಪಂಜನು ಹೊತ್ತಿಸಿ
ವಿವೇಕದ ದೀವಟಿಗೆಯ ಹಿಡಿದು
ಅರಿವಿನ ಮಾರ್ಗದಿ ಹೊರಟೆ

ಏನದು ಜೀವನ ಧರ್ಮ, ಬದುಕಿನ ಮರ್ಮ
ಅರಿವಿನ ದಾರಿಯದೆಲ್ಲಿ
ತಿಳಿವಿನ ತೇಜವದೆಂತು
ಪ್ರಶ್ನಿಸಿಕೊಂಡೆ ನನ್ನೊಳಗೆ ಮತ್ತೆ ಮತ್ತೆ

ಗಿರಿ– ಗಹ್ವರಗಳಲಿ ಧ್ಯಾನಿಸಿದೆ
ಮಠ – ಮಂದಿರಗಳ ಅಲೆದೆ
ವೇದ – ವೇದಾಂಗಗಳ ತಿರುವಿದೆ
ಅಕ್ಕ – ಅಲ್ಲಮರ ವಚನಗಳ ಮಥಿಸಿದೆ

ನಡೆದಷ್ಟೂ ದೂರ, ಮುಳುಗಿದಷ್ಟೂ ಆಳ
ಹೆಜ್ಜೆ ಹೆಜ್ಜೆಗೂ ಬೆಳಕು ಕತ್ತಲಿನ
ಕತ್ತಲು ಬೆಳಕಿನ ತಡೆಯಿರದ ಆಟ
ಸ್ಪಷ್ಟ ಅಸ್ಪಷ್ಟಗಳ ಪುನಃ ಪುನಃ ಹೊಯ್ದಾಟ

ಕಡೆಗೊಮ್ಮೆ ಬೆಳಗಾಯ್ತು ಬೆಳಕಾಯ್ತು
ಬಿಗುಮಾನದ ಬೇಲಿಯನೆ ಕಿತ್ತೆಸೆದೆ
ಅಂತರಂಗದ ಕದವ ತೆರೆದೆ
ಅಂತಃಸಾಕ್ಷಿಯ ದನಿಗೆ ಕಿವಿಯಾದೆ

ವಿಶ್ವವನೆ ತಬ್ಬಿನಿಂತೆ
ಪ್ರೇಮದ ಹಾಡನೆ ಹಾಡಿದೆ
ಈಗ ಗೋಡೆಗಳಿಲ್ಲ, ಸರಪಳಿಗಳಿಲ್ಲ
ಇದು ಬಯಲ ಬದುಕು,
ಬಯಲ ತುಂಬ ಬದುಕು

# ಅಂತರಂಗದ ಅಳಲು

❖ **ಮಂಜುಳಾ ಬಿ.ವಿ.**

ನನ್ನ ಕನಸಿನ ಹೂವುಗಳೆಲ್ಲವೂ
ಕಾಮನ ಬಿಲ್ಲಿನ
ಬಣ್ಣ ಬಣ್ಣಗಳಾಗಿ
ಆಕಾಶದಲಿ ತೇಲಿ ಹೋಗುತಿವೆ

ಹೃದಯದ ಆಸೆಗಳೆಲ್ಲಾ
ಮಡುಗಟ್ಟಿ ಜ್ವಾಲಾಮುಖಿಯಾಗಿ
ಅನಂತದಲಿ ಲೀನವಾಗುವುದೂ
ಇಲ್ಲ ಸಿಡಿದೇಳುವುದೂ...

ಮನ ಆಸೆ ನಿರಾಸೆಗಳ
ರಣರಂಗವಾಗಿ ನರಳಿಸುತಿದೆ
ತೀರುವುದೇ ಸ್ವಲ್ಪವಾದರೂ
ಹೂ ಬನದಲಿ ಹೂವಾಗಿಸಿ

ರಾತ್ರಿಯ ನಿದಿರೆಗಳ ಕನಸುಗಳು
ಕರಗಿ ಹಗಲಿನ ಬೆಳಕಿನಲಿ
ನೀಲಿಗಟ್ಟಿವೆ... ಮನ ತೂಗುಯ್ಯಾಲೆಯಲಿ
ಸಿಹಿ ಕಹಿ ಭಾವನೆಗಳ ಸರಪಳಿಯಲಿ
ಬಂಧಿಯಾಗಿದೆ ಬಂಧಿಯಾಗಿದೆ

# ಅನುಸಂಧಾನ–೪

# ಪದಗಳ ರೆಕ್ಕೆ ಬಡಿದು ಹಾರುತ್ತಿವೆ ಕಾವ್ಯದ ಹಕ್ಕಿಗಳು

❖ **ಡಾ. ಎಚ್.ಎಸ್. ಸತ್ಯನಾರಾಯಣ**

ಕಾವ್ಯದಲ್ಲಿ ಶ್ರದ್ಧೆ ತಳೆದ ಎಲ್ಲರಿಗೂ ಕಿ.ರಂ ಅವರ ಕಾವ್ಯಾಸಕ್ತಿ ಮತ್ತು ಸಾಹಿತ್ಯಕ ಅವಧೂತತನದ ಅರಿವಿದ್ದೇ ಇರುತ್ತದೆ. ಅವರು ಕಾವ್ಯವನ್ನು ಕುರಿತು ಮಾತಾಡ ತೊಡಗಿದರೆಂದರೆ ಅನೇಕರ ಓದಿನ ದಾರಿಗಳು ತೆರೆದುಕೊಳ್ಳುತ್ತಿವೆಯೆಂದೇ ಅರ್ಥ. ಅವರ ರೀತಿಯಲ್ಲಿ ಕಾವ್ಯದ ಒಳಮರ್ಮವನ್ನು ಅರ್ಥೈಸುವ ವಿದ್ವತ್ಪರಂಪರೆಯನ್ನು ಕಾಣಲು ನಮ್ಮ ಸಾರಸ್ವತ ಲೋಕ ಅದೆಷ್ಟು ಕಾಲ ಕಾಯಬೇಕೋ ಗೊತ್ತಿಲ್ಲ. ಹಾಗಾಗಿಯೇ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಅಪರೂಪದ ಅವಧೂತರಂತೆ ಕಿ.ರಂ. ಗೋಚರಿಸುವುದು. ಈ ಅಭಿಪ್ರಾಯದ ಹಿಂದೆ ಅವರ ಸಾಹಿತ್ಯಕ ವ್ಯಕ್ತಿತ್ವ ಒಳಗೊಂಡಿದ್ದ ಅಗಾಧ ಅಧ್ಯಯನಾಸಕ್ತಿ, ಸೂಕ್ಷ್ಮ ಒಳನೋಟದ ವಿಮರ್ಶನ ಪ್ರಜ್ಞೆ, ಪರಂಪರೆಯ ಹಿಂದೆ ದುಡಿದಿರಬಹುದಾದ ಎಲ್ಲ ಬಗೆಯ ಸಾಮಾಜಿಕ–ಸಾಂಸ್ಕೃತಿಕ ಆಯಾಮಗಳೆಡೆಗಿನ ಆಸಕ್ತಿ ಮುಂತಾದವುಗಳೆಲ್ಲವೂ ನಮ್ಮ ಅರಿವಿಗೆ ಬರುತ್ತದೆ. ಯಾರನ್ನೂ ಮೆಚ್ಚಿಸಲು ತಮ್ಮ ಅಭಿಪ್ರಾಯಗಳನ್ನು ದುಂದುವೆಚ್ಚ ಮಾಡದ ಕಿರಂ ಅವರ ಕಾವ್ಯಾಸಕ್ತಿ ಅಪ್ಪಟವಾದ ಕಾಳಜಿಯಿಂದ ಮಾತ್ರವೇ ಒಡಮೂಡಿದವು ಎಂಬುದನ್ನು ಅರ್ಥಮಾಡಿಕೊಂಡೇ ಈ ಹೊತ್ತಿನ ಕಾವ್ಯ ರಚನೆಗಳನ್ನು ನಾವು ಪರಿಶೀಲಿಸಲು ಮುಂದಾಗುವುದು ಸೂಕ್ತ. ಕಾವ್ಯವನ್ನು ಓದುವಾಗ, ಅರ್ಥೈಸಿಕೊಳ್ಳುವಾಗ ಕಿರಂ ತೋರಿದ ದಾರಿದೀಪ ನಮ್ಮ ಆಲೋಚನಾ ಕ್ರಮಗಳನ್ನು ಮುನ್ನಡೆಸುತ್ತಿರುತ್ತದೆಂಬುದು ಅವರ ಮಾತು–ಬರಹಗಳ ಸಂಪರ್ಕಕ್ಕೆ ಬಂದವರೆಲ್ಲರ ಅನುಭವ. ಅದರಲ್ಲೂ ಹೊಸ ತಲೆಮಾರಿನವರ ಕಾವ್ಯರಚನೆ ಕುರಿತು ಕಿರಂ ತೋರುತ್ತಿದ್ದ ಪ್ರೀತಿ ಮತ್ತು ಕುತೂಹಲ ತುಂಬ ಮುಖ್ಯವಾದವು. ಈ ಎಲ್ಲಾ ಸಂಗತಿಗಳನ್ನು ನೆನಪು ಮಾಡಿಕೊಂಡು, ಕಿರಂ ಅವರ ಕಾವ್ಯಪ್ರೀತಿಗೊಂದು ನಮಸ್ಕಾರ ಸಲ್ಲಿಸಿ, ಅವರ ನೆನಪಿನಲ್ಲಿ ಆಯೋಜಿತಗೊಂಡಿರುವ ಈ ಕವಿಗೋಷ್ಠಿಯಲ್ಲಿ ಪ್ರಸ್ತುತಪಡಿಸಲಾದ ಕವಿತೆಗಳನ್ನು ಕುರಿತು ಮಾತಾಡಲು ನಾನು ಉತ್ಸುಕನಾಗಿದ್ದೇನೆ. ಇದಕ್ಕೆ ಅವಕಾಶ ಕಲ್ಪಿಸಿಕೊಟ್ಟ

‘ಕಾವ್ಯಮಂಡಲ’ ಮತ್ತು ‘ಕಾಡುವ ಕಿರಂ’ ಸಂಘಟನೆಗಳ ಎಲ್ಲ ಗೆಳೆಯರಿಗೂ ನನ್ನ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಸಿರಗುಪ್ಪದ ಆರ್.ಪಿ. ಮಂಜುನಾಥ್ ಅವರ ‘ಗುರುವಲ್ಲವೆ?’ ಎಂಬ ಕವಿತೆಯು ನಮ್ಮ ಬದುಕನ್ನು ರೂಪಿಸಲು ಶ್ರಮಿಸಿದ ಹಲವು ಶಕ್ತಿರೂಪಗಳಲ್ಲಿ ಕೆಲವನ್ನು ಸ್ಮರಿಸುವ ಆಸ್ಥೆ ತೋರಿದೆ. ಎಲ್ಲರ ಜೀವನದಲ್ಲೂ ಮೊದಲ ಪ್ರೀತಿ ಗೌರವವನ್ನು ಪಡೆವ ತಾಯಿ ಇಲ್ಲಿಯೂ ಮೊದಲಲ್ಲಿ ಗುರುವಾಗಿ ಕಾಣಿಸಿ ಕೊಳ್ಳುತ್ತಾಳೆ. ಆಮೇಲೆ ಅಪ್ಪ, ಒಡನಾಡಿ, ಮಡದಿ, ಮಗು ಎಲ್ಲರೂ ಒಂದೊಂದು ಬಗೆಯ ಗುರುವಾಗಿ ಕಾಣಿಸಿಕೊಳ್ಳುವ, ಕೃತಜ್ಞತೆ ಸಲ್ಲಿಕೆಯ ಮಾದರಿಯ ರಚನೆ ಇದಾಗಿದ್ದು ಯಾವುದೇ ವಿಶೇಷ ಭಾವವನ್ನು ಓದುಗರಲ್ಲಿ ತುಂಬದ, ಸರಳ–ಸಾಮಾನ್ಯವೆನಿಸುವ ಕವಿತೆಯಾಗಿದೆ.

ಮಹಾದೇವ ಮೂಡಕೊಣಾಜೆಯವರ ‘ಎನ್ನ ಕೊಂದವರೆ’ ಕವಿತೆಯು ಸತ್ತಮೇಲೂ ಚಾರಿತ್ರ್ಯವಧೆಯನ್ನು ನಿಲ್ಲಿಸದ ಮನುಷ್ಯ ವರ್ತನೆಗೆ ಬೀಸಿದ ಚಾಟಿಯೇಟಿನಂತಿದೆ. ಬದುಕಲೂ ಬಿಡರು, ಸತ್ತರೂ ಬಿಡರು ಎಂಬಂತಹ ನಮ್ಮ ನಡುವಳಿಕೆಯನ್ನು ಗಾಢ ವಿಷಾದದಿಂದ ಚಿತ್ರಿಸುವ ಈ ಕವಿತೆ ಆತ್ಮಸಾಕ್ಷಿಯನ್ನು ಪರಿಣಾಮಕಾರಿಯಾಗಿ ಇರಿದಿದೆ.

ಇದರ ಮುಂದುವರಿದ ಪಕ್ವ ಮಾದರಿಯಂತಿರುವ ಸತೀಶ್ ಗರಣಿಯವರ ‘ಹಳೆಯ ಖಾಲಿ ಮುಖಗಳು’ ಕವಿತೆ ರೂಪಕಗಳನ್ನು ಸಮರ್ಥವಾಗಿ ಬಳಸುವಲ್ಲಿ ಸ್ವಲ್ಪಮಟ್ಟಿನ ಯಶಸ್ಸನ್ನು ಸಾಧಿಸಿದೆ. ಈ ಹಳೆಯ ಮುಖಗಳ ಪ್ರತೀಕಾರ ಮನೋಭಾವವನ್ನು ಕವಿ ಹಿಡಿದು ತೋರುವಲ್ಲಿ ಸಫಲರಾಗಿರುವುದು ಸಂತಸದ ಸಂಗತಿ.

ಸಿ.ಎಂ ಕ್ರಾಂತಿಸಿಂಹ ಅವರು ಪ್ರಭುತ್ವವನ್ನು ‘ಅಮಲಿನ ಪ್ರಭುತ್ವ’ ಎಂದು ವ್ಯಂಗ್ಯವಾಡುವ ಮೂಲಕ ತರಾಟೆಗೆ ತೆಗೆದುಕೊಂಡಿದ್ದಾರೆ. ನಮ್ಮ ರಾಜ ಮಹಾರಾಜರೆಲ್ಲರೂ ತಾವು ಸುಭದ್ರ ಸ್ಥಿತಿಯಲ್ಲುಳಿದು ರಾಜಸೇವೆಯ ನೆಪದಲ್ಲಿ ಹೊಟ್ಟೆಪಾಡಿಗೆ ಸೈನ್ಯಕ್ಕೆ ಸೇರಿದ್ದ ಅಮಾಯಕರನ್ನು ಬಲಿಗೊಟ್ಟು, ಅವರನ್ನು ಹುತಾತ್ಮರ ಸಾಲಿಗೆ ಸೇರಿಸಿ ಹೊಗಳುತ್ತಲೇ, ಅವರ ಹೆಂಡತಿ ಮಕ್ಕಳನ್ನು ನಿರ್ಗತಿಕರನ್ನಾಗಿ ಮಾಡುತ್ತಿದ್ದ ಪ್ರಭುತ್ವದ ಬಗ್ಗೆ ಈ ಕವಿತೆಯಲ್ಲಿ ಸಿಟ್ಟಿದೆ. ಈ ಕವಿತೆಯ ವಸ್ತು ಮತ್ತು ನಿರೂಪಣೆ ತುಂಬ ಹಳತೆನ್ನಿಸುವುದು ಅಷ್ಟೇ ನಿಜ.

ನಂರುಶಿ ಕಡೂರು ಅವರ ಗಜಲ್ ಪ್ರಸ್ತುತಿ ಪ್ರಯೋಗದ ದೃಷ್ಟಿಯಿಂದ ಗಮನಾರ್ಹವೆನಿಸಿದರೂ ‘ಸಾಕಿ’ಯೊಡಗಿನ ಆತ್ಮನಿವೇದನೆ ಕ್ಲೀಷೆಯೆನಿಸುತ್ತದೆ. ‘ಕಡೂರ ಕೋಗಿಲೆ’ ಮತ್ತು ‘ನಂರುಶಿ ಗಜಲ್’ ಇಂತಹ ಮಾತುಗಳು ಕವಿಯ ಅಸ್ಮಿತೆಯನ್ನು ಪ್ರತಿಪಾದಿಸಲು ಒತ್ತಾಯಕ್ಕೆ ತಂದಿರುವಂತೆ ಭಾಸವಾಗುತ್ತದೆ. ಒಟ್ಟಾರೆ

ಈ ಗಜಲ್ ಕಾಪಾಡಿಕೊಂಡಿರುವ ಲಯಕ್ಕೆ ಇದೊಂದು ತಡೆಯೆನಿಸುತ್ತದೆ.

ದೊಡ್ಡಿ ಪ್ರವೀಣ್ ಅವರ 'ಓ ದಲಿತರ ದನಿಯೇ' ಕವಿತೆ ದಲಿತ ಕವಿ ಸಿದ್ಧಲಿಂಗಯ್ಯನವರಿಗೆ ಸಲ್ಲಿಸಿದ ಕಾವ್ಯನಮನದಂತಿದೆ. ಎಲ್ಲಿಯೂ ಪ್ರವೀಣ್ ಅವರು ಸಿದ್ಧಲಿಂಗಯ್ಯನವರ ಹೆಸರನ್ನು ಪ್ರಸ್ತಾಪಿಸುವುದಿಲ್ಲವಾದರೂ ಕವಿತೆಯ ಆರಂಭವೇ ಅದನ್ನು ಸೂಚಿಸಿಬಿಟ್ಟಿದೆ. ಸಿದ್ಧಲಿಂಗಯ್ಯನವರ ಹೋರಾಟದ ಫಲ ಇನ್ನೂ ಕೈಗೂಡಲಿಲ್ಲ ಎಂಬ ಅರ್ಥ ಹೊಮ್ಮಿಸುವ ಸಾಲುಗಳು ಸಿದ್ಧಲಿಂಗಯ್ಯ ನವರೇ ರಚಿಸಿದ 'ಅಂಬೇಡ್ಕರ್' ಕವಿತೆಯ ಮಾದರಿಯದಾಗಿವೆ. ಅಂಬೇಡ್ಕರ್ ಕವಿತೆಯ ಸಾಫಲ್ಯ ಪ್ರವೀಣ್ ಅವರ ಕವಿತೆಗಿಲ್ಲ. ಕವಿತೆಯ ಅಂತ್ಯವನ್ನು ಇನ್ನಷ್ಟು ಬಿಗಿಯಾಗಿ ರಚಿಸಬಹುದಾಗಿದ್ದ ಅವಕಾಶದಿಂದ ಕವಿ ವಂಚಿತರಾಗಿದ್ದಾರೆ.

ತಾಳಿದವನು ಬಾಳಿಯಾನು ಎಂಬ ಮಾತಿನಂತೆ ಎಂ.ಡಿ. ಚಂದ್ರೇಗೌಡ ನಾರಮ್ನಳ್ಳಿ ಅವರ 'ಬೋಳುಮರ' ಕವಿತೆ ಪ್ರಯತ್ನದ ಫಲವನ್ನು ಎತ್ತಿ ಹಿಡಿಯುತ್ತದೆ. ಇಲ್ಲಿ ಕವಿಯು ಕೊಂಚ ತಾಳ್ಮೆ ಕಳೆದುಕೊಂಡಿದ್ದರು ಬೋಳುಮರ ಫಲ ಕೊಡಲು ಸಾಧ್ಯವಿತ್ತೇ ಎಂಬುದನ್ನು ಓದುಗರಿಗೆ ಹೇಳುತ್ತಲೇ ಬೇರೆ ಬೇರೆ ಸಾಲುಗಳ ಮೂಲಕ ನಿರೂಪಿಸುತ್ತಾರೆ. ಕವಿತೆಯು ಸರಳವಾಗಿ ಓದುಗರಿಗೆ ತಲುಪುವಲ್ಲಿ ಸಫಲವಾಗಿದೆ ಎನ್ನಬಹುದು.

ನಾ. ಮುನಿರಾಜು ಅವರ 'ಗಾಂಧಿಯ ನೋಟು' ಉತ್ತಮ ರಚನೆ. ಇನ್ನೊಬ್ಬರ ನಗುವಿಗಾಗಿ ನಾವು ಕಷ್ಟಪಟ್ಟರೆ ಅದು ಬದುಕಿನ ಸಾರ್ಥಕವಾದ ಕ್ಷಣವಲ್ಲವೇ ಎಂಬ ಸಂದೇಶ ಹೊತ್ತ ಈ ಕವಿತೆ ಗಾಂಧೀಜಿಯವರು ಬದುಕಿನುದ್ದಕ್ಕೂ ತಮಗಾಗಿ ಬದುಕದೆ, ಇತರರಿಗಾಗಿಯೇ ಬದುಕಿದರೆಂಬುದನ್ನು ಮತ್ತು ಆ ಮಾದರಿಯು ನಮಗೆ ನೋಟಿನಲ್ಲಿರುವ ಗಾಂಧೀಜಿಯವರ ನಗೆಮೊಗವು ಸದಾ ಚಾಲ್ತಿಯಲ್ಲಿಟ್ಟು ಎಚ್ಚರಿಸುತ್ತಿರುತ್ತದೆಂಬುದನ್ನು ಮುನಿರಾಜು ಅವರು ಸೊಗಸಾಗಿ ವಿವರಿಸಲೆತ್ನಿಸಿದ್ದಾರೆ. ಕವಿತೆಯ ರಚನೆಯೊಳಗಣ ಹಿತಮಿತ ಪದ ಬಳಕೆ ಮತ್ತು ಅರ್ಥ ಸಂದಿಗ್ಧತೆಗೆಡೆಗೊಡದ ರಚನಾಕ್ರಮ ಓದಿದವರ ಮೆಚ್ಚುಗೆಗೆ ಪಾತ್ರವಾಗುತ್ತದೆ.

ನರೇಶ್ ಕಾಮತ್ ಅವರ 'ವ್ಯಯಿಸಲಿ ಹೇಗಿನ್ನದನು?' ಎತ್ತುವ ಪ್ರಶ್ನೆಗಳು ಕವಿಯ ಸಾಮಾಜಿಕ ಸ್ವಾಸ್ಥ್ಯದ ಕಳಕಳಿಯನ್ನು ತೋರುವಲ್ಲಿ ಸಫಲವಾಗಿವೆ. ಕವಿತೆಗೆ ಬಳಸಿರುವ ಸರಳಶೈಲಿ ಕೂಡ ಗಮನ ಸೆಳೆಯುತ್ತದೆ. 'ನಾಳೆಗಳಿಗಿಷ್ಟು ನೆಮ್ಮದಿಯ ನಗು ಬೇಕಾಗಿದೆ' ಇಲ್ಲಿ ಕವಿಯು ಭರವಸೆಯ ಬೆಳಕನ್ನು ತನ್ನೊಳಗೆ ಕಂಡುಕೊಳ್ಳುತ್ತಲೇ ಜಗಕ್ಕೂ ಎಚ್ಚರಿಸುತ್ತಿದ್ದಾರೆ. ಬಂಧು ಬಾಂಧವರನ್ನು ಮತ್ತು ಗೆಳೆಯರನ್ನು ದೂರವಿರಿಸಿ ಗಳಿಸಿದ ಸಂಪತ್ತು, ಒಂದಲ್ಲ ಒಂದು ದಿನ ಬೇರೆ ಬೇರೆ ಮಾರ್ಗಗಳ ಮೂಲಕ ಕರಗಿ ವ್ಯರ್ಥವಾಗುತ್ತದೆ. ಮೂಲತಃ ಮನುಷ್ಯ ಸಂಘಜೀವಿ

ಎನ್ನುವುದನ್ನೇ ಮರೆತು ಧನ ಕನಕಗಳ್ಹಿಂದೆ ಹೋದರೆ ನೆಮ್ಮದಿಯ ನಾಳೆ ಉಳಿದೀತೆ ಎಂದು ಕವಿತೆಯ ಮೂಲಕ ಕವಿ ಆತ್ಮಾವಲೋಕನ ಮಾಡಿ ಕೊಳ್ಳುತ್ತಲೇ ಪ್ರಶ್ನಿಸುತ್ತಿದ್ದಾರೆ. ಕವಿತೆಯನ್ನು ಸುಲಭವಾಗಿ ಅರ್ಥಮಾಡಿಸುವುದು ಅವರ ಉದ್ದೇಶವಾಗಿರುವುದರಿಂದ ಸಂಕೀರ್ಣತೆಗೆ ಇಲ್ಲಿ ಎಡೆಯಿಲ್ಲ.

'ಮರವಾಗಬಾರದಿತ್ತೆ' ಎಂಬ ಲಕ್ಷ್ಮಿ ಕಿಶೋರ್ ಅರಸು ಅವರ ಕವಿತೆ ಉಳ್ಳವರ ಮತ್ತು ಹೊಟ್ಟೆಗಿಲ್ಲದ ನಿರ್ಗತಿಕರ ನಡುವಿನ ತರತಮಭಾವವನ್ನು ಹೇಳುತ್ತದೆ. ಮನುಷ್ಯರಾಗುವ ಬದಲು ಮರವಾಗಿದ್ದರೆ ಈ ಬವಣೆ ಇರುತ್ತಿರಲಿಲ್ಲವೆಂಬ ಭಾವ ಬಡವರಲ್ಲಿ ಮೂಡಿಸುವ ಸಂಕಷ್ಟ ಮೂಡ್ನಾಕೂಡು ಅವರ 'ನಾನೊಂದು ಮರವಾಗಿದ್ದರೆ' ಕವಿತೆಯನ್ನು ನೆನಪಿಸುತ್ತದೆ.

ರಾಜೇಶ್ವರಿ ರಾಜೇಂದ್ರ ಹೊನ್ನಾವರ ಅವರ 'ವಿಧಿಯಾಟವಿತ್ತ ಹಣೆಪಟ್ಟಿ' ಕವಿತೆಯು ತಾಯ್ತನದ ತುಡಿತವನ್ನು ಬಹಳ ಅಚ್ಚುಕಟ್ಟಾಗಿ ಹಿಡಿದಿಟ್ಟಿದೆ. ಇದರ ಜೊತೆಗೆ ಸಂಗಾತಿಯು  ದೂರವಾದ ನೋವನ್ನು ಸರಳ ರೂಪಕಗಳ ಮೂಲಕ ಕಣ್ಣಿಗೆ ಕಟ್ಟಿಕೊಡುತ್ತದೆ. ತಾಯ್ತನದ ಸುಖವನ್ನು ಅನುಭವಿಸಲಾಗದೆ, ಇತ್ತ ಯಾರೊಂದಿಗೂ ಬೆರೆಯಲಾಗದೆ ಹೆಣ್ಣೊಬ್ಬಳ ಮನೋಸ್ಥಿತಿಯ ನೂರು ಕವಲು ಗಳನ್ನು ಒಂದೊಂದಾಗಿ ತೆರೆದಿಡುತ್ತಾ ಹೋಗುತ್ತದೆ. ಎಷ್ಟೆಲ್ಲಾ ನೋವಿದ್ದರೂ ನಾನು ಮತ್ತೆ ನಗುತ್ತಲೇ ಎದುರುನಿಂತು ಗೆಲುವಾಗುತ್ತೇನೆ ಎಂದು ತನ್ನೊಳಿಗಿನ ಬೆಳಕನ್ನು ಕವಿತೆ ಕಂಡುಕೊಳ್ಳುತ್ತಿದೆ. ಸಶಕ್ತವಾಗಿ ಹೇಳಬೇಕಾದ್ದನ್ನು ಹೇಳಿ ಓದುಗರಲ್ಲಿಯೂ ಒಂದು ಒಳಗಣ್ಣನ್ನು ಕವಿತೆಯು ತೆರೆಸುತ್ತದೆ.

ಜಯಲಕ್ಷ್ಮೀ ಕೋಳಗುಂದ ಅವರು ಕವಿತೆಯ ಭಾಷೆ ಮತ್ತು ರಚನಾ ಕೌಶಲದಲ್ಲಿ ಬಿಗಿತನವನ್ನು ತೋರಿದ್ದಾರೆ. ಜಗದ ಗಂಡರನ್ನೊಲ್ಲದ ಅಕ್ಕಮಹಾದೇವಿಯ ನಿಲುವಿಗೆ ತೋರಿದ ಪ್ರತಿಕ್ರಿಯೆಯಂತಿದೆ. ಇಹದ ಗಂಡನೊಂದಿಗೆ ಉಸಿರು ಲೀನವಾಗಲೆಂಬ ಹೇರಾಸೆಗೆ ಕಾರಣವನ್ನೂ ಕಾಣಿಸುವ ಕವಯತ್ರಿ ಎಲ್ಲ ಭಾವನೆಗೆ ಜೊತೆ ನೀಡಿದ ಬಾಳಸಂಗಾತಿಯು ಚೆನ್ನಮಲ್ಲಿಕಾರ್ಜುನನಂತಹ ಕಾಣದ ಸುಖಕ್ಕೆ ಎಳಸುವುದಿಲ್ಲ ಎಂಬ ಲೌಕಿಕದ ಬದುಕಿನ ಶಾಶ್ವತ ಸುಖವನ್ನು ಪ್ರತಿಪಾದಿಸಿರುವುದು ಗಮನಾರ್ಹ.

ಲಕ್ಷ್ಮೀಪುರ ಜಿ. ಶ್ರೀನಿವಾಸ ಅವರ 'ಕುಲಗಳು' ಕವಿತೆಯ ಶೀರ್ಷಿಕೆಯೇ ವಸ್ತುವನ್ನು ಬಹಿರಂಗಗೊಳಿಸುವುದರೊಂದಿಗೆ ನಮ್ಮ ಸಹಬಾಳ್ವೆಯ ಅಂತಸತ್ವವನ್ನು ಹಾಳು ಗೆಡಹಿರುವ ನಾನಾ ಬಗೆಯ ಕುಲ–ಮತಗಳ ದೊಡ್ಡ ಪಟ್ಟಿಯನ್ನೇ ಗಾಢ ವಿಷಾದ ದೊಂದಿಗೆ ಮಂಡಿಸಿದೆ. ಇಡೀ ವಿಶ್ವವೇ ಕುಲದ ನೆಲೆಯಾಗಿದೆಯೆಂಬ ನಿಟ್ಟುಸಿರಿ ನಂತಹ ಮಾತು ಕವಯಿತ್ರಿಯ ಆರೋಗ್ಯಕರ ಆಲೋಚನೆಯನ್ನು ಬಿಂಬಿಸುತ್ತದೆ.

'ಮಾಯಾಮೃಗ' ಎಂಬ ಕವಿತೆಯಲ್ಲಿ ವೇಣು ಜಾಲಿಬೆಂಚಿಯವರು ನಮ್ಮ ನಗುವನ್ನು ಕಸಿದುಕೊಳ್ಳುತ್ತಿರುವ ಹಲವು ವಿಸಂಗತಿಗಳನ್ನು ವಿವರಿಸುತ್ತ ನಮ್ಮ ಬದುಕಿನಲ್ಲಿ ನಿರ್ಮಲವಾದ ನಗುವೇ ಕಳೆದುಹೋಗಿ ಅದೇ ನಮ್ಮ ಕೈಗೆಟುಕದ ಮಾಯಾಮೃಗವಾಗಿದೆಯೆನ್ನುತ್ತಾರೆ.

ಕಾಲಿಗೆ ಎಕ್ಕಡ ಹೊಲೆದುಕೊಟ್ಟವನ, ಮಲ ಹೊತ್ತು ಮನೆಯನ್ನು ನಿರ್ಮಲ ವಾಗಿಸಿದವನ, ಹೊಲ ಉತ್ತು ನೆಲವನ್ನು ಹಸನುಗೊಳಿಸಿದವನನ್ನು ಮರೆತ ಮಂದಿ ಕೀಳುಕುಲದವನೆಂಬ ಹಣೆಪಟ್ಟಿ ಹಚ್ಚಿ ಊರಾಚೆಯ ಕೇರಿಗೆ ಸೀಮಿತ ಗೊಳಿಸುವ ಕ್ರೌರ್ಯವನ್ನು ಪ್ರತುಮ್ ಸಾಗರ್ ಅವರ 'ನಿನ್ನ ಕೇರಿ ಯಾವುದು?' ಕವಿತೆ ಚಿತ್ರಿಸುವುದರೊಂದಿಗೆ ಕೇರಿಯಲ್ಲಿರುವ ಸಹ ಜೀವಿಗಳ ಅಸ್ಮಿತೆಯ ಪ್ರಶ್ನೆಯನ್ನು ಕೆದಕುತ್ತದೆ.

ರವಿಕುಮಾರ ಜಾಧವ ಅವರು ತಮ್ಮ ಮನೋಲೋಕದಲ್ಲಿ ನವಿಲಿನಂತೆ ಕುಣಿವ, ನವಿರು ಭಾವಗಳನ್ನು ಬಡಿದೆಬ್ಬಿಸುವ ಸ್ತ್ರೀಚೈತನ್ಯ ಶಕ್ತಿಯನ್ನು ಈ ಕವಿತೆಯಲ್ಲಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಭಾವನೆಗೆ ತಕ್ಕ ಪದಗಳನ್ನು ಹಿತಮಿತವಾಗಿ ಬಳಸಿರುವುದು ಗಮನಾರ್ಹ. ಆಡಂಬರವಿಲ್ಲದ ನಿರೂಪಣೆ ಕವಿತೆಗೊಂದು ಸೂಕ್ತ ಲಯವನ್ನು ಪ್ರಾಪ್ತವಾಗಿಸಿದೆ.

ಪಾಳುಗುಡಿಯಲ್ಲಿ ಪೂಜೆ ಪುನಸ್ಕಾರಗಳನ್ನು ಕಾಣದೆ ಧೂಳುಹಿಡಿದು ಜೇಡಗಟ್ಟಿದ ಬಲೆಯೊಳಗೆ ಜಡಗೊಂಡಿರುವ ನಮ್ಮನ್ನು ಕಾಯುವ ದೇವರು ಪ್ರಮೋದ್ ಮೈಸೂರು ಅವರಿಗೆ 'ಬಹಿಷ್ಕೃತ ದೇವರಂತೆ' ಗೋಚರಿಸಿರುವುದು ವಿಶೇಷವಾಗಿದೆ. ಮನುಷ್ಯನ ನಿರ್ಲಕ್ಷ್ಯಕ್ಕೊಳಗಾದ ದಿವ್ಯ ಚೇತನಗಳ ಸಾಲಿನಲ್ಲಿ ನಮ್ಮನ್ನು ಕಾಯುವ ಹರನೂ ಸೇರ್ಪಡೆಗೊಂಡಿರುವುದು ಕವಿತೆ ಸೂಕ್ಷ್ಮ ಗಮನ ಮತ್ತು ಗ್ರಹಿಕೆಯ ಲಕ್ಷ್ಯಕ್ಕೆ ಬಂದಿರುವುದರ ಬಗ್ಗೆ ಮೆಚ್ಚುಗೆ ಮೂಡದಿರದು.

ನಾಗೇಂದ್ರ ಹೆಬ್ಬಾರ್ ಅವರು 'ದಸರೆಗೆ ಮಳೆ' ಕವಿತೆಯಲ್ಲಿ ಇಂದಿನ ನಮ್ಮ ದಸರಾ ಮೆರವಣಿಗೆಯು ಗತವೈಭವದ ಪಳೆಯುಳಿಕೆಯಂತೆ ಕಾಣುವುದನ್ನೂ, ಪ್ರಭುತ್ವದ ಆ ಆಚರಣೆಯು ಪ್ರಜಾಪ್ರಭುತ್ವದ ಸಂವಿಧಾನದ ಆಶಯಕ್ಕೆ ವಿರುದ್ಧ ವಾಗಿರುವುದನ್ನೂ ಧ್ವನಿಸುತ್ತದೆ. ದಸರೆಯಂದು ಬಿದ್ದ ಮಳೆ ಪೂರ್ತಿ ಖಾಲಿಯಾಗದೆ ಹನಿಗಳೆರಡನ್ನು ಮುಂದಿನ ದಸರೆಗೆ ಉಳಿಸಿಕೊಳ್ಳುವುದು ಮುಂದಿನ ವರ್ಷಗಳಲ್ಲೂ ಈ ಅರ್ಥವಿಲ್ಲದ ಆಚರಣೆ ನಾಡಹಬ್ಬದ ಹೆಸರಲ್ಲಿ ಮುಂದುವರೆಯುವುದನ್ನು ಸೂಚಿಸಿದೆ.

ಎಂ.ಆರ್. ಕುಲಕರ್ಣಿಯವರ 'ಭಯ ಮುಕ್ತಿ' ಕವಿತೆಯು ದೈವದೊಲುಮೆ ಯನ್ನು ಸಂಪಾದಿಸಿ ವರ್ತಮಾನದ ಬದುಕನ್ನು ಹಸನುಗೊಳಿಸಿಕೊಳ್ಳಬೇಕಾದ,

ಈ ಕ್ಷಣದ ಬದುಕಿನ ಮಹತ್ವವನ್ನು ಅರಿಯಬೇಕಾಗಿರುವುದರ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಸೃಷ್ಟಿಸಿದ ದೇವರು ನಗಿಸುವಾಗ ನಗುವುದು ನಮ್ಮ ಧರ್ಮವೆಂಬ ತಾತ್ವಿಕ ನಿಲುವನ್ನು ಸಾರುವ ಈ ಕವಿತೆಯು ಭಯವನ್ನು ಬಿಡುವುದೇ ಮುಕ್ತಿ ಅಥವಾ ಬಿಡುಗಡೆಯೆಂಬ ವಿಚಾರವನ್ನು ತಾರ್ಕಿಕವಾಗಿ ಮಂಡಿಸುತ್ತದೆ.

ಬೇಡಿ ತಿಂದು ಬದುಕುವವರೆದೆಯಲ್ಲೂ ಅಂತಿಮವಾಗಿ ಉಳಿಯುವ ದೇಶಾಭಿಮಾನ ಲೂಟಿ ಹೊಡೆಯುವವ ಕಳ್ಳ ದೇಶಭಕ್ತರ ಎದೆಯಲ್ಲಿರುವುದಿಲ್ಲ ಎಂಬುದನ್ನು ದಾಸ್ ತಮ್ಮೇನಹಳ್ಳಿಯವರ ಕವಿತೆ ಮಾರ್ಮಿಕವಾಗಿ ಹೇಳ ಬಯಸುತ್ತದೆ. ಬದುಕಿದ್ದಾಗ ತಿನ್ನಲೂ ಗತಿಯಿಲ್ಲದ, ಸತ್ತಾಗ ಹೆಣ ತೆಗೆಯಲೂ ಗತಿಯಿಲ್ಲದ ನಿರ್ಗತಿಕರಲ್ಲಿರುವ ದೇಶ ಪ್ರೇಮ ಜೈಲುಸೇರದೆ, ತೆರಿಗೆಕೊಡದೆ ಮಹಲುಗಳಲ್ಲಿ ವಾಸಿಸುತ್ತಿರುವ ಖದೀಮರಲ್ಲಿರುವುದಿಲ್ಲ ಎಂಬ ಭಾವ ಈ ಕವಿತೆಯ ಆಶಯವಾಗಿದೆ.

ಇಲ್ಲಿರುವ ಒಟ್ಟು ಕವಿತೆಗಳ ವಸ್ತು ವಿನ್ಯಾಸವನ್ನು ಗಮನಿಸಿದರೆ ನಮ್ಮ ಕವಿಗಳು ಎಂದಿಗೂ ಕಾಡುತ್ತ ಬಂದಿರುವ ಜಾತಿ, ಕುಲ, ನಿರ್ಲಕ್ಷ್ಯ, ಹಸಿವು, ಪ್ರೇಮ, ಹತಾಶೆ ಮತ್ತು ಕೃತಜ್ಞತೆ, ಭರವಸೆಯ ಭಾವಗಳನ್ನೇ ತಮ್ಮ ಕವಿತೆಗಳಲ್ಲಿ ಮರು ನಿರೂಪಿಸಲು ಪ್ರಯತ್ನಿಸಿದ್ದಾರೆ. ಇದು ಸಹಜವಾಗಿಯೇ ಕವಿ ಗಮನವನ್ನು ಸೆಳೆದಿರುವ ನಮ್ಮ ಸುತ್ತಲಿನ ಮುಖ್ಯ ಸಂಗತಿಗಳಾಗಿವೆ. ಮೇಲೆ ವಿವರಿಸಿರುವಂತೆ ಕೆಲವರ ರಚನೆ ಬಿಗಿಯಾದ ಬಂಧದಿಂದ ಗಮನ ಸೆಳೆಯುತ್ತದೆ. ಮತ್ತೆ ಕೆಲವರ ಬರಹ ಪಕ್ವಗೊಳ್ಳದೆ ಹೋಗಿದೆ. ಕವಿತೆಯನ್ನು ಮತ್ತಷ್ಟು ಕಲಾತ್ಮಕವಾಗಿ ಹೆಣೆದು, ಕಲಾಕೃತಿಯಾಗಿಸುವ ಪ್ರಯತ್ನ ಮಾಡಿದರೆ ಕಿ ರಂ ಅವರಿಗೆ ಖುಷಿಯಾಗುತ್ತದೆ ಅನ್ನಿಸುತ್ತದೆ. ಅವರ ಹೆಸರಿನಲ್ಲಿ ನಡೆಯುವ ಕವಿಗೋಷ್ಠಿಯು ಕಿ ರಂ ಅವರ ಕಾವ್ಯ ಪ್ರೀತಿಯನ್ನು ಎತ್ತಿಹಿಡಿಯುವಂಥ ಘನತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ನಮ್ಮ ಕವಿಗಳ ಪ್ರಯತ್ನ ಸಫಲವೆನಿಸಲಿ ಎಂದಾಶಿಸುತ್ತ ಈ ನನ್ನ ಮಾತುಗಳಿಗೆ ಮುಕ್ತಾಯ ಹಾಡುತ್ತೇನೆ.

ನಮಸ್ಕಾರಗಳು,

# ಬಹಿಷ್ಕೃತ ದೇವರು!

❖ **ಪ್ರಮೋದ್ ಮೈಸೂರು**

ಸಂಜೆಗೆ ಸೂರ್ಯ ರಕ್ತ ಕಾರುವ ದಿಕ್ಕು,
ಊರು ಕೇರಿಗಳ ಹೊರಗೆ
ಹಟ್ಟಿ–ಕೊಟ್ಟಿಗೆಯ ಗಾವುದ ದೂರಕ್ಕೆ
ಬೆನ್ನು ಸವೆದ ಶಿಥಿಲ ಗುಡಿ,
ಸುತ್ತೆಲ್ಲ ಮುಳ್ಳು ಕಂಟಿ ಪೊದೆ,
ಮನುಷ್ಯರು ಸುಳಿದ ಸುಳುವೇ ಇಲ್ಲ.

ಬಾಗಿಲು ಜಂತಿಗೆ ವರಲೆ ಮುತ್ತಿಗೆ,
ಮೂಲೆಯಲ್ಲಿ ಜೇಡರ ಹೂಡೆ.
ಹುಳ ಉಪ್ಪಟೆಗಳ ಆರ್ತನಾದ,
ಮಾಡೇ ಇಲ್ಲದ ಗರ್ಭಗುಡಿಯೊಳಗೆ
ವಿರಮಿಸಿದ್ದ ಶಿಲಾ ಲಿಂಗ.
ಮೈಯ್ಗೆಲ್ಲ ಬಳ್ಳಿ ಹಬ್ಬಿ, ಹುತ್ತ ಬೆಳೆದು
ಪೂಜೆ ಕಂಡು ಎಷ್ಟು ದಿನವೊ.?

ಹೂವಿಲ್ಲ–ಹಣ್ಣಿಲ್ಲ, ಧೂಪಾರತಿ,
ಮಂತ್ರ ಘೋಷಗಳಿಲ್ಲ.
ಗಂಟೆ ಜಾಗಟೆಗಳ ಸದ್ದಿಲ್ಲ.
ಮಡಿ ಮೈಲಿಗೆಯಿಲ್ಲ.
ಮಳೆ ಹೊಯ್ದರೆ ಅಭ್ಯಂಜನ,
ಇಲ್ಲವೇ ಸೂರ್ಯಾದಿ ಚಂದ್ರರು
ಸುರಿವ ಬೆಳಕ ಮಜ್ಜನ.

ಚರಿತ್ರೆಯ ಕಥೆ ಹೇಳಲು ಕಾದ
ವೃದ್ಧನಂತೆ ಕಾಲ ಎಣಿಸುತ್ತಿರುವ ಗುಡಿ.
ಭುಜ ಹೂಡುವವರಿಲ್ಲ.
ಇಲ್ಲಿ ದೇವರೇ ಬಹಿಷ್ಕೃತ!

ಮಾಡಿಲ್ಲದ ಗುಡಿಯ ಶಿವ
ಹಾವು ಚೇಳುಗಳ ಸಂಗಕ್ಕೆ ಸ್ಮಶಾನವಾಸಿಯಾದ,
ಇವರು ಕಟ್ಟಿದ ಗೋಡೆಗಳ ಬೆನ್ನುಬಾಗಿ
ಇಂದೊ ನಾಳೆಯೊ ಕುಸಿವ ಶಂಕೆ!

# ಎನ್ನ ಕೊಂದವರೆ

❖ **ಮಹಾದೇವ ಮೂಡುಕೊಣಾಜೆ**

ಧನ್ಯವಾದ ನಿಮಗೆ ಎನ್ನ ಕೊಂದವರೆ
ಸತ್ತ ಮೇಲೂ ಬರಿದೆ ಇರಿದು ನಿಂದವರೆ
ನನ್ನ ಮುಖದಲಿ ಮುಖವಾಡ
ನನ್ನೊಳಗೆ ಕಪಟಿಯನು ಹುಡುಕಿ ತಂದವರೆ

ನಾಯಿ ನರಿ ಸಂತತಿಗೆ ಸಮತೂಗಿ
ಯೋಗ್ಯತೆಯ ಪ್ರಶ್ನೆ ಇರಿಸಿದವರೆ
ಜಗದೆಲ್ಲ ಬಿರುನುಡಿಯ ಬಳಸಿ ಕೊಂದವರೆ
ಸತ್ತ ಮೇಲೂ ಬರಿದೆ ಇರಿದು ನಿಂದವರೆ

ನನ್ನ ತುಡಿತಗಳ ನಿಮಗಾಗಿ ಬಡಿದಿರಿಸಿ
ನಿಮ್ಮ ದಾರಿಗಳ ಹುಡುಕಿ ನಡೆಸಿ
ದಾರಿಯ ಕಾಠಿಣ್ಯಕ್ಕೆ ನನ್ನೇ ದೂರಿದಿರಿ
ಗಳಿಗೆ ಗಳಿಗೆಗೂ ಒಮ್ಮೆ ಮಾತು ಮೀರಿದಿರಿ

ನಾನಾಡದ ಮಾತ ನೀವೆ ಆಡಿದಿರಿ
ಎಲ್ಲ ಸತ್ಯಗಳ ಮಣ್ಣು ಮಾಡಿದಿರಿ
ಪಾಪಪುಣ್ಯದ ಲೆಕ್ಕವಿಡಲೊಬ್ಬ ಕುಂತಿಹನು
ಸತ್ಯ ಸುಳ್ಳುಗಳೆಲ್ಲ ಬಯಲಾಗುವುದಲ್ಲಿ

ಕೋಣವೆರಡು ಹೋರೆ
ನಡುವೆ ಸಿಲುಕಿದ ಗಿಡ ನಾನು

ನನ್ನಾಸೆ ಭಾಷೆಗಳು
ನುಜ್ಜುಗುಜ್ಜು

ಮಾತಿನ ಮಂಥನದ ಫಲ ನಿಮಗೆ ಸಿಗಲಿ
ಕೃತಿಗೊಂದು ಫಲಬೇಕು
ನನ್ನ ಸಾವೇ ಇರಲಿ
ನೀವೇರೊ ಏರಿಗೆ ಮೆಟ್ಟಿಲಿರಲಿ

ಧನ್ಯವಾದ ನಿಮಗೆ ಎನ್ನ ಕೊಂದವರೆ
ಸತ್ತ ಮೇಲೂ ಬರಿದೆ ಇರಿದು ನಿಂದವರೆ

# ಹಳೆಯ ಖಾಲಿ ಮುಖಗಳು...

❖ **ಸತೀಶ್ ಗರಣಿ**

ಖಾಲಿ ಮೊಗದ ಅರೆಬೆಂದ
ನೆತ್ತರು ಹರಿವ ಮನದಲ್ಲಿ
ಸುಖಾಸುಮ್ಮನೆ ಹಳೆ ಮುಖಗಳು
ಬಿಕರಿಯಾಗಿವೆ.

ಸವೆದ ಹಾದಿಯಲ್ಲಿ ಹಳೆಯ ಗರಿಕೆಯ
ಎಳೆಯ ಮೊನಚು ಚಿಗುರು
ಬೆಂಬಿಡದೆ ಎಡರು ತೊಡರು
ಬೆತ್ತಲಾಗಿ ಮುನ್ನುಗ್ಗುತ್ತಿವೆ

ಧಮನಿ ಘನ ಮನ
ಗಹಗಹಿಸಿ ನಗುತ
ನನ್ನದೆಯಾಳಕ್ಕಿಳಿದು
ಜ್ವಲಂತ ದುಗುಡವಾಗಿವೆ

ಚಿತ್ತವಿರದ ಬಿತ್ತಿ ನಗುವು
ಹಸಿ ಕಂಗಳ ಸುಡು ಗುಂಡುಗಳು
ಹವಣಿಸಿ ಹಪಹಪಿಸಿ
ಅರೆಕ್ಷಣ ಮುನ್ನುಗ್ಗಿವೆ.

ನಡುರಾತ್ರಿ ಕನಸುಗಳ ದಿಬ್ಬಣ
ಬಿಳಿ ಮಲ್ಲಿಗೆಯ ಹಾದಿ
ದುತ್ತನೆ ಎರಗುವ ಚಾಳಿ
ಅದುವೇ ಜಾತಕಫಲವಾಗಿವೆ

ಸಾಕುಸಾಕೆನಿಸಿ ಮೈದಡವಿ ನಿಂತರೂ
ಪ್ರತೀಕಾರದ ಹಳೆಯ ಮುಖಗಳು
ಸುಟ್ಟ ಕರಿ ಬೂದಿಯ ಹಾಗೆ
ಅಡರಿ ಸುಡು ಕಡು ಕಪ್ಪಾಗಿವೆ..

# ದೇಶಾಭಿಮಾನ

❖ **ದಾಸ್ ತಮ್ಮೇನಹಳ್ಳಿ**

ಭವ್ಯ ಭಾರತದ ಬಯಲೊಳಗೆ
ಕರುಳ ಹಿಂಡುವ ರೋಚಕ ಕಥೆಗಳು
ಅನ್ನ ನೀರು ವಸತಿಗಳಿಲ್ಲದ ಮನಗಳು
ನಿಟ್ಟುಸಿರು ಬಿಡುತ್ತಿರುವ ವ್ಯಥೆಗಳು

ಜೀವವೂ ಹೋಗದೆ ದುಃಖಿಸುತ
ಸೆಣಸಾಡುತ್ತಿವೆ ನರಳಾಟದ ಬದುಕಿನಲ್ಲಿ
ಬಸ್ಟಾಪು ನಿಲ್ದಾಣಗಳ ಅಕ್ಕ ಪಕ್ಕ
ಕೇಳುಗರಿಲ್ಲದ ಅನಾಥ ಜೀವಂತ ಶವಗಳಾಗಿ

ಅಂಗಲಾಚಿ ಬೇಡುವ ಕೈಗಳು
ತುತ್ತು ಅನ್ನದ ಹಸಿವಿನಾ ಕಸಿವಿಸಿಗೆ
ದಿನವ ಕಳೆಯಲು ತೊಳಲಾಡುತ್ತಿವೆ
ಭಾಷಣಗಳ ಮಧ್ಯೆ ನಾವೆಲ್ಲಿದ್ದೀವೆಂದು

ನಮ್ಮ ರೋಗಗಳಿಗೆ ವೈದ್ಯರಿಲ್ಲ
ಮನದ ನರಳಾಟಕ್ಕೆ ಸಂತೈಸುವ ಕೈಗಳಿಲ್ಲ
ನಮ್ಮ ಬದುಕಿಗೆ ಬೆಲೆಗಳಿಲ್ಲವೇ ಇಲ್ಲ
ನೆಲೆಯೂರಿ ನಿಲ್ಲಲೂ ನೆಲೆಗಳಿಲ್ಲ

ನಾವು ಕುಂತ ಜಾಗದ ಮುಂದೆ
ನಮ್ಮ ಕಡೆ ತಿರುಗಿ ನೋಡುವ ಕಡಿಮೆ ಮಂದಿ
ಬೇಸರವಿಲ್ಲದೆ ನೀಡುವ ಅವರ ದಾನ
ಜಗತ್ತಿನಲ್ಲೇ ಸರ್ವ ಶ್ರೇಷ್ಠ ಜ್ಞಾನ

ಸತ್ತರೆ ನಾಯಿಯಂತೆ ಕೊಂಡೊಯ್ಯುವ
ನಮ್ಮ ಬದುಕಿಗೆ ನ್ಯಾಯವೆಲ್ಲಿದೆ?
ಇದ್ದೂ ದೋಚುತ್ತಿರು ಕೈಗಳಿಗೆ ಕೋಳವೆಲ್ಲಿದೆ?
ಆದರೂ ದೇಶಾಭಿಮಾನ ಹಾಗೆ ಉಳಿದಿದೆ

# ಗಜಲ್

**ನಂರುಶಿ ಕಡೂರು**

ಮದಿರೆ ಸುರಿಯುವಾಗ ನಿನ್ನ ಮುಂಗುರುಳ 'ಸರಿಸಬೇಡ' ಸಾಕಿ
ಬೆನ್ನಲಿ ಹರಿದ ಬಡತನದ ರವಿಕೆ ಇಂದು 'ಮುಚ್ಚಬೇಡ' ಸಾಕಿ

ಕಂಡು ಕಾಣದೆ ಹೋಗುವ ರವಿ ಬೆಳಕು ಏತಕೆ ಬಾಳಿಗೆ
ಖೂನಿನಲಿ ಉರಿವ ದೀಪವ 'ಕೆಡಿಸಬೇಡ' ಸಾಕಿ

ಎಲ್ಲಿಯ ಬೆಳಕು ನಿನ್ನ ಜನ್ಮಾಂತರ ಬಡತನಕೆ
ಇದಕ್ಕೆಂದೆ ಸಹಬಾಳ್ವೆ ಜೀವನ 'ತೊರೆಯಬೇಡ' ಸಾಕಿ

ಕಲ್ಪನೆಯ ಕಡೂರು ಕೋಗಿಲೆ ನಾನು ಪ್ರೀತಿ ಪಾತ್ರರಿಗೆ
ಮತ್ಸರ ಮನವ ಎಂದಿಗೂ ತೊರೆದು 'ಕೆಣಕಬೇಡ' ಸಾಕಿ

ಹೃದಯದಿ ಮೂಡಿದ ಭಾವನೆ ಪದಪುಂಜಗಳ ಜೊತೆ ಇರುವೆ
ಹಸಿವ ತಣಿಸದ 'ನಂರುಶಿ ಗಜಲ್ ಹೇಳಬೇಡ' ಸಾಕಿ

# ಓ ದಲಿತರ ದನಿಯೇ

❖ **ದೊಡ್ಡಿ ಪ್ರವೀಣ್ ವಿ**

ಓ ದಲಿತರ ದನಿಯೇ
ಬಂಡಾಯದ ದೊರೆಯೇ
ಮುಗಿಯಿತೇ ನಿನ್ನ
ಬದುಕಿನ ಮೆರವಣಿಗೆ

ನೀ ಹಚ್ಚಿದ ಕಾವ್ಯದ ಕಿಚ್ಚು
ಇನ್ನೂ ಬೆಳಗಲಿಲ್ಲ ನನ್ನ ದನಿಯಲ್ಲಿ
ಅಷ್ಟರಲ್ಲಿ ನೀನೇಕೆ ಜಾರಿದೆ
ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ

ಓ ನೊಂದವರ ನೋವಿನ ಕೂಗೆ
ನಿನ್ನನ್ನೇಕೆ ಕಾಯಲಿಲ್ಲ
ಆ ಕಪ್ಪು ದೇವತೆಯ ಕಣ್ಗಾವಲು
ದಾರಿ ಯಾವುದು ತಿಳಿಯದಿದ್ದಾಗ
ಹಾಡುತ ಹೊರಟೆಯ ಕಪ್ಪು ಕಾಡಿನ ಹಾಡು

ಕನ್ನಡವ್ವನಿಗೆ ನಿನ್ನದೇ
ಕನವರಿಕೆ
ನನ್ನ ಜನಗಳು ಹೊರಟಿಹರು
ಸಾವಿರ ನದಿಗಳ ಮೆರವಣಗೆ

ಹಣೆ ಬರಹವೆಂಬ ನಾಟಕದಲ್ಲಿ
ಮುಗಿಸಿಬಿಟ್ಟೆಯ ನಿನ್ನ ಮೆರವಣಿಗೆ
ಹೊರಟುಬಿಟ್ಟೆಯ ಪ್ರಕೃತಿಯ ಮಡಿಲಿಗೆ
ಆ ನಿನ್ನ ಮಸಣದ ಚೆಲುವೆಯ ಬಳಿಗೆ

ನನ್ನ ಕವನ
ನಿಮಗಿದೊ ನಮನ
ಕಾವ್ಯನಮನ
ನುಡಿನಮನ

# ಬೋಳುಮರ

❖ ಎಂ.ಡಿ.ಚಂದ್ರೇಗೌಡ ನಾರಮ್ನಳ್ಳಿ

ಅಪ್ಪ ಹಾಕಿದ್ದ ತೆಂಗಿನ ಸಸಿಗೀಗ
ಇಪ್ಪತ್ತರ ಹರೆಯ
ಹತ್ತು ಅಡಿಗಳಿಗೂ ಹೆಚ್ಚು ಎತ್ತರ
ತೋಟದಲ್ಲೆ ಎದ್ದುಕಾಣುವ
ಕತ್ತರಿಕೆ
ಹೊಂಬಾಳೆ ನೂಕಲಿಲ್ಲ
ಹರಳು ಕಚ್ಚಲಿಲ್ಲಾ...!
ಗೊನೆಯ ಮಾತೆಲ್ಲಿ ಇನ್ನ?

ಹಚ್ಚ ಹಸಿರು ಕಕ್ಕುವ ಮರದಲ್ಲಿ
ಕಚ್ಚಿದ್ದ ಗರಿಗರಿ ಸೋಗೆಗಳು
ಕಂಬದಂತಹ ಸುತ್ತುಸಿಂಬೆ

ಗೆಯ್ಮೆಯ ಕೂಲಿ ಜೇಬು ಕಚ್ಚಿತ್ತು
ದಸಿ ನೂಕಲಿಲ್ಲ ಇನ್ನೂ
ಗಂಡು ಮರವಾಗಿರಬಹುದು
ಖಂಡಿತಾ ಹೆಣ್ಣಲ್ಲ ಎನಿಸಿತ್ತು
ಫಲಿಸದ ಬಂಜೆಮರದ ಮೇಲೆ ಹುಳಿ ಉಂಡ ಭಾವ

ಒಂದ್ಹತ್ತು ಅಡಿಜಾಗ ಸುಮ್ಮನೆ
ವ್ಯರ್ಥ
ಕತ್ತರಿಸಿ ಮತ್ತೊಂದು ನೆಡಬಹುದಲ್ಲ

ನಾಳೆಯೇ ಬರಹೇಳುವೆನು ಗರಗಸ,
ಕತ್ತರಿಸಿ ಕಡಿದು ಬಿಸುಡಲಿ ಬುಡ ಸಹಿತ

ತಟ್ಟನೆ ನೆನಪಾದಳು ತಂಗಿ
ಮುವತ್ತು ವರ್ಷದಿಂದ
ದೇವರುದಿಂಡರು ಕಣ್ತೆರೆಸಲಿಲ್ಲ
ಭಾವನೂ ಹೀಗೆಯೇ ಯೋಚಿಸಿದ್ದರೆ...
ಬರಡೆಂದು ಅಟ್ಟಿದ್ದರೆ ಹೊರಗೆ...?
ಛೇ ಇಂಥ ಯೋಚನೆಯೇ? ಇರಲಿ ಬಿಡಿ...
ಹೊತ್ತಿರುವವಳು ಧರಿತ್ರಿ....

ಮರದ ಸುತ್ತಲೂ ಎರಡಡಿ ಆಳದ ಗುಂಡಿ ತೆಗೆದೆ
ಬಿದ್ದ ತರಗೆಲೆಗಳ ತುಂಬಿದೆ
ಹಸಿರೆಲೆ ಕತ್ತರಿಸಿ ಮತ್ತೆ ತುಂಬಿದೆ
ಆರು ತಿಂಗಳ ನಂತರ
ಸುರಿಯಿತಲ್ಲ ಮುಂಗಾರು
ಈಗ ಹೊರಟಿವೆ ಹತ್ತಾರು ಹೊಂಬಾಳೆ
ಕುಂಬದಂತ ಎಳನೀರ ಸಾಲೆ

ತಾಳಬೇಕು ಮಾನವ
ದುಡುಕಿನ ನಿಶ್ಚಯಗಳ ತಳೆದು
ನಿರೀಕ್ಷಿಸಬಹುದೇ
ಒಳಿತನಫಲ

# ಗಾಂಧಿಯ ನೋಟು

❖ **ಡಾ.ನಾ.ಮುನಿರಾಜು, ಮಾಲೂರು**

ಘಂಟೆ ಹೊಡೆಯುವ ಮೊದಲೇ
ಗುಡಿಯಿಂದ ಹೊರಬಿದ್ದಿದ್ದೆ,
ಅಲ್ಲಿಯೇ ಅಂಗಳದಂಚಲ್ಲಿದ್ದಳು ಆ ಮುದುಕಿ.
ಆ ಹೊತ್ತಲ್ಲಿ ಅಲ್ಲಿ ಕೂತವರೆಲ್ಲಾ
ಕೈಯ್ಯೊಡ್ಡುವುದು ಪರಿಪಾಠ,
ಆದರೆ ಅವಳು ಮಾತ್ರ ಕೈ ಮುಚ್ಚಿ
ಸುಮ್ಮನೆ ಕೂತಿದ್ದಳು.
ಏನೋ ಸರಿಯಿಲ್ಲ ಅನಿಸಿತು...

ಮತ್ತೆ ಅವಳನ್ನೇ ದಿಟ್ಟಿಸಿ ನೋಡಿದೆ;
ಪಾಪ, ಆಕೆ ತೂಕಡಿಸುತ್ತಿದ್ದಾಳೆ!
ಬಿಸಿಲಿನ ತಾಪ ತಟ್ಟಿರಬೇಕು,
ಹಸಿವೊ ಜೋರಾಗಿರಬೇಕು,
ಇಲ್ಲವೇ ಬೇಡುವ ಮನಸೇ ಚೂರಾಗಿರಬೇಕು.

ಠಾಕುಠೀಕಿನ ಸೂಟುಬೂಟುಗಳು
ಅವಳನ್ನು ದಾಟಿದವು;
ಆದರೆ ಅವು ಅವಳನ್ನು ನೋಡಲಿಲ್ಲ,
ಅವಳೂ ಅವುಗಳತ್ತ ಕಣ್ಣೆತ್ತಲಿಲ್ಲ,

ನಾನೂ ದೊಡ್ಡ ಜನರಂತೆ ಪರ್ಸು–
ಹೊರಗೆ ತೆಗೆಯಬಹುದಿತ್ತು;

ಆದರೆ ನನಗೆ ಗೊತ್ತು,
ಒಳಗಿರುವುದು ಬರೀ ಒಂದು ಮತ್ತು
ಸೊನ್ನೆಯ ಮೊತ್ತ.
ಅದು ಕೈ ತಪ್ಪಿದರೆ ನಾನು ಮನೆಗೆ
ಮರಳಲಾರೆ!
ನಡೆದು ಹೋಗುವಷ್ಟು ಸನಿಹವಿಲ್ಲ
ನನ್ನ ಮನೆ.

ಆದರೂ ಅವಳು ಕುಳಿತಲ್ಲಿಂದ
ದಾಟಿ ಕಾಲು ಹೋಗದು.
ಪರ್ಸು ಹೊರತೆಗೆದೆ, ಹತ್ತರ ನೋಟು
ಕೈಯಲ್ಲಿ ಹಿಡಿದೆ.
ಏನೋ ಅನಿಸಿತು, ನೋಟನ್ನು ಮತ್ತೆ ನೋಡಿದೆ;
ಹತ್ತರ ಪಕ್ಕ ಮೋಹನದಾಸ ನಗುತ್ತಿದ್ದ.
ಯಾಕೋ ಗೊತ್ತಿಲ್ಲ,
ಸುತ್ತಲೂ ಎಲ್ಲರೂ ನಕ್ಕಂತಾಯಿತು.
ಇನ್ನೊಬ್ಬರ ನಗು ಬಿಟ್ಟು ಬೇರೇನೂ
ಬೇಕಿಲ್ಲ ಎನಿಸಿತು...

# ವ್ಯಯಿಸಲಿ ಹೇಗಿನ್ನದನು?

❖ **ನರೇಶ್ ಕಾಮತ್**

ಹಗಲಿರುಳು ಕೊಸರಾಡಿ
ಹಸಿವು, ನಿದಿರೆಗಳ ಕಟ್ಟಿ ನೆರೆಹೊರೆ,
ಬಂಧು ಬಾಂಧವ, ಗೆಳೆಯರ ಬಳಗವನೆಲ್ಲ,
ದೂರವಿರಿಸಿ ಕೂಡಿಟ್ಟ ಕಾಸೊಂದಿಷ್ಟಿದೆ.
ವ್ಯಯಿಸಲಿ ಹೇಗಿನ್ನದನು?

ಸುಳ್ಳಾಡಿ, ಲಾಭ ನೋಡಿ,
ಕರುಣೆ ಕನಿಕರಗಳನೆಲ್ಲ ಕೊನೆಗಾಣಿಸಿ,
ದಾನಧರ್ಮಗಳ ಮುಖವನೂ ಕಾಣದೆ,
ಎಲ್ಲ ಮಾರ್ಗಗಳಲ್ಲಿಯೂ,
ಗಳಿಸಿಟ್ಟ ಧನರಾಶಿ ನನ್ನಲ್ಲಿದೆ!
ವ್ಯಯಿಸಲಿ ಹೇಗಿನ್ನದನು?

ಸರಕಾರಗಳೋ ಸುಂಕ ಹೇರುವರಂತೆ,
ಲೆಕ್ಕ ಕೊಡಬೇಕಂತೆ,
ಮೂಲ ತೋರಬೇಕಂತೆ,
ದುಡಿವಾಗಲೂ ತೆರಿಗೆ!
ತೆರುವಾಗಲೂ ತೆರಿಗೆ! ಧನಕನಕ,
ವಸ್ತುವೈಭವಕೆಲ್ಲ ಒಂದಕ್ಕೆರಡು ತೆರಿಗೆ,
ತಿನ್ನುವನ್ನಕ್ಕೂ ತೆರಿಗೆ ಇಡುವಾಗ
ವ್ಯಯಿಸಲಿ ಹೇಗಿನ್ನದನು?

ನನಗಂತೂ ಇವೆಲ್ಲದರ ಗೋಜು
ಬೇಡವಾಗಿದೆ, ಕೃಶವಾದ ಶರೀರಕ್ಕೀಗ
ಕೊಂಚ ಆರೋಗ್ಯಕರ ಆರಾಮ ಬೇಕಿದೆ,
ಕಾಯಿಲೆಗಳ ಹೊತ್ತು ತಿರುಗುವಾಗ
ಸಂಭ್ರಮದಿ ವ್ಯಯಿಸಲಿ ಹೇಗಿನ್ನದನು?

ನಾಳೆಗಳಿಗಿಷ್ಟು ನೆಮ್ಮದಿಯ ನಗು ಬೇಕಿದೆ!
ಕೇಳಿದಷ್ಟು ಕೊಟ್ಟು ನಗುವ ಕೊಳುವ ಮನಸಿದೆ!
ಮಾರುವವರನೇ ಹುಡುಕುತಿರುವೆನಾದರೂ!
ಹಣ ತೆತ್ತು ನನ್ನೊಳಗೇ ಇರುವ
ನಗು–ನೆಮ್ಮದಿಗಳ ಕೊಳಲಾರದಾದಾಗ
ರಾಶಿ ಬಿದ್ದ ನಿರುಪಯುಕ್ತ
ಹಣವ ವ್ಯಯಿಸಲಿ ಏಕಿನ್ನದನು?

# ಮರವಾಗಬಾರದಿತ್ತೇ

❖ **ಲಕ್ಷ್ಮಿ ಕಿಶೋರ್ ಅರಸ್**

ಮಸುಕಿನ ಮಬ್ಬಲೆ ಬರುತ್ತಿದ್ದರು
ಕತ್ತಲಿರುವಂತೆಯೇ ಹರಸುತ್ತಿದ್ದರು
ಬಿದ್ದ ಕಾಯಿ, ಸೌದೆ ಇತ್ಯಾದಿ
ಧಣಿ ಧಾವಿಸುವುದರಲ್ಲಿ ಅದೃಶ್ಯವಾಗುವರು.

ಬೆಳಕು ಹರಿದ ಮೇಲೆ ಬಂದನು ಧಣಿ
ಕಣ್ಣಿಗೆ ಕಂಡವರ ಜನ್ಮ ಜಾಲಾಡಿದ
ಅರುಚಿ–ಕಿರುಚಿ ಕೂಗಾಡಿದ
ಆರ್ಭಟವ ಕೇಳಿ ಮಾಯವಾಗುವರು
ಮತ್ತೆ ಬರುವರು ನಾಳೆ ರವಿಗೂ ಮುಂದೆ.

ತೋಟದ ಸುತ್ತ ಸುತ್ತಾಡಿದನು ಧಣಿ
ಕಾಣಸಿಗಲಿಲ್ಲ ಬಿದ್ದ ಪೋಟು–ಪಿಳ್ಳೆ
ತಲೆಯೆತ್ತಿ ನೋಡಿದ ಕಲ್ಪವೃಕ್ಷವ
ಹಣ್ಣಾಗಿದೆ ಗೊನೆ–ಗೊನೆ ಎಂದು ಹಲ್ಲುಕಡಿದ.

ಹೇಳಿಯಾಯಿತು ಒಂದು ವಾರ
ಯಾರು ಬರಲಿಲ್ಲವೆ ಗೊನೆಕಾರ
ಮರಹತ್ತಲು ಕಾಲು ಕಟ್ಟುವಾಗಾಯ್ತು
ಹಿಂದೆ ಹೀಗಿರಲಿಲ್ಲ ಆಧುನಿಕತೆ ಬೆಳೆದು
ಮರಹತ್ತಲು ಬಂತು ಎರಡು ಕಾಲಿಗೂ ಯಂತ್ರ.

ಮುಸುಕಿನ ಮಬ್ಬಲ್ಲಿ ಮತ್ತೆ ಬಂದರೂ ಮಂದಿ
ಅಂದು ಕಾದಿದ್ದ ಗೌಡ ಬೇಗ ಬಂದಿ
ಕೈಗೆ ಸಿಕ್ಕ ಹೆಂಗಸನ್ನು ಥಳಿಸಿಯೇ ಬಿಟ್ಟ
ನೊಂದ ಮಹಿಳೆ ನಡೆದಳು ಗೂಡಿನತ್ತ
ಏನು ಮಾಡುವುದು ಜಮೀನಿಲ್ಲ ಸೂಜಿ ಗಾತ್ರ.

ಗೌಡರ ಮನೆಯಲ್ಲಿ ಬೇಯುವುದು ರುಚಿ–ರುಚಿ
ಮಂದಿ ಜೋಪಡಿಯಲ್ಲಿ ಗಂಜಿಯೇ ಗತಿ
ಗೌಡರಿಗೆ ಜಮೀನು ಊರತುಂಬಾ
ಮಂದಿಗಿಲ್ಲ ಬೆಂಕಿಪೊಟ್ಟಣದಷ್ಟು ಜಾಗ
ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದಕ್ಕೆ ಸುಣ್ಣ.

ಗೋದಾಮಿನಲ್ಲಿ ತುಂಬಿದೆ ಲೋಡು ಕಾಯಿ
ಮಂದಿಯ ಮನೆಯಲ್ಲಿ ಸಾರಿಗಿಲ್ಲ
ಒಡೆವರು ದೇವರಿಗೆ ಸಂಖ್ಯೆಯಷ್ಟು
ನಿಂತಿಹರು ಆಯ್ದುಕೊಳ್ಳಲು ಚೂರಿನಷ್ಟು
ಮಂದಿಗನಿಸಿತ್ತು ನಾವು ಮರವಾಗಬಾರದಿತ್ತೆ..

# ವಿಧಿಯಾಟವಿತ್ತ ಹಣೆಪಟ್ಟಿ

❖ ರಾಜೇಶ್ವರಿ ರಾಜೇಂದ್ರ ಹೊನ್ನಾವರ

ಅವಸರವೇನಿತ್ತು ವಿಧಿಯೆಂಬ ಮಾಯೆಗೆ
ಇಹಪರದ ಗೊಡವೆಗಳಿಗೆ ವಿದಾಯವನು
ಹೇಳಬೇಕೆಂಬ ಆದೇಶವನು ಹೊರಡಿಸಿತ್ತು
ಗರ್ಭವನು ಸೀಳಿದೊಂದು ಕುಡಿಯಾಗ
ಹೆಬ್ಬೆರಳನು ಚೀಪಿಕೊಳ್ಳುತ್ತ ಎದೆಗಾತು
ಮಲಗಿದಾಗ ಒಬ್ಬಂಟಿಯೆಂದರೆ ತಪ್ಪಾದೀತು

ಖಾಲಿತನದ ನೊಸಲಿಗೆ ಜೋತು ಬಿದ್ದಿದ್ದ
ರೇಖೆಗಳೆಲ್ಲ ನಾಳಿನದೆಂಬ ಚಿಂತೆಯಲ್ಲಿ
ಜೀಕುತ್ತಿರುವಾಗ ಹಸುಗೂಸಿನ ಎದೆಬಡಿತವೇ
ನನ್ನೆಚ್ಚರಿಸಿ ಸಂತೈಸುವಂತೆ ತೋರುತ್ತಿತ್ತು
ಹೀನಳಂತಲ್ಲ ನತದೃಷ್ಟೆಯ ಕರಗಳಲೀಗ
ಬಿಗಿದಪ್ಪುತ ಮುದ್ದಿಸುವಷ್ಟು ತ್ರಾಣವಿಲ್ಲ

ಕತ್ತಲಡರಿದ ಪಡಸಾಲೆಯ ಮೂಲೆಯಲಿ
ಗೋಡೆಗಾತವಳ ಜರ್ಜರಿತ ಮನಸಿಗೆ
ವಿಧವೆಯೆಂಬ ಹಣೆಪಟ್ಟಿ ಅರಗಿಸಲಾಗದು
ಮಾಸಿಲ್ಲದ ಯೌವ್ವನಕೆ ಆಸೆಗಣ್ಣುಗಳೆಷ್ಟೋ
ಬೆಳಕಿಂಡಿಯ ಹಿಂಬಾಲಿಸುತಿಹ ಕರಿನೆರಳ
ಸುಳಿದಾಟಕೀಗ ನರನಾಡಿಗಳು ಬೆಚ್ಚುತ್ತಿವೆ

ಒಸಗೆಯೆಂಬ ನೆಪಕಾದರೂ ಹೆಂಗೆಳೆಯರ
ನಡುವೊಂದಾಗಿ ನಲಿಯಲಾರದ ಪರಕೀಯಳು
ಸುಮಂಗಲಿಯ ಕುರುಹನೆಲ್ಲ ನಿನ್ನೊಡನೆಯೇ
ಹೊತ್ತೊಯ್ದಿರುವಾಗ ಘಲಿರೆಂಬ ನಾದಕೂ
ಕಂಪಡುರುವ ಸಿರಿಮಲ್ಲೆಗೂ ಮರುಳಾದರೆ
ಒಪ್ಪುವಿಯೇನು ಬಯಸಲಿನ್ನೇನ ನಾನರಿಯೆನು

ಕನವರಿಸಿದ ಭವಥಾನದ ಬೆಳಕಿಗಿಷ್ಟು
ಕೊನರಾಗುತ ಹಂಬಾಗುವೆನು ನೆನಪೆಂಬ
ಬುತ್ತಿಯನ್ನಷ್ಟೇ ಬಳುವಳಿಯಾಗಿ ನೀನುಳಿಸಿ
ಮರೆಯಾದೆಯಲ್ಲ ತೈಲವನೆಚ್ಚಿ ದೀವಟಿಗೆಯು
ಬೆಳಗುವಂತೆ ಉರಿದುರಿದು ಕರಗಿದರೂ
ಮಂದಸ್ಮಿತೆ ನಾನಾಗುತ್ತಲೇ ಗೆಲುವಾಗುವೆನು

# ಅಕ್ಕಯ್ಯಾ

**❖ ಜಯಲಕ್ಷ್ಮೀ ಕೋಳಗುಂದ**

ಜಗದ ಗಂಡರನೆಲ್ಲ
ನೀ ನೀರೊಲೆಯೊಳಗಿಕ್ಕೆಂದೆ
ನನಗೆ ಈ ಜಗದ ಗಂಡನೇ
ಚನ್ನಮಲ್ಲನಂತೆ ತೋರುತ್ತಾನೆ.

ಜಂಜಡಗಳೊಳಗೆ ಜಡವಾದ
ಮನಮಂದಿರದೊಳಗೆ
ಸದ್ದಿಲ್ಲದೆ ಉರಿದು ಬೆಳಗುತ್ತಾನೆ
ಹೊಸಬೆಳಕ ಮೂಡಿಸುತ್ತಾನೆ.

ಬದುಕ ಶೈಲಗಳನೇರಿಳಿಯುವಾಗೆಲ್ಲಾ
ಅವನೊಂದು ಕೈಯನ್ನು ಅನವರತ
ನನ್ನೆಡೆಗೇ ಚಾಚಿರುತ್ತಾನೆ.
ಅಕ್ಷಿಗಳ ರಕ್ಷೆಗಾಗಿ ಮುಡಿಪಿಟ್ಟಿರುತ್ತಾನೆ..

ಒಡಲಾಳದ ಗಿರಿ ಗಹ್ವರಗಳೊಳಗೆ
ಅವನ ಒಲವಿನ ಪಿಸುದನಿಯೇ
ಕಿವಿಗಳಿಗೆ ಆನಂದಮಯವಾಗಿ
ಓಂಕಾರದಂತೆ ಗುಂಗಿಡುತ್ತದೆ....

ಕದಳಿವನದೊಳಗಣ ಕದಳಿಯದಿಂಡಂತೆ
ನನ್ನವನ ಮನ ನವಿರು ನವಿರು
ಅದರೊಳಗೇ ಲೀನವಾಗಲಿ
ನನ್ನೀ ಕೊನೆಯುಸಿರು...

# ಕುಲಗಳು

**❖ ಲಕ್ಷ್ಮೀಪುರ ಜಿ ಶ್ರೀನಿವಾಸ**

ಮಂಗನಿಂದ ಮನುಜನೆಂದರು, ಬ್ರಹ್ಮಸೃಷ್ಠಿಯೆಂದರು,
ಅಗೋಚರ ಶಕ್ತಿ ಪ್ರಭಾವವೆಂದರು, ಶತಕೋಟಿ
ಜೀವರಾಶಿಗಳಲ್ಲಿ ಮನುಜನೊಬ್ಬನೆಂದರು,
ಆಶ್ಚರ್ಯ ವಿಸ್ಮಯಗಳ ಪ್ರತೀಕ ಈ ಪ್ರಕೃತಿಯ
ನಿಸರ್ಗದಲ್ಲಿ ಮಾನವನ ಜನುಮ ರಹಸ್ಯ ನಿಗೂಢ

ಸನಾತನ ಖ್ಯಾತಿವೆತ್ತ ಧರ್ಮವು ಮನುಜರನು
ನಾಲ್ಕು ವರ್ಣಗಳಾಗಿಸಿದರೆ; ವಿವಿಧ ಧರ್ಮಗಳು
ಪಂಗಡಗಳನ್ನಾಗಿಸಿತು.
ಪಂಗಡ ವರ್ಣಗಳು ಛಿದ್ರ ಛಿದ್ರವಾಗಿಸಿ
ವರ್ಣಕ್ಕೊಂದು ಜಾತಿ , ಆ ಜಾತಿಗೊಂದು ಉಪಜಾತಿ,
ಉಪಜಾತಿಗೊಂದು ಕುಲವಾಗಿ, ಕುಲಕ್ಕೊಂದು
ಕಸುಬಾಗಿ, ಕಸುಬಿಗೊಂದು ಕುಲವಾಗಿ
ಈ ನೆಲದಲಿ ಬೆಳೆದು ಬೀಗುತ್ತಿದೆ

ಕಪ್ಪು ಜನರ ಕಣ್ಣೀರ, ಬಿಳಿಯ ಜನರ ಬೆವರ
ಶೋಧಿಸುವ ಕುಲಗಳು,
ಗ್ರಾಮವಾಸಿಗಳಿಗೆ ನಗರವಾಸಿಗಳ ನಾಗರಿಕತೆಗೆ
ಹೆದರಿದ ಕಾನನವಾಸಿಯೆಂಬ ಕುಲಗಳು,
ಧರ್ಮದೇವರಾರಾಧನೆ ಬಹುವಿಧವಾದರೆ!
ಭಾಷೆಗಳೆಂಬ ಮಾತೃನುಡಿಗಳ ಗೊಂದಲದಲಿ
ಭಾಷೆಯೆಂಬ ಹಿರಿಮೆಯ ಕುಲಗಳು,

ಧನಿಕ ಬಡವನ ತಾರತಮ್ಯದ ನಡುವೆ
ಬಲದುರ್ಬಲ, ಜ್ಞಾನಿಮೂಢರೆಂಬ
ಕೀಳರಿಮೆಗಳ ಕುಲಗಳು

ಪುರುಷನ ಪೌರುಷ ಸ್ತ್ರೀಯ ಸೊಗಸಿನ ನಡುವೆ
ನಪುಂಸಕರೆಂಬ ವಿರಹನೋವಿನ ಕುಲಗಳು,
ಬಿಸಿಲಿಲ್ಲದ ನೆಲವಿದ್ದರೂ! ಕುಲವಿಲ್ಲದ
ನೆಲವಿಲ್ಲದಾಗಿದೆ ಈ ವಿಶ್ವ

# ಮಾಯಾಮೃಗ

**❖ ವೇಣು ಜಾಲಿಬೆಂಚಿ**

ಈ ಮೊದಲು
ಒಂದು ರಾತ್ರಿ ಕಳೆದರೆ
ಸಾವಿರ ರಾತ್ರಿ ಸರಿದವೆಂದು
ಮುಸುಗು ಹೊದ್ದು ಮಲಗುತಿದ್ದೆವು

ಆದರೀಗ ಒಂದೊಂದು ರಾತ್ರಿಯೂ
ಸಾವಿರ ರಾತ್ರಿಗಳಾಗಿ
ದಿನ ದಿನವೂ ಮುಸುಗು ಹೊದ್ದು
ಮಲಗಲಾಗದೆ ನಿದ್ದೆಗೆಡುತ್ತಿದ್ದೇವೆ

ಅಪ್ಪಿ ತಪ್ಪಿ ಕನಸೂ ನಾವಿರುವ
ಮನೆಯ ಹಾದಿಬದಿ ಸುಳಿಯುವುದಿಲ್ಲ
ಎಕರೆಗಟ್ಟಲೆ ಹಸಿವು ಅವಮಾನಗಳನ್ನು ಉಂಡು
ನೆಮ್ಮದಿಯ ನಿಟ್ಟುಸಿರುಗಾಗಿ ಹಪಹಪಿಸುತ್ತಿದ್ದೇವೆ
ನಮ್ಮ ಓಣಿಗೆ ಬರುವ ಜಾಡಮಾಲಿ
ಅದೇ ಚಪ್ಪಲಿ, ಅದೇ ಬಟ್ಟೆ ಅದೇ ಗತ್ತಿನಲಿ
ಕಸಗುಡಿಸಿ ಹೋಗುತ್ತಾನೆ
ಅವನ ಹಿಂದೆಯೇ
ಮತ್ತೆ ಧೂಳೆಬ್ಬಿಸಿಕೊಂಡು ಬರುವ ರಾಶಿ ರಾಶಿ ಕೊಳೆ ಕಿಸಕ್ಕನೆ ನಕ್ಕು
ಎಲ್ಲರನೂ ಎಲ್ಲವನೂ ತಬ್ಬಿಕೊಳ್ಳುತ್ತದೆ

ಮಹಾಮಾಯೆಗೆ ಬಿದ್ದ ನಾವು
ಎಲ್ಲರೊಂದಿಗೆ ಮಗುವಾಗಿಯೇ
ಹೋಗಬೇಕಾಗಿದೆ
ಪೂರ್ವ ಪಶ್ಚಿಮ ಎಂದರೂ ಸರಿ
ಕತ್ತೆ ಕುದುರೆಯಾಗಿದೆ ಎಂದರು
ಸರಿ ಅನ್ನಬೇಕಾಗಿದೆ

ನಮಗೆ ಬೇಜಾರಾಗುವ ವಿಷಯಗಳು
ನೂರೆಂಟು ಇರಬಹುದು
ಆದರೂ ಸರಿ ನಿಮ್ಮ ಮನಸಿಗೆ
ಸಮಾಧಾನ ತರುವ ಆಪ್ತಮಿತ್ರ
ಒಬ್ಬ ಇದ್ದರೆ ಸಾಕು
ಅಲ್ಲಿ ವೇದಿಕೆ ನಿಮ್ಮದೇ

ಮಾಯಾಮೃಗ ಬೆನ್ನು ಹತ್ತಿದೆ
ಕಣ್ತೆರೆದ ಕ್ಷಣದಿಂದಲೆ
ನಗು ಬರದಿದ್ದರೂ ನಗಬೇಕು ಅಳು ಬಂದರೂ ನುಂಗಬೇಕು
ಪರೀಕ್ಷೆಯಲಿ ಪಾಸಾದರೂ ಸರಿ
ಫೇಲಾದರೂ ಸರಿ

# ನಿನ್ನ ಕೇರಿ ಯಾವುದು?

❖ **ಪ್ರತುಮ್ ಸಾಗರ್**

ನಾ ಕೇಳಿಸಿಕೊಂಡ ಪದ ನಿನ್ನ ಕೇರಿ ಯಾವುದು

ಅಂದು ನಾ ಹಾಡಿ ಬೆಳೆದ ಓಣಿ
ಅಂದು ನಾ ಕೂಡಿ ಬೆಳೆದ ಜನರು!!
ಇಂದು ಕೇಳುವರು ನಿನ್ನ ಕೇರಿ ಯಾವುದು

ನಾ ಹೊಲಿದು ಎಣೆದ ನಿನ್ನ ಪಾದದ ಎಕ್ಕಡ
ನನ್ನ ಜೀವ ಸವೆಸಿ ನಿನ್ನ ಪಾದ ಉಳಿಸಿದೆ!!
ನಾ ಹೆಣೆದ ನೇಯ್ಗೆಯು ನಿನ್ನ ಮನೆಯ ಚಾಪೆಯಾಗಿದೆ
ನಿನ್ನ ಸುಖ ನೆಮ್ಮದಿಯಲ್ಲಿ ಮಲಗಿಸಿದೆ.

ಇಲ್ಲೂ ಕೇಳುವರು ನಿನ್ನ ಕೇರಿ ಯಾವುದು

ನಿನ್ನ ಮನೆಯ ಹೊಲದ ನೆಲವನೆಲ್ಲ ಹದವ ಮಾಡಿದೆ!!
ನಾ ಭಿತ್ತಿ ಬೆಳೆದ ಕಾಳು ತಂದು ನಿಂಗೇ ಕೂಳು ಹಾಕಿದೆ
ನನ್ನ ಬೆವರ ಹನಿಯ ಋಣವ ತಿಂದು ನನ್ನ ಕೇರಿ ಕೇಳಿದೆ

ಇಲ್ಲೂ ಕೇಳುವರು ನಿನ್ನ ಕೇರಿ ಯಾವುದು

ನಿನ್ನಾ ಮನೆಯ ಮಲವ ಹೊತ್ತು ಸಾಗಿದೆ
ದನಗಾಹಿಯಾದೆ!!
ನಿನ್ನ ಮನದ ಮಲವ ಸ್ವಚ್ಛ ಮಾಡಲಾಗದೆ
ನಾ ಮೂಕನಾದೇ

ಆದರೂ ಕೇಳುವರು ನಿನ್ನ ಕೇರಿ ಯಾವುದು

# ಅವಳು ಸಾಕ್ಷಿಯಾಗಿದ್ದಾಳೆ

❖ **ರವಿಕುಮಾರ ಜಾಧವ**

ಆ ನೀಲಿ ಬಾನಿನ ಸಾಗರದಡಿಯಲ್ಲಿ
ರಭಸವಾಗಿಯೇ ಚಲಿಸುತಿಹ ಮಧುರ ಸದ್ದು
ಗಿಡ ಮರಗಳಿಗೂ ಹಿತವಾಗಿ, ಮಿತವಾಗಿ ಕಾಡಿ
ಸಪ್ತ ಹೆಜ್ಜೆಗಳನ್ನು ಇಡುತ್ತಿರುವ ನೈದಿಲೆಯ ನಾಡಿ

ಮರಳು ಮಣ್ಣಿನಲ್ಲಿ ನವಿಲಿನಂತೆ ನಡೆದು
ಕೇಶ ರಾಶಿಗಳಲ್ಲಿ ನಾಚಿಸುವಂತೆ ಬರಸೆಳೆದು
ನಗುವಿನ ಮತ್ತಲ್ಲೆ ಮತ್ತೇರಿಸುವ ಕಾವ್ಯದಲೆ
ಸಾಗರದ ಅಲೆಗಳ ಸ್ಪರ್ಶಕ್ಕೆ ನಾಚಿ ನೀರಾಗಿ

ತುಟಿಗಳು ಅಲೆಗಳ ಪ್ರೀತಿಗೆ ಸಾಕ್ಷಿಯಾಗಿ
ಹೆಜ್ಜೆ ಮೇಲೊಂದು ಹೆಜ್ಜೆ ಹೃದಯಕ್ಕೆ ತಾಕಿ
ನವಿಲಿನಂತ ನಡುಗೆಗೆ ನಡು ನಾಚಿಸಿದ ಸಾಖೀ
ಅಳಿದುಳಿದ ಹೆಜ್ಜೆ ಗುರುತುಗಳಿಗೆ ತಲೆ ಬಾಗಿ

ಸಾಗರದ ಅಲೆಗಳು ಅವಳನ್ನು ಸೋಕಿವೆ
ಸೋಕಿರುವ ಅಲೆಗಳು ಅವಳನ್ನು ಸ್ಪರ್ಶಿಸಿವೆ
ಅವಳೊಂದಿಗೆ ಬೆರೆತು ನಕ್ಕು ನಲಿದು ಬೆರೆತಿವೆ
ಬೆರೆತ ಅಲೆಗಳ ಸೊಕ್ಕಿನ ಇಣುಕು ಕಾಡಿಸಿವೆ

ಕಾಡಿಸಿದ ಅವಳಂದ ಚೆಂದವನ್ನೆಲ್ಲ ಬಿಗಿ ಹಿಡಿದು
ಮರಳನ್ನು ಮರಳು ಮಾಡುವ ಸೊಕ್ಕು
ಅವಳಂದವನ್ನು ಹೆಚ್ಚಿಸಿ, ಮೈಮರೆಸುವ ಚಂದಕ್ಕೂ
ಅವಳು, ಕಡಲರಾಣಿಯಂತೆ ಸಾಕ್ಷಿಯಾಗಿದ್ದಾಳೆ.

# ಗುರುವಲ್ಲವೇ...?

❖ ಆರ್.ಪಿ.ಮಂಜುನಾಥ್ ಬಿ.ಜಿ.ದಿನ್ನೆ, ಬಳ್ಳಾರಿ

ಗಾಳಿ ಮಳೆಯು ಸೋಕದ
ವ್ಯಾಜ್ಯ ವ್ಯಾದಿ ತಾಕದ
ದೇವಾದಿಗಳಿದ್ದ ಜಾಗದಿ
ನವಮಾಸದಿ ಹೊತ್ತು ಪೊರೆದ
ಹಸಿದು ಬಸಿದು ಬಳಲಿದಾಗ
ನಡೆ ನುಡಿಯಲಿ ಎಡವಿದಾಗ
ಇಡೀ ಲೋಕವೇ ಜರಿಯುವಾಗ
ಎತ್ತಿ ಅಪ್ಪಿ ಮುತ್ತಿಕ್ಕಿ ತಿದ್ದಿದಾಕೆ
ನನ್ನಮ್ಮ ನನ್ನ ಗುರುವಲ್ಲವೇ?

ಊಟ ನಿದ್ದೆ ಬಿಟ್ಟು
ಸಂಸಾರದ ಭಾರ ಹೊತ್ತು
ಹಗಲಿರುಳು ದುಡಿದು
ನನಗಾಗಿಯೇ ಮಡಿದು
ನನ್ನಿಂದಲೇ ನನಗೆ ಕಾಯ್ಕ
ಹೇಳಿಕೊಟ್ಟ ನನ್ನಪ್ಪ
ನನ್ನ ಮಾದರಿ ಗುರುವಲ್ಲವೇ..?

ಲೋಕದರಿವು ಅರಿಯುವಾಗ
ತಿಳಿದು ತಿಳಿದೆ ನಡೆಯುವಾಗ
ಅಕ್ಕರೆಯಲಿ ಬಳಿಗೆ ಕರೆದು
ಸಕ್ಕರೆಯಲಿ ಕಿವಿಯ ಹಿಂಡಿ

ಬಾಳ ಪಾಠ ಬೋಧಿಸಿದ
ಒಡನಾಟದ ಒಡನಾಡಿ
ಗುರುವಲ್ಲವೇ...?

ನೀನೆ ಎನಗೆ ಗತಿಯು ಮತಿಯು
ಒಲುಮೆ ಭಾವದಿ ಮನೆಗೆ ಬಂದು
ಎಲ್ಲ ತೊರೆದು ಮನದಿ ನಿಂದು
ನನ್ನೊಳಗೆ ತಾನಾಗಿ
ಒಲವಿನ ಬೆಳಕಾಗಿ
ಮೌನ ನುಡಿಯಲಿ ನಡೆಯ ಕಂಡ
ಮಡದಿಯೋರ್ವ ಗುರುವಲ್ಲವೇ..?

ಅರಿವಿನ ಮರಿಯಾಗಿ
ಮರಿಯು ತಾ ಗುರುವಾಗಿ
ಇಡೀ ನಾಡ ಪ್ರಭುವಾಗಿ
ಮನವಾಳ್ವ ದೊರೆಯಾಗಿ
ಸದಾ ಹೀಗೆ ಇರಲೆನ್ನ ಜೊತೆಯಾಗಿ
ಕಾಯುತ ನೆರಳಾಗಿ..
ಮರವಾಗೋ ಮರವಾಗಿ.

# ದಸರೆಗೆ ಮಳೆ

❖ **ನಾಗೇಂದ್ರ ಹೆಬ್ಬಾರ್**

ದಸರೆಯ ಬೆಳ್ಳಂಬೆಳಿಗ್ಗೆ ಆಚರಣೆಗೆ ಎಲ್ಲವು ಸಿದ್ಧ
ಹಳೆಯ ಗೋಡೆಗಳಿಗೆ ಹೊಸ ಸುಣ್ಣ ಬಣ್ಣ
ಊರಿನ ಆನೆಗಳ ಜೊತೆ ಕಾಡಾನೆಗಳೂ ಕೂಡಿ
ಸಿಂಹಾಸನದ ತುಂಡುಗಳ ಮತ್ತೆ ಜೋಡಿಸಿ
ಹಳೆಯ ದೀಪಕ್ಕೆ ಹೊಸ ಬತ್ತಿಯ ಹಚ್ಚುವ
ನಾಟಕ ನಡೆಸುತ್ತಿರುವಾಗ
ಇದ್ದಕ್ಕಿದ್ದಂತೆ ಮೋಡ ಮುಸುಕಿ
ಎಲ್ಲ ಮನೆ,ಮನ ,ರಸ್ತೆಗಳ ತೊಳೆಯಲು
ಎಲ್ಲೋ ಹೊಡೆದ ಬಾಣ ಗುರಿಯ ಭೇದಿಸುವಂತೆ
ಹನಿಗಳು ಉದುರಿದವು ನೆಲದ ಮೇಲೆ

ಈಗ ಅದೇ ಅಜ್ಜನೆಟ್ಟಾಲ ಚಿಗುರುತ್ತಿದೆ
ಹಳೆಯ ದರ್ಬಾರು ವಂದಿ ಮಾಗಧರ ಘೋಷಣೆ
ಜನ ಮರೆತಿದ್ದಾರೆ, ಹಳೆಯ ಶೋಷಣೆ ಎಂದು
ಎರಡು ತಲೆಯ ಹಾವುಗಳೆಲ್ಲ ಎದ್ದು
ಓಡಾಡಿ ಗದ್ದಲ ಎಬ್ಬಿಸಿರುವಾಗ
ತಮ್ಮ ಹೃದಯಗಳ ಅಡವಿಟ್ಟ ಜನ
ಬರಿ ಕೊರಳಲ್ಲಿ ಹಾಡುತ್ತ ದಣಿಯುತ್ತಿರಲು
ಕಳೆದ ಆ ನಗುವ, ನೆಮ್ಮದಿಯ
ಹುಡುಕುವ ಅವಸರದಲ್ಲಿ ಜಾರಿ ಬಿದ್ದವು
ಹನಿಗಳು ಒಂದಾದ ಮೇಲೆ ಒಂದು

ಅಂದಿನ ಅರಸರ ದಸರೆಯ ನೆನಪಲ್ಲಿ
ಹನಿಗಳೆರಡ ಮುಗಿಲು ಸುರಿಸಿತ್ತು
ಆ ಹನಿಯಲ್ಲೆ ಮೆರವಣಿಗೆಯ ಹಾದಿಗೆ
ಹೂ ಚೆಲ್ಲಿದ ನಗುವೂ ಇತ್ತು, ಮತ್ತೊಂದು
ದಸರೆ ಕಳೆಯುತ್ತಿರುವ ನೋವೂ ಇತ್ತು
ಮತ್ತದೇ ಸ್ಥಿತಪ್ರಜ್ಞಸಿದ್ದನ ತರಹ
ಮುಂದಿನ ದಸರೆಗಾಗಿ
ಹನಿಗಳೆರಡ ಉಳಿಸಿಕೊಂಡೇ
ಮಳೆಯ ನೀರು ಭುವಿಯ ತೋಯ್ದಿತ್ತು

# ಭಯ ಮುಕ್ತಿ

❖ ಡಾ॥ ಎಂ ಆರ್ ಕುಲಕರ್ಣಿ

ಕಾರ್ಮೋಡ ಕವಿಯುವ ಭಯ ಕಾಯೆ
ಅವು ಬಿತ್ತರಿಸೆ ನೋಡಾ ಬಣ್ಣಗಳ ಛಾಯೆ
ಕ್ಷಣವ ಕರಗಿಸುವ ಕಣ ಇದು ಮಾಯೆ
ಮನ ಪಟಲಕು ತೋರಲಿಹ ಹೊಸ ಪರ್ವ

ಇಂದು ಕೊನೆ ನಿನ್ನದೆನ ಬೇಡ ಮರುಳ
ಬಂದಿತೇ ನಾಳೆ ಒಂದು ಹೊಸ ಶಂಕೆ ಆತಂಕ ಸುಳ್ಳಲ್ಲ
ಆದರೂ ಈ ಚಣ ನೀನು ಪೂರ್ಣ ಬದುಕಾಗು
ಬೆಳೆದು ಎತ್ತರ ಸುತ್ತ ಇರುವರ ಭವ್ಯ ಬೆಳಕಾಗು

ಅವನಿರುವ ವನದಲ್ಲಿ ನೀನಾಗು ಭರವಸೆಯ ಸುಮ
ನಗುತಿರಲು ಹಂಚು ಪಡೆದ ಸಂತೋಷ ಸರ್ವರಲ್ಲಿ ಸಮ
ಜಗವೇ ದುಃಖ ದೂಷಣೆಗಳ ಕರಾಳ ಸಂತೆ
ಇದಕ್ಕೆಲ್ಲ ಕಾರಣ ನಮಗಿರುವ ಸ್ವಂತ ನಂಬಿಕೆಯ ಅತಿ ಕೊರತೆ

ನಿನ್ನಲ್ಲಿ ಆ ಕೃಷಿ ಶಿವ ನೆಲೆಸಿರುವ ಸಂಕೇತ
ಅವನ ಯೋಚನೆಯಲ್ಲಿ ಕಾಣುವುದು ನವ ದಿಗಂತ
ಪಣತೊಟ್ಟು ನಡೆ ಪಡೆ ಜೀವ ನಿರ್ಭೀತ
ಪರರಲ್ಲಿ ಜೀವಿಸುವವ ಕಾಣುವಧು ಚಿರ ವಸಂತ

# ಅಮಲಿನ ಪ್ರಭುತ್ವ

**❖ ಸಿ.ಎಂ. ಕ್ರಾಂತಿಸಿಂಹ**

ಪ್ರಭುತ್ವ ಹೊಗಳುತ್ತದೆ, ಯಾವಾಗಲೂ
ಉಸಿರಿಲ್ಲದ ಮಸಣದ ಹಾದಿಯನ್ನು
ತ್ಯಾಗ, ಬಲಿದಾನ, ಹುತಾತ್ಮ ಎಂಬ
ವರ್ಣರಂಜಿತ ಶಬ್ದಭಂಡಾರದಿಂದ
ಸಿಂಗರಿಸಿ, ಮೇರೆ ಮೇರೆಸಿ
ಮಣ್ಣಾಗಿಸಿ,ಒಳಗೆ ಸುಖಿಸುತ್ತದೆ,
ಸಂಭ್ರಮಿಸುತ್ತದೆ,ಮುಖವಾಡದ
ನೀಚಾತಿನೀಚ ವಂಚಕ ಆತ್ಮ..!

ಶತ ಶತಮಾನದ ಚರಿತ್ರೆಯಲ್ಲಿ
ಮೊದಲು ತನ್ನವರನ್ನು ಬಲಿ ಕೊಡಲಿಲ್ಲ
ರಣಕಂಬದ ರಣಮಾರಿಗೆ,
ಭಕ್ತ, ಪ್ರೇಮಿ, ಸಂರಕ್ಷಕಾ
ಅದೆಷ್ಟು ಗೊಸುಂಬೆಯ ಪಾನಗೋಷ್ಠಿ!
ಬಿಸಿ ನೆತ್ತರಿನ ಸಾಗರದೊಳಗೆ
ಆ ಅಮಲಿನಲ್ಲಿ ತೇಲಿಸಿ...ತೇಲಿಸಿ..
ಚಿರನಿದ್ರೆಗೆ ಸದ್ದಿಲ್ಲದೆ ಜಾರಿಸಿದ್ದಾರೆ...

ವಿಧವೆಯರಾದ ಸಹೋದರಿಯರ ಲೆಕ್ಕವಿಲ್ಲ
ತಬ್ಬಲಿಯಾದ ಮಕ್ಕಳ ಎಣಿಕೆಯಿಲ್ಲ,
ಆದರು ಸದಾ ಚಿಮ್ಮುತ್ತದೆ ಬಿಸಿನೀರಿನ
ಬುಗ್ಗೆಯಾಗಿ ಒಳಗೊಳಗೆ ಅಂಧಾಭಿಮಾನ.

ಬೆಳಕಿನಲ್ಲಿ ಬೆತ್ತಲಾದರು ಕಾಣುತ್ತಿಲ್ಲ ಸತ್ಯ,
ಕಗ್ಗತ್ತಲಿನಲ್ಲಿ ಹುಡುಕುತಿದ್ದಾರೆ ಅದೇನೊ ನಿತ್ಯ,
ಅಂಧರನ್ನು ಅನುಸರಿಸಿ ಚಪ್ಪಾಳೆ ತಟ್ಟಿ
ಬೆಂಬಲಿಸಿ ಹೊರಟಿವೆ ಇರುವೆ ಸಾಲು...
ನೋಡಿ ನಗುತ್ತಿವೆ ನರಿಗಳ ಹಿಂಡು
ಆಡಳಿತಗಾರರ ಅಮಲ ಕಂಡು!

ಎಲ್ಲಾ ರೀತಿಯ ಜ್ಞಾನದ ಆರಂಭ ಮತ್ತು ಅಂತ್ಯವೇ ಕಾವ್ಯ; ಅದು ಮನುಷ್ಯನ ಹೃದಯದಂತೆ ಅಮರವಾಗಿರುತ್ತದೆ.

**– ವಿಲಿಯಮ್ ವರ್ಡ್ಸ್‌ವರ್ತ್**

# ಅನುಸಂಧಾನ–೫

# ಹೊಸತಲೆಮಾರಿನ ದಿಟ್ಟತನವನ್ನು ಬಿಂಬಿಸುವ ಕವಿತೆಗಳು

❖ **ಶ್ರೀದೇವಿ ಕೆರೆಮನೆ**

ಸಂಗನಗೌಡ ಹಿರೇಗೌಡ ಬರೆದಿರುವ ಸರ್ಪಸುತ್ತು ನಮ್ಮದೇ ಪಾಪ ಪುಣ್ಯಗಳ ಅವಲೋಕನ ಮಾಡುವ ಕವಿತೆ. ನಮ್ಮ ಪಾಪಗಳನ್ನು ಹುಡುಕುತ್ತ, ಪಾಪ–ಪುಣ್ಯಗಳೇನಿದ್ದರೂ ನಮ್ಮ ಕಲ್ಪನೆಗಳಷ್ಟೇ ಎಂದು ಸಮಾಧಾನ ಪಟ್ಟುಕೊಳ್ಳುತ್ತಲೇ ಮತ್ತೆ ಮತ್ತೆ ಜೋತು ಬೀಳುತ್ತೇವೆ– ಹುಲಿಯ ನಖ ಪೋಣಿಸಿದ ಕಾಶಿದಾರವು ಬೆನ್ನು ಚುಚ್ಚಿದಂತೆ. ಇಲ್ಲಿ ನಖ ಎಂಬ ಶಬ್ದವನ್ನು ಬಳಸಿರುವ ಪರಿಯನ್ನು ಗಮನಿಸಬೇಕು. ನಿದ್ದೆಗಣ್ಣಿನ ನಖ ಹಾಗೂ ಜಡಭರಿತ ನಖ ಎಂಬ ಪದಗಳ ಸೃಷ್ಟಿಯನ್ನು ಗಮನಿಸಿದರೆ ಕವಿತೆಯ ಸಶಕ್ತತೆ ಅರ್ಥವಾಗುತ್ತದೆ. ಪಾಪದ ಕೆಲಸ ಮಾಡಿದವರಿಗೆ ಕೆಟ್ಟದಾಗುತ್ತದೆ ಎಂದು ಬಿಂಬಿಸಿರುವ ನಮ್ಮ ಪುರಾಣದ ಕಲ್ಪನೆಗಳ ಬೆನ್ನಹತ್ತಿ ಮಳೆಹುಳುವಿನ ದಾರಿಯನ್ನು ಕೈಬೆರಳಿಂದ ಅಳಿಸಿದ್ದಕ್ಕಾಗಿ ಮೈ ಉರಿ ಎದ್ದಿರಬಹುದೇ ಎಂದು ಯೋಚಿಸುವ, ಸಣ್ಣ ಮಕ್ಕಳು ಮಾಡಿದ ಕೆಟ್ಟ ಕೆಲಸಗಳು ಪಾಪದ ಲೆಕ್ಕಕ್ಕೆ ಸೇರ್ಪಡೆಗೊಳ್ಳುವುದಿಲ್ಲ ಎಂಬ ನಂಬಿಕೆಗಳನ್ನು ಇಲ್ಲಿ ಕಾಣಬಹುದು. ಒಡಲ ಉರಿಗೆ ಕಾರಣ ಹುಡುಕುತ್ತ ಕಿಂಕರವೃತ್ತಿಯನ್ನು ಪ್ರಸ್ತಾಪಿಸುವ ರೀತಿ ನಮ್ಮನ್ನು ಕವಿತೆಯೊಳಗೆ ಮುಳುಗುವಂತೆ ಮಾಡುತ್ತದೆ.

ಕೊಟ್ರೇಶ ಅರಸೀಕೆರೆಯವರ 'ನಡೆಯಬೇಕು ಎಲ್ಲಾ ಮೈ ಚಳಿ ಬಿಟ್ಟು ಕವನ' ಅಧಿಕಾರಶಾಹಿಯ ವಸ್ತ್ರ ಸಂಹಿತೆಯನ್ನು ಧಿಕ್ಕರಿಸಿ ಬರೆದಂತಹ ಕವನ ಎಂದು ಮೇಲ್ನೋಟಕ್ಕೆ ಭಾಸವಾದರೂ ಕವಿತೆಯ ಅಂತರಾಳದಲ್ಲಿ ವಿವಸ್ತ್ರತೆಯ ಮಹತ್ವ ಹೇಳುವಂತಿದೆ.. ವಿವಸ್ತ್ರತೆ ಎಂದರೆ ಬೆತ್ತಲೆಯಲ್ಲ. ಬಟ್ಟೆಯ ವ್ಯಾಮೋಹವನ್ನು ತ್ಯಜಿಸುವುದು. ಅಂದರೆ ಎಲ್ಲ ವ್ಯಾಮೋಹ, ಅವಮಾನಗಳನ್ನು ಮೀರಿ ಎಲ್ಲ ಅವ್ಯವಸ್ಥೆಗಳನ್ನು ತೆರೆದಿಟ್ಟು ಬರಿಮೈಯ್ಯಲ್ಲಿ ಯಾವುದನ್ನೂ ಅಂಟಿಸಿಕೊಳ್ಳದೇ ನಡೆಯುವುದು ಸುಲಭವಲ್ಲ. ಕವಿ ಇಲ್ಲಿ ಸಹಿಷ್ಣುತೆಯ ಕುರಿತು ಹೇಳುತ್ತ ಶಿವ ಮತ್ತು ಶ್ರೀಮನ್ನಾರಾಯಣನ ವಸ್ತ್ರಗಳನ್ನು ಹಾಗೂ ಗಾಂಧಿ ಮತ್ತು ನೆಹರೂರವರ

ಪೋಷಾಕುಗಳನ್ನು ಬದಲಾಯಿಸಿ ಒಬ್ಬರ ಸುಖ ಸಂತೋಷಗಳಷ್ಟೇ ಅಲ್ಲದೇ ದುಃಖ, ನೋವು, ಸಂಕಟ ಹಾಗೂ ಜೀವನಶೈಲಿಯನ್ನು ಮತ್ತೊಬ್ಬರು ಅರಿಯುವುದು ಮುಖ್ಯ ಎಂದು ಹೇಳುವ ರೀತಿ ಆಕರ್ಷಣೀಯವಾಗಿದೆ. ಒಬ್ಬೊಬ್ಬರಿಗೆ ಒಂದೊಂದು ತರಹ ಕಾಣುವ, ಆಚರಿಸುವ ಗಾಂಧೀಜಿಯವರು ಮಹಾಂತೇಶ ಪಾಟೀಲರ ಗಾಂಧಿಗಿಡ ಕವನದಲ್ಲಿ ಹಸಿದ ಆತ್ಮಕ್ಕೆ ಹೊಟ್ಟೆ ತುಂಬಾ ತಿನ್ನಿಸುವ ಗಿಡವಾಗಿದ್ದಾರೆ. ಅಂತಹ ಗಿಡದ ಬೇರಿಗೆ ಗುಂಡಿಕ್ಕಿ, ಆಸಿಡ್ ಎರಚಿ ನಾಶ ಮಾಡಿದ್ದಲ್ಲದೆ ಕೊನೆಗೆ ಆ ಗಾಂಧಿಗಿಡ ಇರುವುದು ಅತಿಕ್ರಮಣದ ಜಾಗದಲ್ಲಿ ಎಂದು ಬುಲ್ಡೋಜರ್ ಹಾಕಿಸಿ, ಈಗ ಪ್ಲಾಸ್ಟಿಕ್ ಗಾಂಧಿಗಿಡವನ್ನು ಶೋಕೇಸಿನಲ್ಲಿಟ್ಟು ನೋಡುವ ಸ್ಥಿತಿ ತಂದುಕೊಂಡ ಸಮಾಜದ ಬಗ್ಗೆ ವ್ಯಂಗ್ಯವಿದೆ. ರತ್ನಾಕರ ಸಿ ಕುನುಗೋಡುರವರ ಸಾಬೀತುಪಡಿಸುವೆ. ಮುಖವಾಡಗಳ ಕಳಚುವುದಕ್ಕಾಗಿ, ಗಮ್ಯ ತಲುಪುವುದಕ್ಕಾಗಿ, ನಿತ್ಯ ಬಲಿಗಳ ತಪ್ಪಿಸಲು ತಾಳ್ಮೆಯನ್ನು ಪಣಕ್ಕಿಟ್ಟು ಮುಂದುವರೆಯುವ ನಿರ್ಧಾರ ತೋರುವುದು ಹಾಗೂ ಎಂ.ಈ. ಶಿವಕುಮಾರ ಹೊನ್ನಾಳಿಯವರ ಕವಿತೆಯೊಳಗಿನವರು ಕವಿತೆ ಹೇಗಿರಬೇಕೆಂದು ಹುಡುಕುತ್ತ ಹೋಗುವುದು ಎರಡೂ ಕುತೂಹಲ ಹುಟ್ಟಿಸುತ್ತದೆ.

**ಒಡಲೊಳಗಿನ ಸಾವಿನ ಆಕ್ರಂದನ,**
**ಕತ್ತಿ ಮೇಲೆ ಕುಣಿವ ದುಡಿವ ಜನರ**
**ರಕ್ತ ತುಂಬಿದ ಅಂಗಾಲುಗಳು**

ಕವಿತೆಯಾಗಲು ಹಿಂಜರೆಯುವುದನ್ನು ಹೇಳುತ್ತಾರೆ. ಜಬೀವುಲ್ಲಾ ಎಂ. ಅಸದ್ ರವರ ಎಲ್ಲೂ ಸುದ್ದಿಯಾಗಲೇ ಇಲ್ಲ ಕವಿತೆ ಕೂಡ ಬೊಬ್ಬಿರುವ ರಕ್ಕಸ ಮಾಧ್ಯಮಗಳು ಯಾವ ವಿಷಯವನ್ನು ಜನರ ನಡುವೆ ಹೇಳಿ ಪರಸ್ಪರ ಪ್ರೀತಿ ಸೌಹಾರ್ದತೆಯನ್ನು ಬೆಳೆಸಿ ಸಾಮರಸ್ಯವನ್ನು ಹುಟ್ಟುಹಾಕಬೇಕಾಗಿತ್ತೋ ಅದನ್ನು ಗಮನಿಸದೆ ದ್ವೇಷ, ಅಸೂಯೆ, ಸಣ್ಣತನಗಳನ್ನು ದೊಡ್ಡದಾಗಿ ಹೇಳುತ್ತ ಒಡಕುಂಟುಮಾಡುವ ಧೂರ್ತ ಕೆಲಸ ಮಾಡುವುದನ್ನು ವಿಷಾದದಿಂದ ಹೇಳುವುದನ್ನು ಕಂಡು ಪರಿತಪಿಸುತ್ತಾರೆ.

ಕವಯಿತ್ರಿ ನಾಝೀಮಾ ಹಾಸನ ಹೆಣ್ಣು ಈ ಆಧುನಿಕ ಕಾಲದಲ್ಲೂ ಹೇಗೆ ತುಳಿತಕ್ಕೆ ಒಳಗಾಗುತ್ತಾರೆ ಎಂಬುದನ್ನು ಸಶಕ್ತವಾಗಿ ವಿವರಿಸುತ್ತಾ

**ನಮ್ಮ ಕಿತ್ತು ತಿನ್ನುವ**
**ಗುಡುಗುಗಳು ಘರ್ಜಿಸುತಿಹವು**
**ವಿವೇಕ ವಿವೇಚನೆ ಮೃತ ಮೃಗಗಳು**
**ಹೊಸಿಲ ಒಳಹೊರಗೆ**
**ಮುಖವಾಡ ಧರಿಸಿಹವು**

ಎನ್ನುತ್ತಾರೆ. ಮನೆಯ ಒಳಗೊ ಹೊರಗೋ ಒಟ್ಟಿನಲ್ಲಿ ಹೆಣ್ಣು ಸದಾ ಅತಂತ್ರ ಅಸುರಕ್ಷಿತ ಹಾಗೂ ಅಭದ್ರತಾ ಭಾವದಲ್ಲೇ ನರಳುತ್ತಿರುತ್ತಾಳೆ ಎಂಬುದು ಸರ್ವವಿದಿತ.

ಮರುಳಸಿದ್ದಪ್ಪ ದೊಡ್ಡಮನಿ ತಮ್ಮ ಈ ನೆಲದಲ್ಲಿ ಕವನದಲ್ಲಿ ಬಡವರ ಅನ್ನದಾತರ ಹಾಗೂ ಅನ್ಯಾಯವನ್ನು ಪ್ರಶ್ನಿಸುವವರನ್ನು ಹತ್ತಿಕ್ಕಲಾಗುತ್ತಿರುವ ಪರಿಸ್ಥಿತಿಯನ್ನು ಮಾರ್ಮಿಕವಾಗಿ ಹೇಳಿದ್ದಾರೆ.

**ಹಾಲಿಲ್ಲದ ಕೆಚ್ಚಲಿಗೆ**
**ಹಸಿವಿಲ್ಲದ ಕರುವನು**
**ಕಟ್ಟುತ್ತಿದ್ದಾರೆ ಈ ನೆಲದಲ್ಲಿ**

ಎನ್ನುತ್ತಾರೆ. ಏನೋ ಮಾಡುತ್ತೇವೆ. ಆದರೆ ಅದು ಪ್ರಯೋಜನವಿಲ್ಲದ ಕೆಲಸ. ಈ ನೆಲದಲ್ಲಿ ಎಲ್ಲವೂ ಅಪ್ರಯೋಜಕ ಕೆಲಸಗಳನ್ನು ಮಾಡಿದವರಿಗೇ ಬೆಂಬಲ ಎಂದು ಅಸಹಾಯಕರಾಗಿ ಹೇಳುವ ಪರಿ ಇಲ್ಲಿದೆ.

ಮಧು ಬಿರಾದಾರ ಅವರ 'ನಿನ್ನ ಬೆವರು ಘೋಷವಾಕ್ಯ' ಎಂಬ ಶೀರ್ಷಿಕೆಯಲ್ಲಿಯೇ ಕಟ್ಟಿಹಾಕುವಂತಹ ಕವಿತೆ ಬರೆದಿದ್ದಾರೆ. ಬಾಬಾ ಸಾಹೇಬರನ್ನು ನೆನೆಸುತ್ತ ಭೂತ ಹಾಗೂ ವರ್ತಮಾನಗಳ ತುಲನೆ ಮಾಡುತ್ತ ನಿರಾಸೆಗಳ ಮೊತ್ತವನ್ನು ಪೇರಿಸುತ್ತಲೇ ಕೊನೆಗೆ ಆಶಾವಾದಿಯಾಗುವ ಪರಿ ಚೆನ್ನಾಗಿ ಮೂಡಿಬಂದಿದೆ.

**ಬಾಬಾ ಭರವಸೆಯಿದೆ**
**ಆತ್ಮಕ್ಕೆ ಇಟ್ಟ ಬುದ್ಧನ ದೀಪ**
**ಬೆಳಕು ಕೊಟ್ಟೇ ಕೊಡುವ ಕುರಿತು**
**ನಮ್ಮ ಗುಡಿಸಲಿನಲ್ಲಿ**
**ನಾವು ನಾವೇ ಮುನಿಸಿಕೊಂಡುದ್ದರ ಬಗ್ಗೆ**
**ಹೇಳಿಕೊಳ್ಳಲಾಗದ ನೋವಿದೆ**
**ಸುಮ್ಮನೆ ಮುಖ ನೋಡಿ ಬದುಕುತ್ತೇವೆ**
**ನಾಳೆಯಾದರೂ ಒಂದಾಗಬಹುದು**
**ನಿನ್ನ ಚಿಂತನೆಯ ಗುರಿ ಮುಟ್ಟಬಹುದು**

ಹೌದು ಬಾಬಾ ಸಾಹೇಬರ ಚಿಂತನೆಯನ್ನು ಆತ್ಮಕ್ಕೆ ಅಂಟಿಸಿಕೊಂಡು ಬುದ್ಧ ಬೆಳಕನ್ನು ಪಡೆಯುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕು.

**ಸಂಸಾರ ತೊರೆದ ಸನ್ಯಾಸಿ ಕೂಡ**
**ಕಾವಿಭಾರವ ಬಿಡದೆ ಬದುಕುತ್ತಾನೆ**

ಎಂಬ ಮಿಂಚಿನಂತಹ ಸಾಲುಗಳನ್ನು ನೀಡಿದ ಲಕ್ಷ್ಮಿನಾರಾಯಣ ಕೆ

ವಾಣಿಗರಹಳ್ಳಿಯವರ ಸಾವು ಕದತಟ್ಟುವ ತನಕ ಹಾಗೂ ಎ ಜಯಲಕ್ಷ್ಮಿ ಮಾಲೂರು ಅವರ ಸಮಯದ ಗೊಂಬೆಯ ಎದುರು ನಿಂತವರು ಬಿಕ್ಕಳಿಸುತ್ತಿದ್ದಾರೆ.

'ದೇವರಿಲ್ಲದ ಗುಡಿ' ಎಂಬ ಕವನದಲ್ಲಿ

**ಸತ್ವ ಕಳಕೊಂಡ ತೀರ್ಥವು**

**ಅಂಗೈ ಪೋಷಿಸಿ**

**ನೆತ್ತಿಯ ತಂಪುಗೊಳಿಸದೆ**

**ಕಣ್ಣೀರಿಟ್ಟಿದೆ**

ಎನ್ನುವ ಸೌಮ್ಯ ಹೆಗ್ಗಡಹಳ್ಳಿಯವರ ಕವನ ಮಿಂಚಿನಂತೆ ಫಕ್ಕನೆ ಹೊಸ ಹೊಳಹೊಂದನ್ನು ನೀಡುತ್ತದೆ.

ವಿಶಾಲ್ ಮ್ಯಾಸರ್ ತಮ್ಮ ನೋವು ಮತ್ತು ಬೆಳಕು ಕವನದ ಮೂಲಕ ಧಮನಿತರ ಶತಮಾನದ ನೋವನ್ನು ಎಳೆಎಳೆಯಾಗಿ ಬಿಡಿಸಿಡುತ್ತ ಹೋಗುತ್ತಾರೆ. ಜವಾರಿ ಭಾಷೆಯೊಳಗಿನ ಈ ಕವನ ತನ್ನ ವಿಶಿಷ್ಟ ಓಘದಿಂದಲೇ ನಮ್ಮನ್ನು ಹಿಡಿದಿಡುತ್ತದೆ. ಬೆಳಕು ಒಳಬರಲು ನೋವುಗಳೇ ಕದಗಳು ಎಂದು ಹೇಳುತ್ತ ಶತಮಾನಗಳಿಂದಲೂ ನೋವುಣ್ಣುತ್ತಿರುವವರ ಬಾಳಿನಲ್ಲಿ ಬೆಳಕು ಇನ್ನೂ ಬರದಿರುವುದರೆಡೆಗೆ ವಿಷಾದ ವ್ಯಕ್ತಪಡಿಸುತ್ತಲೆ ದಾರಿ ತುಂಬ ಬೆಳೆದ ಚಂಡು ಹೂವಿನ ಸಾಲಿಗೆ ನೀರಿಗಿಂತ ರಕ್ತವೇ ಹೆಚ್ಚು ಹಾಕಿದ್ದನ್ನು ಬೇಸರದಿಂದ ಅರಹುತ್ತಲೆ

**ಎಲ್ಲಾರ ಬರ್ಲಿ**

**ಹೆಂಗಾರ ಬರ್ಲಿ**

**ಕಳಿಲಿ ನಮ್ ಶತಮಾನದ ಕತ್ಲಿ**

ಎನ್ನುವ ಮಾತನ್ನು ಹೇಳಿ ಬದಲಾವಣೆಗಾಗಿ ಕಾದು ಕುಳಿತಿರುವ ಚಿತ್ರಣವನ್ನು ಕಣ್ಣೆದುರು ಮೂಡಿಸುವಲ್ಲಿ ಯಶಸ್ವಿಯಾಗುತ್ತಾರೆ. ಹೆಣ್ಣಿನ ಎದೆಯನ್ನು ಬೇಡಿ ಪಡೆದದ್ದಲ್ಲವಾದರೂ ಅದರಿಂದ ಹೆಣ್ಣು ಅನುಭವಿಸುವ ಮುಜುಗರ ಅಷ್ಟಿಷ್ಟಲ್ಲ. ನೋಡುಗರ ಕಣ್ಣು ಸೆಳೆಯುವ ಸೆಟೆದ ಉಬ್ಬಿದ ಎದೆಗಳು ಅವನ ತೃಪ್ತಿಗೋಸ್ಕರ ನಲುಗಿದ್ದು ಮಾತ್ರ ಗೊತ್ತಿದೆಯೆ ಹೊರತೂ ಅಮೃತವುಣ್ಣಿಸಿದ್ದು ಗಂಡುಕುಲಕ್ಕೆ ಮರೆತುಹೋಗಿದೆ ಎಂಬ ನೋವು ಇರುವ ಕವನ ಆನಂದ ಎಸ್. ಗೊಬ್ಬಿಯವರ ಎದೆಯ ಮೇಲಿನ ಬಟ್ಟೆ ಜಾರುವುದು ಮತ್ತು

**ಜಂಬೂ ದ್ವೀಪದ ಕತ್ತಲೆಗೆ**

**ಬೇಕೀಗ ಬೀಜಗಳ ಸವಾರಿ**

**ಎನ್ನುತ್ತ**

**ಈ ಕಪ್ಪುದೇಹದ ಅಕ್ಷರ ಸಂಸ್ಕೃತಿ**

**ಕವಚ ಧರಿಸಿದ ದೊರೆಯ**

**ಮೀನಖಂಡದಲ್ಲಿ ಸಣ್ಣಗೆ ನಡುಕ ಹುಟ್ಟಿಸಿದೆ**

ಎಂಬ ಆತ್ಮವಿಶ್ವಾಸದ ಸಾಲುಗಳನ್ನು ಬರೆದ ಪಿ ನಂದಕುಮಾರ್‌ರವರ ಕವಚ ಇವೆರಡರ ಕಾವ್ಯಬಂಧ ಬಿಗಿಯಾದರೆ ಮತ್ತಷ್ಟು ಸೊಗಸಾದ ಕವನವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ರಾಮಕೃಷ್ಣ ಸುಗತರವರ 'ಬಯಕೆಗಳ ನಾಳೆಗಳೆಡೆಗಿನ ಹಾದಿ' ಕವಿತೆಯಲ್ಲಿ

**ಹಸಿದ ಕಾಮದ ಬೀದಿ**

**ಬೆಳದಿಂಗಳನು ಬಲತ್ಕರಿಸುವಾಗ**

**ಮೈನೆರೆದ ಚಂದ್ರ**

**ಶಪಿಸಬೇಕಿರುವುದು ಸೂರ್ಯನನ್ನೇ ಅಲ್ಲವೆ**

ಎಂಬ ಸಾಲುಗಳು ಓದುಗರನ್ನು ಆಲೋಚನೆಗೆ ಹಚ್ಚುತ್ತವೆ.

ಇಲ್ಲಿ ಬರುವ ಸುಗತನೇ ಎಂಬ ಸಂಬೋಧನೆ ಗಜಲ್‌ಗಳಲ್ಲಿ ಗಜಲ್‌ಕಾರರು ಬರೆದುಕೊಳ್ಳುವ ತಖಲ್ಲೂಸ್‌ನ್ನು ನೆನಪಿಸುವುದು ವಿಶಿಷ್ಟ.

**ಈಗಲೇ ಹೇಳಿ**

**ಅವಳು ದೇವಿಯೋ**

**ಇವಳು ತಾಯಿಯೋ**

**ಅಥವಾ**

**ಕತ್ತಲಲ್ಲಿ ನಿಮ್ಮ ಪಂಜಗಳಿಗೆ**

**ಸಿಕ್ಕ ತರುಣಿಯೋ...?**

ಎಂಬ ತಲ್ಲಣ ಹುಟ್ಟಿಸುವ ಸಾಲುಗಳನ್ನು ಬರೆದ ಧನುಷ್ ತಮ್ಮ ಈಗಲೇ ಹೇಳಿ ಕವನದಲ್ಲಿ ಹೆಣ್ಣಿನ ಮೇಲಾಗುವ ದೌರ್ಜನ್ಯಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಹರೀಶ ಕೋಳಗುಂದ ಬರೆದ ಅಂತಿಮ ಯಾತ್ರೆಯ ರೂಪಕಗಳು ಆಕರ್ಷಕವಾಗಿವೆ.

**ಸಾಸಿವೆಯ ಸಾಲಕ್ಕೆ ಹೋದವಳು**

**ಇನ್ನೂ ಮರಳಿಲ್ಲ, ದಾರಿಯಲ್ಲಿ**

**ಬುದ್ಧ ಸಿಕ್ಕಿರಬೇಕು**

**ಕಾಲವಶದಲ್ಲಿ ಸಾವಿತ್ರಿಯೂ ಲೀನ**

**ಪುರುದೇವನ ವರ್ತಮಾನವೂ ಇಲ್ಲ**

ಎನ್ನುತ್ತ ಆಲೋಚನೆಗೆ ಹಚ್ಚುತ್ತಾರೆ.

ಲತಾ ಕೆ.ಎಸ್.ಹೆಗಡೆ ಅವರ 'ಅವನಿಚ್ಚೆ' ಕವಿತೆಯಲ್ಲಿ, ಕುಗ್ಗದೆ ಮುನ್ನುಗ್ಗುತ್ತಿರು ಮನವೇ ಸಾವಿರ ಸವಾಲುಗಳು ಎದುರಾದರೂ ಸರಿ ಎಂಬ ಸಾಂತ್ವಾನದ ಸಾಲುಗಳು ಇವೆ. ಇಲ್ಲಿ ಕವಿಯು ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಲೇ ಲೋಕದ ದುಃಖಗಳಿಗೂ ಸಮಾಧಾನವನ್ನು ಹೇಳುವುದು ಕಾಣಬಹುದು.

ಅಭಿಷೇಕ ರಾಯಸಂದ್ರ ಬರೆದ ಗೆದ್ದಲು ಬರೆದ ಕವಿತೆ ಸೃಷ್ಟಿಗೊಂಡ ವಸ್ತುವೆಲ್ಲ ಹಾಗೇ ಉಳಿದರೆ ಚಟ್ಟ ಪಳೆಯುಳಿಕೆ ಎನ್ನುವ ಮೂಲಕ ಬದುಕು ಬದಲಾಗುತ್ತಿರಬೇಕಾದ ಅನಿವಾರ್ಯತೆಯನ್ನು ಸಾರುತ್ತದೆ.

ಇಲ್ಲಿನ ಇಪ್ಪತ್ತೂ ಕವಿತೆಗಳನ್ನು ಅವಲೋಕಿಸಿದ ನಂತರ ಹೊಸ ತಲೆಮಾರಿನ ಕವಿಗಳು ಹೆಣ್ಣಿನ ವರ್ಣನೆ, ಆಕಾಶ, ಭೂಮಿ ಪ್ರಕೃತಿಗಳನ್ನು ವಿವರಿಸುತ್ತ ಕಳೆಯುವ ಬದಲು ಪ್ರಸ್ತುತ ತಲ್ಲಣಕ್ಕೆ ಸ್ಪಂದಿಸಿ ಬರೆಯುತ್ತಿರುವುದು ಸಹಜವಾಗಿ ನನ್ನೊಳಗೊಂದು ಸಂತಸವನ್ನು ಹಾಗೂ ಆಶಾಭಾವನೆಯನ್ನು ಹುಟ್ಟಿಸಿದೆ. ಪ್ರಭುತ್ವಕ್ಕೆ ತಲೆಬಾಗಿಸಿಕೊಂಡು, ಪ್ರಭುತ್ವವನ್ನು ಹೊಗಳುವುದೇ ಕಾವ್ಯ ಎಂಬ ಕಾಲ ಘಟ್ಟದಿಂದ ಅದೆಷ್ಟೋ ದೂರ ಬಂದು ಪ್ರಭುತ್ವವನ್ನು ಎದುರಿಸಿ, ಪ್ರಶ್ನಿಸಿ, ಧಿಕ್ಕರಿಸಿ ನಿಲ್ಲುವಂತಹ ಬರವಣಿಗೆಗಳು ಸಾಧ್ಯವಾಗುತ್ತಿರುವುದಕ್ಕೆ ನಿಜಕ್ಕೂ ಹೆಮ್ಮೆ ಯಾಗುತ್ತಿದೆ. ಅಕ್ಷರಗಳನ್ನು ಕಿವಿಯಿಂದ ಕೇಳಿದರೂ ಕಾದ ಸೀಸ ಹಾಕಬೇಕು ಎಂಬ ನಿರ್ಬಂಧದಲ್ಲಿ ಬಂಧಿತರಾಗಿದ್ದ ಅತಿ ದೊಡ್ಡ ಸಮೂಹವೊಂದು ಬರವಣಿಗೆಯತ್ತ, ಸಾಹಿತ್ಯದಲ್ಲಿ, ಕವನ ರಚನೆಯತ್ತ ಮುಖ ಮಾಡಿರುವುದೇ ಈ ಅತಿ ದೊಡ್ಡ ಬದಲಾವಣೆಗೆ ಮುಖ್ಯ ಕಾರಣ. ಇಂತಹುದ್ದೊಂದು ಬದಲಾವಣೆ ಹಾಗೂ ಈಗಿನ ಯುವ ಕವಿಗಳಲ್ಲಿನ ಸ್ಥೈರ್ಯಕ್ಕೆ ನನ್ನ ಮೆಚ್ಚುಗೆಯಿದೆ.

ಆದರೆ ಕೇವಲ ವಿರೋಧ ಹಾಗೂ ಬಂಡಾಯಗಳನ್ನಷ್ಟೇ ಗಮನಿಸಿದರಾಗದು. ಕಾವ್ಯಕ್ಕೆ ಪೂರಕವಾಗುವಂತಹ ರೂಪಕ ಹಾಗೂ ಪ್ರತಿಮಾತ್ಮಕ ಬರವಣಿಗೆಯತ್ತ ಹೆಚ್ಚಿನ ಗಮನವಹಿಸಬೇಕಾದ ಅಗತ್ಯವಿದೆ. ಇಲ್ಲಿ ಗಮನಿಸಿದಂತೆ ಆಯ್ಕೆ ಮಾಡಿಕೊಂಡ ವಿಷಯಗಳು ಚೆನ್ನಾಗಿದ್ದಾಗಿಯೂ ಕಟ್ಟುವಿಕೆಯಲ್ಲಿ ಎಡವಿದ್ದರಿಂದ ಒಂದು ಅತ್ಯುತ್ತಮವಾಗಬಹುದಾದ ಕವನ ಸಾಧಾರಣ ಮಟ್ಟದಲ್ಲಿ ನಿಂತು ಬಿಡುವುದನ್ನು ಕಂಡು ಬೇಸರವೂ ಆಗಿದೆ. ಕಾವ್ಯಕಟ್ಟುವಿಕೆಗೆ ಅಪಾರ ಓದಿನ ಹಿನ್ನಲೆಯನ್ನಿಟ್ಟುಕೊಂಡರೆ ಹಾಗೂ ಒಂದಿಷ್ಟು ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದರೆ ಪುರಾಣಗಳನ್ನು ಓದಿ ಎಲ್ಲೆಲ್ಲಿ ನಮಗೆ ಅನ್ಯಾಯವಾಗಿದೆ ಎಂಬುದನ್ನು ಅರಿತುಕೊಂಡರೆ ಸಹಜವಾಗಿ ಸಾಲುಗಳ ನಡುವೆ ಹುಟ್ಟಿಕೊಳ್ಳಬಹುದಾದ ಒಂದು ರೂಪಕಗಳನ್ನು ಕಟ್ಟಿಕೊಡಲು ಸಾಧ್ಯ ಎಂಬುದು ನನ್ನ ಅಭಿಪ್ರಾಯ. ಎಲ್ಲ ಕವಿಗಳಿಗೂ ಶುಭ ಹಾರೈಸುತ್ತೇನೆ.

# ಸರ್ಪಸುತ್ತು

❖ **ಸಂಗನಗೌಡ ಹಿರೇಗೌಡ**

ಈ ನಿದ್ದೆಗಣ್ಣಿನ ನಖಗಳು
ಕಾಸಿದಾರದ ಒಡಲಿಂದ ಪಾರಾಗಿ
ಎದೆಯ ಹಿಂಭಾಗದ ಅನುವಿಗೆ
ಹೆಗ್ಗಣದ ಪ್ರಯೋಗ

ಕರ ಕರ ಪರ ಪರ ತುರಿಕೆ
ಎಷ್ಟೆಲ್ಲಾ ತೊಗಲ ಗುಟ್ಟುಗಳು ಗುಲ್ಲಾಗಿ
ಬನಿಯನ್ ಮೇಲಿಂದ ಚಿಮ್ಮುವ ಒಂದಷ್ಟು ಹಸಿರು
ಮತ್ತೊಂದಿಷ್ಟು ಕೆಂಪಗಿನ ದುರ್ವಾಸನೆಯ ಬೆವರು

ಯಾವ ಜಲುಮದ ಪಾಪ!
ಬಾಲ್ಯದ ಕೇರಿ ಹುಡುಗನ ಬೆನ್ನು ಕವರಿ
ಹನಮಂತ ಗುಡಿಯ ಹೊಕ್ಕಾಗ
ಕೋ ಕೋ ಆಟದ ಪೋಲ್ ಶಾಟ್
ತೀರಿಸಿಕೊಂಡ ನೆನಪು

ಮನೆ ಹಿಂದಿನ ಕೊಳೆತ ಸಜ್ಜಿ ಕಣೆಕೆಯ
ಸಂದಿನಲಿ ಅದಾಗತಾನೆ ಹುಟ್ಟಿದ
ನಾಯಿಕುನ್ನಿಯ ಕಣ್ಣು ರ್ಯಾವಿ ಹಿಡಿದು
ಸಹಜತೆಯ ಹಿಚಿಕಿದ್ದು
ಅಥವಾ
ಬಳ್ಳಿ ಬಹುಬೇಗ ಹಬ್ಬಲೀ ಎಂದು

ಸರ ಮಾಡದ ಕೋಳಿಯ ಕುಂಡೆಗೆ
ಕೈ ಹಾಕಿ ತತ್ತಿ ಹುಡುಕಿದ್ದು?

ಗೊತ್ತಿಲ್ಲ.
ಮತ್ತ್ಯಾಕೆ ಈ ಉರಿ?
ಧೋ ಎಂದು ಸುರಿವ ಅವಘಡದ ಮಳೆಗೆ
ಕೆಂದು ಬಣ್ಣದ ಹುಳುಗಳ ಕಾಲುದಾರಿಗೆ
ಹೆಬ್ಬೆಟ್ಟು ಒತ್ತಿ ಕವಲೊಡೆಸಿದ್ದೇ ಇರಬೇಕು?

ಇಲ್ಲ, ಇಲ್ಲ
ಈ ಪಾಪ ಪುಣ್ಯದ ಲೆಕ್ಕಾಚಾರ
ನಾವೇ ಕಟ್ಟಿಕೊಂಡ ಕೀಲದ ಅಂಬೋಣ
ಹಾಗಾದರೆ
ಮತ್ತ್ಯಾಕೆ ಈ ತೊಗಲು
ಕೊನೆಗಾಲದ ಅಮೃತಮತಿಯಂತೆ

ಹರಿದಾಡಿ ಸುತ್ತಿಕೊಳ್ಳದೆ ಉಡದಾರದಂತೆ
ಹೊಕ್ಕಳಗುಂಟ ಹಬ್ಬಿಕೊಳ್ಳುತ್ತದೆ ಎದೆದಾರದಂತೆ
ಸಂಪೂರ್ಣ ಸುತ್ತಿಕೊಳ್ಳುತ್ತದೆ
ಬೆನ್ನುದಾರಂತೆ ಆಗಾಗ
ನನ್ನವೇ ಜಡಭರಿತ ನಖಗಳು
ಚೈತನ್ಯದ ಮೇಲೆ ಸವಾರಿ
ಜಡ–ಮೃಡದ ಮಧ್ಯೆ ಅಸೂಕ್ಷ್ಮ
ಕಿಂಕರ ಸಹಿತ ವೃತ್ತಿಯೇ ಇರಬೇಕು....

# ನಡೆಯಬೇಕು ಎಲ್ಲಾ ಮೈ ಚಳಿ ಬಿಟ್ಟು

❖ **ಕೊಟ್ರೇಶ್ ಅರಸೀಕೆರೆ**

ಎಲ್ಲಾ ಮೈ ಚಳಿ ಬಿಟ್ಟು
ಬರಿ ಮೈಯಲ್ಲಿ ಜನ
ಜಂಗುಳಿಯಲ್ಲಿ ನಡೆಯಬೇಕು ಎದೆಯ
ಮೇಲೆ ಸಣ್ಣದೊಂದು ಮೇಲ್ವಸ್ತ್ರ ಧರಿಸಿ

ನಡೆಯಬೇಕು ಎಲ್ಲಾ ಅವಮಾನಗಳ
ತೊರೆದು
ನಡೆಯಬೇಕು ಎಲ್ಲರ ಪ್ರತಿನಿಧಿಯಾಗಿ
ಗಾಂಧಿಯಂತೆ

ನಡೆಯಬೇಕು ಬರಿ ಮೈಯಲ್ಲಿ
ತೆರೆದು ತೋರಿಸಬೇಕು
ಎಲ್ಲಾ ವ್ಯವಸ್ಥೆ–ಅವ್ಯವಸ್ಥೆಗಳ

ಶ್ರೀಮನ್ನಾರಾಯಣನ ವಸ್ತ್ರ ಶಿವನಿಗೆ
ತೊಡಿಸಿ
ಶಿವನ ವಸ್ತ್ರವ ಶ್ರೀಮನ್ನಾರಾಯಣನಿಗೆ
ತೊಡಿಸಿ ಆರಾಧಿಸಬೇಕು

ನೋಡಬೇಕು ಎಲ್ಲಾ ವಸ್ತ್ರ ಸಂಹಿತೆಗಳ
ಮೀರಿ
ನೆಹರೂ ಬಟ್ಟೆ ಗಾಂಧಿಗೆ ತೊಡಿಸಿ

ಗಾಂಧಿ ಬಟ್ಟೆ ನೆಹರೂಗೆ ಉಡಿಸಿ
ನಮ್ಮ ಚರಿತ್ರೆಯ ಅರಿತುಕೊಳ್ಳಬೇಕು

ನಡೆಯಬೇಕು ಬರಿ ಮೈಯಲ್ಲಿ
ಬಡವರ ಮೈ ತೋರಿಸಬೇಕು
ನಡೆಯಬೇಕು ಬರಿ ಮೈಯಲ್ಲಿ
ಅಧಿಕಾರಸ್ಥರಿಗೆ ವಾಸ್ತವ ತೋರಿಸಬೇಕು

ನಡೆಯಬೇಕು ಬರಿ ಮೈಯಲ್ಲಿ
ಎಲ್ಲಾ ಮೈ ಚಳಿ ಬಿಟ್ಟು
ದಿಟ್ಟತನ ತೋರಿಸಬೇಕು ಪ್ರಭುತ್ವದ
ವಿರುದ್ಧ ಎದೆ ಸೆಟೆದು

# ಗಾಂಧಿಗಿಡ

❖ **ಮಹಾಂತೇಶ ಪಾಟೀಲ**

೧.

ಎಷ್ಟೊಂದು ಚಿಗುರಿತ್ತು
ದಿಕ್ಕು ದಿಕ್ಕಿಗೆ ಮೈಚಾಚಿದ ಟೊಂಗೆ
ಮೂಡಣ ಪಡುವಣದ ಹಕ್ಕಿಗಳು ಕಟ್ಟಿದವು ಗೂಡು
ಸ್ವಾತಂತ್ರ್ಯದ ತಲೆಗಳು ಹೂಮೂಡಿದವು
ಹಸಿದ ಆತ್ಮಗಳು ಗಿಡದ ಹಣ್ಣು ತಿಂದೆವು
ಬಳಲಿದ ಭಾವಗಳು ನೆರಳುಂಡವು
ಒಂದೇ ಎರಡೇ ಗಿಡದ ಗರಿಮೆ–ಹಿರಿಮೆ

೨

ಆಗ ಎಷ್ಟೊಂದು
ಹೂ ಹಣ್ಣು ಬೀಜಕೆ ರಾಜಯೋಗವಿತ್ತು...
ಆದರೂ ಮಹಾತ್ಮ
ಮರವೆನಿಸಲಿಲ್ಲ ಮಂಪರು ಮಂದಿಗೆ!.

೩.

ಒಬ್ಬ ಗಾಂಧೀಗಿಡದ ಬೇರಿಗೆ ಗುಂಡಿಟ್ಟ
ಮತ್ತೊಬ್ಬ ಚಿಗುರಿಗೆ ಆಸಿಡ್ ಎರಚಿದ
ಮಗದೊಬ್ಬ ಹೂಗಳ ಹೊಸಕಿ ಹಾಕಿದ!

ಈಗ ಎಲೆಗೊಬ್ಬಬ್ಬರು ಗೋಡ್ಸೆಗಳು ಹುಟ್ಟಿ
ಬುಲ್ಡೋಜರ್ ದೊರೆಯೊಬ್ಬ ಫರ್ಮಾನು ಹೊರಡಿಸಿದ್ದಾನೆ
ಗಾಂಧಿಗಿಡದ ಜಾಗ ಅತಿಕ್ರಮಣವೆಂದು!

೪.

ಉಸಿರಿಗೆ ಗಾಳಿಯಂತಿದ್ದ ಗಾಂಧಿಗಿಡದ
ಸುತ್ತ ಗಾಂಪರರ ಮೈತ್ರಿಕೂಟವೀಗ

ಗಾಂಧಿ ಗಿಡದಲ್ಲಿ
ವಸಂತದ ಚಿಗುರಿಲ್ಲ
ಹಣ್ಣಿನ ಕನಸು ಬೇರೆ ನಮಗೆ!

ಆಫೀಸು ಮನೆಯ
ಅಲಂಕಾರಿಕ ಶೋಕಿಸಿನಲಿ
ಬಣ್ಣದ ಪ್ಲಾಸ್ಟಿಕಿನ ಗಾಂಧಿಗಿಡ
ಎಂದಾದರು ಚಿಗುರಿತು?!

# ಸಾಬೀತುಪಡಿಸುವೆ

❖ ಡಾ. ರತ್ನಾಕರ ಸಿ. ಕುನುಗೋಡು

ನನ್ನ ನಡೆ– ನುಡಿ ಕುರಿತು ವೃಥಾ
ಸಂಶಯದಿ ದಣಿಯುವಿರೇಕೆ?
ಪಾಪ;
ಸಾಬೀತುಪಡಿಸುವೆ
ನನ್ನ ನಾನೇ!...

ಕೋಟೆ ಕೊತ್ತಲುಗಳ ಬೆದಕಿ
ಬೆವರುಗಲ್ಲುಗಳ ಹೊರಗೆಳೆಯುತ್ತೇನೆ
ಹೊಡೆದುರುಳಿಸಲಿಕ್ಕಲ್ಲ;
ಕಟ್ಟುವ ಹೊಸನಾಡಿನ ಅಡಿಪಾಯಕ್ಕಾಗಿ
ನಿಜ–ಬೇರುಗಳನ್ನು ಅಗೆದು ಪರೀಕ್ಷಿಸುತ್ತೇನೆ
ಬಂದಳಿಕೆಗಳನ್ನು ಒಣಗಿಸಲಿಕ್ಕಲ್ಲ;
ಕಸಿಗೊಂಡು ಹಸಿಯಾಗಿ ಬಾಳಲಿಕ್ಕಾಗಿ...

ಸಮಾಧಿಯಾದ ಸಿದ್ಧರ
ರೋಮರೋಮಗಳನ್ನು ನೇವರಿಸುತ್ತೇನೆ
ಹೂತ ಪ್ರೇತದ ಗಾಯಗಳನ್ನು
ಭೂತಗನ್ನಡಿ ಹಿಡಿದು ದಿಟ್ಟಿಸುತ್ತೇನೆ
ಕೆರೆದು ಹುಣ್ಣಾಗಿಸಲಿಕ್ಕಲ್ಲ;
ನಿತ್ಯ ಬಲಿಗಳ ತಪ್ಪಿಸಲಿಕ್ಕಾಗಿ...
ಮಡಿಚಿಟ್ಟ ಪುಟಗಳನ್ನು
ಕಳಚಿಟ್ಟ ನೆನಪುಗಳನ್ನು

ಅಟ್ಟಸೇರಿದ ಕಟ್ಟುಗಳನ್ನು
ತಾಳ್ಮೆ ಪಣಕ್ಕಿಟ್ಟು ಪ್ರಕಟಿಸುತ್ತೇನೆ
ಯಾರನ್ನೂ ನಿಂದಿಸಲಿಕ್ಕಲ್ಲ;
ಮುಖವಾಡಗಳ ಕಳಚುವುದಕ್ಕಾಗಿ...

ಚರ್ವಿತ ಚರ್ವಣಗಳ ಬಾಲ ತಿರುವಿ
ತುಸು ಆಳಕ್ಕೆ ಕುಳ ಹೂಡುತ್ತೇನೆ
ನಂಬಿಕೆಗಳ ಘಾಸಿಗೊಳಿಸಲಿಕ್ಕಲ್ಲ;
ಹೊಸ ಫಸಲನ್ನು ಕೂಡುಣ್ಣಲಿಕ್ಕಾಗಿ...
ಮುಳ್ಳು ಕಂಟಿಯ ಸವರಿ
ಕಾಲುದಾರಿಗಳ ಶೋಧಿಸುತ್ತೇನೆ
ಪ್ರತಿಷ್ಠಿತರೊಂದಿಗೆ ಸ್ಪರ್ಧೆಗಿಳಿಯಲಿಕ್ಕಲ್ಲ;
ಹೆದ್ದಾರಿಯ ಎಡ-ಬಲದ ಗದ್ದಲವಿಲ್ಲದೆ
ಗಮ್ಯವ ತಲುಪುವುದಕ್ಕಾಗಿ...

ಇನ್ನೂ ತಕರಾರುಗಳಿದ್ದರೆ ಹೇಳಿ
ತೆರೆದುಕೊಂಡಿದ್ದೇನೆ
ಹೊಕ್ಕು ಹುಡುಕುವುದಿದ್ದರೆ ಬನ್ನಿ
ಕಡಲಾಗಿದ್ದೇನೆ
ಬೇಕಿದ್ದರೆ ತಪಶೀಲುಪಟ್ಟಿ ತನ್ನಿ
ಬಟ್ಟಾ ಬಯಲಾಗಿದ್ದೇನೆ...

ಗೂಢಚಾರರ ವರದಿಯಲ್ಲಿ
ದಾಖಲಾದರೂ ಆಗಬಹುದು
ನನ್ನಪರಾಧದ ಕುರುಹುಗಳು;
ತುಟಿಗಂಟಿದ ಹಡೆದವ್ವನ ಮೊಲೆತೊಟ್ಟು
ಹೊಕ್ಕುಳಲ್ಲುಳಿದ ನೆಲದವ್ವನ ನಂಟು
ಜೀರ್ಣವಾಗದ ಆಗಸದ ಧಾತು...!

# ಕವಿತೆಯೊಳಗಿನವರು

❖ **ಡಾ. ಎಂ.ಈ. ಶಿವಕುಮಾರ ಹೊನ್ನಾಳಿ**

ಒಂದು ರಾತ್ರಿ
ಹೀಗೆ ಕುಳಿತೆ
ಬರೆಯಲು ಹಿಡಿದು ಪೆನ್ನು ಹಾಳೆ,
ಅವೇ ನೋವುಗಳು
ಆಳದೊಳಗಿನ ಧ್ವನಿಗಳು
ಆಕ್ರಂದನಗಳು
ಸಾವಿನಂಚಿನ ಕೊನೆಯ ಉಸಿರುಗಳು
ತುಂಬಿವೆ ನನ್ನೊಳಗೆ,
ಆದರೊಂದೂ ಮೂಡಲಾರವು ಹಾಳೆಯೊಳಗೆ.

ಮತ್ತೆ ಬಿಡದೆ ಬರೆಯುತ್ತೇನೆ :
ಅಲಲಾ !
ಅವೇ ಹಸಿದ ಹೊಟ್ಟೆಗಳು
ಅರಬೆತ್ತಲೇ ಒಡಲುಗಳು
ಬೂಟುಗಳಡಿ ಸಿಕ್ಕಿಕೊಂಡ ಅಹಿಂಸಾ ತತ್ವಗಳು
ಕತ್ತಿ ಮೇಲೆ ಕುಣಿವ ದುಡಿವ ಜನರ
ರಕ್ತ ತುಂಬಿದ ಅಂಗಾಲುಗಳು
ಅಬ್ಬಾ ! ಹಾಳೆತುಂಬಾ ಅವೇ
ಹೇಳಿ ನೀವೇ ಬರೆಯಲು ಹೊಸತೇನಿದೆ ?
ರಾತ್ರಿ ಕನಸಲ್ಲಿ ಅಣಕಿಸಿದವು , ಕೆಣಕಿದವು
ಕವಿತೆಯಂತೆ ಹಾಡಿ ಹಾಡಿ ನಕ್ಕವು.

ಬೆಳಗ್ಗೆ ನೋಡಿದರೆ
ಕವಿತೆಯೆಲ್ಲಾ ಎಲ್ಲೋ ಮಾಯಾ
ಕನಸಲ್ಲಿ ಬಂದವರು
ಹೇಳದೇ ಹೋದದ್ದು ಯಾವನ್ಯಾಯ ?
ನಿಮ್ಮಲ್ಲೇನಾದರು ಬಂದಾವೇನೋ ನೋಡಿ.
ಗಲ್ಲಿ – ಗಟಾರಗಳಲ್ಲಿ
ಚರಂಡಿ – ತಿಪ್ಪೆಗಳಲ್ಲಿ
ಲೈಬ್ರರಿ – ಸೆಮಿನಾರುಗಳಲ್ಲಿ
ಮತ್ತೆಲ್ಲಾದರು ಸಿಕ್ಕಿದರೆ ಕಳುಹಿಸಿಕೊಡಿ
ನಿಮಗೂ ಸಿಗದಿದ್ದರೆ
ಪಾಪ , ಹೋಗಲಿ ಬಿಡಿ.

# ಎಲ್ಲೂ ಸುದ್ದಿಯಾಗಲೇ ಇಲ್ಲ!

**❖ ಜಬೀವುಲ್ಲಾ ಎಂ. ಅಸದ್**

ಕಡಲ ಹಕ್ಕಿಯೊಂದು
ಎಲ್ಲೆಗಳ ದಾಟಿ
ದೇಶಗಳ ಮೀಟಿ
ಮುಗಿಲ ಮಾರ್ಗದಿ ರೆಕ್ಕೆ ಬೀಸಿ
ಸಾವಿರ ಮೈಲಿ ಕ್ರಮಿಸಿ
ಹಾರಿ ಬಂದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!

ಕಾಲ ಗರ್ಭದಿ ಮಣ್ಣೊಳಗೆ ಧ್ಯಾನದಿ
ಅವಿತ ಬೀಜವೊಂದು
ಮುಗಿಲು ಸುರಿದ ಮಳೆಯ ಒಲವಿಗೆ ಕಣ್ತೆರೆದು
ಸದ್ದಿಲ್ಲದೆ ಮೊಳಕೆಯಾದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!

ಕುರುಡನ ಕನಸಿನಲಿ
ಅವನ ಮನದ
ಖಾಲಿ ಕ್ಯಾನುವಾಸಿನ ಮೇಲೆ
ಸಾವಿರ ರಂಗಿನ ಕಾಮನಬಿಲ್ಲು
ಮೂಡಿ ಬಂದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!
ಮಲಗಿದ್ದ ಕವಿಯ ಸ್ಥಿತ ಪ್ರಜ್ಞೆಯಲ್ಲಿ
ಜಾಗೃತ ಕವಿತೆಯೊಂದು ಹುಟ್ಟಿ

ಅಕ್ಷರ ಸಾಂಗತ್ಯದಿ
ಪದವಾಗಿ ಉಳಿಯದೆ
ಕವಿಯ ಅಂತರಂಗದಿ ಅಳಿದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!

ಹಿಮ ಗಿರಿಯ ಕಂದರದಿ
ಜೀವ ಜಲ ಚಿಲುಮೆಯೊಂದು
ಝುರಿ, ತೊರೆ, ಹೊಳೆ, ನದಿಯಾಗಿ
ಬೆಟ್ಟ, ಕಾಡು, ಕಣಿವೆ, ಬಯಲು ಬಳಸಿ
ಕಡಲ ಒಡಲಲಿ ಒಂದಾಗಿ
ಸೇರಿ ಹರಿದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!

ಊರ ಹೊರಗಿನ
ಕಳ್ಳಿ ಬೇಲಿಯ ನಡುವೆ
ಯಾರಿಗೂ ಕಾಣದ ಹಾಗೆ
ಹೆಸರಿಲ್ಲದ ಹೂವೊಂದು ಅರಳಿ
ಘಮ್ ಎಂದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!

ಒಲವ ಭಾಷೆ ಕಲಿಸಿ
ಭಾವಗಳ ಚುಕ್ಕಿಗಳ ಬೆಸೆದು
ಹೃದಯಂಗಳದಿ
ಭಾವ ಬೆಸುಗೆಯ ರಂಗೋಲಿ ಹಾಕಿದ
ಅವಳೇ ಅಳಿಸಿ ನಡೆದದ್ದು
ಎಲ್ಲೂ ಸುದ್ದಿಯಾಗಲೇ ಇಲ್ಲ!

ಸುದ್ದಿಯಾಗುವುದೂ ಇಲ್ಲ...

# ಮೊರೆ

**❖ ನಾಝೀಮಾ ಹಾಸನ**

ಕಂದಮ್ಮಗಳು ಮೊರೆ ಇಡುತಿವೆ
ಕೇಳಬಾರದೆ ಒಮ್ಮೆ ಕಿವಿಗೊಟ್ಟು
ಕೆಲವು ತಾಯ ಬಸಿರಲೆ
ಹಲವು ಕಣ್ಣ ತೆರೆಯದೆಯೆ
ಕೈ ಎತ್ತಿ ಬೇಡುತಿಹವು
ಭಗವಂತನಲಿ ಮೊರೆಯಿಡುತಿಹವು

ಹೇ! ದೇವಾ..........
ನನಗೆ ಹೆಣ್ಣಾಗಿ ಮಾಡಬೇಡ
ಈ ನಾಡ ಒಡನಾಟ ನೀಡಬೇಡ
ನನ್ನಮ್ಮ ಅಕ್ಕಂದಿರ
ನೋವ ನೋಡಲಾರೆವು
ಈ ಭುವಿಯಲಿ ಮತ್ತೆ ಬದುಕಲಾರೆವು

ಅನುದಿನವು ಅನುಕ್ಷಣವು
ಭಯವು ಆವಾರಿಸಿಹುದು
ನಮ್ಮ ಕಿತ್ತು ತಿನ್ನುವ
ಗುಡುಗುಗಳು ಘರ್ಜಿಸುತಿಹವು
ವಿವೇಕ ವಿವೇಚನೆ ಮೃತ ಮೃಗಗಳು
ಹೊಸಿಲ ಹೊರ ಒಳಗೆ
ಮುಖವಾಡಗಳ ಧರಿಸಿಹವು

ಒಮ್ಮೆ ಉಸಿರ ಕಿತ್ತುಕೊಳ್ಳುವರು
ಮಗದೊಮ್ಮೆ ಬಸಿರ ಬಗೆದು ಬಿಡುವರು
ಎಲ್ಲೆಲ್ಲಿಯೂ ಚಪ್ಪರಿಸಿ ತಿನ್ನುವ
ಕೆಕ್ಕರಿಸಿ ನೋಡುವ
ಜೊಲ್ಲು ಸುರಿಸುವ
ಮುಖವಾಡಗಳೆ ಕಾಣುತಿಹವು
ಕೈಯ ಕಟ್ಟಿ ಬಾಯ ಬಿಗಿದು
ಎದೆಯ ಮುಟ್ಟಿ ರಕ್ತ ಬಸಿದು
ಬಸಿರ ಸೀಳಿ ಚೀರಾಟ ಕೇಳಿ
ಮೀಸೆ ತಿರುವಿ ಗಹಗಹಿಸುವ
ಮುಖವ ನೋಡಲಾರೆವು
ನೋವ ಸಹಿಸಲಾರೆವು

ನಿನ್ನೀ ಸ್ಥಿತಿಗೆ ನೀನೇ ಕಾರಣ
ಸಂಸ್ಕಾರ ಸಂಸ್ಕೃತಿಯ ಮೇಲುದೆ ಧರಿಸಿ
ಇದ್ದಿದ್ದರೆ ನೀನು ಮನೆಯ ಮೂಲೆಯಲಡಗಿ
ಅಪ್ಪ ಅಮ್ಮ ಅಜ್ಜಿ ಅಣ್ಣ ತಮ್ಮ
ಬಂಧು ಬಳಗ ಸಮಾಜದ ಆಂಬೋಣ
ಸಿಗುತ್ತಿರಲಿಲ್ಲ ನಿನಗೀ ನೋವಿನ ಹೂರಣ

ಹೇ.. ದೇವಾ.. ಭಗವಂತ...
ರಾಮಕೃಷ್ಣ ಜೀಸಸ್ ಅಲ್ಲಾ
ನಮಿಸುವೆವು ನಿಮ್ಮನೆಲ್ಲಾ
ಕೇಳಿರೆಮ್ಮ ಮೊರೆಯ
ನೀಡಿರೆಮ್ಮ ಮುಕುತಿಯ

# ಈ ನೆಲದಲ್ಲಿ

❖ ಮರುಳಸಿದ್ದಪ್ಪ ದೊಡ್ಡಮನಿ

ಅನ್ನ ಉತ್ತಿ ಬಿತ್ತುವ ನೆಲಕೆ
ಮೊಳೆ ಹೊಡೆದಿದ್ದಾರೆ ಈ ನೆಲದಲ್ಲಿ
ಅನ್ಯರ ಅಂಗಾಲಿಗೆ ರತ್ನಗಂಬಳಿ ಹಾಸಿ
ನಡೆದಿದ್ದಾರೆ ಈ ನೆಲದಲ್ಲಿ

ಬಣ್ಣದ ಮಾತನಾಡುವ ಸೋಗಲಾಡಿ
ಮಾತಿಗೆ ಬೇಸರವಾಗಿದೆ
ಹಸಿರು ಬೆಳೆವವನ ಉಸಿರು ಅಡಗಿಸಲು
ಸಜ್ಜಾಗಿದ್ದಾರೆ ಈ ನೆಲದಲ್ಲಿ

ಹುನ್ನಾರದ ಹುತ್ತ ಕಟ್ಟಿ
ಬಾನೆತ್ತರಕೆ ಬೆಳೆಸಿರುವರು
ಧರ್ಮದ ಅಫೀಮು ಕುಡಿಸಲು
ಟೊಂಕ ಕಟ್ಟಿ ನಿಂತಿದ್ದಾರೆ ಈ ನೆಲದಲ್ಲಿ

ಮಾತನಾಡುವ ಬಾಯಿಗಳಿಗೆ
ಬಹು ಬೇಗ ಬೀಗ ಜಡಿವವರು
ಕಣ್ಣೀರಿಗೆ ಕಿಮ್ಮತ್ತಿಲ್ಲ ಬಣ್ಣದ ಮಾತುಗಳ
ಸೃಷ್ಟಿಸಿದ್ದಾರೆ ಈ ನೆಲದಲ್ಲಿ

ಮರುಳನ ಕರುಳು ಹಿಂಡುತ್ತಿದೆ
ಒಳಗೆ ಧಗ ಧಗಿಸುವ ಕಿಚ್ಚಿಗೆ
ಹಾಲಿಲ್ಲದ ಕೆಚ್ಚಲಿಗೆ
ಹಸಿವಿಲ್ಲದ ಕರುವನು
ಕಟ್ಟುತ್ತಿದ್ದಾರೆ ಈ ನೆಲದಲ್ಲಿ

# ನಿನ್ನ ಬೆವರು ಘೋಷ ವಾಕ್ಯ

**❖ ಮಧು ಬಿರಾದಾರ**

ಈಗ ನಿನ್ನ ಬೆವರು ಘೋಷ ವಾಕ್ಯ
ನೆರಳಾಗಿ ನಿಂತ ನೀನು ಬರೀ ಮೂರ್ತಿ
ಓದು ಚಿಂತನೆ ನರಿ ತಲೆಗೆ
ನಾವೂ ಬಟ್ಟೆ ತೊಟ್ಟಿದ್ದೇವೆ
ನಿನ್ನ ಹಾಗೆ
ಎಲ್ಲವನ್ನೂ ಗಾಳಿಗೆ ತೂರಿ ಮರೆಯಲು

ನನ್ನ ಕಾಲ ಹೇಗಿದೆ ನೋಡು
ಎರಡೂ ದಡದ ಮೇಲೆ
ಹಸಿದ; ಕಣ್ಣೀರಿಡುವ ಮೊಸಳೆ
ಕೈಕೈ ಹಿಡಿದು ಕಾದಿವೆ
ನಾವು ಈಗ ಬರೀ ಆಹಾರ
ಎಲ್ಲದಕ್ಕೂ ಆಹಾರ

ನೀನು ಹುಟ್ಟು ಹಾಕಿದ "ನಾವು" ಗೆ
ಗೋರಿ ತೋಡಲಾಗಿದೆ
ನಾನೆಂಬ 'ನವ'ಹದ್ದು ತಲೆ ಕುಕ್ಕುತ್ತಿದೆ
ಸಂವಿಧಾನ
ಕೈಬಲ
ಬಾಯ್ಬಲ
ಅಧಿಕಾರದ ಅಮಲಿನಲಿ
ತಿಳಿ ಹೇಳುವ ವ್ಯಾಖ್ಯಾನ
ಸ್ವ ಪರದ ಕಹಳೆ

ಬಾಬಾ
ಬದುಕಿನ ಮರಳು ಗಾಡಲಿ ಇಂಗುವ
ನಮ್ಮ ಕಣ್ಣೀರು ಯಾವತ್ತೂ ನಿಂತಿಲ್ಲ
ಹೊಟ್ಟೆ ತುಂಬಿದವರ ಬಗ್ಗೆ ಏನು ಹೇಳಲಿ
ಹಸಿದು ನಿಂತವರು ನಾವು

ಬಾಬಾ
ನಾವೀಗ ಅನಾಥರಲ್ಲ
ಬರೀ ಅನಾಥರು
ಸ್ವದೇಶದಲ್ಲಿ ಪರದೇಶಿ
ನೋಡು ಈ ರಾತ್ರಿ
ಚುಕ್ಕಿ ಎಣಿಸಲೂ ಸಾಧ್ಯವಾಗುತ್ತಿಲ್ಲ

ಬಾಬಾ
ಭರವಸೆಯಿದೆ
ಆತ್ಮಕ್ಕೆ ಇಟ್ಟ ಬುದ್ದನ ದೀಪ
ಬೆಳಕು ಕೊಟ್ಟೇಕೊಡುವ ಕುರಿತು
ನಮ್ಮ ಗುಡಿಸಲಲ್ಲಿ
ನಾವು ನಾವೇ ಮುನಿಸಿಕೊಂಡುದ್ದರ ಬಗ್ಗೆ
ಹೇಳಿ ಕೊಳ್ಳಲಾಗದ ನೋವಿದೆ
ಸುಮ್ಮನೆ ಮುಖ ನೋಡಿ ಬದುಕುತ್ತೇವೆ
ನಾಳೆಯಾದರೂ ಒಂದಾಗಬಹುದು
ನಿನ್ನ ಚಿಂತನೆಯ ಗುರಿ ಮುಟ್ಟಬಹುದು

ಬಾಬಾ
ಒಟ್ಟಾರೆ ನಾವೀಗ
“ಬಹುದು”ದರ
ಒಳಗಿದ್ದೇವೆ

# ಸಾವ ಕದವು ತಟ್ಟುವ ತನಕ

❖ ಲಕ್ಷ್ಮೀನಾರಾಯಣ ಕೆ. ವಾಣಿಗರಹಳ್ಳಿ

ಬದುಕು ಸಾವಿರ ದಾರಿಯ ಕವಲು
ಕೊನೆಗಾಣದ ಸಾಗರದ ನಡುವೆ
ಸಿಗುವ ಬಂಡೆಯಂತೆ

ನಿಟ್ಟುಸಿರು ಬಿಡಲು
ತೆರೆದ ಬಯಲು ವಿಶಾಲ
ವಿಶ್ವದ ಗೋಲಾಕಾರಕ್ಕೆ
ನಮ್ಮಜ್ಜಿಯ ದಾಪುಗಾಲು

ಬದುಕಲೇಬೇಕು ಬದುಕ ಅನಿವಾರ್ಯಕ್ಕೆ.
ಜೇಡ ತಾನು ಹೆಣೆದು ಕೊಂಡ
ನೊರೆಯ ನಾರಿಗೆ ಕೊನೆಯಲ್ಲ

ಮಳೆಯ ಬಿರುಸಿಗೆ ಸಿಕ್ಕು
ನೆಲದ ಪಾತಾಳಕ್ಕೆ ಸೇರುವ ಇರುವೆ
ತಾನು ಮಣ್ಣಮನೆಯ ಹುತ್ತಕಟ್ಟಿ
ತಾನೂ ಉಳಿಯದಂತೆ ಉಳಿದುಬಿಡುವುದು
ಬದುಕ ಪ್ರೀತಿಗೆ

ಅರೆಹುಚ್ಚನೂ ಕೂಡ ಚಿಂದಿ ಬಟ್ಟೆಯ ಮೇಲೆ
ಮಣಗಟ್ಟಲೆ ಏನನ್ನೋ ಮೈಯಮೇಲೇರಿಸಿ
ತನ್ನ ಆಯಸ್ಸು ಕಳೆಯುತ್ತಾನೆ
ಯಾವ ಅರಿವೂ ಇಲ್ಲದೆಯು

ಬದುಕು ದೂಡುವುದು ಅನಿವಾರ್ಯ!!!
ಸಂಸಾರ ತೊರೆದ ಸನ್ಯಾಸಿಯೂ ಕೂಡ
ಕಾವಿ ಭಾರವ ಬಿಡದೆ ಬದುಕುತ್ತಾನೆ.

# ಸಮಯದ ಗೊಂಬೆ

❖ **ಎ. ಜಯಲಕ್ಷ್ಮೀ ಮಾಲೂರು**

ಈ ಬೀದಿ ಹಗಲಲ್ಲಿ ಮಾತ್ರ
ಬಣಗುಡುತ್ತದೆ
ನನ್ನ ಕಣ್ಣಳತೆಯ ಬ್ರಹ್ಮಾಂಡವನ್ನು
ಸುತ್ತಿ ಸುಳಿದು
ಹೆಜ್ಜೆಗಳನ್ನು ಎತ್ತಿಡುತ್ತ ನಡೆಯುತ್ತಲೇ ಇದ್ದೇನೆ.
ಆದರೆ, ಬೀದಿ ಒಂದರೆಕ್ಷಣ ದಿಗಿಲು
ಹುಟ್ಟಿಸುತ್ತದೆ!

ಎದುರು ನಿಂತವರು ಬಿಕ್ಕಳಿಸುತ್ತಿದ್ದಾರೆ;
ಇಲ್ಲಿ ಅಂದಾಜಿಗೆ ಸಿಗದಷ್ಟು ಮುಖಗಳಿವೆ,
ಸಾಗಿದಂತೆ ಕುರುಹು ಉಳಿಸುತ್ತಾ
ಎದುರು ನೋಡುವವರೂ ಇದ್ದಾರೆ;

ಈ ರಾತ್ರಿಯಲಿ –
ಕಡಲ ತೀರದಿಂದ ಏಕಾಏಕಿ ಹಾರಿ ಬರುವ
ಬೆಳದಿಂಗಳೂ ಇದೆ!
ಇಬ್ಬರದೂ ನಿಲ್ಲದ, ಎಲ್ಲೆಡೆ ಸಲ್ಲುವ
ಪಯಣದ ಚಿತ್ರಣವಿದೆ.
ಸುತ್ತಲೂ ಎಲ್ಲೆಲ್ಲಿಯೂ ಪ್ರತಿಫಲಿಸುವ
ಕನ್ನಡಿಯಿದೆ.
ಆ ಕನ್ನಡಿಯಲ್ಲಿ ನನ್ನದೇ ಬಿಂಬ
ಅಳಿಯದೆ ಉಳಿಯದೆ ಮೌನವಾಗಿದೆ.
ಉಸಿರಾಟವೂ ಕೇಳದಂತೆ ನಿಶ್ಯಬ್ದವಾಗಿದೆ!

ಎಷ್ಟೇ ನಡೆದರೂ
ಎತ್ತಲೋ ಸಾಗುವ ಹಾದಿ.
ಕೊನೆಯ ಮುಟ್ಟಿದಾಗ
ನಿರೀಕ್ಷೆ ಪ್ರಜ್ವಲಿಸುವ ಪರೀಕ್ಷೆ!
ಸರಿವ ಸಮಯದಲಿ
ಎಂದಾದರೂ ಬರಲಿ ಮಳೆ
ತರಲಿ ಜೀವ ಸಂಕುಲಕೆ ಜೀವಕಳೆ
ಕೊರಡು ಕೊನರಿ ಹಸಿರುಕ್ಕಲಿ ಧರೆ !

# ದೇವರಿಲ್ಲದ ಗುಡಿ

❖ **ಸೌಮ್ಯ ಹೆಗ್ಗಡಹಳ್ಳಿ**

ಮೌನವಹಿಸಿದೆ ಕಂಸಾಳೆ ಬಟ್ಟಲು
ಪದ ಕಟ್ಟುವ ಅರಸನಿಲ್ಲದೆ
ಗಂಟಲು ಬಿಗಿದು ಮೂಲೆ ಸೇರಿದೆ
ಲೋಕದಿ ಶಂಖ ಜಾಗಟೆಗಳ
ಜತೆಗೂಡಿ..

ಸಿರಿಧಾನ್ಯವನ್ನೊತ್ತ ತುಂಬು ಬೊಗಸೆಯ
ಕೈಗಳೀಗ ಕ್ವಾರಣ್ಯಕ್ಕೂ ಅಗುಳಿಲ್ಲದೆ
ಬಡತನವ ಹಾಸಿ ಹೊದ್ದು ಮಲಗಿದೆ
ಒಳಿತನ್ನರಸುವ ಜಂಗಮನಿಲ್ಲದೆ...

ತುಕ್ಕು ಹಿಡಿದು ಮೊಳೆಗೇರಿದ ಜೋಳಿಗೆ
ಗಾಳಿಗೆ ಪಟವಾಗಿ
ಮೋಹಿನಿಯಾಗಿ ಕಂಡಿದೆ..

ಎಡೆಯಿಟ್ಟ ಬೆಲ್ಲದನ್ನದ
ನೈವೇದ್ಯವು ನೀವರಿಲ್ಲದೆ
ಹಳಸಿ ಹುಳುವಾಡಿದೆ..
ಸತ್ವ ಕಳಕೊಂಡ ತೀರ್ಥವು
ಅಂಗೈ ಪೋಷಿಸಿ
ನೆತ್ತಿಯ ತಂಪುಗೊಳಿಸದೆ
ಕಣ್ಣೀರಿಟ್ಟಿದೆ...

ತೇದ ವಿಭೂತಿಯ ಬಟ್ಟಲಲಿ
ತ್ರಿಮೂರ್ತಿಗಳ ಗುರುತಷ್ಟೇ ಉಸಿರಾಡಿದೆ..

ಹಣೆಪಟ್ಟಿಯ ಸಿಂಗರಿಸಿದ
ಪಾಪಕ್ಕೆ ಗುರಿಯಾಗಿ
ಸುಗಂಧವ ಬೀರದೆ
ಹಳೆ ಗೋಡೆಯ ಗೂಡು ಸೇರಿದೆ...

ಸಾಂಬ್ರಾಣಿ ಧೂಪಗಳ ಗಮಲಿಲ್ಲದೆ
ಸಗಣಿ ಇಲ್ಲದ ನೆಲದಲ್ಲಿ
ಯಕ್ಕದ ಗಿಡ ಹುಟ್ಟಿ ಹೂ ಬಿಟ್ಟಿವೆ...

ಬೆತ್ತ ಇಡಿವ ಕೈಗಳಿಲ್ಲದೆ
ಗಾಳಿ ಗ್ರಾಚಾರ ಎಗ್ಗಿಲ್ಲದಂತೆ
ಕೂಸು ಕುಮರಿಗಳ ಮೈಗೊಗ್ಗಿವೆ...

ದೇವರಿಲ್ಲದ ಗುಡಿ
ಇಲ್ಲದರ ವಿಜಯಸಾಧಿಸಿ
ಗಹಗಹಿಸಿದೆ...
ದೇವರಿಲ್ಲದ ಗುಡಿ ಸ್ಮಶಾನವಾಗಿದೆ...

# ನೋವು ಮತ್ತು ಬೆಳಕು

❖ ವಿಶಾಲ್ ಮ್ಯಾಸರ್

ಗೆಳೆಯ,
ನೋವುಗಳು ಬೆಳಕು ಒಳಹೊಕ್ಕಾಕ ಇರೋ ಕದಾ ಅಂತಾರ
ಅಂಗಾರ ಮನಿ ತುಂಬಾ
ಕದಗುಳೆ ಅದಾವ
ಹೆಂಗಾರ ಬರ್ಬೋದು ಟಪಾಲು
ಪಾರ್ವಾಳ ಅಂತ ಅಂಗಳದಾಗ ಕುಂತೇವಿ
ಹೌದು ಮನಿ ತುಂಬಾ ಗಾಯ
ನಮ್ ಮಯ್ಗೋಳು...

ಈ ಬೆಳಕು ಬರೋ ಹಾದಿ ಏನು ಸರಳಿಲ್ಲ ಕೇಳು
ರಾವ್ ರಾವ್ ಹೊಡಿಯೋ ಗವಿ ದಾಟಿ
ಈ ಸೂಜಿ ತುತ್ ಮೂತಿ ತೂರಿ
ಹೈ ವೇ ಹಂಗ್ ಅಗಲ ದಾರಿ
ಗುಡ್ಡ ಗಿಡ್ಡ ಹಾರಿ ಹಾರಿ
ಕೂದಲ ಸೀಳಿ ಬರಾಕು

ಜಾಡಿನ್ಯಾಗ ತುಂಬಾ ಚಂಡುವ್ವ ಬೆಳದಾರ
ಮಾತಾಡಧಾಂಗ ಕುತಿಗಿ ಕ್ವಯ್ದು ರಗುತ ಚೆಲ್ಲಿ.
ಹೂವ್ವಿನ್ ಒಂದ್ ಪಕಳಿ ಕಿತ್ತಿದ್ರ ನೂರು
ನೂರೋಗಿ ಸಾವಿರ
ಎಲ್ಲ ಕೂಡಿ ಮರುಳು ಮಾಡಿ
ನಿಂದ್ರಿಸಿ ಗಿಂದ್ರಿಸ್ಯಾವ ಮತ್ತೆ..

ರಗುತ ನಿರಿಗಿನ ಹೆಚ್ಚೇಳು
ಇಲ್ಲಿ ನಿರಿನಾಂಗ ಚಲ್ಯಾರ ಅದನ್ನ
ದೇವ್ರು – ಧರ್ಮ ಹಿಡಿ ಹಿಡಿದ ಕತ್ತಿಗೊಳು
ಮೊಂಡ್ ಆಗಿದ್ದು ನೋಡಿವು
ಈಗು ಹಂಗ ಅಕ್ಕಾವ ಅಂತ ಕುಂತೇವು

ಮೊದ್ಲ ಹೇಳಿಲ್ಲ ಏನೂ
ಮನೆ ತುಂಬ ಬಾಗ್ಲು
ಕುಂತೇವಿ ನನ್ನಂತೋರು
ಹತ್ತಕ ಹತ್ತು ನೂರಾರು
ಹಂಗಾರ ಬರ್ಲಿ
ಎಲ್ಯಾರ ಬರ್ಲಿ
ಕಳಿಲಿ ನಮ್ ಶತಮಾನದ ಕತ್ಲಿ

# ಎದೆಯ ಮೇಲಿನ ಬಟ್ಟೆ

**❖ ಆನಂದ ಎಸ್ ಗೊಬ್ಬಿ**

ಎಷ್ಟೊಂದು
ಜಾಗರೂಕತೆ ವಹಿಸಬೇಕು
ಎದೆಯ ಮೇಲಿನ
ಬಟ್ಟೆ ಜಾರುವುದು
ಒಮ್ಮೊಮ್ಮೆ!

ಆ ನೋಟಗಳು
ಬರೀ, ಅವುಗಳ
ಮೇಲೆಯೇ,
ನಾವೇನು
ಬಯಸಿ ಬಂದಿದ್ದಲ್ಲ..!

ಆ ಕುಲ
ಕಣ್ಣಿನ ಅಳತೆ
ಪಟ್ಟಿಯಲ್ಲಿ
ಅವುಗಳಿಗೆ ಅಡ್ಡೆ ಸರಿರಿಸಿದೆ
ದಾರಿಯ ಬದಿಯಲ್ಲಿ
ಹೀಯಾಳಿಸಿದ್ದು ಇದೇ..!

ಇಲ್ಲಿ ಬಿರುಸಾದವುಗಳಿಗೆ
ಉಬ್ಬಿದವುಗಳಿಗೆ
ಬಹು ಬೇಡಿಕೆ,

ಊಹಿಸಿರಲಿಲ್ಲ
ತೂಗುವ ತಕ್ಕಡಿಗೆ
ಆಸರೆಯಾಗಿದ್ದು!

ಅವನ ಸುಖದಾಟದಲ್ಲಿ
ಸುಖಿಸುವಲ್ಲಿ ನೆರವಾಗಿ
ನರಳಾಡಿವೆ,
ತಪ್ಪು ಮಾಡಿದ್ದಲ್ಲ
ತಾನಾಗಿಯೇ ಒಲಿದು ಬಂದದ್ದು!

# ಕವಚ

❖ **ಪಿ. ನಂದಕುಮಾರ್**

ಜಲ ಪುಷ್ಪ ಪಲ್ಲಂಗ ಕುವರನು ನಾಭಿ ಬಿಂದುವಿನ ಪಳೆಯುಳಿಕೆ
ಕವಚ ಧರಿಸಿದ ದೊರೆಯ
ಕೊಳೆತ ಶವಕ್ಕೆ ಶೃಂಗಾರ
ಲೋಕಕ್ಕೆ ಬೆನ್ನು ಮಾಡಿ ಮಲಗಿದೆ ಅರಸೊತ್ತಿಗೆ

ಕರ್ಮಿಷ್ಟರ ಕಣ್ಣ ಕಿವಿಗೆ
ಸಜ್ಜನರ ಮಹಾಮಾರ್ಗದ
ಜಲದ ಕಣ್ಣಿಗೆ ಉಬ್ಬಸ

ಗತದ ವೈಭವೀಕರಣದೆದುರು
ಎಂದೂ ಮುಗಿಯದ ಯುದ್ಧ
ಪೀಠ ಮಂತ್ರ ದಂಡಗಳ ಮುಂದೆ
ಸಮಾಧಿಗಿಳಿದಿದೆ ಕನಸಿನ ತೂತು ಕಾಸು

ನಿರ್ಲಜ್ಜ ಅನುಕೂಲ ಸಿಂಧು ರಶ್ಮಿ
ಧೂರ್ತರ ಕ್ಷೋಭೆಗೆ ಜೋತುಬಿದ್ದಿವೆ ಬಾವಲಿ
ಬಾಲ ಮುತ್ತೈದೆ ಕನಸುಗಳು
ನೇತುಬಿದ್ದಿವೆ ಹಸಿರೊಡೆಯದ ಮರಕ್ಕೆ

ಯಾವುದು ನಿಜ?
ಇಲ್ಲಿ ಎಲ್ಲವೂ ಕಣ್ಕಟ್ಟು
ಈ ಕಪ್ಪು ದೇಹದ ಚಹರೆಯೊಳಗೆ

ಮೈದಾಳಿದ ಅಕ್ಷರ ಸಂಸ್ಕೃತಿ
ಕವಚ ಧರಿಸಿದ ದೊರೆಯ
ಮೀನಖಂಡದಲ್ಲಿ ಸಣ್ಣಗೆ ನಡುಕ ಹುಟ್ಟಿಸಿದೆ

ಸಂಚಿನ ಹದ್ದುಗಳ
ಕುಶಲ ವಾರ್ತೆಗೆ, ಭಾವ ಭಂಗಿಗೆ
ಲೋಕ ಕಕ್ಕಾಬಿಕ್ಕಿ

ಸತ್ಯ ನುಡಿವ ತಲೆಗೆ ತುಪಾಕಿ
ಭೂತದ ಕತ್ತಲಲ್ಲಿ
ಅಂಕುಶವಿಲ್ಲದ ಅರಸೊತ್ತಿಗೆಯ
ಯಾನಕ್ಕೆ ನಲುಗಿವೆ ಹಲವು ಹೊಲಗೇರಿ

ಜಂಬೂ ದ್ವೀಪದ ಕತ್ತಲೆಗೆ
ಬೇಕೀಗ ಬೆಳಕಿನ ಬೀಜಗಳ ಸವಾರಿ

# ಬಯಕೆಗಳ ನಾಳೆಗಳೆಡೆಗಿನ ಹಾದಿ

❖ **ರಾಮಕೃಷ್ಣ ಸುಗತ್**

ಇದ್ದಡದ ಲೋಕದಿಂದ
ಈಗಷ್ಟೇ ಹೊರಬಂದ ಪುಳಕ
ಕತ್ತಲನ್ನು ಮೋಹಿಸಿ ಮೋಹಿಸಿ
ಬೆಳಕಿಗೊಗ್ಗಲು ಕಣ್ಣುಗಳು ಹಿಗ್ಗಬೇಕಿದೆ
ಕೂಡಿದ್ದವು ದಿನಗಳು ಹಿಂದೊಮ್ಮೆ
ಮುದಿ ಯೌವ್ವನದಿಂದ
ಈಗಷ್ಟೇ ಎಚ್ಚರಗೊಂಡು
ದಿಟ್ಟಿಸುತ್ತಿವೆ ಬದುಕನ್ನು ದಾರಿಹೋಕನಂತೆ
ಪರಾತಂತ್ರ್ಯದ ಪಟ್ಟಣವೊಂದರಿಂದ
ಕೊಸರಿಬಂದ ಪುಳಕ

ನಿನ್ನೆಯವರೆಗೂ ನಿದ್ರಿಸದ ಕಣ್ಣುಗಳು
ಒರಗಲು ಹುಡುಕಿವೆ ಹೆಗಲ
ದೂರದಿಂದ ಸಮತಟ್ಟಾಗಿದ್ದ
ದೂರದೂರಿನ ದಾರಿಗಳು
ಹೆಜ್ಜೆ ನುಂಗಿಕೊಳ್ಳುವ ನಡುವಲ್ಲೇ
ದಿಬ್ಬದುಂಡೆ ಸಮೇತ ಮುಳ್ಳು ಹೊತ್ತು ನಿಂತಿವೆ

ಧೂಳಿಗೆ ಜಾರುವ ಕಣ್ಣೀರಿನಲ್ಲಿ
ಕಾಲುಜಾರುತ್ತಿವೆ ದೂರದೂರಿನ ಕನಸುಗಳು
ಪೂರ್ಣಾಯುಷ್ಯದ ಭರವಸೆಯಲ್ಲಿ
ನಾಳೆಗಳು ನಿದ್ದೆಗೆಡಬಾರದೆಂದು

ನಿಲ್ದಾಣವೊಂದರ ದಯೆಯ ನಿರೀಕ್ಷೆಯಲ್ಲಿಯೇ
ಪಯಣ ಸಾಗುತ್ತಿದೆ

ಹಸಿದ ಕಾಮದ ಬೀದಿ
ಬೆಳದಿಂಗಳನು ಬಲತ್ಕರಿಸುವಾಗ
ಮೈನೆರೆದ ಚಂದ್ರ
ಶಪಿಸಬೇಕಿರುವುದು ಸೂರ್ಯನನ್ನೇ ಅಲ್ಲವೇ
ದೀರ್ಘರಾತ್ರಿಯ ಕಾಯುವಿಕೆಗಳು ಕೊನೆಯಾಗುತ್ತಲೇ
ಕೊನೆಯಿರದ ಕಾಯುವಿಕೆಗಳು ಕಿನಾರೆಗುಂಟ ಸುಳಿದಿವೆ

ಸುಗತನೇ
ಅನಂತದಲ್ಲಿ ಹಾರಾಡಲು
ಪರವಾನಗಿ ಸಿಕ್ಕಮಾತ್ರಕ್ಕೇ
ಹಂಗಿನಿಬ್ಬನಿಯ ಎದೆಯಲ್ಲಿ ದಾಹ ಅರಳದು
ನಿನ್ನ ಮಣ್ಣಿಗೆ
ಸೊಕ್ಕಿನ ಹಕ್ಕುನೀಡುವ ಕಾಮನೆಗಳಿಗೆ
ರೆಕ್ಕೆಗಳಿನ್ನೂ ಸಿದ್ಧಗೊಳ್ಳಬೇಕಿದೆ

# ಈಗಲೇ ಹೇಳಿ

❖ **ಧನುಷ್ ಎಚ್. ಶೇಖರ್**

ಈಗ ಹೇಳಿ
ನಿಮ್ಮ ಕೈಗಳಲ್ಲಿ ನಲುಗಿದ ಧ್ವನಿಗಳೆಷ್ಟು
ಅಡಗಿದ ನಿಟ್ಟುಸಿರುಗಳೆಷ್ಟು
ಗಂಟಲಲ್ಲೆ ಒಣಗಿದ ರವಗಳೆಷ್ಟು
ಎಷ್ಟು ಎಷ್ಟು
ಉತ್ತರವಿಲ್ಲದ ಪ್ರಶ್ನೆಗಳೆಷ್ಟು?
ತಾಯಿ ದೇವಿ ಮಾತೇ
ಜಗತ್ಜನನಿ ಎನಿಸಿಕೊಂಡರೂ
ಎಂದೂ ಮುಗಿಯದ ತಲ್ಲಣಗಳೆಷ್ಟು ?

ಈಗ ಹೇಳಿ
ಒಂಟಿ ದನಿಯ ಸೀರೆ ಸೆಳೆದು
ಹೊಂಚುಹಾಕಿ ಮರ್ಮ ಮುರಿದು
ದೇವಿ ಎದುರು ಉರುಳುವ ನೀವು
ನಡು ಬೀದಿಯಲ್ಲಿ ನಿಂತು
ಸ್ವಾತಂತ್ರ್ಯದ ಹಾಡು ಹಾಡುತ್ತೀರಿ
ಅವಳ ರಕ್ಷಣೆಗಾಗಿ ಪಣ ತೊಡುತ್ತೀರಿ
ಅಂದಿನ ಇರುಳೇ ಬೇಟೆಗಾಗಿ ಕಾಯುತ್ತೀರಿ
ಸಿಕ್ಕ ಬೇಟೆಯ ತಿಂದು ತೇಗಿ
ಚಕಳವ ಹೂತು ಮಣ್ಣಲ್ಲಿ
ಅದೇ ಮಣ್ಣಿಗೆ ಮತ್ತೆ
ನಂಬಿಕೆಯ ಬೀಜ ಬಿತ್ತುತ್ತೀರಿ

ನೀರೆರೆಯುತ್ತೀರಿ
ಹೂವು ಹಣ್ಣಿಗಾಗಿ ಹಪಹಪಿಸುತ್ತೀರಿ

ಈಗಲೇ ಹೇಳಿ
ಅವಳು ದೇವಿಯೋ
ಇವಳು ತಾಯಿಯೋ
ಅಥವಾ
ಕತ್ತಲಲ್ಲಿ ನಿಮ್ಮ ಪಂಜಗಳಿಗೆ
ಸಿಕ್ಕ ತರುಣಿಯೋ...?

# ಅಂತಿಮಯಾತ್ರೆ

❖ **ಹರೀಶ ಕೋಳಗುಂದ**

ಉಸಿರು ಬಿಗಿ ಹಿಡಿದಿದೆ,
ಎದೆಬಡಿತ ಕ್ಷೀಣ.
ಕೆಲವೇ ಸಮಯ ಬಾಕಿ.
ಪಸೆಯಾರಿದ ಗಂಟಲಿಗೆ
ಕಡೆಯ ಬಯಕೆ, ಗುಟುಕು
ಗಂಗಾಜಲ ಮಾತ್ರ. ಮತ್ತೇನೂ ಬೇಡ.

ಉರಿವ ಹಣತೆಯ ಸೊಡರು
ಬೀಸುಗಾಳಿಗೆ ತುಯ್ದಾಟ....!

ಕಾಲ ಮೀರುತ್ತಿದೆ,
ಸಾಸಿವೆಯ ಸಾಲಕ್ಕೆ ಹೋದವಳು
ಇನ್ನೂ ಮರಳಿಲ್ಲ, ದಾರಿಯಲಿ
ಬುದ್ಧ ಸಿಕ್ಕಿರಬೇಕು.
ಕಾಲವಶದಲ್ಲಿ ಸಾವಿತ್ರಿಯೂ ಲೀನ.
ಪುರುದೇವನ ವರ್ತಮಾನವೂ ಇಲ್ಲ.

ಕಣ್ಣು ಕವಿಯುತ್ತಿದೆ,
ಚಾಚಿ ಮಲಗಿದ ದೇಹ ಅಸಾಧ್ಯ ಭಾರ.
ಸುತ್ತ ಕತ್ತಲೆಯ ಕೂಪ, ಏಕಾಂಗಿ ಭಾವ,
ಹಠಾತ್ತನೆ ಯಾರದೋ ಚೀತ್ಕಾರ,
ಯಾರೋ ನಕ್ಕಂತೆ, ಅತ್ತಂತೆ,

ಹೆಸರಿಡಿದು ಕರೆದಂತೆ, ಕೈಹಿಡಿದು
ಜಗ್ಗಿದಂತೆ, ಭ್ರಮೆ–ವಾಸ್ತವ ಇಹ–
ಪರಗಳ ನಡುವೆ ತಾಕಲಾಟ,
ಅವ್ಯಕ್ತ ಆತಂಕ....!

ಯಶೋಧರನ ಹಿಟ್ಟಿನ ಹುಂಜಕ್ಕೂ
ಉಂಟು ಬೆಂತರನ ಕಾವಲು.
ಭೀಷ್ಮ ಇಚ್ಛಾಮರಣಿ.
ಅಂಗಾಧಿಪತಿಗೆ ಕವಚ–ಕುಂಡಲಗಳ ರಕ್ಷೆ.
ಸುಯೋಧನನಿಗೋ ವಜ್ರಕಾಯದ ದೀಕ್ಷೆ.

ನರನ ಬಾಳು..
ಕಾವ, ಕೊಲುವ, ನಗಿಸಿ ಅಳಿಸುವ,
ಕುಣಿಸಿ, ನಲಿಸಿ, ಆಡಿಸಿ,
ಗೆಲಿಸಿ ಸೋಲಿಸಿ, ಇದ್ದು ಇಲ್ಲವಾಗಿಸುವ,
ಕಾಣದ ಕೈಗಳ ಪಗಡೆಯಾಟ...!

ಇನ್ನು ನಿಮಿಷಗಳನೆಣಿಸುವುದಷ್ಟೇ ಕೆಲಸ...
ಹೊಸ್ತಿಲಾಚೆಯ ಸುದೀರ್ಘ ಮೌನ
ಕೈ ಬೀಸಿ ಕರೆಯುತ್ತಿದೆ.
ಸಿದ್ಧನಾಗಲೇಬೇಕಿದೆ, ಬಿದಿರುಯಾನ ಕಟ್ಟಿಟ್ಟ ಬುತ್ತಿ...
ಪಯಣ ಸ್ವರ್ಗಕ್ಕೋ ನರಕಕ್ಕೋ ತಿಳಿಯದು,
ಈಗಲೇ ಅರ್ಜಿ ಹಾಕುವೆ.

ಛೇ... ಎಲ್ಲಿಗಾದರೇನು....?
ನಭಕೇರಿದ ಆಯುಷ್ಯಚಪ್ಪರದ
ಮುದಿಹಣ್ಣೆಲೆ ಉದುರಿ ಮಣ್ಣಾಗಲೇಬೇಕು.
ಹಸಿರು ಚಿಗುರಿಗೆ ಎಡೆಯಾಗಲೇಬೇಕು.
ಪರಿವರ್ತನೆ ಜಗದ ನಿಯಮ...

ಅದೋ..... ಅಲೆ ಅಲೆಯಾಗಿ ತೇಲಿ ಬರುತ್ತಿದೆ,
ಅಲ್ಲಮನ ತಮಟೆಯ ಸದ್ದು ಶೂನ್ಯತ್ವದಾಳದಿಂದ.
ಜತೆಗೆ ಬಸವನ ಉಕ್ತಿ,
ಮರಣವೇ
ಮ.....ಹಾ......ನ.......ವ........ಮ್...ಇ

# ಅವನಿಚ್ಛೆ

❖ ಲತಾ ಕೆ.ಎಸ್. ಹೆಗಡೆ

ರಟ್ಟೆಯಲಿ ಮಹಾಬಲವಿದೆ
ಬೆಟ್ಟದಷ್ಟು ಬೇಡಿಕೆಗಳಿವೆ
ನಟ್ಟನಡುವೆ ಜೀವನ
ತೂಗುಯ್ಯಾಲೆಯಾಗಿದೆ,
ಬಿಟ್ಟಿ ಊಟ ಬೇಡವೆಂದು
ಹೊಟ್ಟೆ ಹಸಿವು ನೀಗಿಕೊಂಡು
ಪಟ್ಟು ಬಿಡದೆ ಸಾಗು ನೀನು
ವಿಜಯ ಪಥದೆಡೆಗೆ

ಜಟ್ಟಿಯಂತೆ ಜಟಿಲವಾಗು
ಪಟ್ಟು ಹಾಕಿ ಹೋರಾಡು
ಒಟ್ಟು ಮಾಡು ಇಂದ್ರಿಯಗಳ
ಚಲನವಲನವನು,
ಗುಟ್ಟನು ಕಾಪಾಡುತಿರು
ಸಿಟ್ಟನ್ನು ತೊರೆದುಬಿಡು
ಮೆಟ್ಟಿ ನಿಂತು ನೋಡು
ಜಗವು ನಿನಗೆ ಕಾದಿದೆ

ಬಂದದ್ದೆಲ್ಲ ಬರಲೆನಗೆ
ಕುಂದದು ದೃಢಮನವು
ಮುಂದೆ ಸಾಗುತಿರಬೇಕು

ಬಾಳ ಪಥದಲಿ,
ಹಿಂದಿರುವವರ ನೆನೆಯುತ
ಬಂಧನಗಳ ಬಿಡಿಸುತ
ಗಂಧದಂತೆ ಪರಿಮಳವ
ಪಸರಿಸುತಲಿ

ಹುಟ್ಟು ಸಾವು ಅವನಿಚ್ಛೆ
ಬಿಟ್ಟು ಬಿಡು ಚಿಂತೆಯನು
ಕಟ್ಟಬೇಕು ಗಂಟು ಮೂಟೆ
ಕರೆಯು ಬಂದಾಗ,
ಸುಟ್ಟು ದೇಹ ಹಾಕುವರು
ಬೊಟ್ಟಿಟ್ಟು ಪೂಜಿಸುವರು
ನೆಟ್ಟ ಸಸಿಯು ಮರವಾಗಿ
ತಂಪನ್ನೀಯುವುದೇ?

# ಗೆದ್ದಲು ಬರೆದ ಕವಿತೆ

❖ **ಅಭಿಷೇಕ್ ರಾಯಸಂದ್ರ**

ಅಟ್ಟದ ಮೇಲೆ ಗೆದ್ದಲು ಹಿಡಿದ
ಪುಸ್ತಕವೊಂದು ತನ್ನನ್ನು ತಾನೇ
ಓದುತ್ತಿದೆ ಆದರೂ ಕತೆ ಮುಗಿದಿಲ್ಲ?
ಮಾನವನ ಇತಿಹಾಸವನ್ನೂ
ಗೆದ್ದಲು ಹಿಡಿಸಬಲ್ಲುದು

ಈ ಗೆದ್ದಲು

ಮೂಲೆಗೆ ಬಿದ್ದ ಅಜ್ಜನ ಊರುಗೋಲಿನ
ಹಿಡಿಕೆ ಹಿಡಿಯಲು ಮೇಲಹತ್ತಿದೆ
ಪಾತಾಳದಿಂದೆದ್ದಂತೆ ಆಳೆತ್ತರಕ್ಕೆ
ಬೆಳೆದು ಜಂತಿ ತಲುಪಿದೆ

ಹೆಗಲು ನೋಡದ ನೊಗ
ನೇಗಿಲು ಕುಂಟೆ ಹಲುಬೆಯೆಲ್ಲಾ
ಉತ್ತು–ಭಿತ್ತದ ಹಾದಿಯಲ್ಲಿ
ಗೆದ್ದಲೊದ್ದು ಮಲಗಿವೆ

ಜೀವ ತೊರೆದ ಹಳೆಯ ಮರ
ಗಾಳಿಗುರುಳಿದರೆ
ಮಳೆಯಲಿ ತೊಳೆದುಕೊಂಡ
ಗಿಡವು ಮತ್ತೆ ಚಿಗುರಿದೆ

ಮಣ್ಣೊಳಗೆ ಮಲಗಿಸಿದವನ
ಸುತ್ತಲೂ ಪದಗಳ ಸಾಲ
ಬರೆಯ ಹೊರಟಿವೆ
ತೋಟ ಸಾಲ ಬೇಲಿಯಲ್ಲಿ
ಹುಲ್ಲು ಸೋಗೆಗಳ ನುಂಗಿ ನೊಣೆದು
ಮುಳ್ಳು ಕಂಬ ಒಡಲುಗೊಂಡು
ಕಡದಿಟ್ಟ ಶಿಲ್ಪದಂತೆ ಹುತ್ತ ಕಟ್ಟಿವೆ

ಸೃಷ್ಟಿಗೊಂಡ ವಸ್ತುವೆಲ್ಲಾ ಹಾಗೇ
ಉಳಿದರೆ ಚಟ್ಟ ಪಳೆಯುಳಿಕೆ
ಭೂಮಿ ಮೇಲೆ ರಾಶಿರಾಶಿ
ಹುಟ್ಟಿ ಬರುವ ಹೊಸತಿಗೆಲ್ಲಿ
ಮೂಲ ದ್ರವ್ಯರಾಶಿ

ಗೆದ್ದಲದುವು ಲೋಕದ
ಗದ್ದಲಕ್ಕಂಜದೇ
ಮಣ್ಣ ಘಮಲು ಹಿಂಗುವಂತೆ
ಕರಗಿಸಿ ಕೊನರದ ಕೊರಡನೂ
ಹಿಡಿಮಣ್ಣಿಗೂ ಜೀವತುಂಬುವ
ಗೆದ್ದಲು ಮುರಿದು ಕಟ್ಟುವ
ಕವಿಯಲ್ಲವೇ!

# ಮಿಂಚುಳ್ಳಿ ಸಾಹಿತ್ಯ ಪತ್ರಿಕೆ

ಕನ್ನಡ ಸಾಹಿತ್ಯ ಪತ್ರಿಕೆಗೆ ನಿಮಗೆ ಸುಸ್ವಾಗತ. ಇಲ್ಲಿ ನೀವು ಕನ್ನಡದ ಕಥೆ, ಕವಿತೆ, ಅಂಕಣ, ವಿಮರ್ಶೆ, ಪುಸ್ತಕ ಪರಿಚಯ, ಪ್ರಬಂಧ, ನಾಟಕ, ಮಕ್ಕಳ ಸಾಹಿತ್ಯ, ಅನುವಾದ, ಮಿಂಚುಳ್ಳಿ ತ್ರೈಮಾಸಿಕ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಹಾಗೂ ಸಾಹಿತಿಗಳೊಂದಿಗೆ ನಡೆಸುವ ವಿಶೇಷ ಸಂದರ್ಶನಗಳನ್ನು ಓದಬಹುದು. ಮತ್ತು ಮಿಂಚುಳ್ಳಿ ಪುಸ್ತಕದಂಗಡಿಯಲ್ಲಿ ಆನ್‌ಲೈನ್ ಮೂಲಕ ಕನ್ನಡದ ಪುಸ್ತಕಗಳನ್ನು ಖರೀದಿಸಲೂಬಹುದು.

ಹೆಚ್ಚಿನ ಮಾಹಿತಿಗಾಗಿ ನಮ್ಮ ಫೇಸ್‌ಬುಕ್ ಪುಟ ಮತ್ತು ವೆಬ್‌ಸೈಟ್ ವಿಳಾಸಕ್ಕೆ ಭೇಟಿಕೊಡಿ.

**ವೆಬ್ಸೈಟ್ ವಿಳಾಸ:**

https://minchulli.com

**ಇ–ಮೇಲ್:**

editor@minchulli.com

**ಮಿಂಚುಳ್ಳಿ ಪುಸ್ತಕದಂಗಡಿ:**

https://minchulli.com/books

**ಫೇಸ್ಬುಕ್ ಪೇಜ್:**

https://www.facebook.com/minchullisahityapatrike

**ಟ್ವಿಟ್ಟರ್:**

https://twitter.com/MinchulliBooks

**ಇನ್ಸ್ಟಾಗ್ರಾಮ್:**

https://www.instagram.com/minchullisahityapatrike

**ಯುಟ್ಯೂಬ್:**

https://www.youtube.com/@minchullisahityapatrike

**#184, 6ನೇ ಕ್ರಾಸ್, ಇಂದಿರಾ ಬಡಾವಣೆ**

**ಗುರುಪುರ, ಶಿವಮೊಗ್ಗ–577201**

# ನಮ್ಮ ಕೆಲವು ಪ್ರಕಟಣೆಗಳು

| | | | |
|---|---|---|---|
| 1 | ಚೈತ್ರಾಕ್ಷಿ | ಕವಿತೆಗಳು<br>ಸೂರ್ಯಕೀರ್ತಿ | 120 ರೂ. |
| 2. | ಕುದುರೆಯ ವ್ಯಥೆ | ಕವಿತೆಗಳು<br>ಶಂಕರ್ ಸಿಹಿಮೊಗ್ಗೆ | 100 ರೂ. |
| 3 | ಕಿರಂ ಹೊಸ ಕವಿತೆ 2023 | ಸಂಪಾದಿತ ಕವಿತೆಗಳು<br>ಶಂಕರ್ ಸಿಹಿಮೊಗ್ಗೆ &<br>ಸೂರ್ಯಕೀರ್ತಿ | 250 ರೂ. |
| 4 | ಪ್ರೇಮ ದೈವಿಕ ಪರಿಮಳ | ಕವಿತೆಗಳು<br>ಸೂರ್ಯಕೀರ್ತಿ | 100 ರೂ. |
| 5 | ಇರುವೆ ಮತ್ತು ಗೋಡೆ | ಕವಿತೆಗಳು<br>ಶಂಕರ್ ಸಿಹಿಮೊಗ್ಗೆ | 150 ರೂ. |
| 6 | ಬೆನ್ನೇರಿದ ಬಯಲು | ಕಥೆಗಳು<br>ಶಂಕರ್ ಸಿಹಿಮೊಗ್ಗೆ | 150 ರೂ. |
| 7 | Love is a Divine fragrance (An Anthology of world poetry) | Edited English Poems<br>Suryakeerthy &<br>Shankar Sihimogge | 200 Rs. |

ಸುತ್ತಲಿನ ವರ್ತಮಾನದಲ್ಲಿ ಸತ್ಯಕ್ಕೆ ಬೆಲೆಯಿಲ್ಲ ಕಾವ್ಯಕ್ಕೆ ನೆಲೆಯಿಲ್ಲವೇನೋ ಎನ್ನುವ ಸಂದಿಗ್ಧತೆ ನನ್ನನ್ನು ಕಾಡುತ್ತಿದೆ. ತಮ್ಮ ಕವಿತೆಯ ಮೂಲಕ ಸತ್ಯ ಹೇಳುವ ಕವಿಗಳನ್ನು ಹಾಗೂ ವಿದ್ವಾಂಸರನ್ನು ಹತ್ಯೆ ಮಾಡುವ, ಅವರ ಮೇಲೆ ಮಾನಸಿಕವಾಗಿ ದೈಹಿಕವಾಗಿ ಹಲ್ಲೆ ಮಾಡುವ ಕ್ರೂರ ಮನಸ್ಸುಗಳ ಸಂಖ್ಯೆ ಹೆಚ್ಚುತ್ತಿದೆ. ಕಾವ್ಯಕ್ಕೆ ತೊಂದರೆ ಎದುರಾಗಿದೆ ಎಂದರೆ ಸಂವಿಧಾನಕ್ಕೂ ಪ್ರಜಾಪ್ರಭುತ್ವಕ್ಕೂ ಆತಂಕ ಬಂದಿದೆ ಎಂದೇ ಭಾವಿಸಬೇಕಾಗುತ್ತದೆ. ಹಾಗೆಂದು ನಮ್ಮ ಕಾಲದ ಕವಿಗಳು ಸುಮ್ಮನೆ ಕೈ ಕಟ್ಟಿ ಕುಳಿತಿಲ್ಲ. ಅಸಂವಿಧಾನಿಕವಾದ ಹಾಗೂ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳಿಗೆ ಪ್ರತಿರೋಧ ತೋರುತ್ತಲೇ ಇದ್ದಾರೆ. ಈ ಕ್ಷಣದ ಎಷ್ಟೋ ಜನ ತರುಣ ಕವಿಗಳ ಕವಿತೆಗಳನ್ನು ಓದುತ್ತಿದ್ದರೆ ಇಂತಹ ನಿಲುವುಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯ ಆಗುತ್ತದೆ.

ಬದುಕಿದ್ದಾಗ ಕಿ.ರಂ ಎಷ್ಟು ಕ್ರಿಯಾಶೀಲವಾಗಿದ್ದರೋ, ಮರಣದ ನಂತರ ಅದಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದ್ದಾರೆ ಎಂಬುದನ್ನು ಕಳೆದ ಹತ್ತು ವರ್ಷಗಳಿಂದಲೂ ನಿರಂತರವಾಗಿ ನಡೆಯುತ್ತಿರುವ ಕಿ.ರಂ ನೆನಪಿನ ಕಾರ್ಯ ಕ್ರಮಗಳೇ ಸಾರಿ ಸಾರಿ ಹೇಳುತ್ತಿವೆ. ಪ್ರಾರಂಭದಲ್ಲಿ ಡಾ. ಟಿ. ವೆಂಕಟೇಶಮೂರ್ತಿ, ಡಾ. ಕುರುವ ಬಸವರಾಜ್, ಡಾ. ನಟರಾಜ ಹುಳಿಯಾರ್, ಡಾ. ಕೆ.ಸಿ. ಶಿವಾರೆಡ್ಡಿ ಮುಂತಾದ ನನ್ನ ತಲೆಮಾರಿನ ಲೇಖಕರು ಕಿ.ರಂ ನೆನಪಿನ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ನಂತರ ಸಂಸ ಸುರೇಶ್, ಪ್ರದೀಪ್ ಮಾಲ್ಗುಡಿ, ಅವಿರತ ಹರೀಶ್, ವೆಂಕಟೇಶ್, ಜಯಶಂಕರ ಹಲಗೂರು, ರುದ್ರೇಶ ಅದರಂಗಿ, ಬೇಲೂರು ರಘುನಂದನ ಮುಂತಾದವರು ಆ ಜವಾಬ್ದಾರಿಯನ್ನು ಮುನ್ನೆಡೆಸಿದರು. ಈಗ ಮೂರನೆ ತಲೆಮಾರಿನ ತರುಣರಾದ ಶಂಕರ್ ಸಿಹಿಮೊಗ್ಗೆ, ಸೂರ್ಯಕೀರ್ತಿ ಅವರುಗಳು ಈ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿರುವುದು ನನಗೆ ಸಂತೋಷ ತಂದಿದೆ. ಕಿ.ರಂ ಎಂಬ ಅವಧೂತನ ಚಹರೆಗಳು ಕಾಲಕಾಲಕ್ಕೂ ತಮ್ಮ ಪ್ರಯಾಣ ಮುಂದುವರಿಸಿವೆ.

- ಎಲ್. ಎನ್. ಮುಕುಂದರಾಜ್

ಮಿಂಚುಳ್ಳಿ
ಪ್ರಕಾಶನ

ISBN 978-93-5813-161-1
9 789358 131611

ಬೆಲೆ: ₹ 250/-